ಸಂಪುಟ - 10, ಸಂಚಿಕೆ- 02 VOLUME: 10, ISSUE: 02

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

INTERNET ARCHIVE

HTTPS://PRATHISPANDHA.WORDPRESS.COM/

ಪ್ರತಿಸ್ಪಂದ
ಕೊಡು ಕೊಳ್ಳುವಿಕೆಯ ಸಂಕರ
PRATHISPANDA
An Exchange of Creative Impulse

ಸಂಪುಟ - 10, ಸಂಚಿಕೆ- 02
PEER - REVIEWED JOURNAL
ISSN: 2320-9941
VOLUME: 10, ISSUE: 02

ಪ್ರತಿಸ್ಪಂದ
ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

PART - 3 **ಭಾಗ - 3**

HTTPS://PRATHISPANDHA.WORDPRESS.COM/

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 03, PART - 3

ಸಂಪುಟ: 10, ಸಂಚಿಕೆ 02, ಏಪ್ರಿಲ್ – ಜೂನ್ 2026

VOLUME: 10, ISSUE: 02, APRIL - JUNE 2026

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು 572201
e-mail: prathispanda@gmail.com
website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ. ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು – ಕೆಂಕೆರೆ ತುಮಕೂರು ಜಿಲ್ಲೆ, ಕರ್ನಾಟಕ	Dr. Saraswati K. B. Associate Professor, English Department BMS Govt. First Grade College, Huliyar - Kenkere Tumkur District, Karnataka
ಡಾ. ಎಂ. ರಂಗಸ್ವಾಮಿ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು	Dr. M. Rangaswamy Assistant Professor, Kannada Department University Of Madras, Chenni, Tamil Nadu
ಡಾ. ಜ್ಯೋತಿ ಕೆ. ಬಿ. ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ ತುಮಕೂರು ಜಿಲ್ಲೆ, ಕರ್ನಾಟಕ	Dr. Jyoti K. B. Associate Professor, English Department Govt. First Grade College, Koratagere, Tumkur District, Karnataka
ಡಾ. ಗೋವಿಂದರಾಯ ಎಂ. ಪ್ರಾಧ್ಯಾಪಕರು, ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ ತುಮಕೂರು ಜಿಲ್ಲೆ, ಕರ್ನಾಟಕ	Dr. Govindaraya M. Professor, Kannada Department Govt. First Grade College, Madhugiri Tumkur District, Karnataka
ಡಾ. ರಾಘವೇಂದ್ರ ಎಚ್. ಎಂ. ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು	Dr. Raghavendra H. M. Associate Professor, English Department Govt. First Grade College, Tumkur
ಅನಿತ ಕೆ. ವಿ. ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ ಬೆಂಗಳೂರು, ಕರ್ನಾಟಕ	Anitha K. V. Assistant Professor, Kannada Department Mount Carmel College Autonomous, Vasanthnagar Bengaluru, Karnataka
ಸಿದ್ಧರಾಮಯ್ಯ ಡಿ. ಎಂ ಪದವೀಧರ ಪ್ರಾಥಮಿಕ ಶಿಕ್ಷಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು ತುಮಕೂರು ಜಿಲ್ಲೆ, ಕರ್ನಾಟಕ	Siddaramaiah D. M. Graduate Primary Teacher Government Higher Primary School Baadenahalli, Gubbi Taluk, Tumkur District, Karnataka
ಪ್ರೊ. ರಾಮು ಟಿ. ಡಿ. ಪದವೀಧರ ಪ್ರಾಥಮಿಕ ಶಿಕ್ಷಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು ತುಮಕೂರು ಜಿಲ್ಲೆ, ಕರ್ನಾಟಕ	Ramu T. D. Graduate Primary Teacher Government Higher Primary School Kathrikehal, C N Halli Taluk Tumkur District, Karnataka
ಕಾನೂನು ಸಲಹೆಗಾರರು **ಪೃಥ್ವಿ ಸೂರಿ** ಲೇಖಕರು ಮತ್ತು ವಕೀಲರು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.	Legal Advisor Pruthvi Soori Author and Advocate High Court of Karnataka, Bengaluru

ಸಂಪಾದಕೀಯ...

ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಮುಖ್ಯನೆಲೆಯ ಗಮನಕ್ಕೆ ಇವತ್ತಿಗೂ ಬಾರದ ಅನೇಕ ಸಂಸ್ಕೃತಿಗಳಿವೆ. ಗಾಣಿಗರು, ಗಾಣಗಿತ್ತಿಯರು, ತಿಗಳ ಮಹಿಳೆಯರು ಗುರಿಕಾರರು, ಮೊಗವೀರರು, ಕೊರಗರು ಸಾಗಿಸುವ ಜೀವನ ವಿಧಾನಗಳ, ಅನ್ವೇಷಣೆಗಳ ಕಡೆಗೆ ಮುಖಮಾಡಿ ಯೋಚಿಸುತ್ತಿರುವ ಯುವ ಸಂಶೋಧಕರು ಹೇಳುವುದನ್ನು ಕೇಳಿಸಿಕೊಳ್ಳುವ ಸಮಯದಲ್ಲಿ ನಾವಿದ್ದೇವೆ. ಅಂತೆಯೇ ಭಾಷಾ ವೈವಿಧ್ಯತೆಗಳ ಬಗ್ಗೆ ಜನರ ಜೈವಿಕ ಚಟುವಟಿಕೆಗಳಲ್ಲಿ ಮನೋವ್ಯವಹಾರಗಳಲ್ಲಿ ಹಾಸುಹೊಕ್ಕಾಗಿರುವ ಅವರವರ ತಾಯ್ನುಡಿಯ ಬಗ್ಗೆ ಆಸಕ್ತಿ ತಾಳುತ್ತಿರುವುದು ಕುತೂಹಲಕರ.

ಈತರದ ಮುಖ್ಯ ನೆಲೆಯು ಕಾಣದ, ಕೇಳಿದ ಕಥೆಗಳು, ಆಚರಣೆಗಳು, ನಿಗೂಢ ಒಳಹುಗಳು ಹೊಸ ರೀತಿಯಲ್ಲಿ ಸಂಸ್ಕೃತಿಗಳನ್ನು ನೋಡುವ, ಗಮನಿಸುವ ಮಾರ್ಗಕ್ಕೆ ದಾರಿದೀಪಗಳು.

ಮುಖ್ಯ ನೆಲೆಯನ್ನು ಹೊರತುಪಡಿಸಿದ ಈ ಕಿರು ಜಾಡುಗಳು ಸಂಸ್ಕೃತಿಗಳ ಹೊಳೆಗೆ ಮಡುಗಟ್ಟಿರುವ ಅಜ್ಞಾನದ ಎಳೆಗಳನ್ನು ಗುರುತಿಸಿ, ಅಲುಗಾಡಿಸಿ ಎಚ್ಚರಿಸುವ ಕಾರ್ಯ ಮಾಡುತ್ತವೆ.

ಈ ಎಲ್ಲಾ ಸೂಕ್ಷ್ಮಗಳನ್ನು ಗಮನಿಸಿ, ನಮ್ಮ ನಡೆ – ನುಡಿ, ಆಹಾರ – ವಿಹಾರ, ವಿಚಾರಗಳಲ್ಲಿ ಬದಲಾವಣೆ ಕಾಣಿಸಿಕೊಳ್ಳುವುದರ ಮೂಲಕ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು ನಮ್ಮ ಆಸಕ್ತಿಯಾಗಿರಲಿ.

– ಡಾ. ಸರಸ್ವತಿ ಕೆ. ಬಿ.

ಪರಿವಿಡಿ INDEX

1. ಕುವೆಂಪು ಮತ್ತು ಕುಕ್ಕನಹಳ್ಳಿ ಕೆರೆ
   – ಡಾ ಶಿಲ್ಪಶ್ರೀ ಹರವು **1–10**
2. ಲಕ್ಷ್ಮೀಕಾಂತ ಅವರ ಗಜಲ್ ಸಂಕಲನಗಳಲ್ಲಿ ವಸ್ತು ಮತ್ತು ಭಾಷೆ
   – ಶ್ರೀನಿವಾಸ ಡಿ. ಎಚ್. **11–17**
3. 'ಎಳೆ' ಕಾದಂಬರಿಯಲ್ಲಿ ಸಾಮಾಜಿಕ ಸಂಘರ್ಷ ಮತ್ತು ವೈಚಾರಿಕತೆಯ ನೆಲೆಗಳು
   – ಮನೋಜ್.ಎಂ. **18–27**
4. ಬಸವಣ್ಣನ ವಚನಗಳಲ್ಲಿ ಮನೋಚಿಂತನೆ
   – ಅನಿತ ಕೆ. ವಿ. **28–41**
5. ಪಂಪ–ಕುಮಾರವ್ಯಾಸ
   – ಡಾ. ಚನ್ನಮ್ಮ ಸಿದ್ರಾಮಪ್ಪ **42–49**
6. ಪಾಟೀಲ ಕಲ್ಲನಗೌಡ 'ಸಾಗಿ ಬರುತಿದೆ ಬೆಳಗು' ಕವನ ಸಂಕಲನದ ವಿಭಿನ್ನ ನೆಲೆಗಳು– **ಡಾ. ರೆಹಮಾನ ಆಯ್. ಗೊರಜನಾಳ** **50–59**
7. ಶರಣರ ವಚನಗಳು: ಪ್ರಾಣಿ–ಪಕ್ಷಿಗಳ ರೂಪಕತೆ
   – ಡಾ. ಮಹಾಂತೇಶ ದುರಗಣ್ಣವರ **60–77**
8. 21ನೇ ಶತಮಾನದಲ್ಲಿ ಭಾರತೀಯ ಜ್ಞಾನ ಪರಂಪರೆಯ ಮಹತ್ವ
   – ರಾಜೇಶ್ವರಿ ವೈ. ಎಂ. **78–101**
9. ಕಪಿಲೆ ಕಂಡ ಕತೆಗಳು–ಜೀವನ ಪ್ರೀತಿಯ ರೂಪಕಗಳು
   – ಡಾ ಕವಿತಾ ಎಂ ಎನ್. **102–106**
10. ಕರಾವಳಿಯಲ್ಲಿ ಕೊಂಕಣಿ ಭಾಷೆಯ ಅಸ್ಮಿತೆ (ಗೌಡಸಾರಸ್ವತ ಕೊಂಕಣಿಯನ್ನು ಅನುಲಕ್ಷಿಸಿ) **– ಲತಾ ಶೆಣೈ** **107–125**
11. ಮೊಗವೀರ ಸಮೂದಾಯದಲ್ಲಿ ಗುರಿಕಾರ ಪದ್ಧತಿ : ಒಂದು ಸಾಂಸ್ಕೃತಿಕ ವಿಶ್ಲೇಷಣೆ
   – ರಾಮು **126–138**
12. ಡಿ.ವಿ.ಜಿ ಹಾಗೂ ಮಂಕುತಿಮನ ಕಗ್ಗ : ಒಂದು ವಿವೇಚನೆ
   – ಡಾ. ಪ್ರಸನ್ನಕುಮಾರ್ ಕೆ. **139–147**

13. ಶಿವರಾತ್ರಿಯೂ – ಸಿದ್ಧಗಂಗೆಯ ಜಾತ್ರೆಯೂ

– ಡಾ. ಗೋವಿಂದರಾಯ ಎಂ. 148–151

14. ಶಬ್ದಮಣಿದರ್ಪಣದ ಪ್ರಯೋಗ ವಾಕ್ಯಗಳು

– ಸುಂದ್ರೇಶ್ ಕೆ. ಎಸ್. 152–157

15. ಮಹಾತ್ಮರ ಬರಹ ಮತ್ತು ಬದುಕು ಅನುಸರಣೆಗೋ, ಆಚರಣೆಗೋ?

– ಡಾ. ಭೀಮರಾಜು 158–165

16. ಮನವಿರಕ್ತಿ: ಶಂಕರಾನಂದರ ತತ್ವಬೋಧ

– ಡಾ. ರವಿಶಂಕರ್ ಎ.ಕೆ. 166–173

17. ‘Stone Sovereignty: The Political and Artistic Legacy of Bahamani Tomb Architecture.’ - Yogesh Rathod 174–184

18. ಕವಿತೆ – ಒಂದಿಷ್ಟು ಭೂಮಿ ಕೊಡಿ

– ಡಾ. ರುಜುವಾನ್ ಕೆ. 185–186

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಕುವೆಂಪು ಮತ್ತು ಕುಕ್ಕನಹಳ್ಳಿ ಕೆರೆ

1 ಡಾ. ಶಿಲ್ಪಶ್ರೀ ಹರವು
ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕೆ ಆರ್ ಸಾಗರ, ಶ್ರೀರಂಗಪಟ್ಟಣ ತಾ, ಮಂಡ್ಯ ಜಿಲ್ಲೆ.
shilpashri.hv@gmail.com

ಕವಿ ಕುವೆಂಪು ಕನ್ನಡ ಸಾಹಿತ್ಯಕ್ಕೆ ಹಲವು ಮೊದಲುಗಳನ್ನು ತಂದುಕೊಡುವುದರ ಜೊತೆಗೆ ಹಲವು ಹೊಸತನಗಳನ್ನು ನೀಡಿದವರು. ಅಂತಹ ಹೊಸತನಗಳಲ್ಲಿ ಅವರ ಪ್ರಕೃತಿ ಪ್ರಿಯತೆ ಮತ್ತು ಆರಾಧನೆಯು ಒಂದು. ಅವರು ನಿಸರ್ಗದ ಸಕಲ ವ್ಯಾಪಾರಗಳನ್ನು ಬಹುಆಯಾಮಗಳಲ್ಲಿ ಚಿತ್ರಿಸಿ ಪ್ರಕೃತಿಯ ರಮಣೀಯತೆಯ ರಸದೌತಣವನ್ನು ಸಹೃದಯರಿಗೆ ಬಡಿಸಿದ್ದಾರೆ. ಮಲೆನಾಡಿನ ಮಗನಾಗಿದ್ದ ಕಾರಣದಿಂದ ತಮ್ಮ ಬಹು ಕೃತಿಗಳಲ್ಲಿ ಪ್ರಕೃತಿಯನ್ನು ಪಾತ್ರವಾಗಿಸಿದ್ದಾರೆ. ನಿಸರ್ಗದ ನೆಲೆಬೀಡಾದ ಮಲೆನಾಡಿನ ಸೌಂದರ್ಯವನ್ನು, ಭವ್ಯತೆಯನ್ನು, ಅದರ ರೌದ್ರತೆಯನ್ನು, ಸಹೃದಯನ ಮನೋನ್ಮಯಕೆ ದಾಟಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರು ಕನ್ನಡದ ಮತ್ತು ಜಗತ್ತಿನ ಅತ್ಯುತ್ತಮ ಪ್ರಕೃತಿ ಕವಿಗಳಲ್ಲೊಬ್ಬರು.

ಇಂತಹ ನಿಸರ್ಗ ಪ್ರೇಮದ ಕವಿ ಕುವೆಂಪು ಅವರು ಮಲೆನಾಡಿನಲ್ಲಿ ಜೀವಿಸಿದ್ದು ಅವರ ಬಾಲ್ಯದ ದಿನಗಳಲ್ಲಿ ಮಾತ್ರ. ಅನಂತರ ವಿದ್ಯಾಭ್ಯಾಸದ ಸಲುವಾಗಿ ಮೈಸೂರಿಗೆ ಬಂದು(1920) ಇಲ್ಲಿಯೇ ನೆಲೆ ನಿಂತರು. ಮಹಾರಾಜಾ ಕಾಲೇಜಿನಿಂದ ಎಂ ಎ ಪದವಿ(1929) ಪಡೆದು, ಅಲ್ಲಿಯೇ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದರು. 1939 ರಿಂದ 1946ರವರೆಗೆ 7ವರ್ಷಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ರೀಡರ್ ಆಗಿ ಕಾರ್ಯನಿರ್ವಹಿಸಿ ಮತ್ತೆ ಮೈಸೂರಿನ ಮಹಾರಾಜಾ ಕಾಲೇಜಿಗೆ ಕನ್ನಡ ಪ್ರಾಧ್ಯಾಪಕರಾಗಿ,

ಕನ್ನಡ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾಗಿದರು(1946). ಮಲೆನಾಡಿನ ಕುಪ್ಪಳಿಯಲ್ಲಿ ಕಳೆದ ಬಾಲ್ಯದ ದಿನಗಳು(1904–1920), ಬೆಂಗಳೂರಿನಲ್ಲಿ ವಾಸವಿದ್ದ ಏಳು ವರ್ಷಗಳನ್ನು ಹೊರತುಪಡಿಸಿ ಕುವೆಂಪು ಅವರು ತಮ್ಮ ಜೀವಿತಾವಧಿಯ ಸುಮಾರು 68 ವರ್ಷಗಳಷ್ಟು ಕಾಲವನ್ನು ಕಳೆದದ್ದು ಮೈಸೂರಿನಲ್ಲಿಯೇ. ಆ ಕಾಲಘಟ್ಟದಲ್ಲಿ ಅವರು ವಿದ್ಯಾರ್ಥಿಯಿಂದ ಉಪಕುಲಪತಿಗಳಾದದ್ದರ ಜೊತೆಗೆ ಕನ್ನಡದ ಅಗ್ರಮಾನ್ಯ ಕವಿಯಾಗಿ, ದಾರ್ಶನಿಕರಾಗಿ, ರಸಋಷಿಗಳಾಗಿ, ವಿಶ್ವಕವಿಯಾಗಿ ವಿಕಾಸಗೊಂಡರು.

ಕುವೆಂಪು ಅವರು ಭೌತಿಕವಾಗಿ ಮೈಸೂರಿನಲ್ಲಿದ್ದರೂ ಮಾನಸಿಕವಾಗಿ ಮಲೆನಾಡನ್ನೆ ಉಸಿರಾಡಿದವರು. ವಿದ್ಯಾರ್ಥಿಯಾಗಿದ್ದಾಗಲೇ ಮೈಸೂರಿಗೆ ಬಂದ ಇವರಿಗೆ ಮಲೆನಾಡಿನ ಮಡಿಲು ತಪ್ಪಿತು. ಆದರೆ ಮೈಸೂರಿನ ಪ್ರಕೃತಿ ಮಾತೆಯ ಪ್ರೇಮ ಒಲಿಯಿತು. ಇಲ್ಲಿನ ನಿಸರ್ಗ ಸಿರಿ ಅವರಿಗೆ ಬಹಳ ಸೊಗಸಾಗಿತ್ತು. ಮಲೆನಾಡ ಮಗನಾದ ಇವರು ಮೈಸೂರಿನ ಮಾನಸ ಪುತ್ರರೂ ಹೌದು. ಇವರ ವ್ಯಕ್ತಿತ್ವ, ಸಾಹಿತ್ಯ ಹಾಗೂ ಬದುಕು ರೂಪುಗೊಳ್ಳುವಲ್ಲಿ ಮೈಸೂರಿನ ಪಾತ್ರ ಮತ್ತು ಪ್ರಭಾವ ಮಹತ್ವವಾದುದಾಗಿದೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಮೈಸೂರಿನ ಒಡನಾಟವನ್ನು ವಿಶೇಷವಾಗಿ ಅರಿಯಬೇಕಿದೆ.

ಕುವೆಂಪು ಅವರ ಆತ್ಮಕತೆಯಲ್ಲಿ ಮೈಸೂರಿನ ನೆನಪಿನ ಭಂಡಾರವೆ ತುಂಬಿದೆ. ಮೈಸೂರು ಅವರು ಓದಿದ, ತಿರುಗಾಡಿದ, ಕೆಲಸ ಮಾಡಿದ, ಬದುಕಿದ ಜಾಗ ಮಾತ್ರವಾಗಿರದೆ ಅವರನ್ನು ಹಲವು ರೀತಿಯಲ್ಲಿ ಪ್ರಭಾವಿಸಿದ ಸ್ಥಳವು ಆಗಿದೆ. ಇಲ್ಲಿನ ವೆಸ್ಲಿಯನ್ ಹೈಸ್ಕೂಲು, ಚಾಮುಂಡಿ ಬೆಟ್ಟ, ಲಲಿತಾದ್ರಿ, ಸಂತೆಪೇಟೆ, ಕೇಂದ್ರ ಸಾರ್ವಜನಿಕ ಗ್ರಂಥಾಲಯ, ರಾಮಕೃಷ್ಣಾಶ್ರಮ, ಮಹಾರಾಜಾ ಕಾಲೇಜು, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಕುಕ್ಕನಹಳ್ಳಿ ಕೆರೆ, ಕಾರಂಜಿ ಕೆರೆ, ಉದಯರವಿ ಮುಂತಾದ ಸ್ಥಳಗಳು ಇವರ ಬದುಕಿನ ಹಲವು ಮಗ್ಗುಲುಗಳನ್ನು ನಮಗೆ ಪರಿಚಯಿಸುತ್ತವೆ.

ಆದಿಕವಿ ಪಂಪನ ಬನವಾಸಿ, ಷೇಕ್ಸ್‌ಪಿಯರ್‌ನ ಇಂಗ್ಲೆಂಡ್–ಹೀಗೆ ಕವಿಗಳು ಮೆಚ್ಚಿದ, ಬದುಕಿದ ಸ್ಥಳಗಳು, ಅವುಗಳ ಬಗೆಗಿನ ಅವರ ನೋಟ ಅವರ ಸಾಹಿತ್ಯದ ಪ್ರವೇಶಿಕೆಗೆ ಬೇಕಾದ ದಾರಿಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ಕವಿ ಕುವೆಂಪು ಅವರ ಬದುಕಿನ ಭಾಗವಾದ ಮೈಸೂರನ್ನು ಅವರು ತಮ್ಮ ಕವಿಯ ಕಣ್ಣಿಂದ ಹೇಗೆ ಪರಿಭಾವಿಸಿದ್ದಾರೆ ಎಂಬುದು ಪರಿಶೀಲಿಸಬಹುದಾದ ವಿಚಾರವಾಗಿದೆ. ಮೈಸೂರಿನ ಬಗೆಗಿನ ಅವರ ನೋಟ ಅವರ ಆತ್ಮಕಥನ 'ನೆನಪಿನ ದೋಣಿ'ಯಲ್ಲಿ ಸಾಕಷ್ಟು ದಾಖಲಾಗಿದೆ. ಹಾಗೆಯೇ ಅವರ ಕಾವ್ಯದಲ್ಲಿ ಹಾಡಾಗಿ ಹೊಮ್ಮಿದೆ. ಈ ಲೇಖನದಲ್ಲಿ ಕುವೆಂಪು ಅವರು ಮೈಸೂರಿನ ರಸಮಯ

ತಾಣಗಳಲ್ಲೊಂದಾದ ಕುಕ್ಕನಹಳ್ಳಿ ಕೆರೆಯೊಂದಿಗೆ ಕವಿಗಿದ್ದ ಒಡನಾಟವನ್ನು ತಿಳಿಯುವ ಹಾಗೂ ಈ ಸ್ಥಳವನ್ನು ತಮ್ಮ ಕಾವ್ಯದಲ್ಲಿ ಚಿತ್ರಿಸಿರುವ ಬಗೆಯನ್ನು ಪರಿಶೀಲಿಸುವ ಪ್ರಯತ್ನವಿದೆ. ಕುವೆಂಪು ಅವರು ವಿದ್ಯಾರ್ಥಿ ಜೀವನದಲ್ಲೆ ಆರಂಭಿಸಿದ ಪ್ರಾತಃಕಾಲ ಮತ್ತು ಸಾಯಂಕಾಲದ ವಾಯುವಿಹಾರದ ಅಭ್ಯಾಸವನ್ನು ಅವರ ಕೊನೆಗಾಲದವರೆಗೂ ಮುಂದುವರಿಸಿದ್ದರು. ಇದು ಅವರ ಪ್ರಕೃತಿ ಪ್ರೇಮದ ಒಂದು ಆಯಾಮ. ಇಂಥ ವಿಹಾರಗಳು ಅವರಿಗೆ ಹಲವಾರು ದರ್ಶನಗಳನ್ನು ನೀಡಿವೆ. ಅವರು ಅದನ್ನು ಒಂದು ತಪಸ್ಸಿನಂತೆ ಪಾಲಿಸಿದ್ದಾರೆ. ದಾರ್ಶನಿಕ ಕವಿಯಾದ ಇವರು ಪ್ರಕೃತಿಯ ಅಣು–ಕಣದಿಂದ ಹಿಡಿದು ಭೂಮದವರೆಗೂ ಅಧ್ಯಾತ್ಮವನ್ನೇ ಧ್ಯಾನಿಸಿದರು. ಸಹ್ಯಾದ್ರಿಯ ಕಂದನಾಗಿದ್ದ ಕವಿ ಚಾಮುಂಡಿಯ ನೆರಳಲ್ಲಿ ಬೆಳೆದರು. ಬಾಲ್ಯದಲ್ಲಿ ಮಲೆಯ ಕಾಡನ್ನು ವಿನೋದಕ್ಕಾಗಿ ಅಲೆದವರಿಗೆ ಅದು ಕವಿಯಾತ್ಮದ ಸೆಲೆಯಾಗಿ ಅಭಿವ್ಯಕ್ತಗೊಳ್ಳಲು ವೇದಿಕೆಯಾದದ್ದು ಮೈಸೂರು. ಮೈಸೂರೆಂದರೆ ಇವರಿಗೆ ಸ್ಥಳ ಮಾತ್ರವಲ್ಲ ; ಅದು ವೈಕುಂಠ. 'ಮೈಸೂರಿನಲ್ಲಿ'(ನವಿಲು, 1934) ಎಂಬ ಕವಿತೆಯಲ್ಲಿ

ಭಗವಂತನಿಲ್ಲಿರದೆ ಮತ್ತೆಲ್ಲಿ ವೈಕುಂಠ
ದಲ್ಲಿಹನೆ? ವೈಕುಂಠವಿರುವುದೆಲ್ಲಿ
ಈ ದಿವ್ಯ ಭವ್ಯ ಸುಂದರ ದೃಶ್ಯದಲ್ಲಿರದೆ?

(ಶಿವಾರೆಡ್ಡಿ ಕೆ ಸಿ, ಸಂ 1, 2000: ಪು 283)

ಎಂದಿದ್ದಾರೆ. ಈ ಮೈಸೂರು ಬೆಳದಿಂಗಳಲ್ಲಿ ಮಿಂಚುವ ಕೆರೆಯಿಂದ, ಸಾಲಾಗಿರುವ ಸೊಡರ ಮಾಲೆಯಿಂದ 'ಸ್ವರ್ಗೀಯ ಮೋಹನ ಜ್ಯೋತಿಶಾಲೆ'ಯಾಗಿದೆ. ತೇನೆಹಕ್ಕಿಯ ಕೂಗಿನ ಜೊತೆಗೆ ಬುವಿಯು ಮಾಯಾಪರವಶವಾಗಿ ನಿದ್ದೆಗದ್ದಿದೆ. ಇಂಥ 'ಸೌಂದರ್ಯದಿಂಪಿನ ತಕ್ಕೆಯಲಿ ಸಿಕ್ಕಿ'ದ ಕವಿಯು ವಿಶ್ವವನೆ ತಬ್ಬಿ ಸತ್ತಿದ್ದಾನೆ(ಅದೇ).

ಇಲ್ಲಿನ ನಿಸರ್ಗ ರಮಣೀಯತೆಯ ರಸಾನುಭವದಲ್ಲಿ ಲೀನವಾದ ಕವಿ ಮನಸು ಮೈಸೂರಲ್ಲಿಯೇ ವಿಶ್ವವನು ಕಂಡಿರುವುದು ಇವರ ಮೈಸೂರ ಪ್ರೇಮವನ್ನಷ್ಟೆ ಅಲ್ಲದೇ ವಿಶ್ವಮಾನವತೆಯನ್ನು ತಿಳಿಸುತ್ತದೆ. ನೆನಪಿನ ದೋಣಿಯಲ್ಲಿ ಮೈಸೂರಿನ ಬಗ್ಗೆ ಹೇಳುತ್ತ, ಮೈಸೂರಿನ ವೈಶಾಲ್ಯ ಬೆಂಗಳೂರಿಗೆ ಇಲ್ಲ ಎಂದು, ಮದ್ರಾಸಿಗೆ ಹೋಗಿದ್ದಾಗ ಮೈಸೂರಿನ ಸೊಗಸು ಅಲ್ಲಿಲ್ಲವೆಂದು ಉಲ್ಲೇಖಿಸಿದ್ದಾರೆ. 'ಮೈಸೂರು – ಬೀಹಾರ'(ಕೋಗಿಲೆ ಮತ್ತು ಸೋವಿಯತ್ ರಷ್ಯಾ 1944) ಎಂಬ ಕವಿತೆಯಲ್ಲಿ ಬೀಹಾರದಲ್ಲಾದ ಭೂಕಂಪವನ್ನು ನೆನೆದು ಅಲ್ಲಿ ಪ್ರಕೃತಿ ರಾಕ್ಷಸಿಯಾದರೆ ಇಲ್ಲಿ ರೂಪಸಿಯಾಗಿ ತಾರತಮ್ಯ ತೋರಿದ್ದಾಳೆ ಎಂದಿದ್ದಾರೆ.

ಮೈಸೂರೆಂದರೆ ಇಷ್ಟು ಮಾತ್ರವಲ್ಲ. ಅದು

ತಾರೆಗಳ ತವರೂರು

ಸಿಂಗರದ ಮೈಸೂರು!

ಕನ್ನಡದ ಕುಶಲತೆಗೆ

ಕನ್ನಡದ ರಸಿಕತೆಗೆ

ಕನ್ನಡದ ನಿಪುಣತೆಗೆ

ಕನ್ನಡಿಯು ಮೈಸೂರು!

(ಶಿವಾರೆಡ್ಡಿ ಕೆ ಸಿ, ಸಂ 1, 2000: 637)

ಇಂಥ ಸೌಂದರ್ಯದ ಬೀಡಾದ "ಮೈಸೂರಲಿ ಮಲೆನಾಡನು ಕಂಡೆ; ಆ ರಸದೂಟವನಿಲ್ಲಿಯೆ ಉಂಡೆ!" (ಶಿವಾರೆಡ್ಡಿ ಕೆ ಸಿ, ಸಂ 1, 2000: 351) ಎಂದಿದ್ದಾರೆ. ಇಂತಹ ಮೈಸೂರಿನಲ್ಲಿ ಕುವೆಂಪು ಅವರ ಮನಸೆಳೆದಿರುವ ಹಲವಾರು ರಮಣೀಯ ಸ್ಥಳಗಳಲ್ಲಿ ಕುಕ್ಕನಹಳ್ಳಿ ಕೆರೆಯೂ ಒಂದು.

ಕುಕ್ಕನಹಳ್ಳಿ ಎಂಬುದು ಮೈಸೂರಿನ ಪ್ರತಿಷ್ಠಿತ ಭಾಗಗಳಲ್ಲೊಂದಾದ ಸರಸ್ವತಿಪುರಂನ ಪಕ್ಕಕ್ಕೆ ಇರುವ ಹಳ್ಳಿ. ಆ ಹೆಸರಿನಲ್ಲಿಯೇ ಆ ಹಳ್ಳಿಯ ಮುಂಭಾಗದಲ್ಲಿ ವಿಶಾಲವಾಗಿ ಕೆರೆ ಹರಡಿಕೊಂಡಿದೆ. ಕುವೆಂಪು ಅವರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ರಾಮಕೃಷ್ಣಾಶ್ರಮದ ವಾಸಿಯಾಗಿದ್ದಾಗ ಈ ಕೆರೆಯ ದಂಡೆಯಲ್ಲಿ ವಿಹಾರಕ್ಕೆ ಬರುತ್ತಿದ್ದರು. ಇದು ಅವರ ಕೊನೆಗಾಲದವರೆಗೂ ಮುಂದುವರಿಯಿತು. ಅವರೊಬ್ಬರೇ ಅಲ್ಲದೇ ಗುರುಗಳಾದ ಟಿ ಎಸ್ ವೆಂಕಣ್ಣಯ್ಯನವರಾದಿಯಾಗಿ ಹಲವು ಹಿರಿಯ ಸಾಹಿತಿಗಳು, ಸ್ನೇಹಿತರೊಡಗೂಡಿ ಇಲ್ಲಿ ವಿಹರಿಸಿದ್ದಾರೆ. ಈ ಬಗ್ಗೆ ಅವರ ಆತ್ಮಕಥನದಲ್ಲಿ ಉಲ್ಲೇಖವಿದೆ. ಅಲ್ಲಿಯೇ ತಿಳಿಸಿರುವಂತೆ ಕುವೆಂಪು ಅವರು ಟಾಲ್‌ಸ್ಟಾಯ್, ರೋಮ ರೋಲಾ, ಥಾಮಸ್ ಹಾರ್ಡಿ, ಗಾಲ್ಸ್‌ವರ್ದಿ ಮೊದಲಾದವರ ಮಹಾಕಾದಂಬರಿಗಳನ್ನು ಓದಿದ ಅನಂತರ ಅಂತಹದೊಂದು ಕಾದಂಬರಿ ಕನ್ನಡದಲ್ಲಿ ಬರಬೇಕೆಂದು, ಅಂತಹದೊಂದನ್ನು ರಚಿಸಿ ಎಂದು ಅವರ ಸಾಹಿತಿ ಮಿತ್ರರಿಗೆ ಹೇಳುತ್ತಿದ್ದರಂತೆ. ಆದರೆ ಒಂದು ದಿನ ಗುರುಗಳಾದ ಟಿ ಎಸ್ ವೆಂಕಣ್ಣಯ್ಯ ಅವರೊಡನೆ ಕುಕ್ಕನಹಳ್ಳಿಯ ಕೆರೆಯ ದಂಡೆಯಲ್ಲಿ ವಿಹಾರಕ್ಕೆ ಹೋಗಿದ್ದಾಗ ವೆಂಕಣ್ಣಯ್ಯ ಅವರು ಕುವೆಂಪು ಅವರನ್ನೇ ಕಾದಂಬರಿ ಬರೆಯುವಂತೆ ಪ್ರೇರೇಪಿಸಿದರು. ಮಹಾಕಾದಂಬರಿ (ಗ್ರೇಟ್ ನಾವಲ್) ರಚಿಸುವ ಸಾಮರ್ಥ್ಯ ನಿಮಗಿದೆ. 'ನೀವೇ ಒಂದು ಕೈ ನೋಡಿಬಿಡಿ!' (ಕುವೆಂಪು 1993: 786) ಎಂದರಂತೆ. ಕುವೆಂಪು ಅವರ ಹಂಬಲ, ಅವರ ಗುರುಗಳ ಬೆಂಬಲ ಇವರೆಡು

ಸೇರಿ ಕನ್ನಡಕ್ಕೆ ಎರಡು ಮಹಾಕಾದಂಬರಿಗಳು ದೊರೆತವು. ಇಂತಹ ಅನೇಕ ತೀರ್ಮಾನಗಳಿಗೆ, ಹಲವಾರು ಚರ್ಚೆಗಳಿಗೆ ಈ ಕುಕ್ಕನಹಳ್ಳಿಯ ಕೆರೆಯ ದಂಡೆ ವೇದಿಕೆಯಾಗಿದೆ.

ಎಷ್ಟೋ ಸೂರ್ಯೋದಯ, ಸೂರ್ಯಾಸ್ತಗಳ ಕವಿತೆಗಳಿಗೆ ಪ್ರೇರಣೆಯಾಗಿರಬಹುದಾದ ಈ ಸ್ಥಳದ ಬಗ್ಗೆ ಇವರ ಕಾವ್ಯದಲ್ಲಿ ನೇರವಾಗಿ ಉಲ್ಲೇಖವಾಗಿರುವುದು ಐದು ಕವಿತೆಗಳಲ್ಲಿ ಮಾತ್ರ. ಅವುಗಳೆಂದರೆ ಕುಕ್ಕನಹಳ್ಳಿಯ ಕೆರೆಯ ಮೇಲೆ(ಕಲಾಸುಂದರಿ 1934), ಕುಕ್ಕನಹಳ್ಳಿ ಕೆರೆಯಾಚೆ, ದೋಣಿಹಾಡು(ನವಿಲು 1934) ಕುಕ್ಕನಹಳ್ಳಿ ಕೆರೆಯ ಏರಿ(ಕದರಡಕೆ 1967) ಮತ್ತು ಮಧ್ಯಾಹ್ನ(ಪಕ್ಷಿಕಾಶಿ 1946). ಸೂರ್ಯೋದಯ, ಸೂರ್ಯಾಸ್ತಗಳಷ್ಟೆ ಅಲ್ಲದೆ ಪ್ರಕೃತಿಯ ಸಮಸ್ತದ ರಸಾನುಭವ ಪಡೆಯುವುದು ಕವಿಗೆ ಎಂದಿಗೂ ಉಪಾಸನೆ. ಈ ಹಿನ್ನೆಲೆಯಲ್ಲಿ ಕುಕ್ಕನಹಳ್ಳಿ ಕೆರೆ ಕವಿಗೆ ನೀಡಿರುವ ದರ್ಶವನ್ನು ಇಲ್ಲಿ ಅರಿಯಲು ಪ್ರಯತ್ನಿಸಲಾಗಿದೆ.

‘ಕಲಾಸುಂದರಿ’ ಕವನ ಸಂಕಲನದಲ್ಲಿರುವ ‘ಕುಕ್ಕನಹಳ್ಳಿ ಕೆರೆಯ ಮೇಲೆ’ ಎಂಬ ಕವಿತೆ ಈ ಬಗ್ಗೆ ಇರುವ ಮೊದಲ ಕವಿತೆ. ಈ ಕವಿತೆಯಲ್ಲಿ ಕುಕ್ಕನಹಳ್ಳಿ ಕೆರೆಯ ಮೇಲೆ ಸಂಜೆ ಕತ್ತಿ ಹೋದ ಸಮಯದಲ್ಲಿ, ಮೂಕವಾದ, ಧ್ಯಾನಕದ್ದಿದ ಹೊತ್ತಿನಲಿ ಕವಿಯೊಬ್ಬರೆ ದಡದಲಿ ಹೊದರುಗಿಡದ ಬುಡದಲಿ ಕುಳಿತು ಅಲ್ಲಿನ ಎಲ್ಲವನು ಕಾಣುವ ಚಿತ್ರಣವಿದೆ. ಒಂದೆಡೆ ನೂರು ತಾರೆಯಿಂದ ಶೋಭಿತವಾದ ಆಗಸ ಬೆಳದಿಂಗಳ ಮಳೆ ಸುರಿಸುತ್ತಿದ್ದರೆ, ಮತ್ತೊಂದೆಡೆ ದಡದಲ್ಲಿ ರಂಜಿಸುವ ದೀಪಸಾಲು ಮಿಂಚುತ್ತಿದೆ. ಇತ್ತ ನಿಮಿಷಕೊಂದು ಪ್ರತಿ, ಕಲೆಯ ಕೃತಿಯನ್ನು ಕಾಣಿಸುತ್ತಿರುವ ಕೆರೆಯ ಹೃದಯದಲ್ಲಿ ಜ್ಯೋತಿಶಾಲೆ ಹೊತ್ತಿದೆ. ಇದನ್ನು ಬಿಟ್ಟು ಕವಿ ಮನೆಗೆ ತೆರಳಲಾರೆನು ಎಂದಿದ್ದಾರೆ.

ಪ್ರಕೃತಿಯ ಕಲಾಶಾಲೆಯಾದ ಈ ಕೆರೆ, ಸರೋವರಕೆ ಜೀವವಿದೆ! ರಸಾವೇಶ ಭಾವವಿದೆ. ಕವಿಯ ಬಾಳಿನಲ್ಲಿರುವಂತೆ ಇಲ್ಲಿಯೂ ಹಳದಿ ಕೆಂಪು ಹಸುರಿದೆ,

ಎನಿತು ಸಾರಿ ಕುಳಿತು ಇಲ್ಲಿ
ಇದನು ನೋಡಿಹೆ?
ಎನಿತು ಸಾರಿ ಸೊಬಗನಿಲ್ಲಿ
ಪೂಜೆ ಮಾಡಿಹೆ?
ದಿನದಿ ದಿನಕೆ ಬೆಳೆದು ಭಕ್ತಿ
ಮೋಹವಾಗಿದೆ;
ದೃಶ್ಯವಲ್ಲದಿರೊ ವ್ಯಕ್ತಿಭಾವವಾಗಿದೆ!
(ಶಿವಾರೆಡ್ಡಿ ಕೆ ಸಿ, ಸಂ 1, 2000: 248)

ಎಂಬ ಸಾಲುಗಳು ಕುಕ್ಕನಹಳ್ಳಿ ಕೆರೆಯ ಬಗೆಗಿನ ಅನುಭವದ ಸಾರವನ್ನು ತಿಳಿಸುತ್ತವೆ ಹಾಗೂ ಇದು ಕವಿಯ ಸ್ಥಾಯಿಭಾವ ಕೂಡ ಆಗಿದೆ.

ಈ ಭಾವದ ಮುಂದುವರಿಕೆಯೆಂಬಂತೆ 'ಕುಕ್ಕನಹಳ್ಳಿಯ ಕೆರೆಯ ಏರಿ' ಕವಿತೆಯಲ್ಲಿ

ಏರಿಯ ಮೇಲೊಬ್ಬನೆ ಕುಳಿತಿದ್ದೆ;
ಭಾವದ ಬಲೆಯನು ನೇಯುತ್ತಿದ್ದೆ.
ಆಗಸವೆನ್ನನು ನೋಡುತ್ತಿತ್ತು,
ಮುಗಿಲಾಗಸವನು ನೋಡಿತ್ತು,
ಬೈಗುಗೆಂಪು ಮುಗಿಲನು ಮುತ್ತಿತ್ತು,
ಕೆರೆ ನಮ್ಮೆಲ್ಲರ ನೋಡಿತ್ತು!
(ಶಿವಾರೆಡ್ಡಿ ಕೆ ಸಿ, ಸಂ 2, 2000: 339)

ಎಂದು ಈ ಕೆರೆ ಕವಿಗೆ ಅದೆಷ್ಟೂ ಭಾವಗಳನ್ನ ಬಿತ್ತಿ ಹೆತ್ತಿರುವುದನ್ನು ಚಿತ್ರಿಸಿದ್ದಾರೆ. ಅಲ್ಲಿನ ಕೆರೆ, ತೆರೆ, ಏರಿ, ದೋಣಿ, ಅಂಬಿಗ, ಮರ, ಹಕ್ಕಿ, ನೇಸರ, ಮೂಡಣ, ಪಡುವಣ, ತಂಗಾಳಿ, ನೆಳಲು, ಕಾವಳ, ಬೈಗು, ತಾರೆ, ಚಂದ್ರ, ಬಾನು, ಮುಗಿಲು ಎಲ್ಲವು ಹಲವು ಭಾವಗಳನ್ನು ನೀಡಿ ಸೃಷ್ಟಿಯ ಸೃಜನಶೀಲತೆ ಮೆರೆದು ನಾಕವನ್ನು ಮೀರಿದ ಅನುಭವವನ್ನು ನೀಡಿವೆ.

ಕೆರೆಯನು ಕಣ್ಣೊಳೆ ಸೆರೆಹಿಡಿದಾನೋ
ಕೆರೆಗಣ್ಣಿಗೆ ಸೆರೆಸಿಕ್ಕಿದ್ದೆ!–
ಒಬ್ಬನೇ ಸುಮ್ಮನೇ ಕುಳಿತಿದ್ದೆ.(ಅದೇ)

ಎನ್ನುತ ಕೆರೆಯ ನೋಟಕೆ ಸಿಲುಕಿದ ಕವಿಯ ಮನ ಆ ರಸವನ್ನು ಹೀರಿ, ಮತ್ತಾಗಿ, ಚಿತ್ತಾಗಿ, ಸುಮ್ಮನೇ ಅದನ್ನು ಅನುಭೂತಿಯಾಗಿಸಿಕೊಳ್ಳುವತ್ತಲೇ ಮುಳುಗಿದೆ.

ಜಡದಲ್ಲೂ ಚೈತನ್ಯವನ್ನು ಕಂಡವರು ಕುವೆಂಪು. ಲೋಕದಲ್ಲಿ ದು:ಖವಿದ್ದರೆ ಅದರಲ್ಲಿ ಅರ್ಧ ಹೃದಯ ದಾರಿದ್ರ್ಯದಿಂದಲೇ ಇರುತ್ತದೆ. ಇದನ್ನು ಪರಿಹರಿಸಿಕೊಳ್ಳಬೇಕಾದರೆ, ಹೃದಯ ಸಂಪನ್ನತೆ ಪಡೆಯಬೇಕಾದರೆ ದರ್ಶನ ದೃಷ್ಟಿ ಪಡೆಯಬೇಕು. ಆ ದರ್ಶನದಲ್ಲೇ ಕಲೆ ಇದೆ.

'ಕಲೆಯಿಂದ ಜಡವು ಚೇತನವಾಗಿ, ಜೀವನದ ನೀರಸತೆ ಕಿಡಿಯಾಗಿ, ಪ್ರವಹಿಪುದು ನೂತನತೆ ಚಿರವಾಗಿ'(ಶಿವಾರೆಡ್ಡಿ ಕೆ ಸಿ, ಸಂ 1, 2000: 648)

ಎಂಬುದು ಇವರದೇ ಮಾತು. **'ಮಾತು ನನ್ನ ಕಲೆ, ಮೌನ ನನ್ನ ನೆಲೆ'** ಎನ್ನುವ ಕುವೆಂಪು

ಬಾಳೊಳು ಸಾವೂ ಬೆಲ್ಲದಿ ಬೇವು;
ಕಲೆ ನಮ್ಮಾತ್ಮದ ಮೇವು! (ಸಂ 2, 2000: 253) ಎಂದಿದ್ದಾರೆ. ಇದು

ಕವಿಯ ದರ್ಶನ. ಈ ದರ್ಶನ, ರಸದೃಷ್ಟಿ ಎಲ್ಲರಿಗೂ ಬರಬೇಕು ಎಂಬುದೇ ಕುವೆಂಪು ಅವರ ಆಶಯ.

ಕುವೆಂಪು ಅವರು 'ಕುಕ್ಕನಹಳ್ಳಿ ಕೆರೆಯ ಆಚೆ' ಕವಿತೆಯಲ್ಲಿ ಕೆರೆ ಮತ್ತು ಅದರ ಸುತ್ತಲ ಪರಿಸರವನ್ನು ಸಂಪೂರ್ಣ ಅಧ್ಯಾತ್ಮದ ದೃಷ್ಟಿಯಿಂದಲೇ ಕಂಡಿದ್ದಾರೆ. ಕುಕ್ಕನಹಳ್ಳಿ ಕೆರೆಯ ಸಾಯಂಕಾಲವು ತಪಸ್ವಿನಿಯಂತಿದೆ. ಸಂಜೆಯ ಕೆಂಪಂಚಿನ ಮೋಡಗಳ ಗುಂಪು ಜಪಮಾಡುತ್ತಿವೆ, ಮರಗಳು ರಸಯೋಗಿಗಳಂತಿವೆ, ಹೊಲಗಳು ಮಂತ್ರವನ್ನು ಹೇಳುತ್ತಿವೆ, ಕೆರೆ, ಗಿರಿ, ಪುರ ಎಲ್ಲವು ಈ ಸಂಜೆಯ ತಪಸ್ವಿನಿಯ ಬಳಿ ದೀಕ್ಷೆ ಕೈಗೊಳ್ಳುತ್ತಲಿವೆ. ಈ ಹೊತ್ತು ಶಾಂತಿಯ ಮಳೆಗರೆಯುತ್ತಿದ್ದು, 'ಸೃಷ್ಟಿಯು ಒಯ್ಯನೆ ಮೈಮರೆಯುತಲಿದೆ!'. ಇಂಥ ಸನ್ನಿವೇಶದಲಿ ಕವಿ ತಾನೂ ದೀಕ್ಷಿತನಾಗುವೆ ಎಂದಿದ್ದಾರೆ.

ಆಹ್ಲಾದಮಯವಾಗಿರುವ ಬೈಗು ಕವಿಗೆ ತಪಸ್ವಿನಿಯಂತೆ, ಸುತ್ತಲ ಎಲ್ಲವೂ ಯೋಗಿಗಳಂತೆ ಕಂಡಿರುವುದರ ಬಗ್ಗೆ ಕುವೆಂಪು ಅವರೇ ಹೀಗೆ ಹೇಳಿದ್ದಾರೆ.

> **'ಧ್ರುವತಾರೆ' ಮತ್ತು 'ಕುಕ್ಕನಹಳ್ಳಿ ಕೆರೆಯಾಚೆ' ಎಂಬ ಕವನಗಳಲ್ಲಿ ಆಗತಾನೆ ತೆಗೆದುಕೊಂಡ ಮಂತ್ರದೀಕ್ಷೆಯ ಪ್ರಭಾವ ನೇರವಾಗಿರುವುದನ್ನು ಕಾಣುತ್ತೇವೆ. ... 'ಕುಕ್ಕನಹಳ್ಳಿ ಕೆರೆಯಾಚೆ' ಬರೆದ ಅನೇಕ ವರ್ಷಗಳ ತರುವಾಯ ಯಾವುದೋ ಒಂದು ಗೋಷ್ಠಿಯಲ್ಲಿ ನಾನು ಅದನ್ನು ವಾಚಿಸಿದಾಗ ನನ್ನ ಮಿತ್ರರೊಬ್ಬರು ಸಂಜೆಯನ್ನು ತಪಸ್ವಿನಿಗೆ ಹೋಲಿಸಿದುದರ ಔಚಿತ್ಯವನ್ನೂ ಆ ಕವನದಲ್ಲಿ ಬರುವ ಮೌನ, ಧ್ಯಾನ, ಗುರು, ಶಿಷ್ಯ, ಜಪ, ಸಮಾಧಿ, ಯೋಗಿ, ಮಂತ್ರ, ಸಂಧ್ಯಾಯೋಗಿನಿ, ದೀಕ್ಷೆ, ಶಾಂತಿ ಇತ್ಯಾದಿ ಅಧ್ಯಾತ್ಮ ಸಾಧನೆಯ ಪರವಾದ ಪದಗಳನ್ನೂ ಕುರಿತು ಟೀಕೆ ಮಾಡಿದರು, ನೀವು ಏನು ಬರೆಯಲಿ ಎಲ್ಲವನ್ನೂ ಅಧ್ಯಾತ್ಮದತ್ತ ಒಯ್ಯುತ್ತೀರಿ ಎಂದು. ನಾನು ಅವರಿಗೆ ಅದನ್ನು ಬರೆದ ಕಾಲ ದೇಶ ಸಂದರ್ಭಗಳನ್ನೆಲ್ಲ ತಿಳಿಸಿದ ಮೇಲೆ ಅವರಿಗೆ ಅರ್ಥವಾಗಿ ಸಮಾಧಾನವಾಯಿತು. ಭಾವಗೀತೆಗಳಲ್ಲಿ ಅಭಿವ್ಯಕ್ತಗೊಳ್ಳುವುದು ತತ್ಸಾಮಯಿಕ ಪ್ರಭಾವ ತಾನೆ?(ಕುವೆಂಪು 1993: 687).**

'ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ' ಎಂಬುದು ಕುವೆಂಪು ಅವರ ಚಿಂತನೆ. ಈ ಹಿನ್ನೆಲೆಯಲ್ಲಿ ಕವಿಯ ದರ್ಶನಕ್ಕೆ ಈ ಕೆರೆ ಹೀಗೆ ಕಂಡಿರುವುದು ಸಹಜವೇ ಆಗಿದೆ.

'ದೋಣಿಹಾಡು'(ನವಿಲು) ಕವಿತೆ ಕುಕ್ಕನಹಳ್ಳಿ ಕೆರೆಯಲ್ಲಿನ ದೋಣಿ ಆಟದ ಅನುಭವದ ಹಿನ್ನೆಲೆಯಲ್ಲಿ ರಚಿಸಿರುವ ಕವಿತೆಯಾಗಿದೆ. ಪ್ರೊ ಜೆ ಸಿ ರಾಲೊ ಅವರು ಮಹಾರಾಜಾ ಕಾಲೇಜಿನ ಪ್ರಾಂಶುಪಾಲರಾಗಿದ್ದಾಗ ಕಾಲೇಜಿನ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಕುಕ್ಕನಹಳ್ಳಿ ಕೆರೆಯಲ್ಲಿ ದಿನವೂ ಬೆಳಿಗ್ಗೆ ದೋಣಿಯಾಟವಾಡಲು

ಅವಕಾಶವಿತ್ತರಂತೆ. "ಪ್ರತಿ ದಿನವೂ ಪ್ರಾತಃಕಾಲ ಒಂದೂವರೆ ಗಂಟೆಯ ಹೊತ್ತು ಸಲಿಲಾಶಯದಲ್ಲಿ ತೇಲುವುದು (ಕುವೆಂಪು 1993: 713) ಅಭ್ಯಾಸವಾಗಿತ್ತಂತೆ. ಆಗ ರಚಿಸಿದ ಕವಿತೆ ಇದು. ಈ ಕವಿತೆಯನ್ನು ಸಾಮೂಹಿಕವಾಗಿ ದೋಣಿಯ "ಹುಟ್ಟುಹಾಕುತ್ತಾ ಅದರ ಲಯಕ್ಕೆ ಹೊಂದಿಕೊಂಡು ಹಾಡುತ್ತಿದ್ದ"ರಂತೆ(ಅದೇ).

ಸೂರ್ಯೋದಯದ ಹೊತ್ತನ್ನು ಎಷ್ಟು ಬಣ್ಣಿಸಿದರು ಸಾಲದೆಂಬಂತೆ ಆ ಬಗ್ಗೆಯೇ ಕವಿ ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಆ ಸಾಲಿಗೆ ಈ ಕವಿತೆಯು ಸೇರುತ್ತದೆ. 'ಹೊನ್ನಗಿಂಡಿಯ ಹಿಡಿದು ಹೇಮವಾರಿಯ ಚಿಮುಕಿಸಿ, ಮೇಘಮಾಲೆಗೆ ಬಣ್ಣ ನೀಡಿ ಯಕ್ಷಲೋಕವನ್ನೇ ರಚಿಸುತ್ತ, ರಂಜಿಸುತ್ತಿರುವ ಚೆಲುವೆಯಾದ ಮೂಡುವೆಣ್ಣಿಗೆ ಸುಪ್ರಭಾತವನ್ನು' ಎಲ್ಲರು ಬಯಸಬೇಕೆಂಬುದು ಕವಿಯ ರಮ್ಯ ಕಲ್ಪನೆ.

ಯಾವ ಸುಂದರ ದೃಶ್ಯವಾದರೂ ಒಲುಮೆ ಪಡೆಯದ ಹೊರತೂ ಹೃದಯಂಗಮವಾಗದು(ಕುವೆಂಪು 1993: 806).

ರಸಿಕರಾದ ಕವಿಗೆ ಇಂತಹ ದೃಶ್ಯವನ್ನು ಹೃದಯಂಗಮಗೊಳಿಸಿ ಸಹೃದಯರ ಮನದಲ್ಲಿ ಇಳಿಸುವುದು ಕರಗತವಾಗಿದೆ.

ಒಟ್ಟಿನಲ್ಲಿ ಕೆರೆಯಲ್ಲಿ ತೊಯ್ದಾಡುವ ತೆರೆಗಳ ಮೇಲೆ, ಸೂರ್ಯೋದಯದ ಹೊತ್ತಲಿ ಯಕ್ಷಲೋಕದಂತಿರುವ ಪರಿಸರದಲ್ಲಿ ದೂರ ಬೆಟ್ಟದ ಮೇಲೆ ತೇಲುತಿರುವ ಬಿಳಿಯ ಮೋಡದ ರೀತಿಯಲ್ಲಿಯೇ ದೋಣಿಯಾಟವಾಡುವ ಚಲುವು ಈ ಕವಿತೆ. ಅದರ ರಸಾನುಭೂತಿ ಇದು.

'ಇಂತಹ ಸುಂದರ ಪ್ರಾತಃಕಾಲದಿ'(ಪಕ್ಷಿಕಾಶಿ 1946) ಎಂಬ ಕವಿತೆಯಲ್ಲಿ ಪ್ರಾತಃಕಾಲವೆಂಬುದು 'ರಸಾನುಭೂತಿಯ ರಸಪಥ', ಸುಂದರ ನಿಸರ್ಗವೇ 'ವೈಕುಂಠ'. ಈ ಸಂದರ್ಭದಲ್ಲಿ ದನಕರುಗಳು, ಗಿರಿತರುಗಳಾದಿಯಾಗಿ ಎಲ್ಲವು 'ಅರಿವಾಸೆಯ ಮಾಯೆಗೆ ಬೀಳದೆ, ಇರುವಿಕೆಯಾನಂದದಿ ನಲಿಯುತ ಇವೆ'. ಹಾಗಾಗಿ ಅರಿವ ಆಸೆ 'ಮಾಯಾ ಬಂಧ', 'ಇರು'ವುದು ಮುಕ್ತಿಯ ಆನಂದ ಎಂದಿದ್ದಾರೆ. ಅಂದರೆ ಎಲ್ಲವನ್ನು ತಿಳಿಯುವ ಆತುರತೆಗೆ ಬಿದ್ದು, ಇರುವುದರ ಸುಖವನ್ನು ಕಳೆದುಕೊಳ್ಳಬಾರದು ಎಂದರ್ಥ. ಈ ಆಶಯ 'ದೋಣಿಹಾಡು' ಕವಿತೆಯ "ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ!" ಎಂಬ ಸಾಲಿನಲ್ಲಿದೆ.

ಇಂದಿನ ಧಾವಂತದ ಬದುಕಿಗೆ, ಸ್ಪರ್ಧಾತ್ಮಕ ಜಗತ್ತಿಗೆ, ವ್ಯಾಪಾರಿ ಪ್ರಪಂಚಕ್ಕೆ ಈ ಆಶಯದ ಅವಶ್ಯಕತೆ ಹೆಚ್ಚಾಗಿದೆ. ಇಂದು ನಾವೆಲ್ಲರೂ 'ಸಾವಧಾನದ ಬೆನ್ನೇರಬೇಕಿದೆ'. 'ಮಧ್ಯಾಹ್ನ' ಎಂಬ ಕವಿತೆ ಕುಕ್ಕನಹಳ್ಳಿ ಕೆರೆಯ ಬಳಿಯ ಮಧ್ಯಾಹ್ನದ ಸೊಗಸನ್ನು ತಿಳಿಸುತ್ತದೆ.

ನಡುಹಗಲಿನಲ್ಲಿ ತೆರೆ ತುಂಬಿದ ಈ ಕೆರೆ 'ಕಿಡಿ ಕಿಡಿ ನಗೆಸೂಸು'ತ್ತಿದೆ. ಕೆರೆಯ ದಡದ ಬಾನಿನ ಮನಸಿನ ಕನಸೆಂಬಂತೆ ದೂರದಲಿ ತೆಂಕಣದ ನೀಲಗಿರಿ ಶೋಭಿಸಿದೆ. ಈ ಕೆರೆಯ ಬಳಿಯೇ ತುರುಗಳು ತಂಪು ನೆರಳಲ್ಲಿ ಬಾಯಾಡುತ್ತಿದ್ದರೆ, ದನಗಾಹಿ ಮರದಡಿಯಲ್ಲಿ ಮಲಗಿದ್ದಾನೆ. ದಣಿದಿರುವ ಅರಳಿಯ ಗಾಳಿ ಕೆರೆಯ ದೂರದ ತೆರೆಗಳ ಆಗಮನವನ್ನು ತಿಳಿಸುವಂತೆ ಸದ್ದುಮಾಡುತ್ತಿವೆ. ಈ ಸಮಯದಲ್ಲಿ

ಮೇಗಡೆ ರವಿ, ಕೆಳಗಡೆ ಕವಿ,

ನೋಟಕರಿಬ್ಬರೆ ಇಲ್ಲಿ;

ಉಳಿದೆಲ್ಲರು ನಟನಟಿಯರು,

ಮುಳುಗಿಹರಭಿನಯದಲ್ಲಿ(ಶಿವಾರೆಡ್ಡಿ ಕೆ ಸಿ ಸಂ 2, 2000: 344).

ಕಣ್ದೆರೆಯೆ ಸ್ವರ್ಗ!ಕಣ್ಮುಚ್ಚೆ ನರಕ! ಎನ್ನುವ ಕುವೆಂಪು ಅವರಿಗೆ ಮಧ್ಯಾಹ್ನವು ಕೂಡ ಕುಕ್ಕನಹಳ್ಳಿ ಕೆರೆಯ ಬಳಿ ಸೊಗಸಾಗಿ ಕಂಡಿದೆ.

ಈ ಐದು ಕವಿತೆಗಳಲ್ಲಿ ಆರಂಭದ ಮೂರು ಕವಿತೆಗಳು ಸಂಧ್ಯಾಕಾಲದ ರಸಾನುಭೂತಿಯನ್ನು ನೀಡಿದರೆ, ದೋಣಿಹಾಡಿನಲ್ಲಿ ಪ್ರಾತಃಕಾಲದ ಸೌಂದರ್ಯದ ವರ್ಣನೆ ಇದೆ. ಜೊತೆಗೆ ಮಧ್ಯಾಹ್ನದ ಸೊಗಸನ್ನು ತಿಳಿಸುವ ಕವಿತೆಯು ಇದೆ. ದಿನದ ಮೂರು ಹೊತ್ತುಗಳನ್ನು – ಸೂರ್ಯೋದಯ, ಸೂರ್ಯಾಸ್ತದ ಪ್ರಕೃತಿಯ ರಂಗಿನಾಟವನ್ನು, ನಡುಹಗಲಿನ ಸಿರಿಯನ್ನು ಸೆರೆಹಿಡಿದಿರುವ ಈ ಕವಿತೆಗಳು ಕೆರೆ ಮತ್ತು ಕವಿಗಿರುವ ಆಧ್ಯಾತ್ಮಿಕ, ದಾರ್ಶನಿಕ ರಸಾನುಭೂತಿಯ ಸಂಬಂಧವನ್ನು ತಿಳಿಸುತ್ತವೆ.

"ಕವಿಯ ಜೀವನ ಚರಿತ್ರೆ ಎಂದರೆ ಅವನ ಕವನಗಳೆ ; ಉಳಿದುದೆಲ್ಲವೂ ಬರಿಯ ಅಡಿಟಿಪ್ಪಣಿ (ಕುವೆಂಪು 1993: 343) ಎಂಬುದು ಕುವೆಂಪು ಅವರ ನಿಲುವು. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಮೈಸೂರಿನ ಬದುಕನ್ನು ರಸಮಯ ಮಾಡಿಕೊಂಡ ಬಗೆಯನ್ನು ಅರಿಯುವುದರ ಜೊತೆಗೆ ಪ್ರತಿ ವ್ಯಕ್ತಿಯು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸಿ 'ಎದೆ ತುಂಬಿ ಬಾಳಬೇಕು' ಎಂಬ ಅವರ ಆಶಯವನ್ನು ಕುಕ್ಕನಹಳ್ಳಿ ಕೆರೆಯ ಚಿತ್ರಣದ ಮೂಲಕ ತಿಳಿಯಲಾಗಿದೆ.

ಪರಾಮರ್ಶನ ಗ್ರಂಥಗಳು :

1. ಕುವೆಂಪು., 1993., ನೆನಪಿನ ದೋಣಿಯಲ್ಲಿ, ಉದಯರವಿ., ಪ್ರಕಾಶನ, ಮೈಸೂರು.
2. ಶಿವಾರೆಡ್ಡಿ ಕೆ ಸಿ., 2000., ಕುವೆಂಪು ಸಮಗ್ರ ಕಾವ್ಯ ಸಂಪುಟ 1., ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಕುವೆಂಪು ಸಮಗ್ರ ಕಾವ್ಯ ಸಂಪುಟ 2., ಕನ್ನಡ ವಿಶ್ವವಿದ್ಯಾಲಯ, ಹಂಪಿ.

***

ಲಕ್ಷ್ಮೀಕಾಂತ ಅವರ ಗಜಲ್ ಸಂಕಲನಗಳಲ್ಲಿ ವಸ್ತು ಮತ್ತು ಭಾಷೆ

1 ಶ್ರೀನಿವಾಸ ಡಿ. ಎಚ್.

ಸಂಶೋಧನಾರ್ಥಿ

ಡಾ. ಡಿ ವಿ ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

srinivasdh97@gmail.com

ಕಾವ್ಯಕ್ಕೆ ನಿರ್ದಿಷ್ಟ ವಸ್ತುಗಳನ್ನು ಗುರುತಿಸುವುದು ಹೇಗೆ? ಕಾವ್ಯದ ಭಾಷೆಯ ವೈಶಿಷ್ಟತೆ ಏನು ಮತ್ತು ಭಾಷೆ ಪ್ರಭಾವ ಕಾವ್ಯದ ಮೇಲಾಗುತ್ತಾ ಅಥವಾ ಕಾವ್ಯ ಭಾಷೆಯನ್ನು ಒಳಗೊಳ್ಳುತ್ತಾ? ಎನ್ನುವ ಪ್ರಶ್ನೆಗಳು ಮೊದಲಿಗೆ ಮೂಡುತ್ತದೆ. ಕುವೆಂಪು ಅವರು ಗೊಬ್ಬರವನ್ನು ಕಾವ್ಯದ ವಸ್ತುವಾಗಿಸಿದರು. “ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ? ಹಾ ಕಡುಕಷ್ಟ! ಕಲಿಕಾಲಕೇನುನು ಬಂದಪುದೊ”? ಹೀಗೆ ಕುವೆಂಪುಯವರ ಕಾಲದಲ್ಲಿ ಗೊಬ್ಬರ ಕಾವ್ಯದ ವಸ್ತುವಾಗಿದೆ. ಮುಂದೆ ಬಂದ ನವ್ಯ, ದಲಿತ ಬಂಡಾಯ ಇತ್ತೀಚಿನ ಕಾವ್ಯಗಳಲ್ಲೂ ಕಾವ್ಯದ ವಸ್ತು ಮತ್ತು ಬಾಷೆ ವಿಶಿಷ್ಟ ನೆಲೆಗಳಿಂದ ಕೂಡಿರುತ್ತದೆ. ಇದಕ್ಕೆ ಮುಖ್ಯ ಕಾರಣ ಕಾಲ ಬದಲಾವಣೆ. ಯಾಕೆಂದರೆ ನಿರ್ದಿಷ್ಟ ದಶಕದಲ್ಲಿ ಆದ ಬದಲಾವಣೆಗಳು ಕಾವ್ಯದ ನೆಲೆಯ ವಸ್ತು ಮತ್ತು ಭಾಷೆಯ ಆಯ್ಕೆ ಮೇಲೆ ಪ್ರಭಾವವನ್ನು ಬೀರುತ್ತದೆ. ಅದೇ ರೀತಿ ಭಾಷೆಯು ಕೂಡ ಕಾವ್ಯದಲ್ಲಿ ವಿಶಿಷ್ಟ ಪ್ರಯೋಗವನ್ನು ಒಳಪಡಿಸಿಕೊಳ್ಳುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದ ಕಾವ್ಯವನ್ನು ಅವಲೋಕಿಸಿದಾಗ ಸಂಸ್ಕೃತ ಪದಪುಂಜಗಳು ಕಾವ್ಯದ ಭಾಷೆಯಾಗುತ್ತಿತ್ತು ಮತ್ತು ವಸ್ತುಗಳು ಸಂಸ್ಕೃತ ಸಾಹಿತ್ಯದ ಹಿನ್ನೆಲೆಯಿಂದ ನಿರ್ಧಾರಿತವಾಗುತ್ತಿತ್ತು. ಆಧುನಿಕ ಕನ್ನಡ ಸಾಹಿತ್ಯದ ನವೋದಯದ ಕಾಲಘಟ್ಟಗೆ ಬರುವ ಹೊತ್ತಿಗೆ ಪ್ರಭಾವ ಕಡಿಮೆಗೊಳ್ಳುತ್ತಾ ಕನ್ನಡ ಭಾಷೆಯನ್ನೇ ಹೆಚ್ಚಾಗಿ ಬಳಸಿಕೊಂಡರು ಅಲ್ಲದೆ ದಲಿತ–ಬಂಡಾಯ

ಸಾಹಿತ್ಯದ ಸಂದರ್ಭದಲ್ಲಿ ಕಾವ್ಯದ ಭಾಷೆ ಮತ್ತು ವಸ್ತು ಪ್ರಾದೇಶಿಕ ನೆಲೆ ಬರೆಯುವುದು ಮುಂಚೂಣಿಗೆ ಬಂದಿತ್ತು. ತನ್ನ ದೇಶಿಯ ಅಥವಾ ಕವಿಯ ಪ್ರಾದೇಶಿಕ ಭಾಷೆಯನ್ನೇ ಕಾವ್ಯದ ಭಾಷೆಯಾಗಿಸಿಕೊಂಡರು ಉದಾಹರಣೆಗೆ ದಲಿತ ಕವಿ ಸಿದ್ದಲಿಂಗಯ್ಯನವರ ಕಾವ್ಯಗಳನ್ನು ಗಮನಿಸಿದಾಗ ಅಲ್ಲಿ ಬಳಕೆಗೊಂಡಿರುವ ಭಾಷೆ ದಿನನಿತ್ಯದಲ್ಲಿ ವ್ಯವಹರಿಸುವ ಭಾಷೆಯಾಗಿದೆ.

ಕ್ವರುಗ್ಗಿನಿ ಕ್ವನೆಗೊಂದ್ಸಲ ಕೂಗ್ತಿನಿ
ಬಡ್ಡೀದುಡ್ನೋರ್ಣ ಬಂಗ್ಗೆ ಕ್ಯಳ್ಗೆ
ತಳಾದೀಗ್ ಸಿಕ್ಕರೋ ಮೂಳೆ
ನೆಲನಾಸ್ಕಂಡು ಬಾಣಾನೊದ್ಕೊಂಡು

ಹೀಗೆ ಸಿದ್ದಲಿಂಗಯ್ಯನವರ ಕಾವ್ಯದ ವಸ್ತು ಮತ್ತು ಭಾಷೆ ಎರಡು ಕೂಡ ಈ ಕಾವ್ಯದಲ್ಲಿ ವ್ಯಕ್ತವಾಗಿವೆ. ಭಾಷಾ ಶಾಸ್ತ್ರಜ್ಞರ ಪ್ರಕಾರ ಭಾಷೆ ಹುಟ್ಟಿದ್ದು ಸಮಾಜ ವ್ಯವಸ್ಥೆಯ ಒಂದು ಅಂಗವಾಗಿ ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಧ್ವನಿ ಸಂಕೇತಗಳ ವ್ಯವಸ್ಥೆ ಎಂದು ಅವರು ಭಾವಿಸುತ್ತಾರೆ. ಮೂಲಭೂತವಾಗಿ ಭಾಷೆಗೂ ಮನುಷ್ಯನ ಜೈವಿಕ ಕ್ರಿಯೆಗಳಿಗೂ ಸಂಬಂಧವಿಲ್ಲ ಭಾಷೆ ಇಲ್ಲದೆಯೂ ಮನುಷ್ಯ ಬದುಕಬಲ್ಲ ಕಾವ್ಯದ ಭಾಷೆ ಇನ್ನೊಂದು ಅರ್ಥದಲ್ಲೂ ದಿನಬಳಕೆಯ ಮಾತಿಗಿಂತ ವಿಶಿಷ್ಟವಾಗಿದೆ. ಹೀಗೆ ಭಾಷೆಯು ಮನುಷ್ಯನ ದಿನನಿತ್ಯದ ಮಾತಾಗಿ ಸಾಗಿದರು ಕಾವ್ಯ ಒಂದು ವಿಶಿಷ್ಟವಾದ ಬೆಳವಣಿಗೆಯನ್ನು ಪಡೆದುಕೊಳ್ಳುತ್ತದೆ.

ಈ ಕಾವ್ಯ ಜಗತ್ತಿನಲ್ಲಿ ಗಜಲ್ ಇತ್ತೀಚೆಗೆ ಕಾವ್ಯದ ತಾತ್ವಿಕ ಚಿಂತನೆಗಳನ್ನು ಒಳಗೊಳ್ಳುತ್ತಾ ತನ್ನ ವಿಶಿಷ್ಟ ಶೈಲಿಯಲ್ಲಿ ಗಜಲ್‌ಗಳನ್ನು ರಚನೆಯಾಗುತ್ತಿವೆ. ಲಕ್ಷ್ಮಿಕಾಂತ ಎಲ್ ಬಿ ತುಮಕೂರು ಅವರು ಬರೆದಿರುವ 'ಕಂದಿಲು ಹಚ್ಚುವ ಮುನ್ನ' ಮತ್ತು 'ಮಧುಬಟ್ಟಲು' ಈ ಎರಡು ಕೃತಿಗಳ ಒಟ್ಟು ಗಜಲ್‌ಗಳಲ್ಲಿ ವ್ಯಕ್ತವಾಗಿರುವ ಭಾಷೆ ಮತ್ತು ವಸ್ತುವನ್ನು ಅರಿಯಬೇಕಾಗಿದೆ. ಲಕ್ಷ್ಮೀಕಾಂತ ಎಲ್ ವಿ ಮೂಲತಃ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಬಾಲ್ಯದವರು ತುಮಕೂರು ಭಾಗದಲ್ಲಿ ಬರೆಯುತ್ತಿರುವ ಗಜಲ್ ಕವಿ ಇವರೊಬ್ಬರೇ ಹೀಗಾಗಿ ಈ ಎರಡು ಸಂಕಲನಗಳಲ್ಲಿ ವ್ಯಕ್ತವಾಗಿರುವ ವಸ್ತು ಮತ್ತು ಭಾಷೆ ಯಾವ ಹಿನ್ನೆಲೆಯ ದೃಷ್ಟಿದಿಂದ ಕಟ್ಟುವ ಕೆಲಸವನ್ನು ಕವಿ ಮಾಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಗಜಲ್ ಎಂದರೆ ಕಾಡುವ ಕವಿತೆ, ಇಲ್ಲವೆಂದರೆ ಹಾಡುವ ಕವಿತೆ ಎಂದೇ ಕರೆಯಲ್ಪಡುತ್ತಿದೆ. ಗಜಲ್ ಎನ್ನುವ ಪದ ಅರಬ್ಬಿ ಶಬ್ದ. ಇತಂಹ ಪ್ರೀತಿ

ಮಧುರತೆಯನ್ನು ತನ್ನೊಳಗೆ ತುಂಬಿಕೊಂಡು ಅಂತ ಅಂತವಾಗಿ ಬೆಳವಣಿಗೆಯನ್ನು ಪಡೆದುಕೊಂಡು ಬಂದಿದೆ. ಗಜಲ್ ಸಾಹಿತ್ಯವು ಆರಂಭಕಾಲದಲ್ಲಿ ಕೇವಲ ಪ್ರೀತಿ, ಅನುರಾಗ, ಸಾಕಿ ಮತ್ತು ವಿರಹದಂತಹ ಗಜಲ್‌ಗಳು ರಚನೆಯಾಗುತ್ತಿದ್ದವು. ಆಧುನಿಕ ಕಾಲಘಟ್ಟ ಮುಂದೆ ನಡೆದಂತೆ ಗಜಲ್‌ಗಳಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಪ್ರೀತಿಯನ್ನು ಒಳಗೊಂಡ ಗಜಲ್‌ಗಳು ರಚನೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಎಲ್ಲವನ್ನು ಒಳಗೊಳ್ಳುವ ಗಜಲನ್ನು ಕಂದೀಲು ಹಚ್ಚುವ ಮುನ್ನ ಮತ್ತು ಮಧುಬಟ್ಟಲು ಎನ್ನುವ ಸಂಕಲನಗಳಲ್ಲಿ ಲಕ್ಷ್ಮೀಕಾಂತ ಎಲ್ ವಿ ಅವರು ಹೊಸ ವಿಚಾರಧಾರೆಗಳನ್ನು ಮೂಡಿಸಿದ್ದಾರೆ. ಸಾಮಾಜಿಕ ಬದುಕಿನ ಸಂದರ್ಭದಲ್ಲಿ ಬೆಳಕನ್ನು ಹಚ್ಚುವ ಮೂಲಕ ಲೋಕವನ್ನು ವಿಸ್ತರಿಸಿ ನೋಡುವ ಪ್ರಯತ್ನಗಳು ಇಂದಿನ ಆಧುನಿಕ ಬದುಕಿನಲ್ಲಿ ಮುಖ್ಯವಾಗಿರುತ್ತದೆ. ಚಿಂತನೆ, ಪ್ರೀತಿಯ ಬೇಡುವಿಕೆ ಜ್ಞಾನವನ್ನು ಪಡೆದುಕೊಳ್ಳುವ ತುಡಿತ ಇಂತಹ ವಸ್ತುಗಳನ್ನು ಕೇಂದ್ರವಾಗಿಟ್ಟುಕೊಂಡು ಈ ಸಂಕಲನಗಳನ್ನು ರಚಿಸಲಾಗಿದೆ. ಎಲ್ಲವನ್ನು ಒಳಗೊಳ್ಳುವುದು ಪ್ರಸ್ತುತ ಸಮಾಜಕ್ಕೆ ಬಹುಮುಖ್ಯವಾಗುತ್ತದೆ. ಲೇಖಕರು ಕಂದೀಲು ಹಚ್ಚುವ ಮುನ್ನ ಸಂಕಲನದ ಅರ್ಪಣೆಯ ಸಾಲಿನಲ್ಲಿ ಓದುಗರನ್ನು ಗಮನ ಸೆಳೆಯುವ ಅಥವಾ ತಮ್ಮನ್ನು ತಾವು ಒಳಗಾಗಿಸಿಕೊಳ್ಳುವ ಪ್ರಯತ್ನವು ಹೊಸ ಆಲೋಚನೆಯ ನೆಲೆಯಿಂದ ಕೂಡಿದೆ. ಆ ಅರ್ಪಣೆಯ ಸಾಲಿನಲ್ಲಿ ಬರುವ ಸಂಜೆ ಕಂದಿಲು ಹಚ್ಚಲು ಅಣಿಯಾಗಬೇಕಾದವರು ಜೊತೆಯಾಗಲಿಲ್ಲ ಎನ್ನುವುದು ಲೇಖಕರ ಒಳತುಡಿತವನ್ನು ತಿಳಿಸುತ್ತದೆ. ಬದುಕಿನ್ನುವುದು ಯಾವುದರಲ್ಲೊ ಕಳೆದು ಹೋದಾಗ ನಮ್ಮ ಸುಪ್ತಪ್ರಜ್ಞೆಯಲ್ಲಿ ಕಾಡುವ ಆಲೋಚನೆಗಳು ಬರಹ ರೂಪಕ್ಕೆ ಬಂದಾಗ ಕೃತಿ ಗಟ್ಟಿಗೊಳ್ಳುತ್ತದೆ ಎನ್ನುವುದಕ್ಕೆ ಈ ಸಂಕಲನ ಉದಾಹರಣೆಯಾಗಿದೆ. ಅಲ್ಲದೆ ಇದರ ಶೀರ್ಷಿಕೆಯಲ್ಲಿಯೇ ದೀಪವನ್ನು ಹಚ್ಚುವ ಉಮ್ಮನಸು ನನಗಿದೆ ಆದರೆ ಯಾವುದೂ ದಕ್ಕಿಲ್ಲದ ನನಗೆ ಸಂಜೆ ಗಾಳಿಯು ಕೂಡ ಚಾಡಿ ಹೇಳುತ್ತಿದೆ ಎನ್ನುವುದು ಇಡೀ ಕೃತಿಯ ವಸ್ತುವನ್ನು ಕಟ್ಟಿಕೊಡುತ್ತದೆ. ಈ ಕೃತಿಯನ್ನು ಓದುತ್ತಿದ್ದ ಹಾಗೆ ಒಂದು ಕವಿತೆಯನ್ನು ಅಥವಾ ಒಂದು ಕವನ ಸಂಕಲನವನ್ನು ಓದುತ್ತಿದ್ದೇವೆ ಎಂದು ಭಾಸವಾಗುವುದಿಲ್ಲ ಬದಲಿಗೆ ಯಾವುದೋ ದೀರ್ಘ ಕಾದಂಬರಿಯನೊ ಅಥವಾ ಕಥೆಯನೊ ಕೇಳುತ್ತಿದ್ದೇವೆ ಎನ್ನುವಷ್ಟರ ಮಟ್ಟಿಗೆ ಓದುವಿಕೆಯಲ್ಲಿ ತೊಡಗಿಸಿಕೊಳ್ಳುತ್ತದೆ ಅಥವಾ ನಾವೇ ಅದಕ್ಕೆ ತೊಡಗಿಸಿಕೊಳ್ಳುತ್ತೇವೆ. ವಸ್ತುವಿನ ದೃಷ್ಟಿದಿಂದ ಗಮನಿಸಿದಾಗ ಇದರಲ್ಲಿ ವಿರಹ, ಪ್ರೀತಿ, ಸಾಕಿ, ಮಧುಶಾಲೆ, ಸಾಮಾಜಿಕ ಚಿಂತನೆ, ಮಧುಬಟ್ಟಲು ಇತ್ಯಾದಿ ವಿಚಾರಗಳನ್ನು ಚಿಂತಿಸಿದರೆ.

ಕನ್ನಡಿಗೆ ಕವಿದಿರುವ ಮುಸುಕನ್ನು ಒರೆಸಿ ಸರಿಸಬೇಕಿದೆ

ಬದುಕಿನ ಕತ್ತಲೆ ಮಾಸಲೇಬೇಕು ಬದುಕು ಭರವಸೆಯಾಗುವ ಮುನ್ನ

ಇಲ್ಲಿ ಕವಿಯು ಬದುಕಿನ ಆಯಾಮಗಳಲ್ಲಿ ಅಥವಾ ಮಾರ್ಗದಲ್ಲಿ ಉಂಟಾಗಿರುವ ನೋವಿನ ಕಥೆಯನ್ನು ಸರಿಸಿ ಕತ್ತಲೆಯನ್ನು ದೂರ ಮಾಡಿ ಹೊಸ ಬೆಳಕನ್ನು ಮೂಡಿಸುವ ಭರವಸೆ ತನ್ನೊಳಗಿರಬೇಕು ಮನಸ್ಸು ಗಟ್ಟಿಗೊಳ್ಳಬೇಕು ಎನ್ನುವ ವಿಚಾರವನ್ನು ವ್ಯಕ್ತಪಡಿಸುತ್ತಾರೆ. ವಿರಹ ವೇದನೆಯ ಒಳಗೆ ಭೌತಿಕ ವಿಚಾರಗಳನ್ನು ಸಂಕಲಿಸಿಕೊಂಡು ಮನುಷ್ಯ ಮುನ್ನಡೆದಾಗ ನಿಜ ಸ್ವರೂಪವನ್ನು ತಾಳುತ್ತಾನೆ. ಅಗಲಿಕೆಯಿಂದ ನೋವುಂಟಾದರೂ ಹೃದಯದ ಸಮಾಧಾನಕ್ಕೆ ಕವಿತೆಗಳನ್ನು ಬರೆಯುವ ಉಮ್ಮನಸಿನ ಅಥವಾ ಅನುರಾಗದ ಸಮ್ಮಿಲನದಲ್ಲಿ ಉಂಟಾದ ಮನಸ್ಸಿಗೂ ಸಮಾಧಾನ ನೀಡುತ್ತದೆ. ಇಲ್ಲಿನ ಗಜಲ್ ಪ್ರೇಮ ಅನುರಾಗ ಇವೆಲ್ಲದಕ್ಕೂ ಕೂಡ ಒಂದು ನಿರ್ದಿಷ್ಟ ವ್ಯವಸ್ಥೆ ಎನ್ನುವುದು ಇರುವುದಿಲ್ಲ ಸಮುದ್ರ ಹೇಗೆ ಕಣ್ಣಿಗೆ ಕಾಣುವಷ್ಟು ಅಥವಾ ದಟ್ಟ ಅರಣ್ಯದಲ್ಲಿ ಹಸಿರು ಕಾಣಿಸುವ ರೀತಿ ಪ್ರೀತಿಯು ಅಳತೆಯನ್ನು ಮೀರಿದ್ದು.

ಮಸಣದ ಬಾಗಿಲಿನಲ್ಲೂ ಕುಳಿತು ನಿನ್ನ ಹೆಸರನ್ನೇ ಬರೆದು ಕಾಯುತಿರುವೆ
ಮಧುವಿನ ಜೊತೆಯಲ್ಲಿ ಬಂದುಬಿಡು ಒಮ್ಮೆ ಮಣ್ಣಾಗಬೇಕೆಂದಿರುವೆ ಸಾಕಿ

ಇಲ್ಲಿ ಸಾಕಿಯ ಪ್ರಾಮುಖ್ಯತೆ ಏನು ಎನ್ನುವುದನ್ನು ಕವಿ ಮೂಡಿಸಿದ್ದಾರೆ ಸಾಕಿ, ಮಧುಬಟ್ಟಲು, ಮಧುಶಾಲೆ ಎಲ್ಲವೂ ಕೂಡ ಒಂದಕ್ಕೊಂದು ಸಂಬಂಧವನ್ನು ಮತ್ತು ಒಂದಕ್ಕೊಂದು ಸಹಜೀವನವನ್ನು ಬೆಳೆಸಿಕೊಂಡು ಬಂದುಬಿಟ್ಟಿದೆ ಸಾಕಿಯ ಆಶ್ರಯ ಸಿಕ್ಕರೆ ಸಾಕು ಲೋಕದ ದುಗುಡವನ್ನು ಅವಳು ಮರೆಸಿಬಿಡುತ್ತಾಳೆ. ಈ ಜೀವವನ್ನು ಕಳೆದುಬಿಡುವುದಕ್ಕಿಂತ ಮುಂಚೆ ನಿನ್ನ ಮಧುಬಟ್ಟಲಿನ್ನು ಕುಡಿದು ನೀ ಕೊಟ್ಟ ಅಮೃತದ ಸವಿಯಿಂದ ಈ ಲೋಕದ ಅನೇಕ ಗೊಂದಲಗಳನ್ನು ಬಗೆಹರಿಸಿಕೊಳ್ಳುತ್ತೇನೆ ಎನ್ನುವ ತುಡಿತ ಕವಿಯಲ್ಲಿ ಮೂಡಿದೆ ಹೀಗೆ ಸಾಮಾಜಿಕ ವಸ್ತುಗಳಿಂದ ಹಿಡಿದು ಪ್ರೀತಿ ಅನುರಾಗ ವಿರಹದಂತಹ ಕಥೆಗಳನ್ನು ಲಕ್ಷ್ಮಿಕಾಂತ್ ಅವರು ತಮ್ಮ ಎರಡೂ ಕೃತಿಗಳಲ್ಲಿ ಕಟ್ಟುವ ಕೆಲಸವನ್ನು ಮಾಡಿದ್ದಾರೆ. ಮುಂದುವರೆದು ಹೇಳುವುದಾದರೆ ಯಾವುದೇ ಒಬ್ಬ ಕವಿಗೆ ತಾನು ಜೀವಿಸುತ್ತಿರುವ ಪ್ರಸ್ತುತ ಸಮಾಜವನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗುತ್ತದೆ. ತನ್ನ ಎಲ್ಲಾ ಒಳತೋಟಿಗಳನ್ನು ಹೊರಹೊಮ್ಮಿಸುವ ಪ್ರಯತ್ನದಲ್ಲಿ ಕವಿ ಇರುತ್ತಾನೆ ಹಾಗೆಯೇ ಈ ಗಜಲ್ ಸಂಕಲನಗಳಲ್ಲಿ ಪ್ರಸ್ತುತ ರಾಜಕೀಯ ಚಿತ್ರಣ, ಧರ್ಮ, ಮನಸ್ಸಿನ ತಲ್ಲಣ, ಒಲುಮೆಯ ಕನವರಿಕೆ ಇತಂಹ ಹತ್ತು ಹಲವು ಮುಖಗಳನ್ನು ಕಾಣಬಹುದು.

"ಕತ್ತು ಸೀಳುವ ತಲ್ವಾರಿಗೆ ಅಂಟಿದ ರಕ್ತದ ಬಣ್ಣ ಧರ್ಮದ ಕಥೆ ಹೇಳುತ್ತಿದೆ
ಊಳುವ ದೇಹಕ್ಕೆ ಬೆತ್ತಲು ಬಗೆ ಕೇಳಬೇಡ ಅದಕ್ಕೆ ಮಣ್ಣಲ್ಲಿ ಸೇರಿಸುವುದಷ್ಟೇ ಗೊತ್ತು"

ಸಾಮಾಜಿಕ ತಲ್ಲಣಗಳನ್ನು ಮೂಡಿಸಿರುವ ಪರಿಯು ಧರ್ಮದ ಹೆಸರಿನಲ್ಲಿ ಕತ್ತಿ ಮಸಿಯುತ್ತಿರುವ ಈ ಜಗತ್ತಿನಲ್ಲಿ ಮೋಸವೇ ತುಂಬಿದೆ. ನನ್ನೆದುರಿಗೆ ಜಾತಿ ಧರ್ಮದ ಬಗ್ಗೆ ಕೇಳಬೇಡ ಲಕ್ಷ್ಮೀಶ ಅವನಿಗೆ ಪ್ರೀತಿಸಿದಷ್ಟೇ ಗೊತ್ತು ಇಲ್ಲಿರುವ ಲಕ್ಷ್ಮೀಶನಿಗೆ ಯಾವುದೇ ಜಾತಿ, ಧರ್ಮ ಇವುಗಳಿಗೆ ಹೋಗದೆ ನನಗೆ ಪ್ರೀತಿನ್ನು ನೀಡುವುದು ಅಷ್ಟೇ ಗೊತ್ತಿದೆ ಎಂದು ದೃಢ ನಿರ್ಧಾರಕ್ಕೆ ಬಂದಿದ್ದಾರೆ. ಈ ಸಾಲುಗಳನ್ನ ಓದಿದಾಗ ಪಿ ಲಂಕೇಶ್ ಬರೆದಿರುವ ಗುಣಮುಖ ನಾಟಕದ ಕೊನೆಯ ಭಾಗ ನೆನಪಿಗೆ ಬರುತ್ತದೆ ಚಕ್ರವರ್ತಿಯಾದ ನಾದಿರ್ ಮತ್ತು ಅವನಿಗೆ ಚಿಕಿತ್ಸೆ ನೀಡುವ ಅಲಾವಿ ಈ ಇಬ್ಬರ ನಡುವೆ ನಡೆಯುವ ಸಂಭಾಷಣೆ

ಅಲಾವಿ: ಜೀವನದಲ್ಲಿ ಕಟ್ಟ ಕಡೆಗೆ ಯಾವುದು ಮುಖ್ಯ, ತಿಳಿಯಿತೆ ದೊರೆ?

ನಾದೀರ್: ಪ್ರೇಮ

ಈ ಮಾತು ಜೀವನದಲ್ಲಿ ನಡೆಯುವ ಪ್ರತಿಯೊಂದು ಘಟನೆಗೂ ನಮ್ಮ ಸ್ವಾರ್ಥವೇ ಕಾರಣವಾಗಿರುತ್ತದೆ ಅದರ ನಡುವೆ ಪ್ರೀತಿ ಎನ್ನುವ ಬಂಧವನ್ನು ನಾವು ಕಳಚಿಬಿಟ್ಟಿರುತ್ತೇವೆ. ಆದರೆ ಕೊನೆಗೆ ಗೆಲ್ಲುವುದೇ ಪ್ರೀತಿ ಇಂತಹ ತಾತ್ವಿಕ ವಿಚಾರಗಳನ್ನು ಲಕ್ಷ್ಮೀಶ ಪ್ರೀತಿಯಿಂದಲೇ ಅಪ್ಪಿಕೊಂಡು ಪ್ರೀತಿಯೇ ಮುಖ್ಯ ಎನ್ನುವ ಪ್ರಶ್ನೆಯನ್ನು ಭೌತಿಕ ತಿಳುವಳಿಕೆಯು ನಮ್ಮಲ್ಲಿ ಹುಟ್ಟುವಂತೆ ಮಾಡುತ್ತದೆ. ಇದರ ನಡುವೆಯೇ ಸಂಸಾರದ ಬದುಕು, ಹೆಣ್ಣು, ಮೋಹ, ಪ್ರೀತಿಯ ತಂದೆ, ತಾಯಿ, ವಿದ್ಯೆಯನ್ನು ಕಳಿಸಿದ ಗುರು, ಪ್ರೀತಿಯ ಸ್ಪರ್ಶ ನೀಡಿದ ಗೆಳತಿ ಹೀಗೆ ಬದುಕಿನ ನಾನಾ ಮುಖಗಳನ್ನ ತೆರೆದಿಡುವ ಪ್ರಯತ್ನವನ್ನು ಮಾಡಿದ್ದಾರೆ.

"ಸಂಸಾರದ ಬಾಯಿ ಜಗಳದಲ್ಲಿ ಹೆಣ ಬಿದ್ದರೆ ಬಂದು ನೋಡುವ ಮಂದಿಗೆ ಲೆಕ್ಕವಿಲ್ಲ
ಅರಗಿನ ಅರಮನೆಗೆ ಪಿತಾಮರ ಹುಡುಕಿದರೆ ಬೆಂಕಿ ಬಂದು ಸಿಂಗಾರವಾಗುವುದಿಲ್ಲ"

"ದೇವರಿಗೂ ವರ ಕೊಡುವ ಮನಸಾಗುತ್ತಿಲ್ಲ ಅವಳ ಧ್ಯಾನ ಸಿಗದೇ
ಕತ್ತಲು ಕೂಡ ತಲೆ ತುಂಬಿದೊಳಗೆ ಸೇರಿ ಬಿಟ್ಟಿದೆ ಅವಳು ಕನಸು ಕಂಡಿಲ್ಲವೆಂದು"

ಈ ಸಾಲುಗಳು ಕವಿಯ ಮನೋಲೋಕವನ್ನು ಎಷ್ಟರಮಟ್ಟಿಗೆ ಕಾಡಿದೆ. ನಾವು ಆಧುನಿಕ ಕಾಲಘಟ್ಟವನ್ನು ಮೀರಿ ಆಧುನಿಕೋತ್ತರ ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ. ಇಲ್ಲಿ ಸ್ವಾರ್ಥ, ದ್ವೇಷ, ಅಸೂಯೆ, ಕೋಪ ಇವುಗಳೇ ತುಂಬು ಹೋಗಿದೆ. ಈ ಅಂಧಕಾರದಿಂದ ಎಚ್ಚರಗೊಳಿಸುವುದು ಸಾಹಿತ್ಯದ ಒಂದು ಭಾಗವೇ ಆಗಿರುತ್ತದೆ. ಯಾಕೆಂದರೆ ಕನ್ನಡ ಸಾಹಿತ್ಯದ ಹಿಂದಿನ ಪರಂಪರೆಯನ್ನು ನೆನೆಸಿಕೊಂಡರೆ ಇಂಥ ಸಮಾಜದ ಅನೇಕ ದೋಷಗಳನ್ನು ತಿದ್ದುವ ಪ್ರಯತ್ನಗಳು ನಡೆದಿದೆ. ಪಂಪಯುಗ, ಬಸವಯುಗ, ಕುಮಾರವ್ಯಾಸ,

ಹರಿಹರ, ರಾಘವಾಂಕ, ಮುದ್ದಣ್ಣ, ಕುವೆಂಪು, ಸಿದ್ದಲಿಂಗಯ್ಯ, ದೇವನೂರು ಮಹಾದೇವ, ಶಾಂತರಸ ಮುಕ್ತಾಯಕ್ಕ ಹೀಗೆ ಕನ್ನಡ ಸಾಹಿತ್ಯದ ಪರಂಪರೆಯು ಎಚ್ಚರಗೊಳಿಸುವ ಕೆಲಸವನ್ನು ಮಾಡಿದೆ. ಇಂತಹ ವಿಚಾರಗಳನ್ನು ಗಜಲ್‌ಗಳಲ್ಲಿ ಅಭಿವ್ಯಕ್ತಿಸುವ ಕೆಲಸ ನಡೆದಿದೆ. ಮಧುಬಟ್ಟಲು ಮತ್ತು ಕಂದೀಲು ಹಚ್ಚುವ ಮುನ್ನ ಈ ಸಂಕಲನಗಳನ್ನು ಗಮನಿಸಿದಾಗ ಕಂದೀಲು ಹಚ್ಚುವ ಮುನ್ನ ಗಜಲ್ ಸಂಕಲನದಲ್ಲಿ ಭಾಷೆಯು ಉತ್ತರ ಕರ್ನಾಟಕದ ಭಾಷೆಯಲ್ಲಿ ಧ್ವನಿತವಾಗಿದೆ. "ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ" ಒಂದು ಸಂವಹನ ಮಾಡುದಕ್ಕೆ ಭಾಷೆ ಬೇಕೆ ಬೇಕಾಗುತ್ತದೆ. ಕನ್ನಡ ಭಾಷೆಯಲ್ಲಿ ಅನೇಕ ಉಪಭಾಷೆಗನ್ನು ಕಾಣಬಹುದು ಹಾಗೂ ಭೌಗೋಳಿಕವಾಗಿ ಮೈಸೂರು ಕನ್ನಡ, ಧಾರವಾಡ ಕನ್ನಡ, ಕಲುಬರ್ಗ ಕನ್ನಡ ಮತ್ತು ಮಂಗಳೂರು ಕನ್ನಡ ಎಂದು ವಿಗಂಡಸಿಕೊಳ್ಳುತ್ತೇವೆ. ಕಾವ್ಯದಲ್ಲಿ ಬೇಂದ್ರೆವರು ಧಾರವಾಡ, ಹುಬ್ಬಳಿ ಕನ್ನಡವನ್ನು ಬಳಸಿಕೊಂಡಿದ್ದಾರೆ. ಗಜಲ್ ಮುಖ್ಯವಾಗಿ ಉತ್ತರ ಕರ್ನಾಟಕದ ರಾಯಚೂರು ಭಾಗದಲ್ಲಿ ಮೊದಲಿಗೆ ಕಾಣಿಸಿಕೊಳ್ಳುತ್ತದೆ. ಯಾಕೆ ಈ ಭಾಗದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ ಎಂದರೆ "ಆ ಪ್ರದೇಶದಲ್ಲಿ ಜಾರಿಯಲ್ಲಿದ್ದ ನಿಜಾಮರ ಆಡಳಿತ" ಇದರಂದ ಈ ಭಾಗಗಳಲ್ಲಿ ಗಜಲ್ ಮೊದಲು ಕಾಣಿಸಿಕೊಳ್ಳುತ್ತದೆ. ಇದರೆ ಲಕ್ಷ್ಮೀಕಾಂತ್ ಅವರು ತುಮಕೂರಿನವರು ಗಜಲ್ ಬರೆಯಬೇಕು ಎನ್ನುವ ಕಾರಣದಿಂದ ಉತ್ತರ ಕರ್ನಾಟಕ ಭಾಷೆಯನ್ನು ಬಳಸಿಕೊಂಡಿದ್ದಾರ? ಎನ್ನುವುದು ಪ್ರಶ್ನೆಯಾಗಿವೇ ಉಳಿಯುತ್ತದೆ.

"ಅದ್ಯಾಕ ಚಿಂತ ಮಾಡತಿ ಗುಲಾಬಿ ಹೂನಾಗ ಪರಿಮಳಕ್ಕೇನು ಕಮ್ಮಿ ಆಗೈತಿ"

ಈ ಸಾಲನ್ನು ಓದಿದಾಗ ಬೇಂದ್ರೆಯ ನೆನಪಾಗುತ್ತದೆ ಅವರು ತಮ್ಮ ಕಾವ್ಯದಲ್ಲಿ ಪದಗಳನ್ನು ದುಡಿಸಿಕೊಂಡವರು ಹಾಗೆಯೇ ಲಕ್ಷ್ಮಿಕಾಂತ ಅವರು ಕೂಡ ಪದಗಳನ್ನು ದುಡಿಸಿಕೊಂಡಿದ್ದಾರೆ. ಸರಳ ಪದಗಳಾದರೂ ಅರ್ಥ ಗಾಂಭೀರ್ಯದಿಂದ ಮುನ್ನಡೆಸಿಕೊಂಡು ಹೋಗುವ ಒಂದು ವ್ಯವಸ್ಥಿತವಾದ ಭಾಷಾ ಹಿಡಿತ ಈ ಕೃತಿಯಲ್ಲಿ ಕಾಣಬಹುದಾಗಿದೆ. ಸಾಮಾಜಿಕ ಪರಿಕಲ್ಪನೆಯ ಒಳಗೆ ಬದುಕುವ ನಾವು ಲೋಕ ವಿಸ್ತಾರಗೊಂಡಂತೆ ನಮ್ಮ ಆಲೋಚನೆ ವಿಸ್ತಾರಗೊಳ್ಳಬೇಕಾಗುತ್ತದೆ. ಈ ಆಲೋಚನೆ ವಿಸ್ತಾರಗೊಳ್ಳಬೇಕಾದರೆ ನಮ್ಮನ್ನು ಈ ಸಮಾಜದ ಎದುರಿಗೆ ತೆರೆದುಕೊಳ್ಳಬೇಕು ಇಲ್ಲವಾದರೆ ನಾವು ಕಳೆದು ಹೋದ ವಸ್ತುಗಳಾಗುತ್ತವೆ. ಸಾಮಾಜಿಕ ಬದುಕಿನಲ್ಲಿ ಬದುಕುವ ಸಾಮಾನ್ಯ ಮನುಷ್ಯನು ಶ್ರೀಮಂತನಾಗಿ ಬದುಕಬಹುದು ಗುಣವಿರಬೇಕು ಅಷ್ಟೇ, ಅವನು ಸುಖೀಜ ಹೌದು ಆಧ್ಯಾತ್ಮಿಕ ವ್ಯಕ್ತಿಯು ಹೌದು ಪ್ರೀತಿಯಲ್ಲಿ ತನ್ನನ್ನು ತೊಡಗಿಸಿಕೊಂಡ ವ್ಯಕ್ತಿಯು ಹೌದು ಹೀಗೆ ನಾನಾ ವಿಚಾರವನ್ನು,

ಚಿಂತನೆಯನ್ನು ಮಂಥನವನ್ನು ಒಡಮೂಡಿಸುತ್ತದೆ ಇಲ್ಲಿನ ಗಜಲ್‌ಗಳು.

ಕೋಣ್ಯಾಗಿನ್ ಚಾದರ ಬೆಳದಿಂಗಳ ಬೆಳಕ ಬೇಕಂತ ಹಠ ಹಿಡಿದೈತಿ
ಕುಂಕುಮ ಹಿಡ್ಕೊಂಡ್ ಕುಂತೀನಿ ದೀಪ ಹಚ್ಚಿ ಬರ್ತಾಳಾಕಿ ಹಣ್ಣೇಗ್ ಹಚ್ಚಾಕ
ಮನಿ ಮುಂದ ಹಂದರ್ ಚಪ್ರ ಹೊಳಿಲಿಕ್ಕತ್ತೈತಿ ಆಕಿ ಮದ್ವಿ ಅಂತ
ಮಂದರಂಗಿ ಅರ್ದು ಬಟ್ಟಲದಾಕ ಹಾಕೀನಿ ಮಕಿ ಕೈನ ಕೆಂಪಗ್ ಮಾಡಾಕ

ಭಾಷೆಯಲ್ಲಿ ಪದಬಳಕೆ ಮತ್ತು ಭಾಷೆಯ ದಾಟಿಯು ವಿಶಿಷ್ಟವಾಗಿ ಪ್ರಯೋಗವಾಗಿದೆ ನಮ್ಮನ್ನ ಧಾರವಾಡ ಹುಬ್ಬಳ್ಳಿ ಈ ಭಾಗಕ್ಕೆ ಕರೆದುಕೊಂಡು ಹೋಗಿ ಕೇಳಿಸಿಕೊಂಡ ತಕ್ಷಣ ಮನತಟ್ಟುತ್ತವೆ. ಇಲ್ಲಿನ ಗಜಲ್‌ಗಳು ಹೀಗೆ ಈ ಎರಡು ಸಂಕಲನಗಳಲ್ಲಿ ವಸ್ತು ಮತ್ತು ಭಾಷೆಯ ಹಿನ್ನೆಲೆಯಿಂದ ಹೊಸ ಅಲೋಚನೆಯ ವಿಚಾರಧಾರೆಯನ್ನು ಸಮಾಜಿಕವಾಗಿ ತಿಳಿಸುವ ಕೆಲಸವನ್ನು ಮಾಡಿದ್ದಾರೆ.

ಗ್ರಂಥ ಋಣ :

1. ಸಂ–ಚಿದಾನಂದ ಸಾಲಿ, 2025, ಕನ್ನಡ ಗಜಲ್, ಸಾಹಿತ್ಯ ಅಕಾದೆಮಿ, ನವದೆಹಲಿ.
2. ಲಕ್ಷ್ಮೀಕಾಂತ ಎಲ್ ವಿ ತುಮಕೂರು,2019,ಮಧುಬಟ್ಟಲು,ಸಾತ್ವಿಕ ಪ್ರಕಾಶನ ತುಮಕೂರು.
3. ಲಕ್ಷ್ಮೀಕಾಂತ ಎಲ್ ವಿ ತುಮಕೂರು,2024, ಕಂದೀಲು ಹಚ್ಚುವ ಮುನ್ನ ,ಸಾತ್ವಿಕ ಪ್ರಕಾಶನ ತುಮಕೂರು.
4. ಡಾ. ಸಾ ಶಿ ಮರುಳಯ್ಯ,2019,ಕನ್ನಡ ಭಾಷೆಯ ಚರಿತ್ರೆ, ಅರವಿಂದ್ ಇಂಡಿಯಾ ಬೆಂಗಳೂರು.
5. ಎಂ ಎಚ್ ಕೃಷ್ಣ, 2018, ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಅಂಕಿತ ಪ್ರಕಾಶ ಬೆಂಗಳೂರು.
6. ಡಾ ಸಿದ್ದಲಿಂಗಯ್ಯ, 2015, ಮೆರವಣಿಗೆ, ಅಂಕಿತ ಪ್ರಕಾಶ ಬೆಂಗಳೂರು.
7. ಗಿರಡ್ಡಿ ಗೋವಿಂದ ರಾಜ, 2023, ಸಮಗ್ರ ವಿಮರ್ಶೆ ಸಂಪುಟ–1, ಸಪ್ನ ಬುಕ್ ಹೌಸ್ ಬೆಂಗಳೂರು

‘ಎಳೆ’ ಕಾದಂಬರಿಯಲ್ಲಿ ಸಾಮಾಜಿಕ ಸಂಘರ್ಷ ಮತ್ತು ವೈಚಾರಿಕತೆಯ ನೆಲೆಗಳು

1 ಮನೋಜ್.ಎಂ[1]

[1]ಸಂಶೋಧನಾ ವಿದ್ಯಾರ್ಥಿ ಸಾಮಾಜಿಕ ಮತ್ತು ಮಾನವಿಕ ವಿಭಾಗ

ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

manojm.cssh@srinivasuniversity.edu.in,

ಸಹಾಯಕ ಪ್ರಧ್ಯಾಪಕರು, ಸಂತ ಫ್ರಾನ್ಸಿಸ್ ಕಾಲೇಜು,

ಕೋರಮಂಗಲ, ಬೆಂಗಳೂರು–34

manojm7190@gmail.com

Orchid ID NO: https://orcid.org/0000-0002-6087-8152

ಕಾದಂಬರಿಯು ಶಿವಪುರದ ನೇಕಾರರ ದಾರುಣ ಬದುಕನ್ನು ಅನಾವರಣಗೊಳಿಸುತ್ತದೆ. ಈ ಸಮುದಾಯದ ಬಡ ನೇಕಾರರು ಸಾಹುಕಾರ ಉಗ್ರಪ್ಪನಂತಹ ಬಂಡವಾಳಶಾಹಿಗಳ ಮಗ್ಗಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಇಲ್ಲಿನ ನೇಕಾರರು ಕೇವಲ ದೈಹಿಕವಾಗಿ ಮಾತ್ರವಲ್ಲದೆ, ಆರ್ಥಿಕವಾಗಿಯೂ ಸಾಲದ ಸುಳಿಗೆ ಸಿಲುಕಿ ಶೋಷಿತರಾಗಿದ್ದಾರೆ. ಚೌಡಪ್ಪನಂತಹ ಬಡ ನೇಕಾರರು ತಮ್ಮ ಮಕ್ಕಳ ಮದುವೆಗಾಗಿ ಪಡೆದ ಸಾಲಕ್ಕೆ ನೀಡುವ ಬಡ್ಡಿಯೇ ಅಸಲಿಗಿಂತ ಹೆಚ್ಚಾಗಿರುತ್ತದೆ. ವಾರಕ್ಕೊಮ್ಮೆ ನಡೆಯುವ ಕೂಲಿ ವಿತರಣೆಯಲ್ಲಿ ಉಗ್ರಪ್ಪನು ಬಡ್ಡಿ ಮತ್ತು ಸಣ್ಣ ತಪ್ಪುಗಳ ನೆಪದಲ್ಲಿ ಹಣ ಕಡಿತಗೊಳಿಸುವುದು ಇಲ್ಲಿನ ಸಾಮಾನ್ಯ ಪದ್ಧತಿಯಾಗಿದೆ.

ಕಾದಂಬರಿಯ ಕೇಂದ್ರಬಿಂದುವಾದ ರಂಗದಾಸನು ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿ ತನ್ನ ಸಮುದಾಯದಲ್ಲಿರುವ ಮೂಢನಂಬಿಕೆಗಳನ್ನು ವೈಜ್ಞಾನಿಕವಾಗಿ ಪ್ರಶ್ನಿಸುತ್ತಾನೆ. ಸಮಾಜದಲ್ಲಿ ಬೇರೂರಿರುವ ದೈವದ ಬಲಿ ಪದ್ಧತಿ ಹಾಗೂ ಜನಿವಾರ

ಧರಿಸುವ ಮೂಲಕ ಉನ್ನತ ಜಾತಿಯವರೆಂದು ತೋರಿಸಿಕೊಳ್ಳುವ 'ಬ್ರಾಹ್ಮಣೀಕರಣ'ದ ಪ್ರಕ್ರಿಯೆಗಳನ್ನು ಅವನು ವಿಡಂಬಿಸುತ್ತಾನೆ. ಜನರಲ್ಲಿರುವ ಭಯ ಮತ್ತು ಅಸಹಾಯಕತೆಯೇ ಇಂತಹ ನಂಬಿಕೆಗಳಿಗೆ ಮೂಲ ಕಾರಣವೆಂದು ಅವನು ಪ್ರತಿಪಾದಿಸುತ್ತಾನೆ. ಶಿಕ್ಷಣದ ಮೂಲಕ ಮಾತ್ರ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ ಎಂಬುದು ಅವನ ದೃಢ ನಿಲುವಾಗಿದೆ.

ಗಿರಿಜೆಯ ಪಾತ್ರದ ಮೂಲಕ ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಚಿತ್ರಿಸಲಾಗಿದೆ. ತನಗೆ ಇಷ್ಟವಿಲ್ಲದಿದ್ದರೂ ತಂದೆಯ ಹಠಕ್ಕೆ ಮಣಿದು ಶ್ರೀಮಂತ ಮುದ್ದು ಸ್ವಾಮಿಯನ್ನು ಅವಳು ಮದುವೆಯಾಗುತ್ತಾಳೆ. ಮದುವೆಯ ನಂತರ ಗಂಡನ ಮನೆಯಲ್ಲಿ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಅನುಭವಿಸುವ ಅವಳು, ಅಂತಿಮವಾಗಿ ವೈಧವ್ಯದ ನೋವನ್ನೂ ಕಾಣುತ್ತಾಳೆ. ಸೂರಮ್ಮ ಮತ್ತು ಗಿರಿಜೆಯರು ಮನೆಯೊಳಗಿನ ಅಸೌಕರ್ಯಗಳನ್ನು ಮತ್ತು ರೋಗಿ ಪಾಪಣ್ಣಿಯ ಸೇವೆಯನ್ನು ಮೌನವಾಗಿ ಸಹಿಸಿಕೊಳ್ಳುವ ಮೂಲಕ ಹೆಣ್ಣಿನ ಅಪಾರ ತಾಳ್ಮೆಯನ್ನು ಪ್ರತಿಬಿಂಬಿಸುತ್ತಾರೆ.

ಮಗ್ಗದ ಕೆಲಸದ ವೇಳೆ ಅರಸಪ್ಪನ ಕೈ ತುಂಡಾದ ಘಟನೆಯು ಕಾದಂಬರಿಯ ಮಹತ್ವದ ತಿರುವು. ಮಾಲೀಕ ಉಗ್ರಪ್ಪನು ಪರಿಹಾರ ನೀಡಲು ನಿರಾಕರಿಸಿದಾಗ ರಂಗದಾಸನು ಕಾರ್ಮಿಕರನ್ನು ಸಂಘಟಿಸಿ ಮುಷ್ಕರ ಹೂಡುತ್ತಾನೆ. ಹೊಡೆತ ತಿಂದು ಕೈ ಮುರಿದುಕೊಂಡರೂ ತನ್ನ ಛಲ ಬಿಡದ ರಂಗದಾಸನು ಅರಸಪ್ಪನಿಗೆ ನ್ಯಾಯಯುತವಾದ ಪರಿಹಾರವನ್ನು (ಕಾಂಪೆನ್ಸೇಷನ್) ದೊರಕಿಸಿಕೊಡುತ್ತಾನೆ. ಇದು ಶ್ರಮಿಕ ವರ್ಗವು ಸಂಘಟಿತರಾದಾಗ ಮಾತ್ರ ಮಾಲೀಕರನ್ನು ಎದುರಿಸಬಹುದು ಎಂಬುದನ್ನು ಸಾರುತ್ತದೆ. ಈ ಕಾದಂಬರಿಯು ಬದುಕಿನ ಪ್ರತಿಯೊಂದು 'ಎಳೆ'ಯೂ ಹೇಗೆ ಒಂದು ದೊಡ್ಡ ಸಮಾಜದ ಬಟ್ಟೆಯನ್ನು ನೇಯುತ್ತವೆ ಎಂಬುದನ್ನು ಅತ್ಯಂತ ಪರಿಣಾಮಕಾರಿಯಾಗಿ ಮನವರಿಕೆ ಮಾಡಿಕೊಡುತ್ತದೆ.

ಮುಖ್ಯ ಪದಗಳು :

ನೇಕಾರ ಸಮುದಾಯ: ನೇಯ್ಗೆ ವೃತ್ತಿಯನ್ನು ಮಾಡುವ ಶ್ರಮಿಕ ವರ್ಗ.

ಬಟವಾಡೆ: ಕೆಲಸಗಾರರಿಗೆ ವಾರಕ್ಕೊಮ್ಮೆ ನೀಡುವ ಕೂಲಿ ಹಣ ವಿತರಣೆ.

ಶೋಷಣೆ: ಮಾಲೀಕ ವರ್ಗದವರಿಂದ ಕಾರ್ಮಿಕರ ಮೇಲಾಗುವ ಆರ್ಥಿಕ ದಬ್ಬಾಳಿಕೆ.

ವೈಚಾರಿಕತೆ: ಮೂಢನಂಬಿಕೆಗಳನ್ನು ವಿಜ್ಞಾನ ಮತ್ತು ತರ್ಕದ ಆಧಾರದ ಮೇಲೆ ಪ್ರಶ್ನಿಸುವುದು.

ಕಾಂಪೆನ್‌ಸೇಷನ್: ಕೆಲಸಗಾರರಿಗೆ ಅಪಘಾತವಾದಾಗ ದೊರೆಯುವ ಆರ್ಥಿಕ ಪರಿಹಾರ.

ಧರಣಿ/ಮುಷ್ಕರ: ನ್ಯಾಯಕ್ಕಾಗಿ ಹೂಡುವ ಸಂಘಟಿತ ಹೋರಾಟ.

ಪೀಠಿಕೆ :

ಕನ್ನಡ ಸಾಹಿತ್ಯ ಲೋಕದ ಶ್ರೇಷ್ಠ ಲೇಖಕಿಯರಲ್ಲಿ ಒಬ್ಬರಾದ ಅನುಪಮಾ ನಿರಂಜನ ಅವರು ಸಮಾಜದ ವಿವಿಧ ಸ್ತರಗಳ ಬದುಕನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದವರು. ಅವರ 'ಎಳೆ' ಕಾದಂಬರಿಯು ನೇಕಾರ ಸಮುದಾಯದ ಬದುಕು, ಶೋಷಣೆ, ಮೂಢನಂಬಿಕೆ ಮತ್ತು ಯುವ ಪೀಳಿಗೆಯ ವೈಚಾರಿಕ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. 1983ರಲ್ಲಿ ಮೊದಲ ಬಾರಿಗೆ ಪ್ರಕಟವಾದ ಈ ಪ್ರಮುಖ ಸಾಮಾಜಿಕ ಕೃತಿಯು ಅಂದಿನ ಸಾಮಾಜಿಕ ಸ್ಥಿತಿಗತಿಗಳಿಗೆ ಹಿಡಿದ ಕನ್ನಡಿಯಾಗಿದೆ. ಕರ್ನಾಟಕದ ಶಿವಪುರ ಎಂಬಲ್ಲಿನ ನೇಕಾರ ಸಮುದಾಯದ ಬದುಕನ್ನು ವಸ್ತು ಪ್ರೇರಿತವಾಗಿರಿಸಿಕೊಂಡಿರುವ ಈ ಕಾದಂಬರಿಯು ಶ್ರಮಿಕ ವರ್ಗದ ಆರ್ಥಿಕ ಸಂಕಷ್ಟಗಳು ಮತ್ತು ಮಾಲೀಕ ವರ್ಗದಿಂದ ನಡೆಯುವ ಶೋಷಣೆಯನ್ನು ಅತ್ಯಂತ ನೈಜವಾಗಿ ಚಿತ್ರಿಸುತ್ತದೆ. ಸಮಾಜದಲ್ಲಿ ಹಾಸುಹೊಕ್ಕಾಗಿರುವ ಮೂಢನಂಬಿಕೆಗಳು ಮತ್ತು ಇವುಗಳ ನಡುವೆ ಉದಯಿಸುವ ವೈಚಾರಿಕ ಪ್ರಜ್ಞೆಯನ್ನು ಇಲ್ಲಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

1. ವೈಚಾರಿಕತೆ ಮತ್ತು ಮೂಢನಂಬಿಕೆಗಳ ನಡುವಣ ಸಂಘರ್ಷ :

ಕಾದಂಬರಿಯುದ್ದಕ್ಕೂ ಹಳೆಯ ತಲೆಮಾರಿನ ಸಂಪ್ರದಾಯಬದ್ಧ ನಂಬಿಕೆಗಳು ಮತ್ತು ಹೊಸ ತಲೆಮಾರಿನ ವೈಚಾರಿಕ ಆಲೋಚನೆಗಳ ನಡುವಿನ ತೀವ್ರವಾದ ತಿಕ್ಕಾಟವನ್ನು ಲೇಖಕರು ಚಿತ್ರಿಸಿದ್ದಾರೆ. ಇದು ಕೇವಲ ಎರಡು ತಲೆಮಾರುಗಳ ನಡುವಿನ ವ್ಯತ್ಯಾಸವಲ್ಲ, ಬದಲಾಗಿ ಕುರುಡು ನಂಬಿಕೆ ಮತ್ತು ವೈಜ್ಞಾನಿಕ ಮನೋಭಾವದ ನಡುವಿನ ಹೋರಾಟವಾಗಿದೆ. ಸ್ಥಳೀಯ ದೈವಗಳ ಆರಾಧನೆ: ಪುಟ್ಟಮ್ಮ ಮತ್ತು ಸೂರಮ್ಮನಂತಹ ಪಾತ್ರಗಳು ಮುನೇಶ್ವರನ ಗುಡಿ, ಹುತ್ತ ಹಾಗೂ ಕಲ್ಲುಗುಂಡುಗಳಲ್ಲಿ ದೈವಿಕ ಶಕ್ತಿಯನ್ನು ಕಾಣುತ್ತಾ, ಅವುಗಳನ್ನು ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಆರಾಧಿಸುತ್ತಾರೆ. ಮುನೇಶ್ವರನು ರೋಗಗಳನ್ನು ಗುಣಪಡಿಸುವವನು, ಸಂತಾನ ಭಾಗ್ಯವನ್ನು ಕರುಣಿಸುವವನು ಮತ್ತು ಬೇಡಿದ ವರಗಳನ್ನು ನೀಡುವ ಶಕ್ತಿದಾಯಕ ದೇವರೆಂಬುದು ಅವರ ಅಚಲವಾದ ನಂಬಿಕೆಯಾಗಿದೆ. ಆದರೆ, ಸಮಾಜಶಾಸ್ತ್ರದ ವಿದ್ಯಾರ್ಥಿಯಾದ ರಂಗದಾಸನು ಈ ಆಚರಣೆಗಳನ್ನು ವಿಭಿನ್ನವಾದ ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಾನೆ. ಇಂತಹ ಪೂಜಾ ವಿಧಿಗಳನ್ನು ಕೇವಲ ಸಂಪ್ರದಾಯವೆಂದು ಒಪ್ಪದ ಅವನು, ಇವುಗಳ ಮೂಲವನ್ನು ಮನುಷ್ಯನ ವಿಕಾಸದ ಹಂತಗಳಲ್ಲಿ ಹುಡುಕುತ್ತಾನೆ. ಅವನ ತರ್ಕದ ಪ್ರಕಾರ, ಆದಿಮಾನವನು ಕಾಡುಗಳಲ್ಲಿ ಅಸಹಾಯಕನಾಗಿದ್ದಾಗ ಮತ್ತು ಪ್ರಕೃತಿಯ ಅನಿಶ್ಚಿತತೆಗಳಿಗೆ ಹೆದರಿದಾಗ, ಭಯದಿಂದ

ಪಾರಾಗಲು ಪ್ರಕೃತಿಯ ಶಕ್ತಿಗಳಿಗೆ ಹಾಗೂ ಕಲ್ಲುಗಳಿಗೆ ದೈವತ್ವವನ್ನು ಆರೋಪಿಸಿದನು. ಹೀಗಾಗಿ, ಈ ಆಚರಣೆಗಳು ಮಾನವನ ವಿಕಾಸದ ಹಂತದಲ್ಲಿ ಹುಟ್ಟಿಕೊಂಡ ಕೇವಲ ಒಂದು ಭ್ರಮೆಯೇ ಹೊರತು ಇದರಲ್ಲಿ ದೈವಿಕತೆ ಇಲ್ಲ ಎಂಬುದು ಅವನ ವಾದವಾಗಿದೆ. ಜಾತಿ ಮತ್ತು ಸಂಕೇತಗಳ ವಿಶ್ಲೇಷಣೆ : ಈ ಕಾದಂಬರಿಯು ಸಮಾಜದಲ್ಲಿ ಬೇರೂರಿರುವ ಜಾತಿಯ ಶ್ರೇಷ್ಠತೆಯ ವ್ಯಸನವನ್ನು ಉಗ್ರಪ್ಪನ ಪಾತ್ರದ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದೆ. ಉಗ್ರಪ್ಪನು ತಾನು ಮೇಲುಜಾತಿಯವನು ಎಂದು ಸಮಾಜಕ್ಕೆ ಬಿಂಬಿಸಿಕೊಳ್ಳಲು 'ಜನಿವಾರ'ವನ್ನು ಕೇವಲ ಒಂದು ಧಾರ್ಮಿಕ ವಸ್ತುವನ್ನಾಗಿ ನೋಡದೆ, ಅದನ್ನೊಂದು ಪ್ರತಿಷ್ಠೆಯ ಸಂಕೇತವಾಗಿ ಬಳಸುತ್ತಾನೆ. ಈ ಮೂಲಕ ತಾನು ಇತರರಿಗಿಂತ ಹೆಚ್ಚು ಪವಿತ್ರ ಮತ್ತು ಶ್ರೇಷ್ಠ ಎಂಬ ಭ್ರಮೆಯನ್ನು ಸೃಷ್ಟಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಉಗ್ರಪ್ಪನ ಈ 'ಬ್ರಾಹ್ಮಣೀಕರಣ'ದ ಪ್ರವೃತ್ತಿಯನ್ನು ರಂಗದಾಸನು ಕಟುವಾದ ವಿಮರ್ಶೆಗೆ ಒಳಪಡಿಸುತ್ತಾನೆ. "ಹೊಟ್ಟೆಗೆ ಹಿಟ್ಟಿಲ್ಲದವರಿಗೆ ಜನಿವಾರವೇಕೆ?" ಎಂದು ಅವನು ಕೇಳುವ ಪ್ರಶ್ನೆಯು ಅತ್ಯಂತ ತೀಕ್ಷ್ಣವಾಗಿದ್ದು, ಮೂಲಭೂತ ಅವಶ್ಯಕತೆಗಳಿಗಿಂತ ಜಾತೀಯ ಆಡಂಬರಕ್ಕೆ ಮಾರುಹೋಗುವ ಮನಸ್ಥಿತಿಯನ್ನು ಅಣಕಿಸುತ್ತದೆ. ಕೇವಲ ಒಂದು ದಾರವನ್ನು ಧರಿಸುವುದರಿಂದ ಮನುಷ್ಯನ ಪವಿತ್ರತೆ ನಿರ್ಧಾರವಾಗುವುದಿಲ್ಲ ಎಂದು ಪ್ರತಿಪಾದಿಸುವ ರಂಗದಾಸನು, ಇಂತಹ ಸಂಕೇತಗಳು ಸಮಾಜದ ಏಣಿಯಲ್ಲಿ ಮೇಲೇರಲು ಬಳಸುವ ತಂತ್ರಗಳಷ್ಟೇ ಎಂದು ಜಾತಿ ಮತ್ತು ಧರ್ಮದ ಸಂಕೋಲೆಗಳನ್ನು ವಿಡಂಬಿಸುತ್ತಾನೆ.

ಬಲಿ ಪದ್ಧತಿಯ ತಾರ್ಕಿಕ ವಿಮರ್ಶೆ : ಶಿವಪುರದ ಜನರ ನಂಬಿಕೆಯ ಪ್ರಕಾರ, ಕೆರೆ ಕೋಡಿ ಬಿದ್ದಾಗ ದೈವಕ್ಕೆ ಬಲಿ ನೀಡದಿದ್ದರೆ ಗ್ರಾಮಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ. ಚೌಡಪ್ಪ ಮತ್ತು ಗಂಗಾಧರರಂತಹ ಪಾತ್ರಗಳು ಗಂಗಮ್ಮ ಅಥವಾ ಇತರ ದೈವಗಳ ಮುನಿಸನ್ನು ತಣಿಸಲು ಪ್ರಾಣಿ ಬಲಿ ನೀಡುವುದನ್ನು ಸಮರ್ಥಿಸಿಕೊಳ್ಳುತ್ತಾರೆ, ಅಲ್ಲದೆ ಹಿಂದಿನ ಕಾಲದ ಮನುಷ್ಯ ಬಲಿಯ ಕಥೆಗಳನ್ನು ಗಾಢವಾಗಿ ನಂಬುತ್ತಾರೆ. ಬಲಿ ನೀಡುವ ಮೂಲಕ ಕೆರೆಯ ಏರಿಯು ಭದ್ರವಾಗುತ್ತದೆ ಎಂಬುದು ಅವರ ಅಚಲವಾದ ನಂಬಿಕೆಯಾಗಿದೆ. ಆದರೆ, ರಂಗದಾಸನು ಈ ಪದ್ಧತಿಯನ್ನು ಅತ್ಯಂತ ಅಮಾನವೀಯ ಮತ್ತು ಅನಾಗರಿಕ ಎಂದು ಕರೆಯುವ ಮೂಲಕ ವಿರೋಧಿಸುತ್ತಾನೆ. "ಕೆರೆಯ ಏರಿಯು ಗಟ್ಟಿಯಾಗುವುದು ತಾಂತ್ರಿಕವಾಗಿ ಅದರ ಪಾಯ ಭದ್ರವಾದಾಗ ಹೊರತು, ರಕ್ತ ಸುರಿಸಿದಾಗ ಅಲ್ಲ" ಎಂಬ ವೈಜ್ಞಾನಿಕ ವಾದವನ್ನು ಅವನು ಮಂಡಿಸುತ್ತಾನೆ. ಇದಲ್ಲದೆ, ನಾಗರಿಕ ಸಮಾಜದಲ್ಲಿ ಮನುಷ್ಯನನ್ನು ಆರ್ಥಿಕವಾಗಿ ಶೋಷಿಸುವುದು ಕೂಡ ಒಂದು ರೀತಿಯ 'ಬಲಿ'ಯೇ ಆಗಿದೆ ಎಂಬ ಗಂಭೀರ ಚಿಂತನೆಯನ್ನು ಅವನು ಸಮಾಜದ ಮುಂದಿಡುತ್ತಾನೆ. ಈ

ಕಾದಂಬರಿಯು ಕೇವಲ ಒಂದು ಕುಟುಂಬದ ಕಥೆಯಾಗದೆ, ಸಮಾಜದಲ್ಲಿ ಹಾಸುಹೊಕ್ಕಾಗಿರುವ ಮೂಢನಂಬಿಕೆಗಳನ್ನು ಪ್ರಶ್ನಿಸುವ ಮತ್ತು ವೈಚಾರಿಕತೆಯ ದೀವಟಿಗೆಯನ್ನು ಹಚ್ಚುವ ಶಕ್ತಿಯುತ ಕೃತಿಯಾಗಿದೆ.

2. ಆರ್ಥಿಕ ಶೋಷಣೆ ಮತ್ತು ಅಸಮಾನತೆಯ ನೆಲೆಗಳು

ನೇಕಾರ ಸಮುದಾಯದ ಆರ್ಥಿಕ ದುಸ್ಥಿತಿ ಮತ್ತು ಮಾಲೀಕ ವರ್ಗದ ಶೋಷಣೆಯು ಈ ಕಾದಂಬರಿಯ ಆತ್ಮದಂತಿದೆ. ಇಲ್ಲಿ ಶ್ರಮಿಕನ ಬೆವರು ಮತ್ತು ಮಾಲೀಕನ ಲಾಭದ ನಡುವಿನ ಸಂಘರ್ಷವನ್ನು ಲೇಖಕರು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಸಾಲದ ಸುಳಿ ಮತ್ತು ಬಂಡವಾಳಶಾಹಿ ಕ್ರೂರತೆ : ಸಾಹುಕಾರ ಉಗ್ರಪ್ಪನಂತಹ ಬಂಡವಾಳಶಾಹಿ ಮಾಲೀಕರಿಂದ ಮಗಳ ಮದುವೆ ಅಥವಾ ಇತರೆ ಗೃಹಕೃತ್ಯಗಳಿಗಾಗಿ ಚೌಡಪ್ಪನಂತಹ ಬಡ ನೇಕಾರರು ಪಡೆದ ಸಾಲವು ಅವರ ಬದುಕಿನ ನಿರಂತರ ಸಂಕೋಲೆಯಾಗಿ ಪರಿಣಮಿಸುತ್ತದೆ. ವಾರಕ್ಕೊಮ್ಮೆ ನಡೆಯುವ ಕೂಲಿ ವಿತರಣೆಯ ಅಥವಾ ಬಟವಾಡೆಯ ಸಂದರ್ಭದಲ್ಲಿ ಉಗ್ರಪ್ಪನು ಅತ್ಯಂತ ಕ್ರೂರವಾಗಿ ವರ್ತಿಸುತ್ತಾನೆ. ಕೆಲಸಗಾರರಿಗೆ ಬರಬೇಕಾದ ಅಸಲು ಕೂಲಿಗಿಂತ ಬಡ್ಡಿಯ ಹೆಸರಿನಲ್ಲೇ ಹೆಚ್ಚಿನ ಹಣವನ್ನು ಕಡಿತಗೊಳಿಸುವ ಮೂಲಕ ಅವರನ್ನು ಆರ್ಥಿಕವಾಗಿ ಹತ್ತಿಕ್ಕುತ್ತಾನೆ. ಅಲ್ಲದೆ, ಮಾಲೀಕ ವರ್ಗವು ನೇಕಾರರನ್ನು ಸದಾ ಬಡತನದಲ್ಲೇ ಇರಿಸಲು ಹತ್ತಾರು ತಂತ್ರಗಳನ್ನು ಅನುಸರಿಸುತ್ತದೆ. ಅನಾರೋಗ್ಯದ ಕಾರಣದಿಂದ ಕೆಲಸಗಾರರು ಒಂದೆರಡು ದಿನ ರಜೆ ಹಾಕಿದರೂ ಅಥವಾ ನೇಯ್ಗೆಯ ಬಟ್ಟೆಯಲ್ಲಿ ಸಣ್ಣಪುಟ್ಟ ದೋಷಗಳು ಕಂಡುಬಂದರೂ ಕೂಲಿಯನ್ನು ಕಡಿತಗೊಳಿಸುವ ನೆಪಗಳನ್ನು ಉಗ್ರಪ್ಪ ಹುಡುಕುತ್ತಾನೆ. ಚೌಡಪ್ಪನು "ಬಡವನ ಹೊಟ್ಟೆ ಮೇಲೆ ಹೊಡೆಯಬೇಡಿ" ಎಂದು ದೈನ್ಯವಾಗಿ ಬೇಡಿಕೊಂಡರೂ, ಉಗ್ರಪ್ಪನಿಗೆ ಮಾನವೀಯತೆಗಿಂತ ಸಾಲದ ಬಡ್ಡಿ ಮತ್ತು ತನ್ನ ವೈಯಕ್ತಿಕ ಲಾಭವೇ ಮುಖ್ಯವಾಗುತ್ತದೆ. ಈ ಘಟನೆಗಳು ಬಂಡವಾಳಶಾಹಿ ವ್ಯವಸ್ಥೆಯ ಅತ್ಯಂತ ನಿರ್ದಯಿ ಮತ್ತು ಅಮಾನವೀಯ ಮುಖವನ್ನು ಕಣ್ಣಿಗೆ ಕಟ್ಟುವಂತೆ ಪ್ರತಿಬಿಂಬಿಸುತ್ತವೆ.

ಜೀತ ಪದ್ಧತಿಯ ರೂಪಾಂತರ ಮತ್ತು ಅಮಾನವೀಯತೆ: ಕಾದಂಬರಿಯಲ್ಲಿನ ನೇಕಾರರು ತಾಂತ್ರಿಕವಾಗಿ ಸ್ವತಂತ್ರ ಕಾರ್ಮಿಕರಂತೆ ಕಂಡರೂ, ವಾಸ್ತವದಲ್ಲಿ ಸಾಲದ ಸುಳಿಗೆ ಸಿಲುಕಿ ಉಗ್ರಪ್ಪನ ಮಗ್ಗಗಳಿಗೆ ಕಟ್ಟುಬಿದ್ದಿರುತ್ತಾರೆ. ಅಸಲಿಗಿಂತ ಬಡ್ಡಿಯೇ ಹೆಚ್ಚಾಗುವ ಅಸಹಾಯಕ ಸ್ಥಿತಿಯು ಇವರನ್ನು ಆಧುನಿಕ ಜೀತದಾಳುಗಳನ್ನಾಗಿ ಮಾಡಿದೆ. ಮಗ್ಗದ ಕೆಲಸ ಮಾಡುವಾಗ ಅರಸಪ್ಪನ ಬಲಗೈ ತುಂಡಾದ ಘಟನೆಯು ಮಾಲೀಕವರ್ಗದ ಅಮಾನವೀಯತೆಯನ್ನು ಎತ್ತಿ ತೋರಿಸುತ್ತದೆ. ಕೆಲಸಗಾರನೊಬ್ಬ ತನ್ನ ಅಂಗವನ್ನೇ ಕಳೆದುಕೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದರೂ, ಉಗ್ರಪ್ಪನಿಗೆ ಅವನ ಬಗ್ಗೆ ಕನಿಕರ ಮೂಡುವ ಬದಲು "ಇವನು ಇಲ್ಲಿಯೇ

ಸತ್ತರೆ ಗತಿ ಏನು?" ಎಂಬ ತನ್ನ ರಕ್ಷಣೆಯ ಭಯ ಮತ್ತು ನಷ್ಟದ ಚಿಂತೆಯೇ ಹೆಚ್ಚಾಗಿರುತ್ತದೆ. ಅರಸಪ್ಪನ ಆಸ್ಪತ್ರೆಯ ಖರ್ಚು ಮತ್ತು ಸೂಕ್ತ ಪರಿಹಾರ ನೀಡಲು ಉಗ್ರಪ್ಪ ಹಿಂದೇಟು ಹಾಕುತ್ತಾನೆ. ಅರಸಪ್ಪನಿಗೆ ಆದ ಅನ್ಯಾಯಕ್ಕೆ ಕಾಂಪೆನ್ಸೇಷನ್ ಕೇಳಿದಾಗ, ಅದನ್ನು ನೀಡಲು ನಿರಾಕರಿಸುವ ಉಗ್ರಪ್ಪನ ವರ್ತನೆಯು ಮಾನವೀಯ ಮೌಲ್ಯಗಳಿಗಿಂತ ಲಾಭದ ಮೌಲ್ಯವೇ ಶ್ರೇಷ್ಠವೆಂದು ಭಾವಿಸುವ ಶೋಷಕ ವರ್ಗದ ಪ್ರತೀಕವಾಗಿದೆ. ನೇಕಾರರು ಕಷ್ಟಪಟ್ಟು ನೇಯುವ ಬಿಳಿ ರೇಷ್ಮೆ ಬಟ್ಟೆಯ ಮೇಲೆ ಅರಸಪ್ಪನ ರಕ್ತ ಚೆಲ್ಲಿದಾಗಲೂ, ಮಾಲೀಕನಿಗೆ ಆ ರಕ್ತಕ್ಕಿಂತ ಕಲೆಯಾದ ಬಟ್ಟೆಯಿಂದ ಉಂಟಾಗುವ ನಷ್ಟವೇ ದೊಡ್ಡದಾಗಿ ಕಾಣುತ್ತದೆ. ಇದು ಶ್ರಮಿಕನ ಜೀವಕ್ಕೆ ಬೆಲೆ ಇಲ್ಲದ ಆರ್ಥಿಕ ವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಎತ್ತಿ ತೋರಿಸುತ್ತದೆ. ಹೀಗೆ 'ಎಳೆ' ಕಾದಂಬರಿಯು ನೇಕಾರರ ಬದುಕಿನ ಸಂಕಷ್ಟಗಳನ್ನು ಬಿಡಿಸಿ ನೋಡುತ್ತಾ, ಸಮಾಜದಲ್ಲಿನ ಆರ್ಥಿಕ ಅಸಮಾನತೆ ಮತ್ತು ಶೋಷಣೆಯ ಬೇರುಗಳನ್ನು ವಿವರವಾಗಿ ತೆರೆದಿಡುತ್ತದೆ

3. ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ

ರಂಗದಾಸನ ಪಾತ್ರದ ಮೂಲಕ ಲೇಖಕಿಯವರು ಶಿಕ್ಷಣವು ಹೇಗೆ ಒಬ್ಬ ವ್ಯಕ್ತಿಯನ್ನು ಸಾಮಾಜಿಕ ಕಟ್ಟುಪಾಡುಗಳಿಂದ ಬಿಡುಗಡೆಗೊಳಿಸುತ್ತದೆ ಮತ್ತು ವೈಚಾರಿಕವಾಗಿ ಸಬಲನನ್ನಾಗಿ ಮಾಡುತ್ತದೆ ಎಂಬುದನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಶಿಕ್ಷಣವು ಕೇವಲ ಅಂಕ ಗಳಿಕೆಯಲ್ಲ, ಬದಲಾಗಿ ಸಮಾಜದ ಅಂಕುಡೊಂಕುಗಳನ್ನು ಪ್ರಶ್ನಿಸುವ ಶಕ್ತಿಯಾಗಿದೆ ಎಂಬುದನ್ನು ರಂಗದಾಸನ ಪಾತ್ರದ ಮೂಲಕ ವೃತ್ತಿ ಮತ್ತು ಪ್ರಗತಿಯ ಕುರಿತಾದ ವೈಚಾರಿಕ ಸಂಘರ್ಷವನ್ನು ನೋಡಬಹುದು. ರಂಗದಾಸನ ತಂದೆ ಚೌಡಪ್ಪ ಮತ್ತು ತಾಯಿ ಪುಟ್ಟಮ್ಮ ಅವರು ತಮ್ಮ ಪರಂಪರಾಗತ ಕುಲಕಸುಬಾದ ನೇಯ್ಗೆಯನ್ನೇ ಮಗನು ಮುಂದುವರಿಸಬೇಕೆಂದು ಬಲವಾಗಿ ಬಯಸುತ್ತಾರೆ. ಅವರ ದೃಷ್ಟಿಯಲ್ಲಿ ಕುಲಕಸುಬನ್ನು ಬಿಡುವುದು ಅಧರ್ಮ ಮಾತ್ರವಲ್ಲದೆ, ಅದೇ ವೃತ್ತಿಯಲ್ಲಿ ಮಗನು ಭದ್ರತೆಯನ್ನು ಕಂಡುಕೊಳ್ಳುತ್ತಾನೆ ಎಂಬ ನಂಬಿಕೆ ಅವರದಾಗಿರುತ್ತದೆ. ಆದರೆ ಶಿಕ್ಷಣದ ಹಿನ್ನೆಲೆಯುಳ್ಳ ರಂಗದಾಸನು ಜಗತ್ತನ್ನು ನೋಡುವ ರೀತಿಯನ್ನೇ ಸಂಪೂರ್ಣವಾಗಿ ಬದಲಿಸಿಕೊಂಡಿದ್ದಾನೆ. ಅವನು ನೇಯ್ಗೆಯನ್ನು ಕೇವಲ ಭಾವನಾತ್ಮಕವಾಗಿ ನೋಡದೆ, ಆರ್ಥಿಕ ಮತ್ತು ತಾಂತ್ರಿಕ ನೆಲೆಯಲ್ಲಿ ವಿಶ್ಲೇಷಿಸಬಹುದು. ಆಧುನಿಕ ಕಾಲದ ಪವರ್‌ಲೂಂ ಅಥವಾ ವಿದ್ಯುತ್ ಮಗ್ಗಗಳ ತೀವ್ರ ಸ್ಪರ್ಧೆಯಲ್ಲಿ ಸಾಂಪ್ರದಾಯಿಕ ಕೈಮಗ್ಗವು ಸೊರಗುತ್ತಿರುವುದನ್ನು ರಂಗದಾಸನು ಸ್ಪಷ್ಟವಾಗಿ ಗುರುತಿಸುತ್ತಾನೆ. ಆದ್ದರಿಂದಲೇ ಅವನು ಈ ವೃತ್ತಿಯನ್ನು "ಸಾಯುತ್ತಿರುವ ಕಸುಬು" ಎಂದು ಕರೆಯುವ ಮೂಲಕ ಸಮಾಜದ ಕಟು ವಾಸ್ತವವನ್ನು ಪೋಷಕರಿಗೆ ಮನವರಿಕೆ ಮಾಡಿಕೊಡಲು

ಪ್ರಯತ್ನಿಸುತ್ತಾನೆ. ಬದಲಾಗುತ್ತಿರುವ ಜಗತ್ತಿನ ವೇಗಕ್ಕೆ ತಕ್ಕಂತೆ ಹೊಸ ದಾರಿಗಳನ್ನು ಮತ್ತು ಹೊಸ ವೃತ್ತಿ ಅವಕಾಶಗಳನ್ನು ಕಂಡುಕೊಳ್ಳುವುದು ಪ್ರಗತಿಗೆ ಅತ್ಯಂತ ಅನಿವಾರ್ಯ ಎಂಬುದು ಅವನ ದೃಢವಾದ ನಿಲುವಾಗಿದೆ. ಹಳೆಯ ಮತ್ತು ಲಾಭದಾಯಕವಲ್ಲದ ವೃತ್ತಿಯನ್ನೇ ಅಪ್ಪಿ ಹಿಡಿದು ಮಾಲೀಕರ ಶೋಷಣೆಗೆ ಒಳಗಾಗುವ ಬದಲು, ಜ್ಞಾನ ಮತ್ತು ಶಿಕ್ಷಣದ ಮೂಲಕ ಸ್ವತಂತ್ರರಾಗಿ ಗೌರವಯುತ ಬದುಕು ಸಾಗಿಸಬೇಕು ಎಂಬುದು ಅವನ ಜೀವನದ ಆಶಯವಾಗಿದೆ.

ಕಾದಂಬರಿಯ ಕೊನೆಯ ಭಾಗದಲ್ಲಿ ಅರಸಪ್ಪನಿಗೆ ನ್ಯಾಯ ದೊರಕಿಸಿಕೊಡಲು ರಂಗದಾಸನು ಕೈಗೊಳ್ಳುವ ಹೋರಾಟವು ಕಥಾಹಂದರದಲ್ಲಿ ಅತ್ಯಂತ ಮಹತ್ವದ ತಿರುವನ್ನು ನೀಡುತ್ತದೆ. ಮಗ್ಗದ ಕೆಲಸ ಮಾಡುವಾಗ ಅಪಘಾತಕ್ಕೀಡಾಗಿ ಅರಸಪ್ಪನ ಕೈ ತುಂಡಾದಾಗ, ಮಾಲೀಕ ಉಗ್ರಪ್ಪನು ಮಾನವೀಯತೆ ಮರೆತು ಪರಿಹಾರ ನೀಡಲು ಸ್ಪಷ್ಟವಾಗಿ ನಿರಾಕರಿಸುತ್ತಾನೆ. ಈ ಸಂದರ್ಭದಲ್ಲಿ ರಂಗದಾಸನು ಕೇವಲ ಮೌನವಾಗಿರದೆ, ಶೋಷಣೆಗೆ ಒಳಗಾಗುತ್ತಿದ್ದ ಉಳಿದ ಕೆಲಸಗಾರರನ್ನು ಒಂದೆಡೆ ಸೇರಿಸಿ ಸಂಘಟಿತರನ್ನಾಗಿ ಮಾಡುತ್ತಾನೆ. ಈ ಹೋರಾಟವು ಕೇವಲ ಅರಸಪ್ಪ ಎಂಬ ವ್ಯಕ್ತಿಯ ಪರವಾಗಿ ನಡೆಯುವ ವೈಯಕ್ತಿಕ ಹೋರಾಟವಾಗಿ ಉಳಿಯದೆ, ಇಡೀ ಶ್ರಮಿಕ ವರ್ಗದ ಒಗ್ಗಟ್ಟಿನ ಸಂಕೇತವಾಗಿ ಹೊರಹೊಮ್ಮುತ್ತದೆ. ಮಾಲೀಕರ ದಬ್ಬಾಳಿಕೆ ಮತ್ತು ಹಠಮಾರಿತನದ ವಿರುದ್ಧ ಕಾರ್ಮಿಕರು ಸಂಘಟಿತರಾಗಿ ನಿಂತಾಗ ಮಾತ್ರ ಶೋಷಕ ವರ್ಗವು ಬಗ್ಗಲು ಸಾಧ್ಯ ಮತ್ತು ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ ಎಂಬುದನ್ನು ರಂಗದಾಸನು ಪ್ರಾಯೋಗಿಕವಾಗಿ ಸಾಬೀತುಪಡಿಸುತ್ತಾನೆ.

ಹೋರಾಟದ ಹಾದಿಯಲ್ಲಿ ಮಾಲೀಕರು ಪ್ರೇರೇಪಿಸಿದ ಹೊಡೆತಕ್ಕೆ ಸಿಲುಕಿ ತನ್ನ ಕೈ ಮುರಿದುಕೊಂಡರೂ ರಂಗದಾಸನು ಕಿಂಚಿತ್ತೂ ಎದೆಗುಂದದೆ ತನ್ನ ಛಲವನ್ನು ಮುಂದುವರಿಸುತ್ತಾನೆ. ಅಂತಿಮವಾಗಿ ಅರಸಪ್ಪನಿಗೆ ಕಾನೂನುಬದ್ಧವಾದ ಆರ್ಥಿಕ ಪರಿಹಾರವನ್ನು (ಕಾಂಪೆನ್ಸೇಷನ್) ದೊರಕಿಸಿಕೊಡುವ ಮೂಲಕ, ತಾನು ಪಡೆದ ಶಿಕ್ಷಣದ ತಿಳುವಳಿಕೆಯನ್ನು ಕೇವಲ ವೈಯಕ್ತಿಕ ಅಭಿವೃದ್ಧಿಗಾಗಿ ಬಳಸದೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಬಳಸುತ್ತಾನೆ. ಇದು ವಿದ್ಯಾವಂತ ಯುವಕರು ಸಮಾಜದ ದುರ್ಬಲ ವರ್ಗದವರಿಗೆ ಧ್ವನಿಯಾಗಬೇಕು ಎಂಬ ಉನ್ನತ ಆಶಯವನ್ನು ಎತ್ತಿ ತೋರಿಸುತ್ತದೆ.

4. ಮಹಿಳೆಯರ ಸ್ಥಾನಮಾನ ಮತ್ತು ಮಾನಸಿಕ ಸಂಘರ್ಷ

ಕಾದಂಬರಿಯಲ್ಲಿ ಗಿರಿಜಾ, ಸೂರಮ್ಮ ಮತ್ತು ಪುಟ್ಟಮ್ಮನ ಪಾತ್ರಗಳ ಮೂಲಕ ಅಂದಿನ ಕೌಟುಂಬಿಕ ವ್ಯವಸ್ಥೆಯಲ್ಲಿ ಮಹಿಳೆಯರ ಮೇಲಾಗುವ ವಿವಿಧ ರೀತಿಯ ದೌರ್ಜನ್ಯಗಳು ಹಾಗೂ ಅವರ ಅಸಹಾಯಕತೆಯನ್ನು ಅತ್ಯಂತ ಮಾರ್ಮಿಕವಾಗಿ

ಚಿತ್ರಿಸಲಾಗಿದೆ. ಹೆಣ್ಣು ತನ್ನ ಇಷ್ಟಾನಿಷ್ಟಗಳಿಗಿಂತ ಕುಟುಂಬದ ಗೌರವ ಮತ್ತು ಪುರುಷರ ನಿರ್ಧಾರಗಳಿಗೇ ಹೆಚ್ಚು ಒತ್ತು ನೀಡಬೇಕಾದ ಅನಿವಾರ್ಯತೆಯನ್ನು ಇಲ್ಲಿ ಕಾಣಬಹುದು. ಗಿರಿಜೆಯ ಪಾತ್ರದ ಮೂಲಕ ಸಾಂಪ್ರದಾಯಿಕ ಬಂಧನ ಮತ್ತು ವೈವಾಹಿಕ ದೌರ್ಜನ್ಯದ ಭೀಕರತೆಯನ್ನು ನೋಡಬಹುದು. ತನ್ನ ಮನದಾಳದಲ್ಲಿ ರಂಗದಾಸನ ಬಗ್ಗೆ ಅಪಾರವಾದ ಪ್ರೀತಿ, ಗೌರವ ಮತ್ತು ಆಕರ್ಷಣೆಯನ್ನು ಹೊಂದಿದ್ದರೂ, ಅದನ್ನು ಸಮಾಜದ ಅಥವಾ ತಂದೆಯ ಮುಂದೆ ವ್ಯಕ್ತಪಡಿಸುವ ಕನಿಷ್ಠ ಧೈರ್ಯವನ್ನೂ ತೋರಲಾರದಂತಹ ಅಸಹಾಯಕ ಸ್ಥಿತಿಯಲ್ಲಿರುತ್ತಾಳೆ. ಅವಳ ವೈಯಕ್ತಿಕ ಬಯಕೆಗಳಿಗಿಂತಲೂ ತಂದೆ ಉಗ್ರಪ್ಪನ ಹಠಮಾರಿ ಸ್ವಭಾವ ಮತ್ತು ಅವರ ಕುಟುಂಬದ ಸಾಮಾಜಿಕ ಪ್ರತಿಷ್ಠೆಯೇ ಮೇಲುಗೈ ಸಾಧಿಸುತ್ತದೆ. ತನಗೆ ಕಿಂಚಿತ್ತೂ ಇಷ್ಟವಿಲ್ಲದ, ಕೇವಲ ಶ್ರೀಮಂತ ಮತ್ತು ಅಧಿಕಾರ ಹೊಂದಿರುವ ಮುದ್ದು ಸ್ವಾಮಿಯ ಅಹಂಕಾರದ ಬದುಕಿಗೆ ತನ್ನನ್ನು ತಾನು ಬಲಿಗೊಟ್ಟು ಮದುವೆಯಾಗಲು ಅವಳು ಮೌನವಾಗಿ ಒಪ್ಪಿಕೊಳ್ಳುತ್ತಾಳೆ.

ಮದುವೆಯ ನಂತರ ಗಂಡನ ಮನೆಯಲ್ಲಿ ಗಿರಿಜೆಯ ಬದುಕು ಅಕ್ಷರಶಃ ನರಕಸದೃಶವಾಗಿ ಬದಲಾಗುತ್ತದೆ. ಮುದ್ದು ಸ್ವಾಮಿಯು ಅವಳನ್ನು ಸಹಬಾಳ್ವೆಯ ಸಂಗಾತಿಯಾಗಿ ಅಥವಾ ಪ್ರೀತಿಯ ಪತ್ನಿಯಾಗಿ ಕಾಣುವ ಬದಲು, ಕೇವಲ ತನ್ನ ದೈಹಿಕ ಹಸಿವನ್ನು ತಣಿಸಿಕೊಳ್ಳುವ ಒಂದು ಭೋಗದ ವಸ್ತುವಿನಂತೆ ಅಮಾನವೀಯವಾಗಿ ನಡೆಸಿಕೊಳ್ಳುತ್ತಾನೆ. ಅವಳ ಮೇಲೆ ದೈಹಿಕವಾಗಿ ಆಕ್ರಮಣ ಮಾಡುತ್ತಾ, ಕಚ್ಚಿ ಗಾಯಗೊಳಿಸುತ್ತಾ ತೀವ್ರವಾದ ದೈಹಿಕ ಹಿಂಸೆ ನೀಡುವುದಲ್ಲದೆ, ಮಾನಸಿಕವಾಗಿಯೂ ಕುಗ್ಗಿಸುವ ಕೆಲಸ ಮಾಡುತ್ತಾನೆ.

ಗಂಡನ ಮನೆಯ ನಾಲ್ಕು ಗೋಡೆಗಳ ಮಧ್ಯೆ ಅವಳು ಅನುಭವಿಸುವ ಲೈಂಗಿಕ ದೌರ್ಜನ್ಯಗಳು ಮತ್ತು "ನೀನು ಯಾವುದಕ್ಕೂ ಪ್ರಯೋಜನವಿಲ್ಲದವಳು", "ನೀನೊಬ್ಬಳು ಗೊಡ್ಡು ಮುತ್ತೈದೆ" ಎಂಬಂತಹ ಅವಹೇಳನಕಾರಿ ಮಾತುಗಳು ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಘನತೆ ಮತ್ತು ಅಸ್ತಿತ್ವಕ್ಕೆ ಎಷ್ಟು ಕಡಿಮೆ ಬೆಲೆ ಇದೆ ಎಂಬುದನ್ನು ಸಾಬೀತುಪಡಿಸುತ್ತವೆ. ಇಷ್ಟೆಲ್ಲಾ ಹಿಂಸೆ ಅನುಭವಿಸಿದರೂ ತನ್ನ ನೋವನ್ನು ಹೆತ್ತವರೊಂದಿಗಾಗಲಿ ಅಥವಾ ಗೆಳತಿಯರೊಂದಿಗಾಗಲಿ ಹಂಚಿಕೊಳ್ಳಲು ಸಾಧ್ಯವಾಗದೆ, ಒಳೊಳಗೇ ಮೌನವಾಗಿ ರೋದಿಸುವ ಗಿರಿಜೆಯ ಸ್ಥಿತಿಯು ಅಂದಿನ ಮತ್ತು ಇಂದಿನ ಸಮಾಜದಲ್ಲಿನ ಸಾವಿರಾರು ಅಸಹಾಯಕ ಹೆಣ್ಣುಮಕ್ಕಳ ಬದುಕಿಗೆ ಕನ್ನಡಿ ಹಿಡಿದಂತಿದೆ.

ಮತ್ತೊಂದು ಕಡೆಯಲ್ಲಿ ಕುಟುಂಬದ ಒಳಗಿನ ಶೋಷಣೆ ಮತ್ತು ಮೌನ ದೌರ್ಜನ್ಯದ

ಆಯಾಮಗಳನ್ನು ಉಗ್ರಪ್ಪನ ಪತ್ನಿ ಸೂರಮ್ಮ ಮತ್ತು ಮಗಳು ಗಿರಿಜೆಯರು ಮನೆಯೊಳಗಿನ ಪ್ರತಿಯೊಂದು ಕಷ್ಟಗಳನ್ನು ಹಾಗೂ ಉಗ್ರಪ್ಪನ ನಿರಂತರ ಸಿಡಿಮಿಡಿಗಳನ್ನು ಯಾವುದೇ ಪ್ರತಿಭಟನೆಯಿಲ್ಲದೆ ಮೂಕಪ್ರೇಕ್ಷಕರಂತೆ ಸಹಿಸಿಕೊಳ್ಳುತ್ತಾರೆ. ಮನೆಯ ಯಜಮಾನನಾದ ಉಗ್ರಪ್ಪನು ತನ್ನ ಆರ್ಥಿಕ ಅಥವಾ ಸಾಮಾಜಿಕ ಸಿಟ್ಟನ್ನು ಹೆಂಡತಿಯ ಮೇಲೆ ದೈಹಿಕವಾಗಿ ತೀರಿಸಿಕೊಳ್ಳುವ ಕ್ರೂರ ಪ್ರವೃತ್ತಿಯನ್ನು ಹೊಂದಿದ್ದು, ಅಂತಹ ಸಂದರ್ಭಗಳಲ್ಲಿಯೂ ಸೂರಮ್ಮ ಕೇವಲ ಅಸಹಾಯತೆಯಿಂದ ಕಣ್ಣೀರು ಸುರಿಸುವುದನ್ನು ಬಿಟ್ಟು ಬೇರೇನನ್ನೂ ಮಾಡಲಾಗದ ಸ್ಥಿತಿಯಲ್ಲಿರುತ್ತಾಳೆ. ಅಷ್ಟೇ ಅಲ್ಲದೆ, ಉಗ್ರಪ್ಪನು ತನ್ನ ಮನೆಯವರನ್ನು ಶತ್ರುಗಳಂತೆ ಕಾಣುತ್ತಾ, ಸಣ್ಣ ವಿಷಯಕ್ಕೂ ಮನೆಯಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಾನೆ.

ವಿಶೇಷವಾಗಿ, ದೈಹಿಕ ಮತ್ತು ಮಾನಸಿಕವಾಗಿ ಅಸ್ವಸ್ಥನಾದ ಮಗ ಪಾಪಣ್ಣಿಯ ಸೇವೆಯಲ್ಲಿ ತಾಯಿ ಸೂರಮ್ಮ ಮತ್ತು ಮಗಳು ಗಿರಿಜೆಯರು ತಮ್ಮ ಇಡೀ ಬದುಕನ್ನು ಅಕ್ಷರಶಃ ಸವೆಸುತ್ತಾರೆ. ಸುಮಾರು ಹದಿನೆಂಟು ವರ್ಷ ವಯಸ್ಸಿನ ಮಗನಾದರೂ ಎಂಟು ತಿಂಗಳ ಮಗುವಿನಂತೆ ಹಾಸಿಗೆಯಲ್ಲೇ ಬಿದ್ದಿರುವ ಅವನ ದೈನಂದಿನ ವೈಯಕ್ತಿಕ ಕಾರ್ಯಗಳನ್ನು ಮಾಡುವುದು, ಗಾಯಗಳಿಗೆ ಚಿಕಿತ್ಸೆ ನೀಡುವುದು ಮತ್ತು ಅವನ ಅರ್ಥವಿಲ್ಲದ ಚೀರಾಟಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುವುದು ಅವರ ಪಾಲಿನ ನಿರಂತರ ಹಾಗೂ ಅನಿವಾರ್ಯ ಕಾಯಕವಾಗಿಬಿಟ್ಟಿದೆ. ಲೇಖಕಿಯವರು ಇಲ್ಲಿ ಹೆಣ್ಣಿನ ಅಪಾರವಾದ ತಾಳ್ಮೆಯನ್ನು ಮತ್ತು ಮಾತೃತ್ವದ ಮಮತೆಯನ್ನು ಚಿತ್ರಿಸುತ್ತಲೇ, ಕುಟುಂಬದ ಒಳಗಡೆ ಅವಳ ಮೇಲೆ ನಡೆಯುವ ಮೌನ ದೌರ್ಜನ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

ಮನೆಯ ಪುರುಷರು ಅಥವಾ ಕೆಲಸದ ಒತ್ತಡದ ನಡುವೆ ಈ ಹೆಣ್ಣುಮಕ್ಕಳು ಅನುಭವಿಸುವ ಆಯಾಸ ಮತ್ತು ನೋವುಗಳಿಗೆ ಯಾರೂ ಕಿವಿಗೊಡುವುದಿಲ್ಲ. ಎಲ್ಲವನ್ನೂ ಸಹಿಸಿಕೊಳ್ಳುವುದೇ ಹೆಣ್ಣಿನ ಪರಮ ಧರ್ಮ ಎಂಬ ಸಾಂಪ್ರದಾಯಿಕ ಮತ್ತು ಸಂಕುಚಿತ ಕಲ್ಪನೆಯು ಹೇಗೆ ಅವಳ ವೈಯಕ್ತಿಕ ಬಯಕೆಗಳನ್ನು, ಕನಸುಗಳನ್ನು ಮತ್ತು ಜೀವನದ ಸಂತೋಷವನ್ನು ಹೊಸಕಿ ಹಾಕುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಹೀಗೆ 'ಎಳೆ' ಕಾದಂಬರಿಯು ಹೆಣ್ಣಿನ ಬದುಕು ಕುಟುಂಬದ ಗೌರವದ ಹೆಸರಿನಲ್ಲಿ ಮತ್ತು ಪುರುಷರ ಅಹಂಕಾರದ ನಡುವೆ ಹೇಗೆ ನಲುಗಿ ಹೋಗುತ್ತದೆ ಎಂಬುದನ್ನು ಅತ್ಯಂತ ಮನೋಜ್ಞವಾಗಿ ಹಾಗೂ ನೈಜವಾಗಿ ವಿಶ್ಲೇಷಿಸುತ್ತದೆ.

ಉಪಸಂಹಾರ:

ಒಟ್ಟಾರೆಯಾಗಿ ಅನುಪಮಾ ನಿರಂಜನ ಅವರ 'ಎಳೆ' ಕಾದಂಬರಿಯು ಕೇವಲ ನೇಕಾರ ಸಮುದಾಯದ ಬದುಕನ್ನು ಚಿತ್ರಿಸುವ ಕಥೆಯಾಗಿ ಉಳಿಯದೆ, ಇಡೀ ಸಾಮಾಜಿಕ

ವ್ಯವಸ್ಥೆಯಲ್ಲಿ ಬೇರೂರಿರುವ ಅಸಮಾನತೆ ಮತ್ತು ನ್ಯೂನತೆಗಳನ್ನು ಗಂಭೀರವಾಗಿ ಪ್ರಶ್ನಿಸುವ ಒಂದು ಶಕ್ತಿಯುತ ಸಾಹಿತ್ಯ ಕೃತಿಯಾಗಿ ಹೊರಹೊಮ್ಮುತ್ತದೆ. ಸಮಾಜದಲ್ಲಿ ಹಾಸುಹೊಕ್ಕಾಗಿರುವ ಮೂಢನಂಬಿಕೆಗಳನ್ನು ತೊಡೆದುಹಾಕಲು ವೈಚಾರಿಕತೆ, ಬಡತನದ ಸಂಕೋಲೆಗಳಿಂದ ಬಿಡುಗಡೆ ಹೊಂದಲು ಶಿಕ್ಷಣ ಮತ್ತು ಶೋಷಕ ವರ್ಗದ ದಬ್ಬಾಳಿಕೆಯನ್ನು ಮೆಟ್ಟಿ ನಿಲ್ಲಲು ಸಂಘಟಿತ ಹೋರಾಟ ಅನಿವಾರ್ಯ ಎಂಬ ಬಲವಾದ ಸಂದೇಶವನ್ನು ಈ ಕಾದಂಬರಿ ನೀಡುತ್ತದೆ.

ಕೇವಲ ಹಳೆಯ ಸಂಪ್ರದಾಯಗಳನ್ನು ಅಪ್ಪಿ ಹಿಡಿದು ಕುಳಿತುಕೊಳ್ಳುವ ಬದಲು, ಜ್ಞಾನದ ಬೆಳಕಿನಿಂದ ಹೊಸ ದಾರಿಗಳನ್ನು ಕಂಡುಕೊಂಡಾಗ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ ಎಂಬುದನ್ನು ರಂಗದಾಸನ ಪಾತ್ರದ ಮೂಲಕ ಲೇಖಕಿಯವರು ಮನವರಿಕೆ ಮಾಡಿಕೊಟ್ಟಿದ್ದಾರೆ. ನೇಯ್ಗೆಯ ಸಂದರ್ಭದಲ್ಲಿ ಪ್ರತಿಯೊಂದು ಸಣ್ಣ 'ಎಳೆ'ಯೂ ಸೇರಿ ಹೇಗೆ ಒಂದು ಗಟ್ಟಿಯಾದ ಬಟ್ಟೆಯನ್ನು ರೂಪಿಸುತ್ತವೆಯೋ, ಹಾಗೆಯೇ ಸಮಾಜದ ಪ್ರತಿಯೊಂದು ವರ್ಗದ ಜನರ ನೋವು–ನಲಿವುಗಳು, ಸಂಘರ್ಷಗಳು ಮತ್ತು ಮಾನವೀಯ ಸಂಬಂಧಗಳು ಒಟ್ಟಾಗಿ 'ಬದುಕು' ಎಂಬ ವಿಸ್ತಾರವಾದ ವಸ್ತ್ರವನ್ನು ನೇಯುತ್ತವೆ ಎಂಬುದು ಈ ಕಾದಂಬರಿಯ ಆಳವಾದ ಆಶಯವಾಗಿದೆ. ಅಂತಿಮವಾಗಿ, ಶ್ರಮಿಕ ವರ್ಗದ ಬೆವರು ಮತ್ತು ಪ್ರಾಮಾಣಿಕತೆಗೆ ಸಮಾಜದಲ್ಲಿ ಗೌರವಯುತ ಸ್ಥಾನ ದೊರಕಬೇಕು ಹಾಗೂ ಶೋಷಣೆ ಮುಕ್ತ ಸಮಾಜ ನಿರ್ಮಾಣವಾಗಬೇಕು ಎಂಬ ಉನ್ನತ ಆಶಯದೊಂದಿಗೆ ಈ ಕೃತಿಯು ಮುಕ್ತಾಯಗೊಳ್ಳುತ್ತದೆ.

ಮೂಲ ಗ್ರಂಥ ಹಾಗೂ ಪರಾಮರ್ಶನ ಗ್ರಂಥಗಳು :

1. ಅನುಪಮಾ ನಿರಂಜನ., ಎಳೆ (ಸಾಮಾಜಿಕ ಕಾದಂಬರಿ).,ನಿರ್ದೇಶನಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,ಎರಡನೇ ಮುದ್ರಣ (1983)

ಪರಾಮರ್ಶನ ಗ್ರಂಥಗಳು:

1. ಬಾಣಭಟ್ಟನ 'ಕಾದಂಬರಿ' ಗ್ರಂಥದ ಉಲ್ಲೇಖಗಳು.
2. ಕನ್ನಡದ ವಚನಕಾರ ದೇವರದಾಸಿಮಯ್ಯನವರ ವಚನಗಳ ಉಲ್ಲೇಖಗಳು.
3. ಸರ್ವಜ್ಞನ ವಚನಗಳು ಮತ್ತು ನೇಕಾರ ಕುಲದ ಇತಿಹಾಸ.
4. ದಕ್ಷಿಣ ಕನ್ನಡ ಜಿಲ್ಲೆಯ ನಲಿಕೆಯವರು ಮತ್ತು ಪಾಣಾರ ಸಮುದಾಯದ ಸಂಪ್ರದಾಯಗಳು.

ಬಸವಣ್ಣನ ವಚನಗಳಲ್ಲಿ ಮನೋಚಿಂತನೆ

1 ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು
ಮೌಂಟ್ ಕಾರ್ಮೆಲ್ ಕಾಲೇಜು ಸ್ವಾಯತ್ತ,
ವಸಂತನಗರ, ಬೆಂಗಳೂರು.

ಇಂದು ಮನಸ್ಸು ಕುರಿತು ವ್ಯಾಖ್ಯಾನಿಸುವುದೇ ಅತಿದೊಡ್ಡ ಚಿಂತನೆಗಳಾಗಿವೆ. ಸಾಹಿತ್ಯದ ಪ್ರತಿ ವಿಧಾನಗಳು ಸಾಮಾನ್ಯರಿಗೆ ಅರ್ಥವಾಗದೆ, ಸರಳ ಭಾಷೆಯಲ್ಲಿ, ಮನೋವಿಜ್ಞಾನವನ್ನು ಪ್ರತ್ಯೇಕ ಅಧ್ಯಯನದಂತೆ ಮೂಡಿಸಲಾಗಿದೆ. ಆದರೆ, 12ನೇ ಶತಮಾನದ ನಮ್ಮ ವಚನಕಾರರು, 15–18ನೇ ಶತಮಾನದ ತನಕ ಬಂದ, ಕೀರ್ತನಕಾರರು, ತತ್ತ್ವಪದಕಾರರು ಮನಸ್ಸನ್ನು ಹಲವು ವಿಧಾನಗಳಲ್ಲಿ ಸರಳವಾಗಿ ವ್ಯಾಖ್ಯಾನಿಸಿದ್ದಾರೆ. ಆ ವಿಚಾರಗಳನ್ನು ನಾವು ಸರಿಯಾಗಿ ಗ್ರಹಿಸದಿರುವುದೇ ಇಂದಿಗೂ ಮನೋಚಿಂತನೆಗಳ ಕ್ಲಿಷ್ಟತೆಯನ್ನು ಅನುಭವಿಸುತ್ತಿದ್ದೇವೆ. ‘ಮನದ ಮುಂದಣ ಆಸೆ’ ಎಂಬ ಅಲ್ಲಮನ ನುಡಿಯಂತೆ, ಆಸೆಗಳ ಅನಂತತೆಗೆ ಸಿಲುಕಿದ ನಾವು ಮಿತಿಯ ಮಹತ್ವವನ್ನು ಮರೆಯುತ್ತಿದ್ದೇವೆ.

ಮನಸ್ಸು ಕುರಿತು ಚರ್ಚಿಸಿದ ಮೊದಲ ಸಾಹಿತ್ಯವೆಂದರೆ ವಚನ ಸಾಹಿತ್ಯ. ಪ್ರತಿ ವಚನವು ಆತ್ಮಸಂವೇದನೆಯ ಚಿಂತನೆಗಳಾಗಿವೆ. ಸಾಹಿತ್ಯದ ಇನ್ನಾವುದೇ ಪಠ್ಯವು ಇಷ್ಟು ಸರಳವಾಗಿ ಅದುವರೆಗೂ ಚರ್ಚಿಸಿರುವುದಿಲ್ಲ. ಇದು ಇಂದು ನಮ್ಮ ವಿಶ್ವಪಠ್ಯವಾಗಿದೆ. ಇಂತಹ ವಿಶ್ವಪಠ್ಯದ ನಡುವೆ, ಕನ್ನಡ ಮನಸ್ಸುಗಳಾದ ನಾವು ಇದನ್ನು ಹೊಸ ಮಾದರಿಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನಮಾಡಬೇಕಿದೆ.

ವಚನವೆಂದರೆ ಮಾತು, ಪ್ರಮಾಣ ಈ ಎಲ್ಲಾ ಅರ್ಥಗಳನ್ನು ಮೀರಿ, ವಚನವೆಂದರೆ ಅತ್ಮನುಡಿ ಎಂದು ವ್ಯಾಖ್ಯಾನಿಸಬಹುದು. ಇವು ತನ್ನೊಳಗಿನ ಬಿಂಬವಾಗಿ ನುಡಿದವು,

ಹೇಳಲಿಲ್ಲ, ಹೇಳಿಕೊಂಡವು. ಕಾಣಿಸಲಿಲ್ಲ, ಕಂಡವು. ಎಲ್ಲ ವಚನಗಳನ್ನು ಈ ದೃಷ್ಟಿಯಲ್ಲಿ ವ್ಯಾಖ್ಯಾನಿಸಿದರೆ, ಹೊಸ ಸ್ವರೂಪ ಕಾಣಿಸುತ್ತದೆ. ಈ ಮನಸ್ಸು ಭಕ್ತಿ ಕೇಂದ್ರಿತವಾದಾಗ ಮಾತ್ರ ಮನುಷ್ಯನು ಅದನ್ನು ಅರ್ಥಪೂರ್ಣವಾಗಿ ನಂಬುವ, ಸ್ಥಿತಪ್ರಜ್ಞೆಯಲ್ಲಿ ಸೂಕ್ಷ್ಮಗೊಳ್ಳುವ ಹಲವು ಅವಕಾಶಗಳು ಕಾಣಸಿಗುತ್ತವೆ. ವಚನಕಾರರಲ್ಲಿ ಈ ಭಕ್ತಿಯ ನೆಲೆಗಳೇ ಪೂರ್ಣ ಪರಿಣಾಮಗಳಾಗಿ ಕಾಯ–ಕಾಯಕತತ್ತ್ವದ ಹಂಬಲಗಳ ಸೂಕ್ಷ್ಮಸಂವೇದನೆಯಾಗಿರುವುದು ಅರ್ಥಪೂರ್ಣ ಎನಿಸುತ್ತದೆ. ಇಂತಹ ಭಕ್ತಿಯ ನೆಲೆಗಳನ್ನು ದ.ರಾ ಬೇಂದ್ರೆ ಅವರು ಹೀಗೆ ಉಲ್ಲೇಖಿಸುತ್ತಾರೆ.

"ಕನ್ನಡದ ಶಿವಶರಣರು ತಮ್ಮ ಭಕ್ತಿಯ ಯುಕ್ತಿಯಿಂದ ಕೈಲಾಸವನ್ನೇ ಕಲ್ಯಾಣಕ್ಕೆ ತರಲು ಮಾಡಿದ ಅದ್ಭುತ ಸಾಧನೆಯು ಕನ್ನಡದ, ಅದೇಕೆ, ಭಾರತದ, ಅಷ್ಟೇಕೆ, ಈ ಇಡೀ ಜಗತ್ತಿನ ಇತಿಹಾಸದಲ್ಲಿಯೇ ರೋಮಹರ್ಷಕವಾಗಿದೆ.

ಶಿವಭಕ್ತಿಯ ಭಂಡಾರವನ್ನು ಕಲ್ಯಾಣದಲ್ಲೊಡೆದು ಕನ್ನಡ ನಾಡ ತುಂಬೆಲ್ಲ ಅದನ್ನು ಸೂರೆ ಮಾಡಿದವನು ಬಸವಣ್ಣನೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹೊಲೆಹದಿನೆಂಟು ಜಾತಿಯವರು, ಬಡವರು–ಬಲ್ಲಿದರು; ಸ್ತ್ರೀಯರು–ಪುರುಷರು; ಪತಿತರು–ಪಾವನರು ಎಲ್ಲರೂ ಶೈವಭಕ್ತಿಯ ಮಹಾಪೂರದಲ್ಲಿ ಮುಳುಗಿ ಮುಕ್ತರಾದ ಚರಿತೆಯು ಅದ್ಭುತವೂ ರಮ್ಯವೂ ಆಗಿದೆ. ದೇವರ ದಾಸಿಮಯ್ಯ, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಆದಯ್ಯ, ಬಸವ, ಅಲ್ಲಮ, ಚೆನ್ನಬಸವ, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿ, ನೀಲಲೋಚನೆ, ಮುಕ್ತಾಯಿ ಇವರೇ ಮೊದಲಾದ ಭಕ್ತರತ್ನಗಳನ್ನು ಹಡೆದ ಕಾಲವು ಸಾಮಾನ್ಯವಲ್ಲ. ಈ ಭಕ್ತ ರತ್ನಗಳಿಗೆಲ್ಲ ಶಿಖಾಮಣಿಪ್ರಾಯನಾದ ಬಸವೇಶ್ವರನ ಮಾತೊಂದನ್ನೇ ನಾವು ತೆಗೆದುಕೊಂಡರೂ ಈ ಕನ್ನಡದೊಳಗಿನ ಭಕ್ತಿಯ ಉಜ್ವಲತೆಯು ಕಂಡುಬರುವದು. ಈಶನ ಮೀಸಲಪ್ಪ ಭಕ್ತನೆಂದೂ ಭಕ್ತಿಯುಗದ ಆಚಾರ್ಯನೆಂದೂ ಹರಿಹರ ಚಾಮರಸರು ಬಸವಣ್ಣನನ್ನು ಕೊಂಡಾಡಿದ್ದಾರೆ. ಬಸವಣ್ಣನ ಒಂದೊಂದು ವಚನವೂ ಅಲೌಕಿಕ ಸಾಮರ್ಥ್ಯವುಳ್ಳದ್ದಾಗಿದೆ."[1]

ಈ ಹಿನ್ನಲೆಯಲ್ಲಿ ಬಸವಣ್ಣನವರ ವಚನಗಳನ್ನು ಭಕ್ತಿ ಹಾಗೂ ದರ್ಶನನೆಲೆಗಳ ಮೂಲಕ ಹೇಗೆ ಮನಸ್ಸು ಬಹು ಸೂಕ್ಷ್ಮಗೊಳ್ಳುತ್ತದೆ ಎಂಬುದನ್ನು ಪರಿಶೀಲಿಸಬಹುದು.

"ಎನ್ನ ತನುವಿಂಗೆ ನೀನೊಡೆಯ, ಎನ್ನ ಮನಕ್ಕೆಯೂ ನೀನೊಡೆಯ,

ಎನ್ನ ಧನಕ್ಕೆಯೂ ನೀನೊಡೆಯನಾದ ಬಳಿಕ ಎನ್ನ ಅರಿವು ನಿನ್ನದು,

ಎನ್ನ ಮರಹು ನಿನ್ನದು, ಕೂಡಲ ಸಂಗಮ ದೇವಾ"

ಇಲ್ಲಿ ತನು–ಮನ–ಧನ ಮೂರನ್ನೂ ಅಖಂಡ ನೆಲೆಯಲ್ಲಿ ಚರ್ಚಿಸುವ ಬಸವಣ್ಣನವರು ಜ್ಞಾನ ಮತ್ತು ಮರಹುವನ್ನು ಮುಖಾಮುಖಿಯಾಗಿಸಿದ್ದಾರೆ. ಜ್ಞಾನ ವಿಕಾಸದ ಸಂಕೇತ. ಮರಹು ವಿನಾಶದ ಮೂಲವಾಗುತ್ತದೆ. ನೀನು ತನು–ಮನ–ಧನಗಳನ್ನು ನೀಡಿ, ಕಾಪಾಡುವ ಗುಣಶಕ್ತಿಯಾದರೆ ಈ ಜ್ಞಾನ ಮತ್ತು ಅಜ್ಞಾನಗಳೆರೆಡೂ ಕೂಡ ನಿನ್ನ ವಿಚಾರಗಳೇ ಆಗಿವೆ ಎನ್ನುತ್ತಾರೆ.

ಇಲ್ಲಿನ ಚಿಂತನೆಯ ವ್ಯಾಖ್ಯಾನ ಹೀಗಿದೆ. ಕೂಡಲ ಸಂಗಮ ಈ ಎರಡೂ ಪದಗಳು ಕೂಡ ಒಂದು ವೃತ್ತವನ್ನು ಪ್ರತಿನಿಧಿಸುತ್ತವೆ. ಆ ವೃತ್ತವು ನಿರಾಕಾರ ಸ್ವರೂಪದ್ದು. ಅದು ಸಂಬಂಧದ ಬೆಸುಗೆ. ಅದರಲ್ಲಿ ಹೊರ ನೋಟಗಳಿಗಿಂತ ಒಳನೋಟಗಳೇ ಅಧಿಕವಾಗಿವೆ. ಇಂತಹ ಸ್ವರೂಪವನ್ನು ದೇವರು ಎಂದಿದ್ದಾರೆ. ಹಾಗಾದರೆ, ಈ ದೇವರು ಎಂಬುದು ನಮ್ಮ ಅಂತರಂಗ ರಚನೆಯಲ್ಲವೇ.. ಆ ಅಂತರಂಗದ ರೂವಾರಿ ನಾವೇ ಅಲ್ಲವೇ.. ಈ ಜ್ಞಾನ – ಅಜ್ಞಾನಗಳ ಜನಕರೂ ನಾವೇ ಆಗಿದ್ದೇವೆ. ಈ ವ್ಯಾಖ್ಯಾನವು 20ನೇ ಶತಮಾನಕ್ಕೆ ಹೊಂದುತ್ತದೆ. ಆದರೆ, ಈ ಶತಮಾನವು ವಿಭಿನ್ನವಾಗಿ ಸ್ವೀಕರಿಸುತ್ತದೆ. ತಿಳಿದೂ ತಿಳಿಯದಂತೆ ಸ್ವಾರ್ಥಗೊಳಿಸುವ ಮನೋವೈಕಲ್ಯಗಳಿಗೆ ಜ್ಞಾನದ ಅಗತ್ಯವಿರಲಾರದು. ಅವರು ನಿರ್ಮಿಸಿಕೊಂಡ ಪರದೆಯೂ ಅಜ್ಞಾನದ ಸ್ವೀಕಾರವಲ್ಲ. ಸ್ವಾರ್ಥದ ಪರಮಾವಧಿಯಲ್ಲಿರುವ ನಾವು ಜ್ಞಾನದ ಕಣ್ಣನ್ನು ಸದಾ ಮುಚ್ಚಿರುತ್ತೇವೆ. ಅರಿವು ನಮಗೊಂದು ಪದವಷ್ಟೆ. ಇದು ಅರ್ಥವಾದರೆ, ನಮಗೆ ಅಜ್ಞಾನದ ಸೋಂಕು ಮುಟ್ಟಲಾರದು.

ಮನಸ್ಸು ಒಂದು ಸುಪ್ತ ಅವಸ್ಥೆ. ಅದನ್ನು ಬೆಳಕುಗೊಳಿಸಿದಷ್ಟೂ ಪ್ರಕಾಶ ಪೂರ್ಣಗೊಳ್ಳುತ್ತದೆ. ಇದೇ ವಚನವು ಮುಂದುವರೆಯುವ ರೀತಿ ಹೀಗಿದೆ.

ಕರಿ ಘನ: ಅಂಕುಶ ಕಿರಿದೆನ್ನ ಬಹುದೆ? ಬಾರದಯ್ಯಾ.
ಗಿರಿ ಘನ: ವಜ್ರ ಕಿರಿದೆನ್ನ ಬಹುದೆ? ಬಾರದಯ್ಯಾ.
ತಮಂಧ ಘನ: ಜ್ಯೋತಿ ಕಿರಿದೆನ್ನ ಬಹುದೆ? ಬಾರದಯ್ಯಾ.
ಮರಹು ಘನ: ನಿಮ್ಮ ನೆನೆವ ಮನ ಕಿರಿದೆನ್ನ ಬಹುದೆ?
ಬಾರದಯ್ಯಾ, ಕೂಡಲ ಸಂಗಮದೇವಾ.

ಬಸವಣ್ಣನವರ ಈ ಮೇಲ್ಕಂಡ ವಚನವು ಆನೆ, ಬೆಟ್ಟ, ಕತ್ತಲು, ಮರೆವು ಇಂತಹ ಪ್ರತಿಮೆಗಳ ಮೂಲಕ, ಅವುಗಳನ್ನು ನಿಯಂತ್ರಿಸುವ – ನಿವಾರಿಸುವ, ಅಂಕುಶ, ವಜ್ರ, ಬೆಳಕು, ನೆನಪು ಮೊದಲಾದ ಸೂಕ್ಷ್ಮಗಳ ಸವಾಲು ಉತ್ತರದ ದ್ವೈತ್ಯತೆಯನ್ನು ಮುಖಾಮುಖಿಯಾಗಿಸಿದ್ದಾರೆ. ಒಂದು ಮನಸ್ಸಿನ ಸಾಂದ್ರತೆಯನ್ನು ಪ್ರತಿಪಾದಿಸಲು ಈ

ವಚನವು ಎಷ್ಟೆಲ್ಲಾ ಪರಿಧಿಗಳನ್ನು ಬಂಧಿಸಿದೆ ಎಂಬುದನ್ನು ನಾವು ಚರ್ಚಿಸಬಹುದಾಗಿದೆ. ಕರಿ ಗಿರಿಗೆ ಆಕಾರವಿದ್ದರೆ, ಕತ್ತಲು ಮತ್ತು ಮರೆವಿಗೆ ಯಾವ ಆಕಾರವೂ ಇಲ್ಲ. ಇಂತಹ ಮುಖಾಮುಖಿಗಳು ಹಲವು ಪ್ರಶ್ನೆಗಳು ಮುಂದಿಡುತ್ತವೆ. ನಾವು ಕೇವಲ ಉದಾಹರಣೆಯಾಗಿ ಮಾತ್ರ ಭಾವಿಸಲಾಗದು. ಇದು ಬರಿಯ ಮನಸ್ಸಿನ ಪ್ರಶ್ನೆಯಾಗಿ ಉಳಿಯದೆ, ಮನಸ್ಸು ತಾಕುವ ಭೂಮಿ, ಸಂಪತ್ತುಗಳ ಸ್ಪರ್ಷವೂ ಇರಬಹುದು.

ಎಂದೋ ಸಂಸಾರದ ದಂದುಗ ಹಿಂಗುವುದು ?

ಎಂದೋ, ಮನದಲ್ಲಿ ಪರಿಣಾಮವಹುದೆನಗೆಂದೋ,

ಎಂದೋ? ಕೂಡಲ ಸಂಗಮದೇವಾ,

ಇನ್ನೆಂದೋ ಪರಮಸಂತೋಷದಲ್ಲಿಹುದೆನಗೆಂದೋ?

ಬಸವಣ್ಣನವರು ಈ ಸಂಸಾರವನ್ನು ಕುರಿತು ಅತ್ಯಂತ ಗಹನವಾಗಿ ಆಲೋಚಿಸಿದ್ದಾರೆ. ಸಂಸಾರ ಶರಧಿಯ ದಾಂಟಿಸಿ ಕಾಲಂತಕನೆ ಕಾಯೋ ಎಂದು ಹೇಳುವಾಗ ಇವರ ವರ್ತಮಾನದ ದಿಕ್ಸೂಚಿ ತೀಕ್ಷ್ಣತೆಯನ್ನು ಗಮನಿಸಬೇಕು. ಆದರೂ ಈ ಸಂಸಾರದ ದುಃಖ ಸದಾ ಇರುವುಂತಹದಲ್ಲ, ದುಃಖಕ್ಕೆ ಅವಧಿ ಕಡಿಮೆ. ಸುಖದ ಅವಧಿ, ಅಪೇಕ್ಷೆಯೇ ಹೆಚ್ಚು. ಈ ದುಃಖ ಯಾವರೀತಿಯಲ್ಲಿ ಸಾಗುತ್ತದೆಯೆಂದರೆ, ನಮ್ಮೊಂದಿಗೆ ಅದೊಂದು ಪ್ರಯಾಣವನ್ನೇ ಬೆಳೆಸುತ್ತದೆ. ಅದರ ಪರಿಣಾಮವೂ ಮನದ ಮೇಲೆ ಕಾಣಿಸುತ್ತಾ ಪರಮ ಸಂತೋಷದ ಬಯಕೆ ನಮ್ಮನ್ನು ಬಿಡದೆ ಕಾಡುತ್ತದೆ. ಹಾಗಾದರೆ, ಹಿಂಗದ ನೋವು, ಮನದಲ್ಲಿ ಕಾಣಿಸದ ಪರಿಣಾಮವೇ ಇರುವಾಗ ಪರಮ ಸಂತೋಷದ ಅಪೇಕ್ಷೆ ಇರಲಾದರು. ಪರಮ ಸಂತೋಷವು ಬಾಹ್ಯ ಹುಡುಕಾಟವಲ್ಲ ಎಂಬುದಕ್ಕೆ ಇದೊಂದು ಸೂಕ್ತ ವಚನ ವ್ಯಾಖ್ಯಾನ. ಅಂತರಂಗ ಹುಡುಕಾಟವು ಹೇಗೆ ಎಂಬುದಕ್ಕೆ ಸ್ವಾನುಭವ ಸಂವೇದನೆಗಳ ನುಡಿಗಳನ್ನು ಮಿಡಿಯಬಹುದು.

ಲೇಸ ಕಂಡು ಮನ ಬಯಸಿ ಬಯಸಿ

ಆಸೆ ಮಾಡಿದೊಡಿಲ್ಲ ಕಂಡಯ್ಯಾ!

ತಾಳಮರಕ್ಕೆ ಕೈಯ ನೀಡಿ

ಮೇಲೆ ನೋಡಿ ಗೋಣು ನೊಂದುದಯ್ಯಾ!

ಕೂಡಲ ಸಂಗಮದೇವ, ಕೇಳಯ್ಯಾ,

ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ!

ಏಕೆಂದರೆ ನಮ್ಮ ಮನಸ್ಸು ಸದಾ ಹಂಬಲಿಸುವುದು ಲೇಸನ್ನು ಮಾತ್ರ. ಬೇಂದ್ರೆ ಅವರ ಗಂಗಾವತರಣದ ಪ್ರಾರ್ಥನೆ ನೆನಪಾಗುತ್ತದೆ 'ಲೇಸೇ ಕೇಳಿಸಲಿ ಕಿವಿಗೆ'. ಲೇಸಿನ ಆಸೆಯು ಸದಾ ಶೂನ್ಯವಾದುದು. ತಾಳಮರಕ್ಕೆ ಕೈ ನೀಡಿ, ಮೇಲೆ ನೋಡುವ ಪರಿಗೆ ಗೋಣು

ನೋಯುವ ಕಲ್ಪನೆ ಅದ್ಭುತವಾದುದು. ನೀವು ಬೇಡುವ, ನೀಡುವ ಯಾವ ಪರಿಯೂ ಕಾಲಕ್ಕೆ ಸಲ್ಲದು. ನಾವು ಹಂಬಲದವರೇ ಆಗಿ ಶೂನ್ಯವಾಗುತ್ತೇವೆ. ಸತ್ಯವೂ ಶೂನ್ಯವಾಗುತ್ತದೆ.

ಒಲೆ ಹತ್ತಿಯುರಿದೊಡೆ ನಿಲಬಹುದಲ್ಲದೆ,

ಧರೆ ಹತ್ತಿಯುರಿದೊಡೆ ನಿಲಬಾರದು.

ಏರಿ ನೀರುಣ್ಬೊಡೆ, ಬೇಲಿ ಕೆಯ್ಯ ಮೇವೊಡೆ,

ನಾರಿ ತನ್ನ ಮನೆಯಲ್ಲಿ ಕಳುವೊಡೆ,

ತಾಯ ಮೊಲೆವಾಲು ನಂಜಾಗಿ ಕೊಲುವೊಡೆ,

ಇನ್ನಾರಿಗೆ ದೂರುವೆ, ಕೂಡಲ ಸಂಗಮದೇವಾ?

ಹಾಗಾದರೆ ನಾವು ಹೊಂದುವ ನಂಬಿಕೆ ಹೇಗಿರಬೇಕು ಎಂಬುದಕ್ಕೆ ಈ ವಚನವು ಸಾಕ್ಷಿಯಾಗಿದೆ. ಈ ಮನದ ನಂಟು ಬಾಹ್ಯದ ಎಲ್ಲಾ ಶೂನ್ಯಗಳನ್ನು ಒಂದೇ ದಾಳದಲ್ಲಿ ಬಂಧಿಸಿದೆ. ಕಿರು ಪ್ರಮಾಣದ ಒಲೆ ಹತ್ತಿ ಉರಿದಾಗ ನಾವು ಅದರ ಬಿಸಿಯಲ್ಲಿ ಪ್ರಯೋಜನ ಪಡೆಯಬಹುದು. ಧರೆ ಹತ್ತಿ ಉರಿದರೆ? ಇದು ವರ್ತಮಾನದಲ್ಲಿ ಮನುಷ್ಯನಿಗೆ ಸೋಂಕಿರುವ ರೋಗಗಳು, ದ್ವೇಷ, ದಳ್ಳುರಿಗಳ ಪ್ರತಿಬಿಂಬ ನುಡಿತತ್ತ್ವ ಎನ್ನಬಹುದು. ವಚನಗಳು ಬದುಕಿನ ಸೂಕ್ಷ್ಮ ಸಂವೇದನೆಗಳಾಗಿ, ಬದುಕಿನ ಸಾಕಷ್ಟು ಅರ್ಥಗಳನ್ನು ಪ್ರಶ್ನೆ, ಕುತೂಹಲ ನಾನಾ ವಿಧಗಳಲ್ಲಿ ತೆರೆದಿಟ್ಟವು. ಇಲ್ಲಿ ಬಳಕೆಯಾಗುವ ಒಲೆ ಮತ್ತು ಧರೆಯನ್ನು ಒಂದು ಸಾಮ್ಯತೆಯಲ್ಲಿ ರೂಪ–ಸ್ವರೂಪ ಪ್ರತಿಮೆಯಾಗಿ ಚರ್ಚಿಬಹುದು. ಏರಿಯು ನೀರನ್ನು ಇಲ್ಲವಾಗಿಸುವ, ಬೇಲಿಯೇ ಹೊಲವನ್ನು ಇಲ್ಲವಾಗಿಸುವ ಪರಿಯು, ಹೆಣ್ಣು ಒಂದು ಮನೆಗೆ ಹೊಂದುವ ಸಂಬಂಧವನ್ನು ತಾಯ ಮೊಲೆಹಾಲೇ ಮಗುವಿಗೆ ಜೀವ ಶಕ್ತಿಯ ಸ್ವರೂಪವಾಗಿರುವುದಕ್ಕೆ ಹೋಲಿಸುವ ಪ್ರಕ್ರಿಯೆಯಲ್ಲಿ ಹೆಣ್ಣಿನ ಮಹತ್ವವು ರಕ್ಷಣೆಯ ಬಾಂಧವ್ಯವನ್ನು ಕೇಂದ್ರೀಕರಿಸಿದೆ.

ಮುಂಗೈಯ್ಯ ಕಂಕಣಕ್ಕೆ ಕನ್ನಡಿಯ ತೋರುವಂತೆ

ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು, ನೋಡಾ!

ನಾಯಿಗೆ ನಾರಿವಾಣವಕ್ಕುವುದೆ, ಕೂಡಲ ಸಂಗಮದೇವಾ?

ನಮ್ಮ ಮನಸ್ಸಿನ ತಾಳ್ಮೆ ಮತ್ತು ಅವುಗಳ ಮಹತ್ವವನ್ನು ಅರಿಯುವುದೇ ಈ ಬದುಕಿನ ಮಹತ್ವದ ಗುರಿಯಾಗಿದೆ. ಸೂಕ್ಷ್ಮವಾಗಿ ಆಲೋಚಿಸೋಣ, 12ನೇ ಶತಮಾನದಿಂದ ಇಂದಿನವರೆಗೂ ಜ್ಞಾನದ ಕ್ರಾಂತಿಯಲ್ಲಿ ಅಸಾಮಾನ್ಯ ಹೆಜ್ಜೆಯನ್ನಿಟ್ಟಿದ್ದೇವೆ. ಆದರೆ, ಮನಸ್ಸಿನ ವಿಚಾರದಲ್ಲಿ ನಾವು ಒಂದೆಜ್ಜೆಯು ಇಡದ ಭಯವಂತರಾಗಲು ಕಾರಣವೇನು? ಮನೋವಿಜ್ಞಾನದಂತಹ ಶಿಕ್ಷಣ ಪದ್ಧತಿ, ಆಸ್ಪತ್ರೆಗಳು ಸೃಷ್ಟಿಯಾಗಲು ಕಾರಣವೇನು? ಎಂಬ ಸೂಕ್ಷ್ಮ ಪ್ರಶ್ನೆಗಳನ್ನು ಅರಿಯಬೇಕಿದೆ.

ಈ ಮನಸ್ಸು ಒಂದು ರೀತಿಯ ಸಂಪತ್ತಿನಂತೆ. ಅದು ಜಲಗ(ಮರಳು) ಮುಚ್ಚಿದ ನಿಧಿಯಾಗಿದೆ. ಮುಂಗೈಯ ಕಂಕಣವು ಕಾಣುವುದಿಲ್ಲವೇ.. ಅದಕ್ಕೆ ಕನ್ನಡಿಯ ಅಗತ್ಯವಿದೆಯೇ..! ಅದು ನಾಯಿಯ ಮುಂದೆ ನಾರಿವಾಣ(ತೆಂಗಿನ ಕಾಯಿ)ವೇ ಇದ್ದರೂ ಅಪ್ರಯೋಜನ. ಯಾರೂ ನಿಜವಾದ ಭಕ್ತಿಯನ್ನು ಅರಿಯುತ್ತಾರೋ ಅವರು ತನ್ನೊಳಗಿನ ಸಂಪತ್ತನ್ನು ಅರಿಯುತ್ತಾರೆ. ಭಕ್ತಿಯು ಭಯದಿಂದ ಮುಕ್ತವಾಗಿರಬೇಕು. ಬಂಧನಗಳಿಂದ ಕಳಚಿರಬೇಕು. ಮನೋಸ್ವಾತಂತ್ರ್ಯವನ್ನು ಒಳಗೊಂಡಿರಬೇಕು.

ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು;

ನಿಂದಲ್ಲಿ ನಿಲ್ಲಲೀಯದೆನ್ನ ಮನವು

ಹೊಂದಿದಲ್ಲಿ ಹೊಂದಲೀಯದೆನ್ನ ಮನವು!

ಕೂಡಲ ಸಂಗಮದೇವಾ ನಿಮ್ಮ ಚರಣಕಮಲದಲ್ಲಿ

ಭ್ರಮರನಾಗಿರಿಸು, ನಿಮ್ಮ ಧರ್ಮ!

ಬಸವಣ್ಣನವರ ಈ ವಚನವು ಅತ್ಯಂತ ಹೆಚ್ಚು ನಿರ್ವಚನಕ್ಕೆ ಒಳಗಾಗಿದೆ. ಮನದ ಚಂಚಲತೆಯನ್ನು ತಿಳಿಸುತ್ತದೆ. ಈ ವ್ಯಾಖ್ಯಾನವು ಸರಿಯಾಗಿಯೇ ಇದೆ. ಕಾರಣವೇನು? ಎಂಬ ಪ್ರಶ್ನೆ ಹುಟ್ಟಿರಬಹುದು. ಅದಕ್ಕಾಗಿ ಧ್ಯಾನಗಳ ಮೊರೆ ಹೋಗಿರಬಹುದು. ಸರಳ ಸೂತ್ರಗಳು ಸಿದ್ಧವಾಗದೆ, ಈ ವಚನವು ಇಂದಿಗೂ ಅನಿರ್ವಚನದಂತಿರುವುದೇ ಮುಖ್ಯ ವಿಚಾರ.

ಯಾವ ಆತ್ಮವು ಅಶುದ್ಧವಾಗುವುದೋ ಅದು ಗೊಂದಲಗಳ ಬೇರನ್ನು ಒಳಗೊಂಡಿರುತ್ತದೆ. ಇಲ್ಲಿ ಮಂಗನನ್ನು ಯಾವ ಪ್ರಯೋಗಾಲಯದಲ್ಲಿಯೂ ಬಂಧಿಸಿ, ಅದರ ಮನಸ್ಸಿನ ಚಂಚಲತೆಯನ್ನು ಪರೀಕ್ಷೆ ಮಾಡಲಿಲ್ಲ. ಹಾಗಾದರೆ, ಮಂಗನ ಸಹಜಗುಣವೇ ನಮಗೆ ಚಂಚಲತೆಯಂತೆ ಕಾಣಿಸಿರಬಹುದು. ಆ ರೀತಿಯ ಮನೋಚಿಂತನೆಯಲ್ಲಿ ಮಂಗನಿಂದ ಮಾನವ ಎಂಬ ಹೋಲಿಕೆಯಲ್ಲಿ ಮಂಗನನ್ನು ಪ್ರತಿಮೆಯಾಗಿ ಬಳಸಿರಬಹುದು. ಆದರೆ, ಈ ಚಂಚಲ ಸ್ವಭಾವವನ್ನು ಭಿನ್ನವಾಗಿ ಅರ್ಥೈಸಲು ಪ್ರಯತ್ನಿಸುವೆ.

ಮನುಷ್ಯನು ಏಕೆ ಚಂಚಲನಾಗುತ್ತಾನೆ. ಅವನ ಕಣ್ಣುಗಳ ಹುಡುಕಾಟವೇನು? ಈ ವಿಚಾರ ಮೊದಲಿಗೆ ತಿಳಿಯಬೇಕು. ಪ್ರತಿ ಮನಸ್ಸು ಕೂಡ ತನ್ನ ಅಗತ್ಯಗಳನ್ನು ಹುಡುಕಾಟ ನಡೆಸುತ್ತದೆ. ಎಂದೋ ಸಿಗದ ಹುಡುಕಾಟವು ಆ ಕ್ಷಣ ಕಾಣಬಹುದು. ಅಂದಿನ ಹುಡುಕಾಟವು ಕಾಣಬಹುದು, ಕಾಣದಿರಬಹುದು. ಆದರೆ, ತನ್ನ ಮನದಲ್ಲಿ ಸಂಗ್ರಹಿತವಾಗದ ಹುಡುಕಾಟವನ್ನು ಮಾತ್ರ ಹುಡುಕಾಟ ನಡೆಸಲು ಸಾಧ್ಯ. ನಿರ್ದಿಷ್ಟ ಗುರಿಯಿಲ್ಲದಿದ್ದರೆ ಇಂತಹ ಹುಡುಕಾಟಗಳಿಗೆ ಮನಸ್ಸು ಬಲಿಯಾಗಬೇಕಾಗುತ್ತದೆ. ಈ ಚಂಚಲವನ್ನು ತ್ಯಜಿಸಿ, ಏಕಮುಖವಾಗಿರಲು

ಒಂದು ಕೇಂದ್ರ ಬಿಂದುವಿನ ನಿರ್ದಿಷ್ಟತೆಯನ್ನು ವಚನಕಾರರು ಲಿಂಗತತ್ತ್ವದಲ್ಲಿ ಸ್ಥಾಪಿಸಿದ್ದಾರೆ. ಲಿಂಗವು ನಿರಾಕಾರ ಸ್ವರೂಪದಿಂದ ಕೂಡಿದ್ದು, ಎಲ್ಲಾ ಬಣ್ಣಗಳ ವೀಕೇಂದ್ರಿಕರಣದ ರೂಪತಾಳಿದೆ. ಆಸೆಗಳ ತ್ಯಜಿಸಿ, ಮನಸ್ಸು ತನ್ನ ತಾ ಕಂಡುಕೊಳ್ಳಲು ಇದು ಸೂಕ್ತದಾರಿ ದೀಪವಾಗಿದೆ. ಇದೇ ಚಿಂತನೆಯ ಮತ್ತೊಂದು ಬಸವಣ್ಣನವರ ವಚನವನ್ನು ಕೂಡ ಕಾಣಬಹುದಾಗಿದೆ.

ಮರನನೇರಿದ ಮರ್ಕಟನಂತೆ

ಹಲವು ಕೊಂಬೆಗೆ ಹಾಯುತಲಿದೆ;

ಬೆಂದ ಮನವ ನಾನೆಂತು ನಂಬುವೆನಯ್ಯಾ?

ಎಂತು ನಚ್ಚುವೆನಯ್ಯಾ?

ಎನ್ನ ತಂದೆ ಕೂಡಲ ಸಂಗಮದೇವನಲ್ಲಿಗೆ ಹೋಗಲೀಯದಯ್ಯಾ!

ಐಹಿಕ ಹಂಬಲಗಳಲ್ಲಿ ಬೇಯುವ ಮನಸ್ಸು ಯಾವುದೇ ಸ್ಥಿತಪ್ರಜ್ಞೆಗೆ ಒಳಗಾಗುವುದಿಲ್ಲ. ಅದೊಂದು ರೀತಿಯಲ್ಲಿ ಮರವನೇರಿದ ಮರ್ಕಟನಂತೆ ಎಂದು ಹೋಲಿಸಲಾಗಿದೆ. ಇದರ ಹೋಲಿಕೆಯಲ್ಲಿಯೂ ಅದೇ ವ್ಯತ್ಯಾಸವಿರಬಹುದು. ಮಂಗನ ಸ್ಥಿತಪ್ರಜ್ಞೆಯು ಮನುಷ್ಯನಿಗೆ ಹೋಲಿಕೆಯಲ್ಲ.., ಆದರೂ ಚಂಚಲತೆಗೆ ಗಾದೆಯಂತೆ ಇಂದಿಗೂ ಬಳಕೆಯಲ್ಲಿದೆ. ಇಲ್ಲಿ ಬಳಕೆಯಾಗಿರುವ ನಚ್ಚು ಪದವು ಇಷ್ಟ, ನಂಬಿಕೆ ಈ ಅರ್ಥದಲ್ಲಿಯೇ ಧ್ವನಿಸುತ್ತದೆ. ಅಥವಾ ಅಂದಿನ ಅರ್ಥ ಇದೇ ಅರ್ಥಕ್ಕೆ ಹತ್ತಿರದಂತೆ ಬೇರೆಯೇ ಇರಬಹುದು. ಬಸವಣ್ಣನವರು ಒಟ್ಟು ಐದು ಕಡೆ ಈ ಪದವನ್ನು ಪ್ರಯೋಗಿಸಿದ್ದಾರೆ. ನಂಬಿಕೆಯ ವಿಸ್ತರಣೆಯೇ ಇರಬಹುದು ಎನಿಸುತ್ತದೆ. ಎಲ್ಲಿ ಸ್ಥಿತಪ್ರಜ್ಞೆ ಇರುತ್ತದೆಯೋ ಆಗ ಮಾತ್ರ ನಂಬಿಕೆಗೆ ಬೆಲೆ ಇರುತ್ತದೆ ಎಂಬ ವಿಚಾರವು ಮನಸ್ಸಿನ ಶುದ್ಧತೆಯ ಕನ್ನಡಿಯಾಗಿದೆ.

ಅಂದಣವನೇರಿದ ಸೊಣಗನಂತೆ

ಕಂಡೊಡೆ ಬಿಡದು ತನ್ನ ಮುನ್ನಿನ ಸ್ವಭಾವವನು;

ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು

ಮೃಡ, ನಿಮ್ಮನನುದಿನ ನೆನೆಯಲೀಯದು

ಎನ್ನೊಡೆಯ ಕೂಡಲ ಸಂಗಮದೇವಾ,

ನಿಮ್ಮ ಚರಣವ ನೆನೆವಂತೆ ಕರುಣಿಸು

ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ!

ಈ ಮನಸ್ಸು ಚಂಚಲವಾದುದು ಎಂಬುದೇ ಬಸವಣ್ಣನವರು ಅಂದಿನ ಸಮಾಜ ಕುರಿತು ಎತ್ತಿದ ಪ್ರಶ್ನೆಯಾಗಿದೆ. ಅದು ವರ್ತಮಾನದ ಪ್ರತ್ಯೇಕ ಸಮಸ್ಯೆಯಾಗುತ್ತದೆ ಎಂಬ

ಆಲೋಚನೆಯ ಬೀಜವೂ ಇರಬಹುದು. ಈ ಮೇಲ್ಕಂಡ ವಚನದಲ್ಲಿ ಸೊಣಗನಿಗೆ ಹೋಲಿಸಲಾಗಿದೆ. ಅಂದರೆ ಶುನಕ, ನಾಯಿ ಎಂದರ್ಥ. ಇಲ್ಲಿಯೂ ನನ್ನದು ಅದೇ ಪ್ರಶ್ನೆ. ನಾಯಿಯನ್ನು ಅಂದಣಕ್ಕೆ ಏರಿಸಿ ಅದು ತನ್ನ ಆಸೆಗಳನ್ನು ಕಂಡರೆ, ಅಂದಣವನ್ನು ಏರಿದ ಗುಣವನ್ನೂ ಮರೆತು ತನ್ನ ಮೊದಲಿನ ಸ್ವಭಾವದಂತೆ ವರ್ತಿಸುತ್ತದೆ ಎನ್ನಲಾಗಿದೆ. ಇದು ನಿಜವಾಗಿಯೂ ಮನುಷ್ಯ ಪ್ರಾಣಿಯ ಗುಣವೇ ಹೊರೆತು, ನಾಯಿಯ ಗುಣವಲ್ಲ. ನಾಯಿ ಪ್ರಪಂಚದಲ್ಲಿ ಅದು ಸಹಜವಿರಬಹುದು. ನಾಯಿಗಳ ಕಣ್ಣಿಗೆ ಮನುಷ್ಯ ಹೇಗೆ ಕಾಣಬಹುದೋ.. ವಚನಕಾರರು ಧನಾತ್ಮಕ ಹಾಗೂ ಋಣಾತ್ಮಕ ಮನೋಸ್ಥಿತಿಗಳಿಗೆ ಪ್ರಾಣಿ ಪಕ್ಷಿಗಳನ್ನು ಹೋಲಿಸಿರುವುದು ಅಂದಿನ ಸಮಾಜದ ಗ್ರಹಿಕೆಗಳೇ ಹೊರೆತು, ಇವರ ಉದ್ದೇಶಿತವೇನಲ್ಲ. ಅಂದಹಾಗೆ ಅದನ್ನು ನಾವು ಮುಂದುವರೆಸಬೇಕೆಂದೇನಿಲ್ಲ. ಈ ಮನಸ್ಸು ವಿಷಯ ಸುಖಗಳಿಗೆ ಸದಾ ಹಾರುತ್ತದೆ. ಅದರಲ್ಲೂ ಸ್ವಾರ್ಥದ ಹಿನ್ನಲೆಯಲ್ಲಿ ಆಲೋಚಿಸಿ ಉಪಾಯ ಮಾಡುತ್ತದೆ. ಇದನ್ನು ನಾವು ನಾಶಮಾಡಬೇಕಿದೆ. ಆಸೆಗಳ ತೊರೆದ ಶೂನ್ಯಜೀವಿ ಶಿವನನ್ನು ಅನುದಿನ ನೆನೆಯಲಾಗುತ್ತಿಲ್ಲ. ಸದಾ ಶೂನ್ಯ ಭಾವದಲ್ಲಿ ಈ ಪ್ರಪಂಚವನ್ನು ಅರಸುವ ಮನಗಳು ಅಗತ್ಯವಿದೆ. ಆಗ ಮಾತ್ರ ನಮ್ಮ ಮನಸ್ಸುಗಳಲ್ಲಿ ಸಮಾನತೆ, ನಿಸ್ವಾರ್ಥಗಳು ಬೇರೂರಲು ಸಾಧ್ಯ. ಆ ಮನಸ್ಸುಗಳು ಮಾತ್ರ ಈ ಪ್ರಕೃತಿಯನ್ನು ಉಳಿಸುವ ಪ್ರಯತ್ನಮಾಡುತ್ತವೆ.

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ!
ಸಂಸಾರಸಂಗವ ಬಿಡದು ನೋಡೆನ್ನ ಮನವು
ಈ ನಾಯಿತನವ ಮಾಣಿಸು
ಕೂಡಲ ಸಂಗಮದೇವಾ, ನಿಮ್ಮ ಧರ್ಮ!

ಈ ಸಂಸಾರವೆಂಬುದು ಬಂಧನವೆಂಬ ಲೌಕಿಕ ಸಾರಗಳೇ ಅತಿಹೆಚ್ಚು. ಈ ಸಂಸಾರದ ಹಂಬಲಕ್ಕೆ ಸೋತವರೇ ಜಾಸ್ತಿ. ಅದೊಂದು ಪಾಶವಿದ್ದಂತೆ. ಇದೆಲ್ಲವೂ ಇದುವರೆಗಿನ ಚರ್ಚಿತ ವಿಷಯವೇ ಸರಿ. ಈ ಸಂಸಾರವನ್ನು ಬಸವಣ್ಣನವರು ತುಪ್ಪದ ರುಚಿಗೆ ಖಡ್ಗದ ತುದಿಯನ್ನು ನೆಕ್ಕುವ ನಾಯಿಗೆ ಹೋಲಿಸಿರುವುದು ವಿಭಿನ್ನವಾಗಿದೆ. ಮೊದಲಿಗೆ ಸೊಣಗನೆಂದು ಬಳಸಿ, ನಂತರ ಈ ನಾಯಿತನವೆಂದು ಬಳಸಿರುವ ಉಪಕ್ರಮಗಳು ವಿಭಿನ್ನವಾಗಿವೆ. ಸಂಸಾರವೆಂಬುದು ರುಚಿಯ ಬೆನ್ನಟ್ಟುವುದಲ್ಲವೆಂದು ಹೇಳಬೇಕಾದುದನ್ನು ನಾಯಿಯ ಬದುಕಿಗೆ ಹೋಲಿಸಿರುವ ಕ್ರಮದಲ್ಲೂ ತಪ್ಪಿರಬಹುದು. ಏಕೆಂದರೆ, ನಾಯಿಯನ್ನು ಅದರದೇ ಬದುಕಿಗೆ ಈ ಮನುಷ್ಯ ಜೀವಿಯು ಬಿಟ್ಟಿಲ್ಲ. ಸಾಮಾನ್ಯವಾಗಿ ತನ್ನ ಪರಿಸರದ ಪ್ರಾಣಿ ಪಕ್ಷಿಗಳಿಗೆ ಮನುಷ್ಯನ ಗುಣಗಳನ್ನು ಆರೋಪಿಸಿ, ಚರ್ಚಿಸಲಾಗುತ್ತದೆ. ಮನುಷ್ಯ ಮನಸ್ಸು ಸದಾ ಸಂಸಾರದ ಹಂಬಲವನ್ನು ಹೊಂದಿರುವಂತಹದ್ದು ಎಂಬುದನ್ನು ಇಲ್ಲಿ

ಉದಾಹರಣೆಯ ಮೂಲಕ ವಿವರಿಸಲಾಗಿದೆ.

ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ
'ಎನ್ನ ಬಿಡು, ತನ್ನ ಬಿಡೆ' ಎಂಬುದು ಕಾಯವಿಕಾರ
'ಎನ್ನ ಬಿಡು, ತನ್ನ ಬಿಡೆ', ಎಂಬುದು ಮನೋವಿಕಾರ!
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೆಯ್ದುವುದೆ, ಕೂಡಲ ಸಂಗಮದೇವಾ?

ವಿಷಯ ಸುಖಗಳಿಗೆ ಹಂಬಲಿಸುವ ಮೊಲದಂತ ಮನುಷ್ಯನಿಗೆ ಐದು ಪಂಚೇಂದ್ರಿಯಗಳು ನಾಲ್ಕು ಅಂತಃಕರಣ ಚತುಷ್ಟಯಗಳು ಸೇರಿ ಒಂಬತ್ತು (ಇವುಗಳನ್ನು ನಾಯಿಗೆ ಹೋಲಿಸಲಾಗಿದೆ) ಬೆನ್ನು ಹತ್ತಿವೆ. ಮನುಷ್ಯನ ಮನಸ್ಸು ವಿಕಾರವಾಗಲು ಬೆನ್ನತ್ತುವ ವಿಷಯಾಂಶಗಳು ಇಲ್ಲಿವೆ. ಮನಸ್ಸು ಬಿಡು ಮತ್ತು ಬಿಡೆ ಇವುಗಳ ನಡುವಣದಲ್ಲಿಯೇ ಕಾಯ, ಮನಸ್ಸುಗಳನ್ನು ವಿಕಾರವಾಗಿಸಿಕೊಳ್ಳುತ್ತದೆ. ಕರಣೇಂದ್ರಿಯಗಳೆಂಬ ಸೊಣಗ ಮುಟ್ಟದಿರಲಿ ಎಂಬ ಅರ್ಥದಲ್ಲಿಯೂ ಲೌಕಿಕವನ್ನು ಕಳಚುವ ಪ್ರಯತ್ನವಿಲ್ಲಿದೆ. ಮನಸ್ಸು ವಿಕಾರಾಕರ್ಷಕವಾದುದು. ಅದು ಏಕಾಂತ ಸಂಚಲನದಲ್ಲಿ ಸದಾ ಸೋಲುತ್ತದೆ. ಅದನ್ನು ಗೆಲ್ಲಲು ಕೂಡಲ ಸಂಗಮನಂತಹ ಆತ್ಮಪರಿಶುದ್ಧಿಯು ಬಹುಮುಖ್ಯವಾಗುತ್ತದೆ.

ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ;
ಮುಂದೆ ಲಿಂಗವ ಕಂಡೆಹೆನೆಂಬುದು ಹುಸಿ, ನೋಡಾ!
ಬೆಂದ ಕರಣಾದಿಗಳು ಒಂದೇ ಪಥವನರಿಯವು;
ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ?
ಎನ್ನ ತಂದೆ, ಕೂಡಲ ಸಂಗಮದೇವಾ
ನಿಮ್ಮ ಶರಣರ ಬಳಿವಿಡಿದರೆ
ಎನ್ನ ದಂದುಗ ಹಿಂಗುವುದು.

ಮನದಲ್ಲಿ ಎಲ್ಲಿಯವರೆಗೂ ಸಂದೇಹಗಳಿರುತ್ತವೆಯೋ ಅಲ್ಲಿಯ ತನಕ ತೊಂದರೆಗಳು ತಪ್ಪುವುದಿಲ್ಲ. ಅದು ಅನುಮಾನವೆಂಬ ಸಂದೇಹವೂ ಆಗಿರಬಹುದು. ಮನದ ಶುದ್ಧತೆ ಇಲ್ಲದೆ ಲಿಂಗ ಧಾರಣೆಯು ಸುಳ್ಳು. ಬೆಂದ ಜ್ಞಾನೇಂದ್ರಿಯಗಳು ಒಂದೇ ದಾರಿಯನ್ನು ಅನುಸರಿಸುವುದಿಲ್ಲ. ಏಕಮುಖವಾದ ಶಿವಪಥದ ಸಾಧನೆಯು ಅಸಾಧ್ಯ. ಇಂತಹ ಸಂದರ್ಭದಲ್ಲಿ ಶರಣರೆಂಬ ಸಾಧಕರ ಸಂಗವಾದರೂ ಬೇಕು ಈ ತೊಂದರೆಗಳ ನಿವಾರಿಸಲು ಎಂಬ ಹರ್ಷವಿಲ್ಲಿದೆ. ಶಿವಪಥದ ಶರಣರ ಅರಿವು ನಮಗಿರಬೇಕು. ಎಲ್ಲರೂ ಲೌಕಿಕ ಹಂಬಲದವರಲ್ಲ ಎಂಬ ನಿಲುವು ಇಲ್ಲಿದೆ.

ತನ್ನ ವಿಚಾರಿಸಲೊಲ್ಲದು; ಇದಿರ ವಿಚಾರಿಸಹೋಹುದೀ ಮನವು!
ಏನು ಮಾಡುವೆನೀ ಮನವನು? ಎಂತು ಮಾಡುವೆನೀ ಮನವನು
ಕೂಡಲ ಸಂಗಮದೇವನ ಶರಣರ
ನಚ್ಚದ, ಮೆಚ್ಚದೆ, ಬೆಂದ ಮನವನು?

ವರ್ತಮಾನದ ಸತ್ಯಗಳನ್ನು ತೆರೆದಿಡುವ ವಚನವಿದು. ನಾವು ನಮ್ಮ ಆರೋಗ್ಯ, ಮನಸ್ಸು ಕುರಿತು ಆಲೋಚಿಸುವುದಕ್ಕಿಂತ ಅನ್ಯರ ಮನಸ್ಸು, ಆರೋಗ್ಯದ ಕಡೆಗೆ ಅತಿಹೆಚ್ಚು ಕಾಳಜಿ. ಆಪ್ತತೆಯಲ್ಲಿ ಒಂದು ತರಹ ಆಸಕ್ತಿಯಾದರೆ, ವಿರೋಧದಲ್ಲಿ ಮತ್ತೊಂದು ರೀತಿಯ ಆಸಕ್ತಿಯಾಗಿರುತ್ತದೆ. ಇಂತಹ ಆಸಕ್ತಿಗಳ ಕಳಚುವುದಾದರೂ ಹೇಗೆ? ತನ್ನ ಅಂತರಂಗದ ಆತ್ಮವನ್ನು ಅರಿಯದ ಅಂದರೆ ನಂಬಿಕೆ ಹೊಂದದ, ಮೆಚ್ಚದ ಈ ಸಂಸಾರ ಆಸಕ್ತಿಗಳಲ್ಲಿ ಬೆಂದು ಅನ್ಯಕ್ಕೆ ಹಂಬಲಿಸುವ ಮನವನ್ನು ಏನು ಮಾಡುವುದು ಎಂಬುದೇ ಇಲ್ಲಿನ ಪ್ರಶ್ನೆ.

'ತನ್ನ ತಾ ತಿಳಿ'ಯಬೇಕಾದ ಅನಿವಾರ್ಯತೆಯು ಈ ಮನಸ್ಸಿಗಿದೆ. ವರ್ತಮಾನದ ತುರ್ತುಗಳಲ್ಲಿ ಆಹಾರ, ಆರೋಗ್ಯ, ಮನೋಚಿಂತನೆಗಳಲ್ಲಿ ಮೊದಲಿಗೆ ತನ್ನನ್ನು ಅರಿತು ಕಾಪಾಡಿಕೊಳ್ಳಬೇಕಾಗಿದೆ. ಇದೇ ವಿಚಾರವು ಸ್ವಾರ್ಥದ ವಿಚಾರಕ್ಕೆ ಬಂದಾಗ ಅದರ ಅರ್ಥವೇ ಬದಲಾಗುತ್ತದೆ. ತನ್ನನ್ನು ತಾನು ಅರಿಯಬೇಕಾದ ಹಂಬಲವು ಇಲ್ಲಿ ಸಾರ್ಥಕವಾಗುತ್ತದೆ.

ತನ್ನಿಚ್ಛೆಯ ನುಡಿದರೆ ನಚ್ಚುವುದೀ ಮನವು:
ಇದಿರಿಚ್ಛೆಯ ನುಡಿದರೆ ಮಚ್ಚದೀ ಮನವು
ಕೂಡಲ ಸಂಗನ ಶರಣರ
ನಚ್ಚದ ಮನವ ಕಿಚ್ಚಿನೊಳಗಿಕ್ಕುವೆ!

ಪ್ರತಿಯೊಬ್ಬರೂ ತನ್ನ ಇಷ್ಟದ ಆಸೆ, ಆಕಾಂಕ್ಷೆಗಳಂತೆ ಸ್ವಾರ್ಥವಾಗಿ ಕಂಡು ಬಂದರೆ ಈ ಮನಸ್ಸು ಈ ಸಮಾಜದ ಕುರಿತು ನಂಬಿಕೆ ಹೊಂದುತ್ತದೆ. ಅದು ವಿರುದ್ಧವಾಗಿದ್ದರೆ ಎಂದಿಗೂ ಮೆಚ್ಚುವುದಿಲ್ಲ. ಆಪ್ತನಾದವನೂ ಕೂಡ, ಅವನ ವಿರುದ್ಧ ಅಥವಾ ಅವನ ಒಂದು ತಪ್ಪನ್ನು ಗುರ್ತಿಸಿ ಹೇಳಿದರೆ ಸಾಕು ವಿರೋಧಿಯಾಗುತ್ತಾನೆ. ತನ್ನನ್ನು ತಾ ಸರಿಯಾಗಿ ಅರಿಯದೇ ಸ್ವಾರ್ಥದಲ್ಲಿ ಬೇಯುವ ಮನವನ್ನು ಸುಡಬೇಕೆಂದು ಕಠಿಣವಾಗಿ ಬಸವಣ್ಣನವರು ವ್ಯಾಖ್ಯಾನಿಸಿದ್ದಾರೆ. ಈ ಸ್ವಾರ್ಥದ ಮನವು ತನ್ನನ್ನು ಯಾವ ಯಾವ ಮಾದರಿಯಲ್ಲಿ ಬಂಧಿಸಿದೆ ಎಂಬುದನ್ನು ಈ ವಚನದಲ್ಲಿ ವಿಸ್ತರಿಸಿದ್ದಾರೆ.

ಸುಡಲೀ ಮನವೆನ್ನನುಡುಹನ(ಮುಡಬನ) ಮಾಡಿತ್ತು!
ನಡೆವಲ್ಲಿ ನುಡಿವಲ್ಲಿಯಧಿಕನೆಂದೆನಿಸಿತ್ತು
ಬೆಡಗಿನ ಕೀಲು ಕಳೆದು ಕೆಡೆದ ಬಳಿಕ

ಕಡುಗೂರ್ಪ ಮಡದಿ ತಾ ಮುಟ್ಟಲಮ್ಮಳು;
ಒಡಲನುರಿ ಕೊಂಬುದು; ಒಡವೆಯನರಸು ಕೊಂಬ;
ಕಡುಗೂರ್ಪ ಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ!
ಮುನ್ನ ಮಾಡಿದುದು ತನ್ನ ಬೆನ್ನ ಬಿಡದನ್ನಕ್ಕ
ಇನ್ನು ಮಾಡಿದೊಡೊಳವೆ ಕೂಡಲ ಸಂಗಮದೇವಾ?

ತಾನೊಂದು ಬಗೆದರೆ, ದೈವವೊಂದು ಬಗೆದಿತ್ತು ಎಂಬಂತೆ 'ಮುನ್ನ ಮಾಡಿದುದು ತನ್ನ ಬೆನ್ನ ಬಿಡದಾ'ಗುತ್ತದೆ. ತಾನು ಕೆಡುಕನ್ನು ಬಯಸುವ ಆಲೋಚನೆಗೆ ಒಳಗಾದರೆ ಸಾಕು, ತನಗೇ ಕೆಡುಕಾಗುವುದನ್ನು ಅರಿಯಲಾರೆವು. ಈ ವಚನವು ಕೆಲವು ಕಡೆ ಸುಡಲೀ ಮನವೆನ್ನ ಮುಡಬನ ಮಾಡಿತ್ತು ಎಂಬುದಾಗಿಯು ಇದೆ. ಏನೇ ಆದರೂ ಒಂದು ಸಮಸ್ಯೆಯನ್ನು ಸೂಚಿಸುತ್ತಿದೆ. ಮುಡಬನೆಂದರೆ ಅಂಗವೈಕಲ್ಯಕ್ಕೆ ತುತ್ತಾಗುವುದು. ಇದು ಮನೋವೈಕಲ್ಯವಾಗಿದೆ. ಮನೋವೈಕಲ್ಯಕ್ಕೆ ಒಳಗು ಮಾಡುವ ವಿಷಯ ಸುಖಗಳನ್ನು ನಾಶಮಾಡುವ ತವಕವೇ ಇಲ್ಲಿದೆ. ಇದು ನಡೆ–ನುಡಿಯನ್ನು ಅಸಂಬದ್ಧಗೊಳಿಸುವ ಕ್ರಿಯೆ.

ತಾನೊಂದು ಕೇಡು ಬಯಸುವಾಗ ತನಗೂ ಕೇಡಾಗುವ ನಿರೀಕ್ಷೆಯನ್ನು ಹೊಂದಲಾರನು. ಅಂತಹ ಗುಣಗಳ ಮನಸ್ಸು ಹೇಗಿರುತ್ತದೆ ಎಂಬುದಕ್ಕೆ ಇನ್ನೊಂದು ವಚನ ಸಾಕ್ಷಿಯಾಗಿದೆ.

ವಚನದ ಹುಸಿ, ನುಸುಳೆಂತು ಮಾಣ್ಬುದೆನ್ನಾ?
ಮನದ ಮರ್ಕಟತನವೆಂತು ಮಾಣ್ಬುದೆನ್ನಾ?
ಹೃದಯದ ಕಲ್ಮಷವೆಂತು ಮಾಣ್ಬುದೆನ್ನಾ?
ಕಾಯವಿಕಾರಕ್ಕೆ ತರಿಸಲುವೋದೆನು
ಎನಗಿದು ವಿಧಿಯೆ, ಕೂಡಲ ಸಂಗಮದೇವಾ?

ಕಾಯ ಮತ್ತು ಮನೋವಿಕಾರಗಳಿಗೆ ಒಳಗಾಗುವ ಪ್ರತಿಯೊಬ್ಬರೂ ಇದೇ ನೋವಿನಲ್ಲಿ ನಿತ್ಯ ಹಂಬಲಿಸತ್ತಾರೆ. ನುಡಿಯಿಲ್ಲದೆ ನಡೆಯು ಸಾಧ್ಯವಿಲ್ಲ. ಮನದ ಕಲ್ಮಷವೊತ್ತು ಮಾಡುವುದಾದರೂ ಬರೀ ಡಾಂಭಿಕತನವಾಗುತ್ತದೆ. ತೋರಿಕೆಯ ಈ ಜಗತ್ತಿನಲ್ಲಿ ತೋರುಂಬ ಲಾಭದವರೆಲ್ಲ ಕಾಯ–ಮನೋ ವಿಕಾರಗಳಿಗೆ ಒಳಗಾಗಿದ್ದಾರೆ. ಬಸವಣ್ಣನವರು ಶ್ರಮಕ್ಕೆ ತಕ್ಕ ಪ್ರತಿಫಲವೆಂದು ಭಾವಿಸಿದ್ದವರು. ಅವರಿಗೆ ಈ ವಿಧಿ–ಕರ್ಮಗಳ ಕುರಿತು ಯಾವುದೇ ಆಸಕ್ತಿ ಇರಲಿಲ್ಲ. ನಾವೇ ಮಾಡಿಕೊಂಡ ಕಾಯವಿಕಾರಗಳ ಕುರಿತು ಇದು ಎನಗೆ ವಿಧಿಯೇ ಎಂದು ಪ್ರಶ್ನಿಸುತ್ತಾರೆ. ನಮ್ಮ ಕ್ರಿಯೆಗಳ ಫಲಿತ ನಮ್ಮಲ್ಲೇ ಇರುವಾಗ ಅನ್ಯ ಹುಡುಕಾಟಗಳ 'ವಚನದ ಹುಸಿ' ಎಂಬುದಾಗಿ ಧೈರ್ಯವಾಗಿ ನುಡಿದಿದ್ದಾರೆ.

ಒಟ್ಟಾರೆಯಾಗಿ ಬಸವಣ್ಣನವರು ಮನಸ್ಸನ್ನೇ ಕೇಂದ್ರೀಕರಿಸಿ, ಹಲವು ವಚನಗಳಲ್ಲಿ ತಮ್ಮದೇ ನಿಲುವುಗಳನ್ನು ಚರ್ಚಿಸಿದ್ದಾರೆ. ಈ ನಂಬಿಕೆ ಹಾಗೂ ಮೆಚ್ಚುಗೆ ಕುರಿತು ಅಪಾರವಾದ ಗೌರವವನ್ನು ನೀಡಿದ್ದಾರೆ. ಅದು ತನ್ನ ಅಂತರಂಗದ ಅಧಿಕರಣವಾಗಿದೆ. ಬಸವಣ್ಣನವರು ಹುಡುಕಿದ್ದು ವಿಶ್ವದ ಸರ್ವ ದಾರ್ಶನಿಕರೆಲ್ಲ ಹುಡುಕಾಟ ನಡೆಸಿದ ಮನಸ್ಸಿನ ಸ್ಥಿತಪ್ರಜ್ಞೆ. ಈ ವಚನ ಪಠ್ಯಗಳನ್ನು ವಿಶ್ವದ ಯಾವುದೇ ಪರಿಸರದಲ್ಲಿಟ್ಟು ಓದಿದರೂ ಅಲ್ಲಿಗೆ ಹೊಂದಿಕೆಯಾಗುವ ಸಾರ್ವಕಾಲಿಕ ಸತ್ಯಗಳಡಗಿವೆ. ಈ ಲೇಖನವನ್ನು ಮುಕ್ತಾಯಮಾಡುವ ಮುನ್ನ ಕೆಲವು ಪ್ರಶ್ನೆಗಳನ್ನು ನಿಮ್ಮ ಮುಂದಿರಿಸಿ, ನಿಮ್ಮಲ್ಲಿ ಈ ಲೇಖನವು ಮುಂದುವರೆಯಲು ಅನುವುಮಾಡುತ್ತಿದ್ದೇನೆ.

ಫಲಿತ ಪ್ರಶ್ನೆಗಳು :

1. ಮನಸ್ಸು ಅಂತರಂಗದ ವಿಷಯವಾದರೂ ಕಾರ್ಯ ಕಾರಣ ಹುಡುಕಾಟ ಮಾತ್ರ ಬಾಹ್ಯವಾದುದು.
2. ವಚನ ಪಠ್ಯಗಳಲ್ಲಿ ಮನೋಚಿಂತನೆಗಳಿಗೆ ಪ್ರಾಣಿಗಳ ವರ್ತನೆಗಳ ಆರೋಪವು ಅನಗತ್ಯವೆನಿಸಿ, ಕೈಬಿಡಬಹುದು.
3. ಇದು ಸಾರ್ವಕಾಲಿಕ ಸತ್ಯದ ಮನೋ ಚಿಂತನೆ. ಬದಲಾವಣೆ ಸಮೂಹದ್ದಲ್ಲ, ವೈಯಕ್ತಿಕ ವಾಂಛೆ.

ಅಂತಿಮವಾಗಿ ಎಂ. ಯಮುನಾಚಾರ್ಯರ ಲೇಖನದ ತೀರ್ಮಾನವನ್ನು ಉಲ್ಲೇಖಿಸುತ್ತಾ ಲೇಖನವನ್ನು ಮುಕ್ತಾಯ ಮಾಡಲಾಗುವುದು.

“Here is the sum and substance of the ethical teachings of all the religions of the world. This teaching is in perfect consonance with the fundamental ethical teachings of all the great prophets of the world like Buddha, Mahavira, Zoroaster, Confucius, Jesus and prophet Muhammad.

In uttermost humility Basava conceived of himself as the lowest of the low and yielded superiority only to those who loved the Lord. I am the least of men (Enaginta Kiriyarilla) said he, expressing his extraordinary humility. He looked upon all those who would show him his imperfections as the greatest friends and well-wishers. The words of those who sought to praise him were compared by him to

golden spears (honna sula) thrust into him. They caused him great pain instead of satisfaction. Such was his freedom from all egotism. This is the story of the spiritual endeavor of Basava. This is the philosophy of life by which he lived. This is the torch of illumination that he has left as a precious legacy for mankind. This light shines evermore after eight hundred years after the birth of Basava. This is Basava's perennial philosophy of life, which is bound to have a universal appeal to mankind in all ages and climes" (Sri Basavesvara's Philosophy of Life – M. Yamunacharya)

ಬಸವಣ್ಣನವರು ವ್ಯಕ್ತಿ ಎನ್ನುವುದಕ್ಕಿಂತ ಕನ್ನಡ ಅಸ್ಮಿತೆಯ ಅಗಾಧ ವ್ಯಕ್ತಿತ್ವ. ಆ ವ್ಯಕ್ತಿತ್ವ ಸ್ವರೂಪಗೊಳಿಸಿದ ವಚನವೆಂಬ ವಿಶ್ವಸಾಹಿತ್ಯವನ್ನು ನಮ್ಮ ನಿತ್ಯ ಮನೋಧರ್ಮಗಳಿಗೆ ಉತ್ತರ ಪಡೆಯುವ ಕೀಲಿಕೈಗಳಾಗಿ ಅಧ್ಯಯನಮಾಡಬಹುದು.

ಆಕರ ಗ್ರಂಥಗಳು :

1. ವಿಮರ್ಶ–ಸಂಶೋಧನ ಯೋಗ., ಔದುಂಬರಗಾಥೆ ಸಂ.16., ದ.ರಾ. ಬೇಂದ್ರೆ., ಕನ್ನಡದಲ್ಲಿ ಭಕ್ತಿಮಾರ್ಗ., ವರಕವಿ ಡಾ॥ ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ., ಹುಬ್ಬಳಿ, ಪುಟ ಸಂಖ್ಯೆ 55
2. Sri Basavesvara, Sri Basavesvara's Philosophy of Life., M. Yamunacharya., Eigth centenary commemoration Volume, Pub: Government of Mysore (Karnataka), Bangalore, 1967., Page No. 76.

ಪರಮಾರ್ಶನ ಗ್ರಂಥಗಳು :

1. ಬಸವಣ್ಣನವರ ವಚನ ಸಂಪುಟ., ಎಂ.ಎಂ. ಕಲಬುರ್ಗಿ., ಕರ್ನಾಟಕ ಸರ್ಕಾರ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1993
2. ವಿಮರ್ಶ–ಸಂಶೋಧನ ಯೋಗ., ಔದುಂಬರಗಾಥೆ ಸಂ.16., ದ.ರಾ. ಬೇಂದ್ರೆ., ಕನ್ನಡದಲ್ಲಿ ಭಕ್ತಿಮಾರ್ಗ., ವರಕವಿ ಡಾ॥ ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ., ಹುಬ್ಬಳಿ

3. Sri Basavesvara, Sri Basavesvara's Philosophy of Life., M. Yamunacharya., Eigth centenary commemoration Volume, Pub: Government of Mysore (Karnataka), Bangalore, 1967.

***

ಪಂಪ–ಕುಮಾರವ್ಯಾಸ

1 ಡಾ. ಚನ್ನಮ್ಮ ಸಿದ್ರಾಮಪ್ಪ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ
ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ
channammanalba@gmail.come

ಹಳಗನ್ನಡ ಸಾಹಿತ್ಯದಲ್ಲಿ ಬಹು ಸಂಖ್ಯೆಯಲ್ಲಿರುವ ವೀರಶೈವ ಕವಿಗಳು ರಾಮಾಯಣ ಮಹಾಭಾರತಗಳನ್ನು ಆಕಸ್ಮಾತಾಗಿಯೂ ಮುಟ್ಟಲಿಲ್ಲ. ಜೈನ ಕವಿಗಳ ರಾಮಾಯಣ ಮಹಾಭಾರತಗಳು ವೈದಿಕ ಪರಂಪರೆಗಿಂತ ಭಿನ್ನವಾಗಿವೆ. ವ್ಯಾಸ ವಾಲ್ಮೀಕಿಗಳ ಕಥೆಯ ಜಾಡಿನಲ್ಲೇ ನಡೆದಿದ್ದರೂ ಪಂಪ ಕುಮಾರವ್ಯಾಸರ ಕೃತಿಗಳು ವಿಶಿಷ್ಟವಾಗಿವೆ. ಕನ್ನಡ ನಾಡಿನಲ್ಲಿ ಇಂದಿನವರೆಗೂ ಅವುಗಳಿಗೆ ಎಲ್ಲ ವರ್ಗಗಳಲ್ಲಿಯೂ ಮನ್ನಣೆಯಿದೆ. ಹಾಗೆ ನೋಡಿದರೆ ಯಾವುದೇ ದೇಶದ ಸಾಹಿತ್ಯವೂ ತನ್ನ ಪ್ರಾಚೀನ ಪುರಾಣ ಇತಿಹಾಸಗಳಿಂದ ಸಂಪೂರ್ಣ ಮುಕ್ತವಾಗಿಲ್ಲ. ಹಳೆಯ ವಸ್ತುವನ್ನೇ ಪುನರಚಿಸುವುದು ಎಲ್ಲ ದೇಶ ಭಾಷೆಗಳಲ್ಲಿಯೂ ಸಾಮಾನ್ಯ. ವಸ್ತು ಯಾವುದೇ ಇರಲಿ ಕಾವ್ಯದ ಮಹತ್ವ ನಿಲ್ಲುವುದು ಕವಿಯ ಪ್ರತಿಭೆಯ ಬಲದ ಮೇಲೆ ಮತ್ತು ಆತನ ವೈಯಕ್ತಿಕ ಕಾಣಿಕೆಯ ಸತ್ವದಿಂದ. ಇದರಿಂದಲೇ ‘ವಿಕ್ರಮಾರ್ಜುನ ವಿಜಯ’ ಮತ್ತು ‘ಗದುಗಿನ ಭಾರತ’ಗಳು ಕನ್ನಡದ ಮೇರು ಕೃತಿಗಳಾಗಿ ಉಳಿದಿವೆ.

ಪಂಪ ಕುಮಾರವ್ಯಾಸರಿಬ್ಬರೂ ಮಹಾಭಾರತದ ವಸ್ತುವನ್ನೇ ಸ್ವೀಕರಿಸಿದ್ದರೂ ಅವರಿಬ್ಬರ ದೃಷ್ಟಿ ಬೇರೆಯಾಗಿದೆ. ಅವರವರ ದೃಷ್ಟಿಗನುಸಾರ ಸೃಷ್ಟಿ. ಪಂಪ ಜೈನ ಕವಿ ಆದುದರಿಂದ ಆತನಿಗೆ ಮಹಾಭಾರತವು ಲೌಕಿಕ ಕಾವ್ಯ, ಅರ್ಜುನ ಆತನ ಕಾವ್ಯನಾಯಕ.

ತನ್ನ ದೊರೆ ಅರಿಕೇಸರಿಯನ್ನು ಅರ್ಜುನನೊಂದಿಗೆ ಹೊಂದಿಸಿ ಆತ ಕೃತಿ ರಚಿಸಿದ್ದಾನೆ. ಅಲ್ಲಿ ಸಮಕಾಲೀನ ಇತಿಹಾಸವೂ ಬೆರೆತಿದೆ. ಕುಮಾರವ್ಯಾಸನಿಗೆ ಮಹಾಭಾರತ ಕೃಷ್ಣಕಥೆ. ಆತನೇ ಕಾವ್ಯದ ನಾಯಕ. ಕೃಷ್ಣನ ಮೆಚ್ಚುಗೆಗಾಗಿಯೇ ಕೃತಿ ರಚನೆ. 'ಇದ ವಿಚಾರಿಸೆ ಬರಿಯ ತೊಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮ ವಿಚಾರ ಮಾತವನು' ಎಂದಿದ್ದಾನೆ ನಾರಾಯಣಪ್ಪ. ಪಂಪನದು ಸಂಗ್ರಹ ದೃಷ್ಟಿಯಾದರೆ ಕುಮಾರವ್ಯಾಸನದು ಭಾಗವತ ಪ್ರವಚನಕಾರನದು. ನೀತಿಬೋಧೆ ಕುಮಾರವ್ಯಾಸನ ಕಾವ್ಯದ ಪ್ರಮುಖ ಉದ್ದೇಶಗಳಲ್ಲೊಂದು. ವಿದುರ ನೀತಿಯಂಥ ಪ್ರಸಂಗಗಳು ಓದುಗರಿಗೆ ಬೇಸರತರಿಸುವಂತಿರಬಹುದು. ಆದರೆ ಕುಮಾರವ್ಯಾಸನೇ ಹೇಳಿರುವಂತೆ ಈ ಕಥೆ ಪುಣ್ಯ ಫಲಕಾರಿಯಾಗಿದೆ. ಪಂಪನೂ ಮಹಾಭಾರತದ ಕಥೆ ಲೋಕ ಪೂಜ್ಯವಾದದ್ದೆಂದು ಹೇಳಿದ್ದಾನೆ.[1]

ಮಹಾಭಾರತದ ಕಥೆಯಲ್ಲಿ ಸಭಾಪರ್ವ ಪ್ರಮುಖವಾದ ಒಂದು ಘಟ್ಟ. ಇಲ್ಲಿ ನಡೆಯುವ ಘಟನೆಗಳು ಪಾಂಡವ ಕೌರವರ ಬದುಕಿನಲ್ಲಿ ಮುಂದಿನ ದಾರಿಯನ್ನು ನಿರ್ಣಯಿಸಿದವು. ಧರ್ಮರಾಯನಂಥ ಮಹಾಜ್ಞಾನಿ ಜೂಜಿನಲ್ಲಿಟ್ಟಿದ್ದ ಮೋಹವೇ ಮುಂದಿನ ಅನರ್ಥಗಳಿಗೆ ಕಾರಣವಾಯಿತು. ಅದು ಕ್ಷತ್ರಿಯ ಧರ್ಮವೆಂಬ ನೆಪ ಬೇರೆ. ಆದ್ದರಿಂದ ಕರೆದಾಗಲೆಲ್ಲ ಜೂಜಿಗೆ ಹೋಗಲೇಬೇಕಂತೆ. ಇಂಥ ಒಂದು ಜೂಜಿನಲ್ಲಿ ಧರ್ಮರಾಜನು ತನ್ನ ಸಮಸ್ತ ರಾಜ್ಯ, ಕೋಶ, ತಮ್ಮಂದಿರೆಲ್ಲರನ್ನೂ ಸೋತು ಕೊನೆಗೆ ತನ್ನನ್ನೇ ಪಣವಾಗಿಟ್ಟು ಸೋಲುತ್ತಾನೆ. ದ್ರೌಪದಿಯನ್ನು ಪಣವಾಗಿಡುವುದು ಈ ಆಟದ ಶಿಖರಪ್ರಾಯ ಸಂದರ್ಭ. ಶಕುನಿಯ ಕಪಟತನ(ಮೋಸ)ದಿಂದ ಎಲ್ಲವನ್ನು ಗೆದ್ದುಕೊಂಡ ಕೌರವ ಉಪಾಯದಿಂದ ದಕ್ಕಿಸಿಕೊಳ್ಳಬಹುದಿತ್ತು. ಆದರೆ ವಿಧಿ ಅವನನ್ನು ದ್ರೌಪದಿಯನ್ನು ಕೆಣಕಲು ಪ್ರೇರೇಪಿಸುತ್ತದೆ. ಹೆಣ್ಣನ್ನು ಕೇವಲ ಭೋಗದ ವಸ್ತುವೆಂದು ಬಲವಿದ್ದವರಿಗೇ ಅದು ದಕ್ಕಬೇಕೆಂದೂ ಬಹುಪಾಲು ಮಹಾಭಾರತದ ವೀರರು ನಂಬಿದ್ದರು. ಶಂತುವಿನಿಂದ ಕೀಚಕನವರೆಗೆ ಇಂತಹ ಅನೇಕ ಉದಾಹರಣೆಗಳನ್ನು ನೋಡಬಹುದು. ಭೀಷ್ಮನೂ ಸಹ ತನ್ನ ತಮ್ಮಂದಿರಿಗೆ ಹೆಣ್ಣುಗಳನ್ನು ಬಲತ್ಕಾರದಿಂದ ಅಪಹರಿಸಿ ಮದುವೆ ಮಾಡುತ್ತಾನೆ. ಹೆಣ್ಣಿನಂತೆಯೇ ಭೂಮಿಯನ್ನು ಈ ಕ್ಷತ್ರಿಯ ವೀರರು ಉದ್ದಕ್ಕೂ ನಡೆಸಿಕೊಂಡಿದ್ದಾರೆ. ಅದೇನೆ ಇರಲಿ ಧರ್ಮವಿರೋಧಿ ಕಾಮವು ಮಹಾಭಾರತದ ದುರಂತಕ್ಕೆ ಪ್ರಮುಖ ಕಾರಣವೆನ್ನಬಹುದಾಗಿದೆ. ಕುರುಕುಲ ವಿನಾಶಕ್ಕೆ ಕಾರಣಳಾದವಳು ಒಬ್ಬ ಹೆಣ್ಣು. ಈ ಸನ್ನಿವೇಶವನ್ನು ಸಹ ಕುಮಾರವ್ಯಾಸ ಶ್ರೀಕೃಷ್ಣನ ಮಹಿಮೆಯ ಪ್ರಕಟಣೆಗೆ ಸಾಧನವನ್ನಾಗಿ ಮಾಡಿಕೊಂಡಿದ್ದಾನೆ. ಒಟ್ಟಾರೆ ಸನ್ನಿವೇಶದಲ್ಲಿ ಕಂಡುಬರುವ ಮಾನವನ ಬರ್ಬರತೆ, ದೌರ್ಬಲ್ಯ ಮತ್ತು ಹೆಂಗಸಿನ ಅಸಹಾಯಕ

ಆಕ್ರೋಶಗಳನ್ನು ಕವಿ ತೀವ್ರವಾಗಿ ಮನದಟ್ಟು ಮಾಡಿಕೊಟ್ಟಿದ್ದಾನೆ.

ಪಗಡೆಯಾಟದಲ್ಲಿ ಪಾಂಡವರ ಸಮಸ್ತವನ್ನೂ ಗೆದ್ದ ಕೂಡಲೆ ತನ್ನ ಗೆಲುವನ್ನು ಆಚರಿಸ ತೊಡಗುತ್ತಾನೆ. ದುರ್ಯೋಧನ ದ್ರೌಪದಿಯನ್ನು ಪಾಂಡವರೆದರೆ ವಶಪಡಿಸಿಕೊಂಡರೆ ರಾಜಸುಯಾಗದಲ್ಲಾದ ಅಪಮಾನಕ್ಕೆ ಮುಯ್ಯಿ ತೀರಿಸಿಕೊಂಡಂತಾಗುತ್ತದೆ ಎಂದು ಆತನ ಎಣಿಕೆ. ಅವನ ದುಡುಕುತನದ ಅಪಾಯವನ್ನು ವಿದುರ ಮೊದಲೇ ಸೂಚಿಸುತ್ತಾನೆ. ಆದರೆ ಕೌರವರು ವಿದುರನನ್ನು ಪಾಂಡವ ಪಕ್ಷಪಾತಿ ಎಂದು ಒಣ ಉಪದೇಶಕನೆಂದೂ ಹೀಗಳೆಯುತ್ತಾರೆ. ದ್ರೌಪದಿಯನ್ನು ಸಭೆಗೆ ಕರೆತರಲು ದೂತನನ್ನು ಕಳಿಸಲಾಗುತ್ತದೆ. ದೂತನಿಂದ ಸುದ್ದಿ ತಿಳಿದ ದ್ರೌಪದಿ, ಜೂಜಿನಲ್ಲಿ ಮೊದಲು ತನ್ನನ್ನೇ ಸೋತುಕೊಂಡ ಧರ್ಮರಾಯನಿಗೆ ಆಮೇಲೆ ಹೆಂಡತಿಯನ್ನು ಪಣವಾಗಿಡುವ ಅಧಿಕಾರವಿಲ್ಲವೆಂಬುದು ಹೊಳೆಯುತ್ತದೆ. ಹಿರಿಯರಿಂದ ಈ ಧರ್ಮ ಸೂಕ್ಷ್ಮ ಇತ್ಯರ್ಥವಾಗದೆ ತಾನು ಬರುವುದಿಲ್ಲವೆನ್ನುತ್ತಾಳೆ. ಗೆಲುವಿನ ಮದ ನೆತ್ತಿಗೇರಿದವರಿಗೆ ಧರ್ಮ ಸೂಕ್ಷ್ಮ ತಿಳಿದೀತೆ? ಸ್ವತಃ ದುಶ್ಯಾಸನನೇ ಅವಳಿದ್ದಲ್ಲಿಗೆ ಬಂದು ಒರಟಾಗಿ ಜರೆದು ಮಾತಾಡಿದ. ಆದರೂ ಉತ್ತರ ಕೊಟ್ಟಳು ದ್ರೌಪದಿ. 'ಅನುಜ ಕೇಳೈ ಪುಷ್ಪವತಿಯಾದೆನಗೆ ರಾಜ್ಯಸಭಾ ಪ್ರವೇಶವದನುಚಿತವಲೇ ಹೇಳು' ಎಂದರೆ, ಅವನು ರೂಕ್ಷವಾಗಿ 'ಪುಷ್ಪವತಿಯಾಗಿಲ್ಲಿ ಫಲವತಿಯಾಗು ನಡೆ ಕುರುರಾಜ ಭವನದಲಿ' ಎಂದು ತಿರಸ್ಕರಿಸಿ ಉತ್ತರಿಸುತ್ತಾನೆ. ರಾಜಸೂಯಯಾಗದಲ್ಲಿ ಪುಣ್ಯ ಜಲದಿಂದ ಅಭಿಷೇಕ ಮಾಡಲ್ಪಟ್ಟ ಪವಿತ್ರವಾದ ತುರಬಿಗೆ ಕೈಯಿಕ್ಕಿ ಅವಳನ್ನು ದರದರನೆ ಎಳೆದೊಯ್ದ. ಬೆದರಗಣ್ಣಿನ ಬಿಟ್ಟ ಮಂಡೆಯ, ಕೆದರಿದ ಬಟ್ಟೆಬರೆಗಳ ದ್ರೌಪದಿ ಸಭೆಗೆ ಬಂದಳು. ಅವಳ ಲೋಕ ವೀರರಾದ ಗಂಡರೈವರು ತಲೆತಗ್ಗಿಸಿ ನಿಂತಿದ್ದರು. ಭೀಷ್ಮ, ದ್ರೋಣ, ಧೃತರಾಷ್ಟ್ರ, ವಿದುರರೆ ಮುಂತಾದ ಹಿರಿಯರು ಮೂಕಪ್ರೇಕ್ಷಕರಾಗಿದ್ದರು. ಅವರ ನಿಷ್ಕ್ರಿಯತೆಯನ್ನು ದ್ರೌಪದಿ ಖಂಡಿಸಿದಳು. ಭೀಮನು ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಗೆ ಬರಲು ಅಣ್ಣನ ಅಡ್ಡಿಯಿದೆ ಎನ್ನುತ್ತಾನೆ. 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು' ಎಂದು ದ್ರೌಪದಿ ಚುಚ್ಚಿದಳು. ಆಗಲೂ ಪಾಂಡವರು ಗರ ಹೊಡೆದವರಂತೆ ಮೌನವಹಿಸುತ್ತಾರೆ. ಮಾನ ಸಂರಕ್ಷಣೆ ಸಲುವಾಗಿ ಆರ್ತಳಾಗಿ ದ್ರೌಪದಿಯು ಭೀಷ್ಮ, ದ್ರೋಣ ಮುಂತಾದ ಹಿರಿಯರನ್ನು ಪರಿಪರಿಯಾಗಿ ಬೇಡುತ್ತಾಳೆ. ಯಾರೂ ಅವಳ ನೆರವಿಗೆ ಬರುವುದಿಲ್ಲ. ಆಗ ಗತಿಹೀನರಿಗೆ ಗತಿಯಾದ ಅನಾಥರಕ್ಷಕನಾದ ಕೃಷ್ಣನನ್ನು ಆಕೆ ಭಜಿಸುತ್ತಾಳೆ. ಆಗ ದ್ವಾರಕೆಯಲ್ಲಿದ್ದ ಕೃಷ್ಣನು ಅಲ್ಲಿಂದಲೇ ಹರಸುತ್ತಾನೆ. 'ಅಕ್ಷಯ ಸೀರೆಯಾಗಲಿ' ಎಂಬುದಾಗಿ. ದುಶ್ಯಾಸನನ ರಟ್ಟೆಯ ಶಕ್ತಿ ಉಡುಗಿ ಬೆವರಳಿಯುವತನಕ ಸೆಳೆದ ಸೀರೆಯ ರಾಶಿ ಸಭೆಯಲ್ಲಿ ಬೆರಗು ಕವಿಸುತ್ತದೆ. ಕೂಡಲೇ

ವಿದುರನು ಬಂದು ಅವಳಿಗೆ ದೈವ ಸಹಾಯವಾಗಿದೆ ಎಂದು ಹೇಳಿದಾಗ ದುರ್ಯೋಧನನು ತಾನೇ ಅವಳಿಗೆ ದೈವವೆಂದನು. ಲಜ್ಜೆಗೆಟ್ಟು ಮುಂಜೆರಗೆತ್ತಿ ತನ್ನ ತೊಡೆಯನ್ನು ಅವಳಿಗೆ ತೋರಿಸಿದನು. ಅಗ್ನಿ ಪುತ್ರಯಾದ ದ್ರೌಪದಿಯು 'ನಿನ್ನಳಿವು ತೊಡೆಯಲಿ ಮುಗಿಯುವುದೆಂದು' ಶಾಪ ಹಾಕಿದಳು. ದುಶ್ಯಾಸನನ ರಕ್ತದಿಂದ ತೊಯ್ಯಿಸಿ ಹಲ್ಲ ಬಾಚಣಿಕೆಯಿಂದ ಬಾಚುವವರೆಗೂ ಕೆದರಿದ ಮುಡಿಯನ್ನು ಕಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿದಳು. ಭೀಮನು ಕನಲಿ ಅವಳು ಮಾಡಿದ ಪ್ರತಿಜ್ಞೆಯೆಲ್ಲವನ್ನು ಈಡೇರಿಸುವ ಪಣತೊಟ್ಟನು.

ಹೊಟ್ಟೆಕಿಚ್ಚು ಮನುಷ್ಯನ ಮೂಲ ಸ್ವಭಾವಗಳಲ್ಲೊಂದು. ಇದಕ್ಕಿರುವ ಹಲವು ಮುಖಗಳಲ್ಲಿ ದಾಯಾದಿ ಮಾತ್ಸರ್ಯ ಪ್ರಮುಖವಾದುದು. ವಂಶಪಾರಂಪರ್ಯವಾದ ಭೂಮಿ ಮತ್ತು ಸಂಪತ್ತಿನ ಹಂಚಿಕೆಯೇ ದಾಯಾದಿ ಮಾತ್ಸರ್ಯಕ್ಕೆ ಸಾಮಾನ್ಯವಾದ ಕಾರಣ. ಕೌರವ ಪಾಂಡವರ ಪರಸ್ಪರ ದ್ವೇಷಕ್ಕೆ ಮತ್ತು ಕುರುಕುಲ ವಿನಾಶಕ್ಕೆ ಕಾರಣವಾದದ್ದು ಇಂತಹ ದಾಯಾದಿ ಮಾತ್ಸರ್ಯವೇ. ಆದರೆ ದುರ್ಯೋಧನನ ಮತ್ಸರ ಮಾತ್ರ ಸ್ವವಿನಾಶಕಾರಿಯಾದುದು. ಪಾಂಡವರ ಅಭ್ಯುದಯವನ್ನು ಆತ ಸೈರುಸುತ್ತಿರಲಿಲ್ಲವೆನ್ನುವುದನ್ನೂ ಬೇಕಾದರೆ ಸಹಜವೆನ್ನಬಹುದು. ಆದರೆ ಅವರು ಕಾಡುಪಾಲಾಗಿ ನೆಮ್ಮದಿಯಿಂದಿರುವುದನ್ನೂ ಆತ ಸಹಿಸಲಿಲ್ಲವೆನ್ನುವುದು ಮಾತ್ರ ಮಾನವ ಸ್ವಭಾವದ ವೈಚಿತ್ರಕ್ಕೆ ಉದಾಹರಣೆಯಾಗಿದೆ.

ಪಾಂಡವರನ್ನು ಅಪಮಾನಿಸಲು ಬಂದವರು ಈಗ ಅವರ ಆಶ್ರಯವನ್ನು ಬೇಡುವ ದುಸ್ಥಿತಿಗೆ ತಲುಪಿದರು. ದುರ್ಯೋಧನನ ಧರ್ಮಪತ್ನಿ ಭಾನುಮತಿಯು ಧರ್ಮರಾಯನಲ್ಲಿಗೆ ಬಂದು ಮಾಂಗಲ್ಯ ಉಳಿಸಲು ಅಂಗಲಾಚಿ ಬೇಡಿದಳು ಆಗ ಧರ್ಮರಾಯನು ಹೇಳಿದ ಮಾತು ಅವರೆಲ್ಲರನ್ನೂ ನಾಚಿ ನೀರಾಗುವಂತಿತ್ತು.

"ಭರತ ವಂಶದೊಳವರ ಭಂಗವೇ
ನಿರುತ್ತವೆಮ್ಮದು ನಮ್ಮ ಭಂಗ
ಸ್ಫುರಿಸುವವರದು ತಾವರಿಯರಾವರಿವೆವೀ ಹದನ
ಪರರ ಕಲಹಕೆ ನಾವು ನೂರ್ವೆ
ವರುಗಳಂತಃ ಕಲಹಕದುನೂ
ರ್ವರು ವಿಚಾರಿಸಲೈವರಾವೆಂದನು ಮಹಿಪಾಲ"(ಷ.ಸಾ.ಕೆ.ಮ.57)

ಹೀಗೆ ಹೇಳಿ ಅವರನ್ನು ಸಂತೈಸುವನು. ಅರ್ಜುನನನ್ನು ಕರೆದು ಕೂಡಲೇ ಯುದ್ಧಸನ್ನದ್ಧನಾಗಲು ಹೇಳಿದ. ಆತನ ಅಪ್ಪಣೆಯಂತೆ ಅರ್ಜುನನು ಚಿತ್ರಸೇನನನ್ನು ಹಿಂಬಾಲಿಸುತ್ತಾನೆ. ಗಂಧರ್ವ ನಾಯಕ ಚಿತ್ರ ಸೇನನಿಗಾದರೋ ಪಾಂಡವರ ಈ ವರ್ತನೆ ಆಶ್ಚರ್ಯ ತರಿಸುತ್ತದೆ. ಈ ಪ್ರಸಂಗದಲ್ಲಿ ಕೌರವನ ನೀಚತನ ಮತ್ತು ಧರ್ಮರಾಯನ

ಉದಾತ್ತ ಗುಣಗಳೆರಡನ್ನೂ ಪರಿಚಯ ಮಾಡಿಕೊಡುವ ಮೂಲಕ ಕವಿ ಒಂದೇ ವಂಶಕ್ಕೆ ಸೇರಿದ ಇಬ್ಬರಲ್ಲಿರಬಹುದಾದ ಅಗಾಧ ಅಂತರವನ್ನು ತೋರಿಸಿಕೊಟ್ಟಿದ್ದಾನೆ. ಗದುಗಿನ ಭಾರತದಲ್ಲಿರುವ ನೂರಾರು ಘಟನಾವಳಿಗಳಲ್ಲಿ ಮೇಲೆ ಉದಾಹರಿಸಿರುವ ಪ್ರಸಂಗಗಳು ಕೇವಲ ಪ್ರಾತಿನಿಧಿಕವಾಗಿವೆಯಷ್ಟೇ.

ಪಾತ್ರ ಕಲ್ಪನೆಯ ಜೀವಂತಿಕೆ ಗದುಗಿನ ಭಾರತದ ಮತ್ತೊಂದು ವೈಶಿಷ್ಟ್ಯ. ಒಂದೊಂದು ಪಾತ್ರವೂ ಕುಮಾರವ್ಯಾಸನ ಪ್ರತಿಭೆಯಲ್ಲಿ ಪುನರಾವತರಿಸುವೆ. ಶ್ರೀಕೃಷ್ಣನಿಗೆ ಇಲ್ಲಿ ಕೇಂದ್ರಸ್ಥಾನವಿತ್ತುವುದರಿಂದ ಸಂವಿಧಾನದಲ್ಲಿ ಏಕಸೂತ್ರತೆಯನ್ನು ಕಾಪಾಡಿಕೊಂಡು ಬರಲು ಸಾಧ್ಯವಾಯಿತು. ಮಹಾಭಾರತವು ಕುಮಾರವ್ಯಾಸನಿಗೆ ಕೇವಲ ಕೃಷ್ಣಕಥೆ. ವ್ಯಾಸ, ಪಂಪ, ಕುಮಾರವ್ಯಾಸರಲ್ಲಿ ಎಲ್ಲರೂ ಕೃಷ್ಣನನ್ನು ಭಗವಂತನ ಅವತಾರವೆಂದೆ ಒಪ್ಪಿದ್ದಾರಾದರೂ ಕುಮಾರವ್ಯಾಸನಂತೆ ಶ್ರೀಕೃಷ್ಣನ ಲೀಲೆಗಾಗಿಯೇ ತಾವು ಮಹಾಭಾರತವನ್ನು ರಚಿಸಿದ್ದೇವೆಂದು ಅವರಲ್ಲಿ ಯಾರೂ ಹೇಳಿಲ್ಲ. ಇದಕ್ಕೆ ಕಾರಣವೂ ಇದೆ. 'ವ್ಯಾಸರದು ಇತಿಹಾಸದ ಅಥವಾ ಧರ್ಮದ ಮಹಾಯುಗವಾಗಿ ಪಂಪನದು ಚರಿತ್ರೆಯ ವೀರಯುಗವಾದರೆ ನಾರಣಪ್ಪನದು ಭಕ್ತಿಯುಗ, ವೈಷ್ಣವ ಮತ ಪ್ರಾಬಲ್ಯದ ಕಾಲ. ಮಹಾಭಾರತ ಕಥೆಯನ್ನು ರಚಿಸಿದ ಭಾಗವತ ಕವಿಯಾದ ಕುಮಾರವ್ಯಾಸ ಸಹಜವಾಗಿಯೇ ಕೃಷ್ಣನ ಮಹಿಮೆಯ ಪ್ರಚಾರಕ್ಕೆ ತನಗೆ ಸಿಕ್ಕಿದ ಎಲ್ಲಾ ಸಾಮಗ್ರಿಗಳನ್ನೂ ಅನುಕೂಲಗಳನ್ನೂ ಬಳಸಿಕೊಂಡಿದ್ದಾನೆ.

ಗದುಗಿನ ಭಾರತದಲ್ಲಿ ಮೊದಲ ಬಾರಿಗೆ ಕೃಷ್ಣ ಪ್ರವೇಶವಾಗುವುದು ದ್ರೌಪದಿ ಸ್ವಯಂವರದಲ್ಲಿ. ಅವನನ್ನು ನೋಡಿದ ದ್ರೌಪದಿಗೆ ಭಕ್ತಿ ಭಾವವುಂಟಾಯಿತಂತೆ. ಸ್ವಯಂವರದ ಬಳಿಕ ರಾತ್ರಿ ಪಾಂಡವರು ಉಳಿದಿದ್ದ ಸ್ಥಳಕ್ಕೆ ಬಂದು ಅವರನ್ನು ಹರಿಸಿದನಂತೆ. ಕೃಷ್ಣನು ನಿಮಗೆ ಮಾವನಾಗಬೇಕೆಂದು ಪಾಂಡವರಿಗೆ ಅವರ ತಾಯಿ ಪರಿಚಯಿಸುತ್ತಾಳೆ. ಆಗಲೇ ಅವರೈವರ ರಕ್ಷಣೆಯ ಹೊರೆಯನ್ನು ಅವನಿಗೆ ಕುಂತಿ ವಹಿಸಿಕೊಡುವುದು. ಇಲ್ಲಿಂದ ಮುಂದೆ ಪಾಂಡವರ ಬದುಕಿಗೆ ಸಂಬಂಧಿಸಿದ ಎಲ್ಲಾ ಮಹತ್ವದ ಸಂದರ್ಭಗಳಲ್ಲಿಯೂ ಕೃಷ್ಣ ಕಾಣಿಸಿಕೊಳ್ಳುತ್ತಾನೆ ಮಹಾಭಾರತಯುದ್ಧ ಪ್ರಾರಂಭವಾಗುವವರೆಗೂ ಆತ ಪಾಂಡವರ ಹಿತೈಸಿಯೂ ಬಂಧುವು ಆಗಿದ್ದ. ಆದರೆ ಉದ್ಯೋಗ ಪರ್ವದಿಂದ ಮುಂದೆ ಪಾಂಡವರೇ ಹಿನ್ನೆಲೆಗೆ ಸರಿದು ಎಲ್ಲೆಲ್ಲಿಯೂ ಕೃಷ್ಣನ ಕೈವಾಡವೇ ಗೋಚರಿಸತೊಡಗುತ್ತದೆ.

ಯುದ್ಧಕ್ಕೆ ತೊಡಗಿದ ಮೇಲೆ ಕೃಷ್ಣನು ನೆಪಕ್ಕೆ ಅರ್ಜುನನ ಸಾರಥಿ ನೇರವಾಗಿ ಯುದ್ಧದಲ್ಲಿ ಭಾಗವಹಿಸದಿದ್ದರೂ ಅರ್ಜುನನು ಕೊಂದ ವೀರರೆಲ್ಲರ ಮರಣದ ಹಿಂದೆ ಕೃಷ್ಣನ ಕಾರಸ್ಥಾನವಿರುತ್ತಿತ್ತು. ಕರ್ಣ ಸರ್ಪಾಸ್ತ್ರವನ್ನು ಬಿಟ್ಟಾಗ ಭಗದತ್ತ ವೈಷ್ಣವಸ್ತ್ರವನ್ನು

ಬಿಟ್ಟಾಗ ಮತ್ತು ಸೈಂದವ ವಧೆಯ ಸಂದರ್ಭದಲ್ಲಿ ಅರ್ಜುನನು ಸಾವಿನ ಬಾಯಿಗೆ ಹೋಗಿ ಕೃಷ್ಣನ ಕರುಣೆಯಿಂದ ಪಾರಾಗುತ್ತಾನೆ.

ಕೃಷ್ಣನು ಸರ್ವಶಕ್ತ ಎಂಬಂತೆ ಚಿತ್ರಿಸಿದ್ದರೂ ಅವನ ಮಾನವೀಯ ಸ್ವಭಾವಗಳನ್ನು ಕವಿ ಮರೆಮಾಚಿಲ್ಲ. ಕೌರವ ಪಕ್ಷದ ಯಾವ ವೀರನೂ ನ್ಯಾಯವಾಗಿ ಸಾಯಲಿಲ್ಲ ಎಲ್ಲರೂ ಕೃಷ್ಣನ ಮೋಸಕ್ಕೆ ಬಲಿಯಾದರು. ಒಟ್ಟು ಮಹಾಭಾರತ ಕಥೆಯ ಸಮಗ್ರ ಹಿನ್ನೆಲೆಯಲ್ಲಿ ಯುದ್ಧಪರ್ವಗಳಲ್ಲಿ ನಡೆದ ಘಟನೆಗಳನ್ನು ಪರಿಶೀಲಿಸಿದರೆ ಕೃಷ್ಣನ ನೀತಿ ನಮಗೆ ಅರ್ಥವಾದೀತು. ದುಷ್ಟ ಶಿಕ್ಷೆ; ಶಿಷ್ಟ ರಕ್ಷೆ ಅವನ ನೀತಿ. ಇಷ್ಟಾದರೂ ಭೀಷ್ಮ, ಕರ್ಣ ಮಾತ್ರವಲ್ಲ ಕೌರವನಿಗೂ ಸಹ ಮರಣ ಕಾಲದಲ್ಲಿ ಕಾಣಿಸಿಕೊಂಡು ಸಂತೈಸಿ ಅಭಯವೀಯುತ್ತಾನೆ.

ಕೃಷ್ಣನನ್ನು ಭಗವಂತನೆಂದು ಎಲ್ಲರು ಕರೆಯುತ್ತಾರೆ, ಆದರೆ ಅವನೇ ಅದನ್ನು ಒಪ್ಪುವುದಿಲ್ಲ. ಅರ್ಜುನನಿಗೆ ಈ ಮಾತು ಸ್ಪಷ್ಟಪಡಿಸಿದ್ದಾನೆ. ವಸುದೇವ, ಬಲರಾಮ, ಕುಂತಿಯರಿಗೆ ಸಾಮಾನ್ಯನಂತೆ ವಿನಯವನ್ನು ತೋರಿಸುತ್ತಾನೆ. ಇದೆಲ್ಲಾ ಮಾನವ ವೇಷದಲ್ಲಿರುವ ಭಗವಂತನು ಆಡುವ ಲೀಲೆ ಎನ್ನುತ್ತಾನೆ ನಾರಾಯಣಪ್ಪ. ಒಟ್ಟಿನಲ್ಲಿ "ಆತನೇ ಮಹಾಭಾರತಕ್ಕೆ ಸೂತ್ರಧಾರ; ಅವನಿಲ್ಲದೆ ಭಾರತವಿಲ್ಲ".[2] ಎಲ್ಲರ ಪ್ರವೃತ್ತಿಗಳಿಗೂ ಕಾರಣ, ಎಲ್ಲಾ ಆಶಗಳ ನೆಲೆ.

ಕುಮಾರವ್ಯಾಸ ಭಾರತದಲ್ಲಿ ತನ್ನ ದುರಂತ ರಮಣೀಯತೆಯಿಂದ ಓದುಗರನ್ನು ಆಕರ್ಷಿಸುವ ಪಾತ್ರವೆಂದರೆ ಕರ್ಣನದು. ಮಹಾಭಾರತದ ಇನ್ನುಳಿದ ವೀರರಿಗೂ ಕರ್ಣನಿಗೂ ಇರುವ ವ್ಯತ್ಯಾಸ ಅಗಾಧವಾದುದು. ಕೌರವನಲ್ಲಿ ಬಂದು ಸೇರುವವರೆಗೆ ಕರ್ಣ ಅನಾಥ. ಬಳಿಕ ಅವರಿಬ್ಬರೂ ಒಂದು ಜೀವ ಎರಡು ದೇಹ ಎಂಬಂತಿದ್ದರಂತೆ. ಬದುಕಿನ ಸುಖ ದುಃಖಗಳೆರಡರಲ್ಲಿಯೂ ಸಮಭಾಗಿಗಳಾಗುತ್ತಾರೆ. ಕರ್ಣ ದುರ್ಯೋಧನರ ಸ್ನೇಹದ ನಿಜವಾದ ಪರಿಚಯವಾಗುವುದು ಕೃಷ್ಣನ ಕಾರಣದಿಂದ. ಉದ್ಯೋಗ ಪರ್ವದಲ್ಲಿ ಬರುವ ಕೃಷ್ಣ–ಕರ್ಣರ ಸಮಾಗಮವು ಗದುಗಿನ ಭಾರತದ ಶ್ರೇಷ್ಠ ಸನ್ನಿವೇಶಗಳಲ್ಲೊಂದು. ಕರ್ಣನೊಬ್ಬನನ್ನು ಹಾಳುಗೆಡವಿದರೆ ದೊಡ್ಡ ಆತಂಕವೊಂದನ್ನು ನಿವಾರಿಸಿದಂತೆನ್ನಿಸಿರಬೇಕು ಕೃಷ್ಣನಿಗೆ ಅದಕ್ಕಾಗಿ ಕರ್ಣನ ಜನ್ಮ ರಹಸ್ಯವನ್ನು ತಿಳಿಸುತ್ತಾನೆ. ಇದಾದ ಕೆಲವು ದಿವಸಗಳಲ್ಲಿಯೇ ತಾಯಿಯಾದ ಕುಂತಿಯು ಕರ್ಣನಿಂದ ತನ್ನ ಮಕ್ಕಳ ಪರವಾಗಿ ಭರವಸೆ ಪಡೆಯುತ್ತಾಳೆ. "ಕುಂತಿಯು ಮಾತ್ರ ಕರ್ಣನ ಅಂಗಡಿಗೆ ಹೋಗಿ ತನ್ನ ತಾಯ್ತನವೆಂಬ ನಗದು ಹಣವನ್ನು ಕೊಟ್ಟು ಸರಳ ಭಿಕ್ಷೆಯನ್ನು ಕೊಂಡುಕೊಂಡೇ ಬಂದು ಬಿಟ್ಟಳು"[3] ಎಂಬ ವಿಮರ್ಶೆ ಈ ಸನ್ನಿವೇಶವನ್ನು ಯಥಾರ್ಥವಾಗಿಯೇ ವಿವರಿಸಿದೆ. ಕವಿ ಇನ್ನೂ ಸ್ವಲ್ಪ ಮಾನವೀಯವಾಗಿ ಸಂಬಂಧವನ್ನು

ಚಿತ್ರಿಸಬಹುದಿತ್ತು.

ಗದುಗಿನ ಭಾರತದ ಯುದ್ಧ ವರ್ಣನೆಗಳು ಕುಮಾರವ್ಯಾಸನು ಬದುಕಿದ ವೀರಯುಗಕ್ಕೆ ತಕ್ಕಂತಿವೆ ಎನ್ನುತ್ತಾರೆ ವಿದ್ವಾಂಸರು. ಅದರಂತೆ ಅವನು ಬದುಕಿದ್ದ ಕಾಲದ ಅನೇಕ ಉತ್ತರಕುಮಾರನಂತಹ ಅರಸುಗಳೂ ಅವನ ಬಣ್ಣನೆಗೆ ತುತ್ತಾಗಿದ್ದಾರೆನ್ನಬೇಕಾಗುತ್ತದೆ. ಪಂಪನಂತೆ ಕುಮಾರವ್ಯಾಸನು ಯಾವ ಯುದ್ಧದಲ್ಲಿಯೂ ಭಾಗವಹಿಸಿದ್ದವನಲ್ಲ. ಕೆಲವು ಸಂಶೋಧಕರು ಅವನನ್ನು ಗಜಸೇನಾಪತಿ ಮಾಡಲು ಹೆಣಗಿದ್ದಾರೆ. ಅವನ ಕಾವ್ಯದಲ್ಲಿ ಇದಕ್ಕೆ ಆಧಾರವಿಲ್ಲ. ರಾಜಾಶ್ರಯಕ್ಕೆ ಇಂಥ ಸ್ವತಂತ್ರ ಭಕ್ತಕವಿ ಒಗ್ಗಿಕೊಂಡಿರಲಾರ. ಸ್ವತಃ ತನ್ನನ್ನು 'ಯೋಗೀಂದ್ರ'ನೆಂದು ಆತ ಕರೆದುಕೊಂಡಿದ್ದಾನೆ. ಆದರೂ ಕುಮಾರವ್ಯಾಸನಂತೆ ಭೀಕರ ರಮ್ಯವಾದ ಯುದ್ಧ ವರ್ಣನೆಗಳನ್ನು ಕೊಟ್ಟ ಕವಿಗಳು ಕನ್ನಡದಲ್ಲಿ ಯಾರೂ ಇಲ್ಲವೆನ್ನಬಹುದಾಗಿದೆ. ವಿಜಯನಗರ ವೈಭವವು ತುತ್ತತುದಿಯಲ್ಲಿದ್ದ ಆ ಕಾಲದಲ್ಲಿ ಇಡೀ ದಕ್ಷಿಣ ಭಾರತವೇ ಶೌರ್ಯ ಪ್ರತಾಪಗಳ ಹೆಮ್ಮೆಯಲ್ಲಿ ಮೆರೆಯುತ್ತಿತ್ತು. ತಾನು ಜೀವಿಸಿದ್ದ ಕಾಲವೇ ಕವಿಯ ಅನುಭವದ ಮೂಲದ್ರವ್ಯವಾದುದರಿಂದ ಕುಮಾರವ್ಯಾಸ ಭಾರತವು ವೀರರಸ ಪ್ರಧಾನವಾಗದೇ ಗತ್ಯಂತರವಿಲ್ಲ. ಯುದ್ಧ ವರ್ಣನೆಗೆ ಕುಮಾರವ್ಯಾಸನೇ ಯುದ್ಧದಲ್ಲಿ ಭಾಗವಹಿಸಿರಬೇಕಿಲ್ಲ. ತಾನು ಜೀವಿಸಿದ್ದ ಕಾಲಕ್ಕೆ ತೀವ್ರ ಸಂವೇದನಶೀಲನಾಗಿದ್ದರೆ ಸಾಕು. ಗದುಗಿನ ಭಾರತದ ಕಥಾ ರಚನೆ, ಪಾತ್ರ ಪರಿಪೋಷಣೆಗಳು ಎಷ್ಟೇ ಉನ್ನತ ಮಾದರಿಯಲ್ಲಿದ್ದರೂ ಅದಕ್ಕೆ ಹಿನ್ನೆಲೆಯಾಗಿ ವ್ಯಾಸಭಾರತ, ಸಂಸ್ಕೃತ ಹಾಗೂ ಕನ್ನಡದ ನಾಟಕಗಳಿವೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅಷ್ಟಾದಶ ವರ್ಣನೆಗಳ ವ್ಯಾಮೋಹಕ್ಕೆ ಸಿಲುಕದೆ ಇರುವ ಸಮರ್ಥ ಕವಿಗಳಲ್ಲಿ ಕುಮಾರವ್ಯಾಸನು ಅಗ್ರಗಣ್ಯ. ಪ್ರಕೃತಿ ವರ್ಣನೆಯಲ್ಲಿ ಅಂತೂ ಆತ ಅನಾಸಕ್ತ. ಆದರೆ ಮಾನವ ಜೀವನದ ಹಾಸು ಹೊಕ್ಕಾಗಿ ಪ್ರಕೃತಿಯನ್ನು ಆತ ಚೆನ್ನಾಗಿ ಬಳಸಿಕೊಂಡಿದ್ದಾನೆ. ಭೀಷ್ಮ, ಕರ್ಣರ ಅವಸಾನ ಸಮಯದಲ್ಲಿನ ಸೂರ್ಯಾಸ್ತ ಪಾಂಡುವಿನ ಅಕಾಲ ಮೃತ್ಯುವಿಗೆ ಕಾರಣವಾದ ವಸಂತ ಋತುವಿನ ವರ್ಣನೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಉಳಿದ ಕವಿಗಳಂತೆ ಹೆಣ್ಣಿನ ಅಂಗೋಪಾಂಗಗಳ ವರ್ಣನೆಗೆ ಆತ ಸಾಮಾನ್ಯವಾಗಿ ತೊಡಗುವುದಿಲ್ಲವಾದರೂ ಸ್ವಯಂವರದ ವಧುವಾಗಿದ್ದ ದ್ರೌಪದಿ ಅರ್ಜುನನಲ್ಲಿ ಪ್ರಣಯ ಬೀಕ್ಷೆಗೆ ಬಂದ ಊರ್ವಶಿಯರ ವರ್ಣನೆಗಳು ಮನಸ್ಸು ಮಾಡಿದರೆ ಆತ ಎಂಥ ರಸಿಕ ಶಿಖಾಮಣಿಯಾಗಬಲ್ಲನೆಂಬುದಕ್ಕೆ ನಿದರ್ಶನವಾಗಿವೆ.

ಆಧಾರ ಗ್ರಂಥಗಳು :

1. ಷಟ್ಪದಿ ಸಾಹಿತ್ಯ– ಕೆ.ಮರಳಿಸಿದ್ದ ಪುಟ ಸಂಖ್ಯೆ 49,57&59
2. ಕುವೆಂಪು–ಕುಮಾರವ್ಯಾಸ ಪ್ರಶಸ್ತಿ ಪುಟ ಸಂಖ್ಯೆ 227
3. ವಿ.ಸೀತಾರಾಮಯ್ಯ– ಕುಮಾರವ್ಯಾಸ ಪ್ರಶಸ್ತಿ ಪುಟ ಸಂಖ್ಯೆ 183
4. ಎಸ್. ವಿ. ರಂಗಣ್ಣ–ಕುಮಾರವ್ಯಾಸ ಪ್ರಶಸ್ತಿ ಪುಟ ಸಂಖ್ಯೆ 73&347

***

ಪಾಟೀಲ ಕಲ್ಲನಗೌಡ 'ಸಾಗಿ ಬರುತಿದೆ ಬೆಳಗು' ಕವನ ಸಂಕಲನದ ವಿಭಿನ್ನ ನೆಲೆಗಳು

1 ಡಾ. ರೆಹಮಾನ ಆಯ್. ಗೊರಜನಾಳ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕೆ.ಎಲ್.ಇ. ಸಂಸ್ಥೆಯ,
ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ,
ಧಾರವಾಡ–580008
rahimangorajanal28@gmail.com

ಹೊಸಗನ್ನಡ ಸಾಹಿತ್ಯದಲ್ಲಿ ಕಾವ್ಯವು ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ.ಕವಿ, ಸಹೃದಯ, ಕೃತಿಗಳನ್ನು ಓದುವುದರಿಂದ ಅನುಭವ, ಅವಿನಾಭಾವ ಸಂಬಂಧ, ಮನಸ್ಸಿಗೆ ಆನಂದವನ್ನುಂಟು ಮಾಡುತ್ತವೆ. ಇತ್ತೀಚಿನ ಕಾವ್ಯಗಳಲ್ಲಿ ನಿಸರ್ಗ, ವಾಸ್ತವಿಕತೆ, ಅನುಭವ, ಆಚರಣೆಗಳು, ಸಂಬಂಧಗಳು, ಬೆಳಕು, ಸಾಮಾಜಿಕತೆ, ಬದುಕು, ಹೀಗೆ ಹತ್ತು ಹಲವಾರು ವಿಷಯಗಳು ಕಂಡು ಬರುತ್ತವೆ.ಸತ್ಯಗಳು, ಅಂತರಂಗ, ಭಾವನೆಗಳ ಸ್ಪಂದನೆಗಳು, ಬಯಕೆಗಳು, ಆತ್ಮ ನಿವೇದನೆ, ಆಧ್ಯಾತ್ಮಿಕತೆ, ಕನಸ್ಸು, ಕರುಣೆ, ಮಂತ್ರಿಮಂಡಲ, ಜೀವನದಲ್ಲಿ ಸುಖ ದುಃಖಗಳು, ಕವಿಯ ಪರಿಕಲ್ಪನೆಯೊಂದಿಗೆ ಕಾವ್ಯವು ರಚನೆಗೊಂಡಿರುತ್ತದೆ.

ಸಮಾಜದ ರಾಜಕೀಯ ನಾಯಕರು, ಸಮಾಜದ ಸುಧಾರಣೆಗಳು, ಗ್ರಾಮ, ಜನಸೇವೆ, ಶಿಕ್ಷಣ, ಅಸಹಾಕರಿಗೆ ಸಹಾಯ, ಮುಂತಾದ ವಿಚಾರಗಳಿವೆ. ಲೋಕದಲ್ಲಿ ಪ್ರತಿಯೊಂದು ಸೃಷ್ಟಿಯು ದೇವರ ಕರುಣೆಯಾಗಿದೆ,ಅರಿವಿನ ಸ್ಥಾಪನೆಯನ್ನು ಬಯಸಿ ಪಡೆಯುವ ಹಂಬಲವಿದೆ, ಹೀಗೆ ಪಾಟೀಲ ಕಲ್ಲನಗೌಡರ "ಸಾಗಿ ಬರುತಿದೆ ಬೆಳಗು" ಕವನ ಸಂಕಲನವು ಅದ್ಭುತವಾದ ಕೃತಿಯಾಗಿದೆ. ಪರಿಸರದಿಂದ ಚೈತನ್ಯವನ್ನು ಪಡೆದು ಆನಂದದೊಂದಿಗೆ ಜ್ಞಾನದ ಬೆಳಕಿನಲ್ಲಿ ಶಿಕ್ಷಣದ ಸಹಾಯದೊಂದಿಗೆ ಹಲವಾರು ವಿಷಯಗಳು

ಒಳಗೊಂಡಿವೆ. ಹೀಗೆ ಅಂತರಾತ್ಮದ ಪ್ರಾರ್ಥನೆಯೊಂದಿಗೆ ಹೃದಯದ ಭಾವನಾಲೋಕ. ಒಟ್ಟಾರೆಯಾಗಿ ಪಾಟೀಲ ಕಲ್ಲನಗೌಡರು ಸಾಗಿ ಬರುತಿದೆ ಬೆಳಗು ಕವನ ಸಂಕಲನವು ಅಂತರಂಗದ ಅಳಲು, ತ್ರಿವಿಧ ಸತ್ಯಗಳು ಸ್ಪಂದನ, ಕಿರಿಯನಾಗಬಯಸಿ ಕರುಣಿಸಿ ಕೈ ಹಿಡಿದಿತ್ತು. ಮಂತ್ರಿಮಂಡಲ, ಸುಖ,ದುಃಖ ಮುಂತಾದ ಕವಿತೆಗಳು ಒಂದಕ್ಕೊಂದು ಉತ್ತಮವಾಗಿವೆ. ಹೀಗೆ ಕವಿಯ ಅನುಭವ ವಿಚಾರ ಧಾರೆಗಳು, ಪ್ರಕೃತಿ, ಸಾಧನೆ ಹಲವಾರು ವಿಷಯಗಳು ಇರುವುದನ್ನು ನೋಡಬಹುದಾಗಿದೆ.

ಪ್ರಮುಖ ಪದಗಳು: ಹೊಸಗನ್ನಡ, ಕಾವ್ಯ, ಮನಸ್ಸು, ಆನಂದ, ಬೆಳಗು, ಸಮಾಜ, ಶಿಕ್ಷಣ, ಕನಸ್ಸು, ಸತ್ಯಗಳು, ಸ್ಪಂದನೆ ಮುಂತಾದವುಗಳು.

ಪ್ರಸ್ತಾವನೆ:

ಹೊಸಗನ್ನಡ ಸಾಹಿತ್ಯದಲ್ಲಿ ಕಾವ್ಯದಲ್ಲಿನ ರಸಾನುಭವ, ವಿಷಯ ವಸ್ತು, ಸಾಮಾಜಿಕ, ರಾಜಕೀಯ, ಧಾರ್ಮಿಕ, ಆಧ್ಯಾತ್ಮಿಕ ಚಿಂತನೆಯೊಂದಿಗೆ ಇರುವುದನ್ನು ಕಾಣಬಹುದಾಗಿದೆ. ಹೀಗೆ ಇತ್ತೀಚಿಗೆ ಕಾವ್ಯದಲ್ಲಿಯೂ ಸಹ ವಾಸ್ತವಿಕೆ, ನೈಜವಾದ ಸ್ಪಂದನೆಯ ಅನುಭವದ ವಿಚಾರಗಳು ಕವಿತೆಯಲ್ಲಿ ಅಭಿವ್ಯಕ್ತಗೊಂಡಿವೆ. ನಿಸರ್ಗದ ಸತ್ಯಗಳು, ಆಧ್ಯಾತ್ಮಿಕತೆಯೊಂದಿಗೆ ಬದುಕಿನ ಆಧಾರವಾದ ಆನಂದದ ತರಂಗದ ಪ್ರತಿಬಿಂಬವಾಗಿದೆ. ಅಂತರಂಗದ ಅಳಲು, ದಯೆ, ಕರುಣೆ, ಅರುಹು, ಬೆಳಕು, ಜೀವನದ ಜೀವಕ್ಕೆ ಪರಿಸರದಿಂದ ಚೈತನ್ಯತೆಯೊಂದಿಗೆ ಕಂಡು ಅನುಭವದು ಗುಚ್ಚವಾಗಿದೆ. ಕಾಲದ ಅವಕಾಶದಿಂದ ಜೀವದ ನೀರಿಕ್ಷಣೆಯಿದೆ. ಅರಿವಿನಿಂದ ಸ್ಪಂದನೆ ಭಾವ ಬದುಕು, ಚೇತನ, ತೃಪ್ತಿಯನ್ನು ಬಯಸುವ ಭಾವನೆಗಳಿವೆ. ಬಯಸುವಿಕೆಯಿಂದ ಯೋಗದಿಂದ ಸರಿಹೋಗಬಹುದು ಎಂಬ ಆಶಯವಿದೆ, ಭಾವನೆಗಳಿಂದ ಆತ್ಮ ನಿವೇದನೆ ಯಜ್ಞಾನ ಭವ, ಮಮಕಾರದೊಂದಿಗೆ. ಜೀವಿಸಲು ಪ್ರಯತ್ನಿಸುವುದಾಗಿದೆ. ಅರಿವಿನಿಂದ ತನು, ಮನ, ಅಂತಃಕರಣದಿಂದ ಕಾಯಕವನ್ನು ಮಾಡುವುದಾಗಿದೆ. ಕರುಣಿಸು ಕೈಹಿಡಿದೆತ್ತು, ಮಂತ್ರಿಮಂಡಲ, ಸುಖ,ದುಃಖ ಎಂಬ ಮುಂತಾದ ಕವನಗಳು ಪ್ರಾಮುಖ್ಯತೆಯನ್ನು ಪಡೆದಿವೆ.

"ಸ್ವಾತಂತ್ರ್ಯ ಹೋರಾಟಗಾರರಾಗಿ ಕನ್ನಡನಾಡಿನ ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಂಪೂರ್ಣ ಸೇವಾ ಮನೋಧರ್ಮದಿಂದ ಕಾರ್ಯಗೈದು, ಸಚಿವರಾಗಿದ್ದು, ಸರಳ ಸಾಮಾನ್ಯ ಜೀವನದ ಆದರ್ಶವನ್ನು ಪಾಲಿಸಿದವರಲ್ಲಿ ಶ್ರೀಕಲ್ಲನಗೌಡ ಪಾಟೀಲರು ಅಗ್ರ ಪಕ್ತಿಯಲ್ಲಿದ್ದಾರೆ. ಇವರಿಗೆ 82 ವರ್ಷ ಈ ವಯಸ್ಸಿನಲ್ಲಿಯೂ ಸ್ವಗ್ರಾಮದಲ್ಲಿ ಇಂದಿಗೂ ವಿಧಾಯಕ ಕಾರ್ಯದಲ್ಲಿ ತೊಡಗಿರುವ ಅವರು ತಮ್ಮ "ನೆನಪಿನ ಒರತೆಯ ಸಂಪುಟಗಳ ಮೂಲಕ ಆತ್ಮ ಚರಿತ್ರೆಯನ್ನು ನೀಡುವುದು ನಾಡಿನ ಚರಿತ್ರೆಯ ದೃಷ್ಟಿಯಿಂದಲೂ ಮಹತ್ವದ

ಸಂಗತಿಯಾಗಿದೆ. ದೇಶಭಕ್ತರ ಜೀವನ ಚರಿತ್ರೆ, ಗ್ರಾಮ ಸುಧಾರಣೆ, ಶಿಕ್ಷಣ ಇತ್ಯಾದಿ ವಿಷಯಗಳನ್ನು ಕುರಿತು ಅವರು ಆಗಾಗ ಗ್ರಂಥ ರಚನೆ ಮಾಡುತ್ತಲೇ ಬಂದಿದ್ದಾರೆ. ಹೀಗೆ ತಮ್ಮ ವಿಚಾರಗಳು, ಆಸೆ, ಬಯಕೆ, ಆಕಾಂಕ್ಷೆ ಹಂಬಲ ಮುಂತಾದ ವಿಷಯಗಳು ಕಂಡು ಬರುತ್ತವೆ.

ಪಾಟೀಲ ಕಲ್ಲನಗೌಡರು "ಸಾಗಿ ಬರುತ್ತಿದೆ ಬೆಳಗು" ಎಂಬ ಕವನ ಸಂಕಲನದಲ್ಲಿ ಒಟ್ಟು 28 ಕವನಗಳಿವೆ. ಭಾಗ–1ರಲ್ಲಿ ಹದಿನೆಂಟು ಕವನಗಳು ಭಾಗ–2ರಲ್ಲಿ ಹತ್ತು ಕವನಗಳು ಒಳಗೊಂಡಿವೆ. ಈ ಕೃತಿಯುಅತ್ಯಂತಉತ್ತಮವಾದ ವಿಷಯಗಳನ್ನು ಒಳಗೊಂಡದಾಗಿದೆ.

1. ತ್ರಿವಿಧ ಸತ್ಯಗಳು:

ನೀರಿನ ವಾಸ್ತವದ ಸತ್ಯದ ಅರಿವೇ ವ್ಯವಹಾರಿಕ ಸತ್ಯವಾಗಿದೆ. ಹೈಡ್ರೋಜನ ಹನ್ನೆರಡು ಆಕ್ಸಿಜನ ಒಂದು ಸಂಯೋಗವೇ ನೀರು ಎಂಬುದು ವೈಜ್ಞಾನಿಕ ಸತ್ಯ ಕಲ್ಲಜ್ಜನು ಹೇಳುತ್ತಾನೆ. ಕ್ಷಣಿಕ ಸುಖ, ಮೇಲ್ಮಟ್ಟದ ಅರಿವಿನ ಸುಖಾಧಾರವೇ, ಶಾಶ್ವತ ಆನಂದದ ಉನ್ನತ ತರಂಗದ ಪ್ರತಿಬಿಂಬವೆ ಪರಬ್ರಹ್ಮ ಎಂಬ ಕಲ್ಲಜ್ಜನ ನುಡಿಯಾಗಿದೆ. ಸೂರ್ಯನ ನಂತರ ರಾತ್ರಿ ಎಂಬುದು ಭೂಮಿಯು ರವಿಯ ಸುತ್ತು ತಿರುಗುವುದು ಆಂತರ್ಯದ ಜ್ಯೋತಿ ಎಂಬುದು ಆಧ್ಯಾತ್ಮದ ಸತ್ಯವಾಗಿದೆ. ಸತ್ಯ ನಿಜ ಎಂಬುವುದು ಭ್ರಮಿಸುವುದು ಸಹಜ ಸಮಯ, ಸನ್ನಿವೇಶ ಮೂಲಾಧಾರವೇ ಸತ್ಯ, ಆಧ್ಯಾತ್ಮದ ಸತ್ಯವಾಗಿದೆ.

2. ಅಂತರಂಗದ ಅಳಲು:

ದಯೆಯನ್ನು ತೋರಿದಾಗ ಮುನಿಸಿನಿಂದ ಓಲಾಡುತ್ತಿದ್ದೇನು, ಮದ, ಮುನಿಸು ಮರತೆ ಮಹಾದಯೆಯು ಒಳ ಹೊರ ಅರಿತಂದು ಭವ ಬಂಧನ ನಿವಾರಣೆ ನಾ ನೀ ಎಂಬುದು ಬಂಧನದ ಮೂಲ, ಅರುಹಿನ ಮರೆವೆಲ್ಲ ಬೆಳಕಿನ ಬೆಸುಗೆಯ ತಿರುಳು ಸತ್ಯವೇ ನಿತ್ಯವಾಗಿದೆ. ಅಹಂ ಬ್ರಹ್ಮಾಸ್ಮಿ, ಬ್ರಹ್ಮೋಹಂಗಳೆರಡೂ ಬುದ್ಧಿಯ ಭ್ರಮೆಯಾಟವಾಗಿವೆ. ಬದ್ಧ ಜೀವನದ ಮಾಯದಾಟ, ಚಿತ್ರ, ಅರಿಯದೆ ತಾನೆ ಎಲ್ಲವನ್ನು ಎಂಬ ತಿಳುವಳಿಕೆಯಾಗಿದೆ. ಮಮಕಾರ, ಮೋಹ, ಕೀಳುಭಾವ, ಮನದ ಮಾಯೆ, ಕಾರುಣ್ಯದ ಕರುಣೆಯಾಗಿದೆ. ಅರಿವು–ಮರೆವು ಜೀವಕ್ಕೆ ಪ್ರಾಣದ ಉಸಿರು ನಿನ್ನನ್ನು ನೀ ಅರಿವುದು ತಾಯಿ ಬೇರು ಸೈ ಎಂಬ ಆಶಯವಿದೆ. ಮೂಕ, ವಾಚಾಳಿ, ಒಂದೆಡೆಯಾದರೆ, ಅರಿಯದೆ, ಅರಿಯದನೆಂಬ ಹಿರಿಗೇಡಿತಾ ನಾನಾಗಲಾರೆ ಎಂಬುದು ಸತ್ಯವು ಅಡಗಿದೆ.

ಸ್ವಾಭಿಮಾನ, ಸ್ವಾನುಭಾವಗಳಲ್ಲಿ ದುರಂಹಕಾರ, ಜ್ಞಾನ ಎಂದು ದಾನವಿತ್ತು. ಕರುಣೆಯನ್ನಿತ್ತು ಮೌನವಾಗಿ ಮದವನ್ನು ತೊಡೆದು ಹಾಕುವುದಾಗಿದೆ. ಬದ್ಧ, ಮುಗ್ಧ, ಜೀವನ ಶುದ್ಧ, ಸದ್ದು ಸೋಲ್ಲು, ಗುದ್ದು ಗುಲ್ಲುಗಳಲ್ಲಿ, ಮುದ್ದು ಮೋಹದಲ್ಲಿ ಮುಳುಗಿಸಿ

ಎಬ್ಬಿಸಲಾರೆ ಯಾಕಲ್ಲಜ್ಜ ಎಂಬ ಕವಿಯ ಆಶಯ ನುಡಿಯಾಗಿದೆ. ಶುದ್ಧ ಪ್ರಬುದ್ಧ, ಪ್ರಸಾದ ಕರುಣೆ, ನಿದ್ದೆ ನೀರಡಿಕಿಲ್ಲದೆ ಕಾದು ಕುಳಿಹೆ, ತಿದ್ದಿ, ತೀಡಿ ಅಂತರಂಗದ ಗುಣಗಳು ಎಂಬ ಪರಿವರ್ತನೆಯ ಭರವಸೆಯಿದೆ ದೇವಾ ಅಂತರಂಗವನ್ನು ಶುದ್ಧ ಮಾಡಿ ಎಂಬ ಭಕ್ತಿಯ ವಿನಂತಿಯು ಇದೆ. ಯಾವ ಗಳಿಗೆ, ಸಮಯ, ಪರಿ, ಪರಿಸರ, ತಾಣದಲ್ಲಿ, ಸನ್ನೀವೇಶದಲ್ಲಿ ಅರಿಯದೆ ನಿನ್ನೊಲುಮೆ ಬಂದಿತೆಂದು ಅರಿಯದೆ ಇರುವ ಕಂದನಾದೆ ಎಂದು ಪಶ್ಚಾತಾಪದ ಪ್ರಜ್ಞೆಯನ್ನು ಕುರಿತು ವಿವರಿಸುತ್ತಾರೆ. ಕಂಡವರಿಗೆ ಕೈ ಮುಗಿದೆ. ಬೆನ್ನ ಬಿದ್ದೆ, ಎಲ್ಲರಿಗೂ ಶರಣೆಂದೆ ಮಂದಮತಿ ಎಂದು ಹರಸು ಕಲ್ಲಜ್ಜ ಎಂಬ ಪ್ರಾರ್ಥನೆಯಿದೆ. “ಕಾಲ ಕಾರಣಗಳ ಮೀರಿ ಆಕಾಶ ಅವಕಾಶಗಳಾಚೆ ಎಲ್ಲಿಯೋ ಎಲ್ಲೆಲ್ಲಿಯೂ ನೀನೇ ನೀನಾಗಿರುತಿರೆ. ಅಣುರೇಣು ವಿಕಸಿಸಿದ ವಿಶ್ವವವನ್ನೆಲ್ಲಚಿಲಗುತಿಹನಿನ್ನ, ಚೈತನ್ಯವರಿಯದ ಕರಡು ಕುನ್ನಿ ನಾ ಕೆಟ್ಟಿನ ಕಟಾಕಲ್ಲಜ್ಜತಾಣ ವೆಲ್ಲಿಹವೆನಗೆ? ನಾನೆಂಬ ಅಹಂಭಾವವೇ ತುಂಬಿ ತುಳುಕುವದಲ್ಲೆಡೆ ನೀನೆಂಬದೆ ಸತ್ಯ ಉಳಿದೆಲ್ಲವೂ ಮಿಥ್ಯವೆಂಬುದರಿಯದಾದೆ ನಾ ಕಲ್ಲಜ್ಜ. ಕರಗುತಿದೆ ದೇಹ ಕೊರಗುತ್ತಿದೆ ಜೀವ, ಬಳಲುತಿದು ಮನವು ತೊಳಲುತಿದೆ ಆತ್ಮ ಕಳೆಯುತಿದೆ ಕಾಲವಿನ್ನು ನಿನ್ನ ನೆರೆನಂಬದೆ, ಬರವ ನೀರಿಕ್ಷಿಸುತ್ತ ಆತ್ಮನುದ್ದರಿಪ ಆತ್ಮನನು ಕಲ್ಲಪ್ಪ”[2]. ಹೀಗೆ ಕಾಲ ಅವಕಾಶ ಚಿತ್ತ, ಜೀವ ಕುರಿತು ತಿಳಿಯಬಹುದಾಗಿದೆ.

ಏಕತ್ವ, ದ್ವಂದ್ವತ್ವ, ಅನೇಕತ್ವ ಇವುಗಳಲ್ಲಿ ಮನದ ತುತ್ತ ತುದಿಯ ತಾಣದಲ್ಲಿ ಚಿತ್ತದ ಕಲಾತೀತ ನಿತ್ಯ ಸತ್ಯವಾಗಿದೆ. ಹರಸಿ ಕೃಪೆ ಮಾಡಿಕರ ಹಿಡಿದು ಎತ್ತಿಕೊಳ್ಳು, ಮರಣದ ಮಹಾನವಮಿ ಕಾಣುವ ಪರಿಯಲ್ಲಿ ಕರುಣಿಸು ಶರಣು ಶರಣು ಎಂಬೆ ಎಂಬ ಪ್ರಾರ್ಥನೆಯಿದೆ. ಅಂತರಂಗದ ಅಳಲು ಕುದಿಯುತ್ತಿದೆ. ತಂಪಾಗಿರಲಿ ಮುರಳಿಯ ಸುಧೆ ಪರಮಾತ್ಮನ ಕರುಣೆಗೆ ಹಂಬಲಿಸಿ ಅಂತರಾತ್ಮದಲ್ಲಿ ಸೂರ್ಯನ ಬೆಳಕು ಬರಲಿ ಎಂಬ ಅರ್ಥವಿದೆ. ಅಪಾರ ಅನಂತ ಅಗತ್ಯ ಅಗೋಚರ ನಿತ್ಯ ಸತ್ಯವನ್ನು ತೋರಿಸು ಕರುಣಿಸುದೇವನೆ. ಬಡಪಾಯಿ ನಂಬಿ ಕರುಣ ರಸವನ್ನು ನೀಡಿ ಕರೆದುಕೊಳ್ಳು ಎಂಬುದು ನೋಡಬಹುದಾಗಿದೆ. ಡಾ.ಸಬಿತಾ ಮರಕಿಣಿಯವರ ಹೆಸರಿಡದ ಕವನ ಸಂಕಲನದಲ್ಲಿ “ಹೃದಯ ಭಾರ–ನನ್ನ ಹೃದಯ ಭಾರವಾಗಿತ್ತು. ಎತ್ತಲಾರದಷ್ಟು, ಹೊರಲಾರದಷ್ಟು ಅದರಲ್ಲಿ ತುಂಬಿತ್ತು. ಬರೆನೋವು, ಹೇಳಲಾರದಷ್ಟು ಸಿಕ್ಕಿ ಹಾಕಿಕೊಂಡಿತ್ತು. ಕೈ ಹಾಕಿ ಎಳೆದರೂ ಹೊರಬಾರದಿತ್ತು. ಬೇಗುದಿಯ ಹಾಗೆ ಉಳದಿತ್ತು. ಕಣ್ಣು ತೆರೆದಿಟ್ಟಾಗಲೂ ಮನವು ಮುಸುಕು ಹಾಕಿತ್ತು. ಅತ್ತಿತ್ತ ನೋಡಿದರು ಏನೂ ಕಾಣದಾಗಿತ್ತು. ಮನವು ಅಲೆದಾಡಿ ಒಳಗೆ ಸೇರಿತ್ತಿತ್ತು. ಹೃದಯದ ಮಾತೆಲ್ಲಾ ಮೂಕವಾಗುತ್ತಿತ್ತು. ಕೊನೆಗೊಮ್ಮೆ ಕರಗಿತ್ತು, ಹೃದಯದಾಳದ ನೋವು, ಕಣ್ಣೀರ ಧಾರೆಯಾಗಿ

ಹರಿಯುತ್ತಿತ್ತು ಹೊರಗೆ"3. ಹೀಗೆ ಮನಸ್ಸಿನ ಅಂತರಂಗದ ಯಾತನೆ ಭಾವನೆಯನ್ನು ಅರಿಯಬಹುದಾಗಿದೆ.

3. ಸ್ಪಂದನ :

ಅರಿತವನು ಮೂಕನಾಗಿರಬಹುದು ಅರಿದಯವನು ವಾಚಾಳಿಯಾಗಬಹುದು. ಅರಿಯದೆ ಅರಿದಿಹನೆಂದು ಹಿರಿಗೇಡಿ ನಾನಾಗಲಾರೆ ಎಂದು ಭಾವನೆಗಳ ಸ್ಪಂದನೆ ತಿಳಿಯುತ್ತದೆ. ಮನಸ್ಸಿನ ವ್ಯಾಪಾರ ತಿಳಿವಳಿಕೆಯ ಕಲ್ಪನೆಯಾಗಿದೆ. ಆತ್ಮದ ಅನುಭಾವ ಮನಸ್ಸಿನ ಆಚೆಯ ನಿಜವಾದ ಆನಂದವಾಗಿದೆ. ಮನಸ್ಸಿನ ಮೂಲವನ್ನು ಅಡಗಿದ ಆತ್ಮನ ನೆಲೆಯಾಗಿದೆ, ನಾ ಎಂಬುದು ಅಳಿದ ಮೇಲೆ ಪ್ರತಿಭಾ ಬೆಳಗುವುದು. ದೇಹ ಜೀವ ರಾಶಿಗಳ ಆಚೆಗೆ ನೆಲೆಸಿರುವ ನಿರ್ಲಿಪ್ತವಾದ ಬೆಳಗು ಆಗಿದೆ. ಭಾವ ಬದುಕನ್ನು ಬೆಳಗಾದಾಗ ಆತ್ಮವು ಕಾಣುವುದು. ಸುತ್ತವಿಡಿದು ಅರಿತು ಮೂಲವನ್ನು ಕಾಣಬೇಕು. ದಿವ್ಯಾತ್ಮವನ್ನು ಅರಿಸಬೇಕು. ಅರಿವಿನಿಂದ ತಿಳಿದಾಗ ದೇಹ, ಮನ, ಬುದ್ಧಿ, ಭಾವಕೆ ಆತ್ಮವದು ಕಾಣಲಾರದು. ಕಸವನ್ನಾಗಿ ಎಸೆದರು ಕೆಲವರು ತಿಪ್ಪೆಗೆ, ಹಸನ ಮಾಡಲು ಯತ್ನಿಸಿದರು. ಹಲವರು ಉಪ್ಪರಿಗೆಗೆ ಕೂರಿಸಲು ಪ್ರಯತ್ನಿಸಿದರು. ಕಸವನ್ನು ರಸವನ್ನಾಗಿ ವಿಶ್ವ ಚೈತನ್ಯತಾ ಪಡೆಯಲು ಬದುಕನ್ನು ಹದಗೊಳಿಸಲಾರನೆ ಎಂಬ ಮಾತುಯಿದೆ. ಬದುಕಿಗೆ ನಿನ್ನೆಯ ನಾಳೆಗಳ ಮೀರಿದ ಸ್ಪಂದನ ನಿಯಮದಲ್ಲಿದೆ ಎಂಬ ವಿಷಯ ಕಂಡು ಬರುತ್ತದೆ. ಮನಸ್ಸಿನ ಆಶೆಯು ಬೇಕೆನ್ನ, ಸಾಕೆನ್ನ ವಿಶ್ವದ ನಿಯಮವನ್ನು ಮೀರಿ ಪರಿಸರದಲ್ಲಿ ಪರಿತಪಿಸಿ ನೋಯಿಸಿದೆ ಇರಲಾರದು ಮೂಕನಾಗಿ ದಿನಚರಿಯು ಲೋಕದ ನಂಟನೊಳು ಜೀವವು ಸಾಗುತ್ತಿದೆ. ಜೀವನದಲ್ಲಿ ಮಾಡಿದ ತಪ್ಪು ಒಪ್ಪುಗಳನ್ನು ಅರಿಯದೆ ಕಪ್ಪು ಕಾಣಿಕೆಗಳನ್ನು ಆಸಿಸದೆ ಮುಪ್ಪಿನಲ್ಲಿ ಬಲು ಚಿಂತಿಸದೆ ತೃಪ್ತಿಯ ನೆಮ್ಮದಿಯ ಸಾಗರವ ಬಯಸುವೆ ಎಂಬ ಆಶಯವಿದೆ.

4. ನಿಷ್ಕ್ರಿಯಾತ್ಮನಿಗೆ :

ನಿವೃತ್ತಿಯ ಸಂದರ್ಭದಲ್ಲಿ ಸಂಯಮ, ಮುಂದೆ ಸಾಗುವಿಕೆ, ಎದ್ದೇಳಬೇಕು, ಮುಪ್ಪು ತರುವ ಪರಸ್ಥಿತಿಗೆ ಏರುಪೇರು ವಿಚಾರಗಳನ್ನು ಕಿತ್ತೆಸೆಯಬೇಕು ಎಂದು ಕವಿ ತಿಳಿಸುತ್ತಾರೆ. ಸಹನೆ ಅಸಹಾಯಕತೆ, ಸರಳ ಬಾಳುವ ಜಪತಪ, ಪರಹಿತ ಚಿಂತನೆಗಳು ಹೇಡಿಗೆ ಮೀಸಲು ಎಂಬ ಅಭಿಪ್ರಾಯವನ್ನು ತಿಳಿಸುವರು. ವಿಶ್ರಾಂತಿಯ ಜೀವನದಲ್ಲಿ ದೇವನ ಕೃಪೆ, ಜೀವ, ಮನಸ್ಸು, ಬುದ್ಧಿ, ಭಾವನೆಗಳು, ಸಮತೋಲನದ ಸಮರಸದ ಸಹಜವಾದ ದಾಹದ ಸ್ಪುರಣವಾಗಿದೆ. ಸೆಳೆತಗಳು ಸಮನ್ವತೆಯ ಸಮ್ಮತದಲ್ಲಿರುತ್ತವೆ. ಜೀವ ಜ್ಯೋತಿಯು, ಚೈತನ್ಯದೊಂದಿಗೆ ನಿಸರ್ಗದಲ್ಲಿ ಹರಿವ ನೀರಿನ ಝುರಿಯಂತೆ ಮುಂದೆ

ಸಾಗುವುದಾಗಿದೆ. ಜನ ಮೆಚ್ಚುವ ಕೀರ್ತಿ ಕನ್ಯೆಯರ ಹವ್ಯಾಸವಿಲ್ಲ. ಚಂಚಲವಾದ ಮನಸ್ಸಿಲ್ಲ ದೃಢ ಸಂಕಲ್ಪದೊಂದಿಗೆ ಕ್ರಾಂತಿ, ಸಂಘರ್ಷಗಳ ಕೊನೆಗೆ ಸಮರಸದ ಉತ್ಕ್ರಾಂತಿಯು ಕಂಡು ಬರುತ್ತದೆ ಎಂಬ ಅನಿಸಿಕೆ ಕವಿಯದಾಗಿದೆ. ಕಾಯಕದೊಂದಿಗೆ ಶಾಂತಿ, ಪ್ರೇಮ, ಧರ್ಮ, ಸತ್ಯಗಳ ಕ್ರಿಯಾ ಶೀಲತೆಗಳೊಂದಿಗೆ ಜೀವನ ಕ್ರಿಯೆಯಾಗದೆ ಕೊನೆಗೆ ಮರಣವೇ ಶೂನ್ಯತೆಯ ಲಕ್ಷಣವಾಗಿದೆ. ಮಂಗ ಚೇಷ್ಟೆಯ ಬಿಟ್ಟು ವಿವೇಕದೊಂದಿಗೆ ವಿಶ್ವ ಧರ್ಮದ ಅನ್ವಯವಾಗಿ ಸತ್ಯ ಎಂಬುದು ವಿಜ್ಞಾನಿ, ದಾರ್ಶನಿಕ ಸಾಮ್ರಾಟ, ಜಗತ್ ಗುರುವಿಗೆ ತಿಳಿದಂತೆ ಇರಬೇಕು.

ಅರ್ಧಮರ್ಧ ತಿಳಿದವರ, ಆನೆಯನ್ನು ಕಾಣುವ ಕುರುಡರಂತಹವರ, ಅಲ್ಪರ ಭ್ರಮೆಯೊಂದಿಗೆ ಇರುವವರ ಮಾರ್ಗದರ್ಶಕರನ್ನು ನಂಬುವುದು ಬೇಡ ಎಂಬ ಎಚ್ಚರಿಕೆಯ ಸಂಕೇತವು ಇದೆ. ಭಾವನೆಗಳ ಸ್ಪಂದನದ ಚಿಲುಮೆ, ಏಳು ಎದ್ದೇಳು ಅರಿವಿನ ದಾರಿಯಲ್ಲಿ ಸಾಗಲು ಪಯಣದಿಂದ ನುಗ್ಗಿ ನೆಡೆ ಮುಂದೆ ಎಂಬ ಆತ್ಮ ವಿಶ್ವಾಸವನ್ನು ಕವಿಯು ಅಭಿವ್ಯಕ್ತಪಡಿಸುತ್ತಾರೆ.

ಕೆ.ಎಸ್.ಚಿದಾನಂದರ "ಒಲವಿನ ಅಲೆಗಳು" ಕವನ ಸಂಕಲನದ ಈ ಕಾವ್ಯ ಕಾಣಬಹುದು "ಕೃತಜ್ಞತೆಯ ನೆನಪೆಲ್ಲಿ? ಅರಣ್ಯ ಮೂಕ ಜೀವಿಗಳಲ್ಲಿ ಸಾಮರಸ್ಯ ತುಂಬಿದೆ. ನುಡಿಯಬಲ್ಲ ನರನೊಡಲಲಿ, ಜಲಸಿ ಮನೆಯ ಮಾಡಿದೆ ಕಷ್ಟ–ನಷ್ಟದಲ್ಲಿ ಹೆಗಲುಕೊಟ್ಟು ಎತ್ತಿ ಎಳೆದ ಜೀವಕೆ ಹೊಟ್ಟೆ ಕಿಚ್ಚ ಜ್ವಾಲೆಯು ಗೂಳಿ, ಸಂತವೇ ಮರೀಚಿಕೆ. ಸ್ನೇಹ ಜೀವ, ಮನದ ಮಾತು, ಹಗಲು–ಇರುಳ ಪರಿವೆ ಮರೆತು, ಕರೆದ ಕರೆಗೆ ಕರ್ಣಚಾಚಿ, ದುಡಿದ ಜೀವ ಕೊರಗಿ ಬಾಡಿತು ನಿಮ್ಮ ಬೆರಳ ನೇರ ಕೆಲಸ ಕಣ್ಣಿಗೊತ್ತಿ ಮಾಡಿದವಗೆ, ಕಣ್ಣು ಬತ್ತಿ ಹೋಗುವಂತೆ ನೀರು ಕಿತ್ತ, ನಿಮ್ಮ ಹೊಟ್ಟೆ ಇರಲಿ ತಣ್ಣಗೆ"[4]. ಹೀಗೆ ಕೃತಜ್ಞತೆಯ ನೆಪದಲ್ಲಿ ಕಾಯಕ, ಸಂತಸ, ಕಷ್ಟ–ನಷ್ಟ, ದುಡಿಮೆ ದುಡಿದ ಜೀವದ ಭಾವನೆಗಳನ್ನು ಕಾಣಬಹುದಾಗಿದೆ.

5. ಕಿರಿಯನಾಗ ಬಯಸಿ :

ರಾಮನಾಗಲು ಒಲ್ಲೆ, ಹನುಮ, ದೇಶ ಸೇವಕನಾಗ ಬಯಸುವೆ. ನಾಯಕನು ಆಗಲು ಬಲ್ಲೆ ಕಾಯಕ ಯೋಗ ಬಯಸುವನು. ನೀನಾಗಲು ಒಲ್ಲೆ ಸದಾ ನಿನ್ನ ಕಾಣ ಬಯಸುವೆ ಕಲ್ಲಜ್ಜ ಎಂದು ಕವಿಯ ಅಭಿಮತವನ್ನು ಗಮನಿಸಬಹುದಾಗಿದೆ. ಜನಕನು ಆಗಲು ಒಲ್ಲೆ ಕನಕನಾಗಲು ಬಯಸುವೆನು. ಮಣಿಮುಕುಟನಾಗಲು ಒಲ್ಲೆ ಪಾದದ ಧೂಳು, ಆಗಲು ಬಯಸಿ ಜನಾರ್ಧನನು ಆಗಲು ಒಲ್ಲೆ ಶ್ರೀಸಾಮಾನ್ಯನಾಗಲು ಬಯಸುವೆನು. ಮುಕ್ತನಾಗಲು ಒಲ್ಲೆ ಈ ಲೋಕದೊಳು ಭಕ್ತನಾಗಲು ಬಯಸುವೆನು ಎಂಬುದನ್ನು

ಅರಿಯಬಹುದಾಗಿದೆ. ಪುಷ್ಪವಾಗಲು ಒಲ್ಲೆ ಜೇನಾಗುವ ಬಯಸುವೆನು. ಕೃಷ್ಣನು ಆಗಲು ಒಲ್ಲೆ, ರಾಧೆಯಾಗಲು ಬಯಸಿ, ಶಂಕರನು ಆಗಲು ಒಲ್ಲೆ ಕಿಂಕರನಾಗ ಬಯಸಿ ಸಕಲರಿಗೂ ಕಿರಿಯನಾಗಲು ಬಯಸಿ, ಹಿರಿಯನಾಗಲು ಒಲ್ಲೆ ಎಂಬ ತಮ್ಮ ಮನದಾಳದ ಮಾತುಗಳನ್ನು ಕವಿಯು ತಿಳಿಸುವರು.

6. ಆತ್ಮ ನಿವೇದನೆ :

ಜೀವವೇ ಯಾಕೆ ಹುಟ್ಟಿಬಂದೆ ಭೂಮಿಗೆ ಎಂಬ ಪ್ರಶ್ನೆ ಇದೆ. ಕೆಟ್ಟ ಕೆಲಸ ಎಸಗಿತೂ ದೇವ ಸಮಾಜದ ನೀತಿಗೆಟ್ಟು ಖ್ಯಾತಿಯ ಧನ ಸಂಪಾದನೆಗೆ ಕೆಳೆಸುತ್ತಿದೆ ಮನಸ್ಸಿನ ಭಾವಗಳು ಎಂಬ ಚಿಂತನೆಗಳಿವೆ. ನೀತಿಯ ದಾರಿಯನ್ನು ಬಿಟ್ಟು ಕಲ್ಲಜ್ಜ ನಿನ್ನನ್ನು ಮರೆತು ಕೆಟ್ಟೆ ಎಂಬ ಆತ್ಮದಲ್ಲಿನ ಪಶ್ಚಾತಾಪವಿದೆ. ತರುವಿನ ಸಂಯಮದ ಕಡಿವಾಣ, ಮನದ ಮಂಗ ಚೇಷ್ಟೆಗೆ ವಿವೇಕದ ಅಂಕುಶವನ್ನೆಟು ಸಾಗಬೇಕಿದೆ. ಕನಸಿನ ಕಾಲ್ಪನಿಕ ತರ್ಕ ಬುದ್ಧಿಗಳ ವಿಚಾರಗಳು ಒಡ್ಡಲು, ಭಾವನೆಗಳಿಂದ ಕಿಚ್ಚು ನಿಕ್ಕಿ ಅರಿತು ಬಾಳೆಂದ ಎಂಬವ ಅರಿವಿನ ಮಾತುಗಳಿವೆ. ಕೀರ್ತಿ, ಮಮಕಾರ, ಸಂಪದ, ಅಧಿಕಾರಗಳನ್ನು ಬೆನ್ನೇರಿ ಬಂದಾಗ ಅಹಂಕಾರವನ್ನು ಪಡೆದೆ ತುತ್ತ ತುದಿಯ ಏರು ಎಂಬ ಆಶಯವಿದೆ. ಜೀವನದಲ್ಲಿ ಧರ್ಮ, ನೀತಿ, ನ್ಯಾಯಗಳ ದಾರಿಯನ್ನು ಅರಿಯದೆ ಅದಕ್ಕೆ ಪರಿತಪಿಸುತ್ತಿವೆ. ಮಾತುಗಳು ಸಾಕಿನ್ನು ಮೌನದಿದಂಲೆ ಕರುಣಿಸು ದೈವವೇ ಎಂಬ ಪ್ರಾರ್ಥನೆಯು ಕಂಡು ಬರುತ್ತದೆ.

ಶಾಂತಾಕುಟಿನಿ (ಶಕುಂತಲಾ) ಸೂಕ್ಷ್ಮ ದೃಷ್ಠಿ, ಕವನ ಸಂಕಲನದಲ್ಲಿನ ಕಾವ್ಯವನ್ನು ಕಾಣಬಹುದಾಗಿದೆ. "ಆತ್ಮ–ಸೌಂದರ್ಯ–ಪ್ರಶ್ನೆಗಳ ಕೇಳುವನು ಎನ್ನಾತ್ಮ ಉತ್ತರವ ನೀಡುವನು ಪರಮಾತ್ಮ, ಪರಮಾತ್ಮನೆಂಬವನು ದಿವ್ಯಾತ್ಮ ಶಂಕೆಯಲಿ ಬಂದಾತ್ಮ, ಅಂಕೆಯಲಿ ನಿಂದಾತ್ಮ, ಪರಮಾತ್ಮನೊಳಗಿರುವ ಎನ್ನಾತ್ಮ ಎನ್ನಾತ್ಮ ನಿಲ್ಲದಿರೆ, ನಿಮ್ಮಾತ್ಮ ನಿಲ್ಲದಿದ್ದರೆ, ಆತ್ಮ ಸೌಂದರ್ಯ ಹಿನ್ನೆಲ್ಲಿ ಪರಮಾತ್ಮ ಸತ್ಯಗಳ ಅರುಹುವನು ಪರಮಾತ್ಮ ಅಂಕೆ ಶಂಕೆಗಳಿಲ್ಲದಿರೆ, ಆದ ಮೀರಿದವನೆನ್ನಾ ಪರಮಾತ್ಮ ಎನ್ನಾತ್ಮ ನಿಮ್ಮಾತ್ಮ ಅವರಾತ್ಮ, ಇವರಾತ್ಮ, ಆತ್ಮ ಸೌಂದರ್ಯವಿರದಾತ್ಮ, ಬರಿಯ ಟೊಳ್ಳದೂ ಕೇಳಿಲ್ಲಿ ಬರಿದಾತ್ಮ"5. ಹೀಗೆ ಆತ್ಮದ ಸೌಂದರ್ಯದ ಕಲ್ಪನೆಯನ್ನು ಕಾಣಬಹುದಾಗಿದೆ.

7. ಅರಿವಿನ ಸ್ಪಂದನ ಬಯಸಿ :

ತನವನು ಸಂತೋಷಗೊಳಿಸಿ, ನೋವನ್ನು ಅಳಿದು, ಮನವನು ತಣಿಸಿ ಕನಸ್ಸನ್ನು ಮರೆದು, ಬುದ್ಧಿಯನ್ನು ಬರೆಸು ದೈವವೇ ಎಂಬ ಪರಿಕಲ್ಪನೆಯಿದೆ. ಭ್ರಾಂತಿಯನ್ನು ಕಳೆದು ಅಂತಃಕರಣವನ್ನು ಅರಿವಿನಿಂದ ಸ್ಪಂದಿಸಿ ಸಂತೋಷಗೊಳಿಸು ಎಂಬ ಬೇಡಿಕೆಯು ಇದೆ.

ಕಾಯಕದಿಂದ ನಂಟಿನ ವಿಷಯಗಳನ್ನು ಕೆಡಿಸಿ ಇರುವ ಸ್ಥಿತಿಯನ್ನು ಸುಧಾರಿಸಲು ಮಾಯವಾದ ನಂಟಿನ ಹಿತಾಸಕ್ತಿಗಳನ್ನು ಬಿಡಿಸಿ ಉತ್ತಮವಾದ ಬದುಕು ಕಟ್ಟಿಕೊಳ್ಳಲು ಯತ್ನಿಸುವುದಾಗಿದೆ. ಮೋಹದ ಗಂಟಿನ ವಾಸನ ಆದಿಗಳನ್ನು ಬಡಿಸಿ ಕೃಪೆದೊರಿ ಬಂಟನ ಬಯಲು ಮಾಡಲು ಎಂದು ದೈವಕೃಪೆಗೆ ಮೊರೆಹೋದ ಬಗೆಯನು ಕಾಣಬಹುದಾಗಿದೆ.

8. ಕರುಣಿಸಿ ಕೈಹಿಡಿದೆತ್ತು :

ಗ್ರಾಮ, ಹರಿಜನರ ಸೇವೆ, ಶ್ರಮದಾನ ತಪಸಾಧನೆ ಹಳ್ಳಿಗರ ದಲಿತ ಮಹಿಳೆಯರ ಶಿಕ್ಷಣ, ಉನ್ನತ ಜ್ಞಾನಜ್ಯೋತಿ ತೊರುವುದಕ್ಕಾಗಿ ದುಡಿದೆ ಎಂಬುದಾಗಿದೆ.ಅಜ್ಞಾನ, ಅನ್ಯಾಯ, ಮಾಯ, ಕತ್ತಲಿನಂತಹ ಮೋಹಗಳನ್ನು ತೊಲಗಿಸಿ ಶುದ್ಧಾತ್ಮವನ್ನಾಗಿಸುವುದು ಚಿತ್ತಶುದ್ಧಿ, ಚಾರಿತ್ರ್ಯಶೀಲರಾಗಿ, ಪಾವಿತ್ರ್ಯದೆಡೆಗೆ ಅರಸುತ ಸಾಗುವುದು ಬೆಚ್ಚನೆಯ ಕಣ್ಣೀರು, ಕಳವಳದ ತಂಪು ನೆನೆದು ಕರುಣೆಯೊಂದಿಗೆ ಇರುವುದಾಗಿದೆ ದಶದಿಕ್ಕುಗಳಿಗು ಹೆಸರಿಸಿ, ತ್ರಿಕಾಲ ಸನ್ನಿವೇಶಗಳ ಕಲ್ಪನಾತೀತಗಳ ಅವಕಾಶ ಮೀರಿ ಕರುಣಾಧಿಯಾಗಿ ನಂಬುಗೆಗೆ ಅಧೀನನಾಗಿ ಕಲ್ಲಜ್ಜನನಾಗಿರುವೆ ಎಂದು ಕವಿ ತಿಳಿಸುವರು. ಪೂಜೆ, ಪುನಸ್ಕಾರದ ವಿಧಾನಗೊತ್ತಿಲ್ಲ ಸಂಗವು ಇಲ್ಲ ಭೂಭಾರವಾಗಿಬಳಲಿಕೆ ಎಂದು ವಿಚಾರಗಳಿವೆ. ನಿನ್ನರಸಿ ಬಂದೆ ಕರುಣೆ ತೋರಿಸು ಹರಸಿ ಸಂತೈಸು ಭವ ಬಂಧನಗಳಿಂದ ಪಾರು ಮಾಡು ಎಂದು ಕರುಣೆಯಿಂದ ವಿನಂತಿಯಿದೆ.

9. ಮಂತ್ರಿ ಮಂಡಲ :

ಮಹಾತ್ಮಾ ಗಾಂಧೀಯವರ ತತ್ವದ ಕೊಲೆಯನ್ನು ಮಾಡಿ ಎಷ್ಟು ದಿನ ಆಳುವರು ಸೂಲಿಯ ಯೋಜನೆ ಮಾಡಿ ಸುಳ್ಳಿನ ಕಂತೆಯ ಮಾಡಿ ಕಾರಭಾರ ಮಾಡುವುದು ಎಷ್ಟು ದಿನ ಎಂದು ಕವಿಯು ಪ್ರಶ್ನಿಸುತ್ತಾರೆ. ಹಳ್ಳಿಯ ಜನರನ್ನು ಕೊಳ್ಳೆಯನು ಹೊಡೆದು, ಮಳ್ಳ ಮಾಡಿ ದಿಲ್ಲಿ ಗದ್ದುಗೆಯ ಒಲುಮೆಯ ಬಯಸಿ ಸುಳ್ಳನ್ನು ಸಾಧಿಸಿ, ಜೋಳ್ಳುಗಳು ಆಳುವುದು ಎಷ್ಟು ದಿನ ಕಷ್ಟ ಕಾರ್ಪಣ್ಯದಿ ಕಾಯಕ ಮಾಡದೆ ದುಷ್ಟ ಮಾರ್ಗದಿಂದ ಹಣವನ್ನು ಸಂಪಾದಿಸಿ ಶೋಷಿಸುವವರು ಎಂದು ಕವಿಯ ಅಭಿಪ್ರಾಯವಾಗಿದೆ. ಬಡವರ ಗೋಳಲಿ ಸಂತಸ ಪಡುವರು ಭ್ರಷ್ಟರಾಗಿ ಮೆರೆಯುವುದು ಎಷ್ಟು ದಿನ, ಸತ್ಯ, ನ್ಯಾಯ ಧರ್ಮಗಳು ನಮಗೆ ಇಲ್ಲ ಭಕ್ಷಿಸಲು ಬಂದಿಹೆವು ನಾವ್ ಬಹುಮತ ಪಡೆದು ಶಿಕ್ಷಿಸುವರಾರು ನಮ್ಮನೆಂಬ ಭ್ರಾಂತರು ಆಳುವುದು ಎಷ್ಟು ದಿವಸ ಕವಿಯ ಮಾರ್ಮಿಕ ವಿಚಾರವಾಗಿದೆ. ಆಶಯ ನೀಡುವುದು, ಮಂಕನು ಎರಚುವುದು, ಅಧಿಕಾರದೊಳಗೆ ಎಷ್ಟು ದಿನ? ಎಂದು ಕವಿಯು ತಿಳಿಸುವರು. ಈ ಕವನವು ಮೈಸೂರ ಸರಕಾರವು ಪಾನ ಪ್ರತಿಬಂಧನವನ್ನು ಕಿತ್ತು ಹಾಕಿದಾಗಿನ

ಪ್ರತಿಕ್ರಿಯೆ ಎಂದು ಕವಿಯು ತಾವೇ ಈ ಕವನ ಸಂಕಲನದಲ್ಲಿ ಉಲ್ಲೇಖಿಸಿ ಕಾವ್ಯ ರಚಿಸಿದ್ದಾರೆ. ಎ.ಎ.ಸನದಿಯುವರ 'ಮಜಾಪ್ರಭುತ್ವ' ದಲ್ಲಿ ಕವನವನ್ನು ನೋಡಬಹುದು. "ಮುಖವಾಡದವರು–ದೇಶ ಸೇವೆಯ ಸೋಗು ಹಾಕಿ, ಲಂಚ ಭಕ್ಷಕ, ದೇಶಪ್ರೇಮಿ ವಿಜಯಿ ಪಕ್ಷಕ್ಕೆ ನೆಗೆವನು ಹಾರಿ, ಹಳೆಯ ಪಕ್ಷವ ಗಾಳಿಗೆ ತೂರಿ, ದೇಶ ಸೇವೆಯ ಹೆಸರಲಿ (ಇವರು ದೇ.ಭ......ರು) ಹಣಕೆ ಸಾಯುವ ಈ ಜನ ಸಂಪತ್ತು ಅಧಿಕಾರ ದಾಹ ತುಂಬಿ ಇರುವ ಲಜ್ಜೆ ಮಾನ ತೊರೆದು ದಿನ ದಿನವು ಅದಲು ಬದಲು ಸೋಗುಗಳು ಚುನಾವಣೆಗೊಮ್ಮೆ ಬೇರೆ, ಬದಲಿ ಪಕ್ಷಗಳು ಮುಂಜಾನೆಯೊಂದು ಮುಖ, ಸಂಜೆಗೊಂದು ಹುಲಿಯೊಮ್ಮೆ ನರಿಯೊಮ್ಮೆ ಕತ್ತೆ ಕುದುರೆಗಳೊಮ್ಮೆ, ಮುಖವಾಡಗಳ ಜನರು ನಿಜವ ಮರೆತವರು ತನ್ನ ತನವನ್ನು 'ಬೆಲೆ'ಗೆಮಾರಿಕೊಂಡವರು"6. ಹೀಗೆ ರಾಜಕಾರಣದ ನಾಯಕರ ಕುರಿತು ವಿವಿಧ ವಿಷಯಗಳು ಇರುವುದನ್ನು ಕಾಣಬಹುದಾಗಿದೆ.

10. ಸುಖ ದುಃಖ :

ದೇಹವು ಅನಾರೋಗ್ಯಕ್ಕೆ ಇಡಾದಾಗ ಮೈಕಾವು ಆಗುವುದು ಸಹಜ ಪ್ರಮಾಣದಲ್ಲಿಯಿಂದ ಮೇಲೆ ಎರಿದಡೆ ಜ್ವರ ಬಂತು ಎಂಬುದು ಸಂಕೇತವಾಗುತ್ತದೆ. ಕೆಳಗೆ ಇಳಿದರೆ ಅದು ಶೀತ ಕೆಮ್ಮು, ಎಂದು ಮನುಷ್ಯರ ಲೆಕ್ಕಾಚಾರವಾಗಿದೆ ಸಹಜ ಸ್ಥಿತಿಯನ್ನು ತಲುಪಿದರೆ ಆನಂದದ ಜೀವಗಳಾಗಿ ಇರುತ್ತವೆ. ವಿಷಯ ಇಂದ್ರೀಯಗಳ ಸಂಯೋಗದಿಂದ ಮೇಲೆ ಎರಿದರೆ ಅದು ಸುಖ, ಇಳಿದರೆ ದುಃಖ ಎಂಬ ಅನುಭವ ಸಹಜಾನಂದ ಸ್ಥಿತಿಯ ಸುಖ ದುಃಖ ಪರಿಣಾಮವಾಗಿ ಸಹಜ ನಿಯಮವಾಗಿದೆ.

ಒಟ್ಟಾರೆಯಾಗಿ ಪಾಟೀಲ ಕಲ್ಲನಗೌಡರ, ಸಾಗಿ ಬರುತ್ತಿದೆ ಬೆಳಗು ಎಂಬ ಕವನ ಸಂಕಲನದಲ್ಲಿ ಎರಡು ಭಾಗಳಿವೆ. ಇದರಲ್ಲಿ ಕವಿತೆಗಳು ಅದ್ಭುತವಾಗಿ ರಚನೆಯಾಗಿವೆ. ಕಲ್ಲಜ್ಜ ದೈವ ಆರಾಧನೆಯ ಸಂಕೇತವಾಗಿ ಬಳಸಿದ್ದಾರೆ ಕವಿ, ಆತ್ಮ ನಿವೇದನೆ ವಿಷಯಗಳು ಒಳಗೊಂಡಿವೆ. ಸತ್ಯಗಳು, ಅಂತರಂಗ, ಬಯಕೆ, ಸ್ಪಂದನೆ, ಸುಖ ದುಃಖದಂತಹ ಇನ್ನು ಹಲವಾರು ವಿಷಯವಿರುವ ಕಾವ್ಯಗಳು ಇವೆ. ಇದೊಂದು ಉತ್ತಮವಾದ ಕಾವ್ಯ ಕೃತಿಯಾಗಿದೆ. ಅದ್ಭುತವಾದ ಕವಿತೆಗಳು ರಚನೆಗೊಂಡಿವೆ.

ಕೊನೆಯ ಟಿಪ್ಪಣಿಗಳು :

1. ಪಾಟೀಲ ಕಲ್ಲನಗೌಡರು, ಸಾಗಿ ಬರುತಿದೆ ಬೆಳಗು, ಪು.ಸಂ.03.
2. ಪಾಟೀಲ ಕಲ್ಲನಗೌಡರು, ಸಾಗಿ ಬರುತಿದೆ ಬೆಳಗು, ಪು.ಸಂ.06.
3. ಡಾ.ಸಬಿತಾ ಮರಕಿಣಿ, ಹೆಸರಿಡದ ಕವನ ಸಂಕಲನ, ಪು.ಸಂ.107–108
4. ಕೆ.ಎಸ್.ಚಿದಾನಂದ ಒಲುವಿನ ಅಲೆಗಳು ಪು.ಸಂ.30.
5. ಶಾಂತಾಕುಂಟಿನ (ಶಂಕುತಲಾ) ಸೂಕ್ಷ್ಮದೃಷ್ಟಿ ಪು.ಸಂ.32.
6. ಎ.ಎ.ಸನದಿ, ಮಜಾಪ್ರಭುತ್ವ, ಪು.ಸಂ.08.

ಆಕರ ಗ್ರಂಥಗಳು :

1. ಒಲವಿನ ಅಲೆಗಳು, ಕೆ.ಎಸ್.ಚಿದಾನಂದ ಕವಿತಾ ಪ್ರಕಾಶನ, ತುಮಕೂರು. 2013.
2. ಮಜಾಪ್ರಭುತ್ವ ಎ.ಎ.ಸನದಿ, ನದೀಮ ಪ್ರಕಾಶನ, ಶಿಂದೊಳ್ಳಿ.1993.
3. ಸಾಗಿ ಬರುತಿದೆ ಬೆಳಗು ಪಾಟೀಲ ಕಲ್ಲನಗೌಡ ವಿವೇಕ ಪ್ರಕಾಶನ ಹುಬ್ಬಳ್ಳಿ. 1986.
4. ಸೂಕ್ಷ್ಮ ದೃಷ್ಟಿ ಶಾಂತಾ ಕುಂಟಿನಿ, ಪುತ್ತೂರು ಸಾಹಿತ್ಯ ವೇದಿಕೆ, ಪುತ್ತೂರು. 2018.
5. ಹೆಸರಿಡದ ಕವನ ಸಂಕಲನ, ಸಂ.ಡಾ.ಎಂ.ಬಿ.ಮರಕಿಣಿ, ಸೃಜನ ಪ್ರಕಾಶನ ಮಂಡ್ಯ. 2013.

***

ಶರಣರ ವಚನಗಳು: ಪ್ರಾಣಿ-ಪಕ್ಷಿಗಳ ರೂಪಕತೆ

1 **ಡಾ. ಮಹಾಂತೇಶ ದುರಗಣ್ಣವರ**
ಕನ್ನಡ ಅತಿಥಿ ಉಪನ್ಯಾಸಕರು,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ,
ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ
ಮಹಾವಿದ್ಯಾಲಯ,
ಸಿ.ಟಿ.ಎಸ್. ನಂ.6875,
ಆಂಜನೇಯ ನಗರ, ಮಾಳಮಾರುತಿ
ಬಡಾವಣೆ ಬೆಳಗಾವಿ-590017
mahanteshnkst@gmail.com

ವಚನ ಸಾಹಿತ್ಯವು ಶರಣರ ಆತ್ಮಾನುಭಾವ, ಸಮಾಜದ ವೈಷ್ಯಮ್ಯಗಳ ವಿರುದ್ಧದ ಧ್ವನಿ ಹಾಗೂ ತತ್ವಚಿಂತನೆಗಳನ್ನು ಸರಳವಾದ ರೂಪಕಗಳ ಮೂಲಕ ವ್ಯಕ್ತಪಡಿಸಿದ ಮಹತ್ವದ ಸಾಹಿತ್ಯ ಪರಂಪರೆ. ಈ 12ನೇಯ ಶತಮಾನದ ಶಿವಶರಣರ ವಚನಗಳಲ್ಲಿ ಪ್ರಕೃತಿ, ಪ್ರಾಣಿ, ಮತ್ತು ಪಕ್ಷಿಗಳು ಕೇವಲ ಜೀವರಾಶಿಗಳಾಗಿರದೆ ಮಾನವನ ಸ್ವಭಾವ, ಆಧ್ಯಾತ್ಮಿಕ ಹಂಬಲ ಮತ್ತು ಸಾಮಾಜಿಕ ವಿಡಂಬನೆಗಳನ್ನು ಅಭಿವ್ಯಕ್ತಿಸುವ ಪ್ರಬಲ ರೂಪಕಗಳಾಗಿವೆ. ಈ ಸಂಕುಲಗಳನ್ನು ಬಳಸಿಕೊಂಡು ನೈತಿಕ ಮೌಲ್ಯಗಳು, ಭಕ್ತಿಯ ಶುದ್ಧತೆ ಹಾಗೂ ಜ್ಞಾನ-ಅಜ್ಞಾನಗಳ ಭೇಧವನ್ನು ಸೂಕ್ಷ್ಮವಾಗಿ ಬಿಂಬಿಸಿದ್ದಾರೆ. ನಾಯಿ, ಕತ್ತೆ, ಹಾವು, ಎಮ್ಮೆ, ಸಿಂಹ, ಕೋಗಿಲೆ ಮುಂತಾದ ಪ್ರಾಣಿ-ಪಕ್ಷಿಗಳ ಮೂಲಕ ಅಹಂಕಾರ, ದಾಸ್ಯಭಾವ, ಶಿಷ್ಟತೆ, ಕ್ರೂರತೆ, ನಿಸ್ವಾರ್ಥ ಭಕ್ತಿ ಹಾಗೂ ಆಂತರಿಕ ಶುದ್ಧತೆಗಳ ಅರ್ಥವನ್ನು ತತ್ವಪೂರ್ಣವಾಗಿ ನಿರೂಪಿಸಿದ್ದಾರೆ.

ಈ ರೂಪಗಳು ಜನಸಾಮಾನ್ಯರಿಗೆ ಸುಲಭವಾಗಿ ಗ್ರಹಿಸಬಹುದಾದಂತಿದ್ದು, ಸಮಾಜದಲ್ಲಿ ಅನಾಚಾರ, ಜಾತಿಭೇದ, ಕರ್ಮಕಾಂಡ ಹಾಗೂ ಕಪಟ ಭಕ್ತಿಯನ್ನು ತೀವ್ರವಾಗಿ ಪ್ರಶ್ನಿಸುತ್ತವೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸರ್ವಜ್ಞ ಮೊದಲಾದ ಶರಣರು ಪ್ರಾಣಿ–ಪಕ್ಷಿಗಳ ರೂಪಕಗಳ ಮೂಲಕ ಮಾನವನ ಅಂತರಂಗವನ್ನು ಶೋಧಿಸಿ ಶಿವಭಕ್ತಿಯ ನಿಜ ಸ್ವರೂಪವನ್ನು ತೋರಿಸಿದ್ದಾರೆ. ಈ ಮೂಲಕ ವಚನಗಳಲ್ಲಿ ಕಂಡುಬರುವ ಪ್ರಾಣಿ–ಪಕ್ಷಿ ರೂಪಕತೆ ಶರಣರ ತತ್ವಚಿಂತನೆಯ ಪರಿಣಾಮಕಾರಿ ಅಭಿವ್ಯಕ್ತಿಯಾಗಿದ್ದು, ಸಾಮಾಜಿಕ ಜಾಗೃತಿಗೆ ಹಾಗೂ ನೈತಿಕ ಬೋಧನೆಗೆ ಮಹತ್ವದ ಪಾತ್ರ ವಹಿಸಿದೆ. ಶರಣೀಯರಲ್ಲಿ ಅಗ್ರಣ್ಯರಾದ ಅಕ್ಕಮಹಾದೇವಿಯವರು ತನ್ನ ಆರಾಧ್ಯದೈವ ಚೆನ್ನಮಲ್ಲಿಕಾರ್ಜುನನ್ನು ಅರಸುವ ದಾರಿಯಲ್ಲಿ ವಿವಿಧ ಪಕ್ಷಿಗಳನ್ನು ರೂಪಕಗಳಾಗಿ ಬಳಸಿದ್ದಾರೆ. ಗಿಳಿ, ಕೋಗಿಲೆ, ಹಂಸ ಮತ್ತು ನವಿಲು. ಅಕ್ಕಮಹಾದೇವಿ ತನ್ನ ವಚನವೊಂದರಲ್ಲಿ 'ಗಿಳಿ, ಕೋಗಿಲೆ, ಹಂಸವೇ, ನವಿಲೆ ನೀವು ನನ್ನ ಚೆನ್ನಮಲ್ಲಿಕಾರ್ಜುನನ್ನು ಕಂಡಿರಾ' ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಈ ಪ್ರಶ್ನೆಗಳು ವಿರಹಿಯಾದ ಶರಣೆಯ ತಳಮಳ ಮತ್ತು ದೈವದ ಹುಡುಕಾಟದ ಸಂಕೇತಗಳಾಗಿವೆ. ಇಲ್ಲಿ ರೂಪಕತೆಯನ್ನು ನೋಡಿದಾಗ ಹಂಸವು ಕೆರೆಯನ್ನು ಬಯಸುವಂತೆ, ಕೋಗಿಲೆಯು ಮಾವಿನ ಚಿಗುರನ್ನು ಬಯಸುವಂತೆ ತನ್ನ ಮನಸ್ಸು ಕೇವಲ ಪರಶಿವನನ್ನು ಹಂಬಲಿಸುತ್ತದೆ ಎಂದು ವರ್ಣಿಸಬಹುದು.

ಶರಣರು ಮನುಷ್ಯನ ಅರಿವಿಲ್ಲದ ಭಕ್ತಿ ಅಥವಾ ಕೆಟ್ಟ ಗುಣಗಳನ್ನು ಎತ್ತಿ ತೋರಿಸಲು ಪ್ರಾಣಿಗಳನ್ನು ರೂಪಕಗಳಾಗಿ ಬಳಸಿದ್ದಾರೆ. ಚನ್ನಬಸವಣ್ಣನವರು ತಮ್ಮ ವಚನಗಳಲ್ಲಿ ಕತ್ತೆ, ಬೆಕ್ಕು, ಹಂದಿ ಮತ್ತು ಎತ್ತುಗಳನ್ನು ಉದಾಹರಿಸುತ್ತಾರೆ. ಭಕ್ತಿಯ ಸೋಗು ಹಾಕುವರನ್ನು ವಿಡಂಬಿಸುತ್ತಾರೆ. ಉದಾಹರಣೆಗೆ, 'ಹಂದಿ ಭಕ್ತನಾದರೆನು, ಅದು ಮಲವನ್ನು ತಿನ್ನುವುದನ್ನು ಬಿಡುವುದೇ?' ಎನ್ನುವ ಮೂಲಕ ಆಂತರಿಕ ಬದಲಾವಣೆ ಇಲ್ಲದ ಭಕ್ತಿ ವ್ಯರ್ಥವೆಂದು ತಿಳಿಸುತ್ತಾರೆ. ಕತ್ತಲೆಗೆ ಬೆದರುವ ಗೂಬೆ ಅಥವಾ ಕೆಸರಿನಲ್ಲಿ ಹೊರಡುವ ಹಂದಿ, ಸಂಸಾರದ ಮಾಯೆಯಲ್ಲಿ ಸಿಲುಕಿದ ಅಜ್ಞಾನಿ ಮಾನವನ ಸಂಕೇತವಾಗಿ ಬಳಕೆಯಾಗಿದೆ. ಅಹಿಂಸೆ ಮತ್ತು ಜೀವ ಕಾರುಣ್ಯ ಎಂಬುದು ವಚನ ಚಳುವಳಿಯ ಮೂಲ ಮಂತ್ರವೇ 'ದಯವೇ ಧರ್ಮದ ಮೂಲವಯ್ಯ. ಆದ್ದರಿಂದ ಇದಕ್ಕೆ ಪೂರಕವಾಗಿ ಬಸವಣ್ಣನವರು ಯಜ್ಞ–ಯಾಗಾದಿಗಳಲ್ಲಿ ಪ್ರಾಣಿ ಬಲಿಯನ್ನು ವಿರೋಧಿಸುತ್ತಾ ಕುರಿಯನ್ನು ರೂಪಕವಾಗಿ ಬಳಸಿ ಅದರ ಅಳಲನ್ನು ವ್ಯಕ್ತಪಡಿಸಿದ್ದಾರೆ. 'ವೇದವ ಓದುವವರ ಮುಂದೆ ಕೂಗಾಡೋ ಎಲೆ ಕುರಿಯೆ' ಎನ್ನುವ ಮೂಲಕ ನೋವನ್ನು ಧ್ವನಿಸಿದ್ದಾರೆ. ಎಲ್ಲ ಜೀವಿಗಳಲ್ಲಿ ಶಿವನನ್ನು

ಕಾಣುವ ಶರಣರು ಪ್ರಾಣಿಗಳನ್ನು ದೇವರ ಅವತಾರದಂತೆ ಕಂಡು ಅವುಗಳ ಮೇಲೆ ದಯೆ ತೋರಬೇಕೆಂದು ಸಾರಿದ್ದಾರೆ.

ಅಂತರಂದ ಹೋರಾಟದ ಪ್ರತಿಮೆಗಳಾಗಿ ಅಕ್ಕಮಹಾದೇವಿಯು ತನ್ನನ್ನು ತಾನು 'ಗಾಯಗೊಂಡ ಜಿಂಕೆ'ಗೆ ಹೋಲಿಸಿಕೊಳ್ಳುತ್ತಾರೆ. ಇದು ಲೌಕಿಕ ಜಗತ್ತಿನಲ್ಲಿ ಸಿಲುಕಿ ನೊಂದು ಪಾರಮಾರ್ಥಿಕ ಸುಖಕ್ಕಾಗಿ ಹಾತೊರೆಯುವ ಜೀವನದ ಸಂಕೇತವಾಗಿದೆ. ಜ್ಞಾನ ಮತ್ತು ಬಲದ ಸಂಕೇತವಾಗಿ ಸಿಂಹದ ರೂಪವನ್ನು ಬಳಸಲಾಗಿದೆ. ಈ ರೂಪಕಗಳು ತೀರಾ ಪ್ರಾಸಂಗಿಕವಾಗಿದ್ದು ಮಾನವನ ಜೀವನದಲ್ಲಿ ನಡೆಯುವ ಕಷ್ಟ ಮತ್ತು ವೈಭವವನ್ನು ವಿವರಿಸಲು ಸಹಾಯವಾಗುತ್ತದೆ. ಶರಣರ ಬೋಧನೆಗಳಲ್ಲಿ ಪ್ರಮುಖವಾದದ್ದು, ಮನುಷ್ಯರನ್ನು ಪ್ರಾಣಿ ಮತ್ತು ಪಕ್ಷಿಗಳಂತೆ ನಿರ್ದೋಶಿಸಿ ಶುದ್ಧ ಮತ್ತು ಅನಂತ ಸತ್ಯದ ಸಂದೇಶವನ್ನು ನೆರವೇರಿಸಲು ಪ್ರೇರೇಪಿಸುವುದು. ಕೆಲವು ವಚನಗಳಲ್ಲಿ ಹಾವು, ವಿಷ ಮತ್ತು ದ್ವೇಷದ ಸಂಕೇತವಾಗಿ ಬರುತ್ತವೆ. ದುಷ್ಟ ಸ್ವಭಾವದ ವ್ಯಕ್ತಿಯನ್ನು ಹಾವಿಗೆ ಹೋಲಿಸಿ ಅವನಿಂದ ದೂರವಿರುವ ಅಗತ್ಯವನ್ನು ಶರಣರು ತಿಳಿಸುತ್ತಾರೆ. ಹಾಗೆಯೇ ನಾಯಿಯನ್ನು ಕೆಲವೊಮ್ಮೆ ಅಂಧಭಕ್ತಿ ಅಥವಾ ಲೋಭದ ಸಂಕೇತವಾಗಿ ಬಳಸಲಾಗುತ್ತದೆ. ಕತ್ತೆ ಅಜ್ಞಾನ ಮೂರ್ಖತನವನ್ನು ಸೂಚಿಸುವ ರೂಪಕವಾಗಿ ಬರುತ್ತವೆ. ಈ ಮೂಲಕ ಮಾನವನ ದುರ್ಗುಣವನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಇನ್ನೊಂದೆಡೆ ಹಂಸ, ಗರುಡ ಮುಂತಾದ ಪಕ್ಷಿಗಳನ್ನು ಶುದ್ಧತೆ, ಜ್ಞಾನ ಮತ್ತು ಉನ್ನತ ಆತ್ಮೀಯತೆಯ ಸಂಕೇತಗಳಾಗಿ ಬಳಸಲಾಗುತ್ತದೆ. ಹಂಸವು ಹಾಲಿನಿಂದ ನೀರನ್ನು ಬೇರ್ಪಡಿಸುವ ಸಾಮರ್ಥ್ಯ ಹೊಂದಿದಂತೆ ಸತ್ಯ ಮತ್ತು ಅಸತ್ಯವನ್ನು ಬೇರ್ಪಡಿಸಬೇಕು ಎಂಬ ಸಂದೇಶವನ್ನು ಶರಣರು ನೀಡುತ್ತಾರೆ. ಈ ರೀತಿಯಾಗಿ ಪ್ರಾಣಿ–ಪಕ್ಷಿಗಳ ರೂಪಕಗಳು ಮಾನವ ಜೀವನದ ಸತ್ಯಗಳನ್ನು ಸುಲಭವಾಗಿ ಗ್ರಹಿಸಲು ಸಹಾಯ ಮಾಡುತ್ತವೆ.

ಶರಣರ ವಚನಗಳಲ್ಲಿ ಕಾಣುವ ಈ ರೂಪಕಗಳು ಜನಪದ ಸಾಂಸ್ಕೃತಿಯ ಪ್ರಭಾವವನ್ನು ತೋರಿಸುತ್ತವೆ. ಗ್ರಾಮೀಣ ಜೀವನದಲ್ಲಿ ಸಾಮಾನ್ಯವಾಗಿ ಕಾಣುವ ಪ್ರಾಣಿ–ಪಕ್ಷಿಗಳ ಗುಣಗಳನ್ನು ಆಧರಿಸಿ ಅವರು ತಮ್ಮ ತತ್ವಗಳನ್ನು ವಿವರಿಸಿದ್ದಾರೆ. ಇದರಿಂದ ವಚನಗಳು ಪಂಡಿತರಿಗೆ ಮಾತ್ರವಲ್ಲದೆ ಸಾಮಾನ್ಯರಿಗೂ ಅರ್ಥವಾಗುವಂತಾಗಿದೆ. ಒಟ್ಟಿನಲ್ಲಿ ಶರಣರ ವಚನಗಳಲ್ಲಿ ಕಾಣುವ ಪ್ರಾಣಿ–ಪಕ್ಷಿಗಳ ರೂಪಕಗಳು ಕೇವಲ ಸಾಂಸ್ಕೃತಿಕ ಅಲಂಕಾರವಲ್ಲ; ಅವು ಸಮಾಜ ಸುಧಾರಣೆ ಮತ್ತು ಆತ್ಮೀಯ ಧ್ಯಾನವನ್ನು ಸಾರುವ ಪ್ರಮುಖ ಸಾಧನಗಳಾಗಿವೆ. ಈ ರೂಪಕಗಳ ಮೂಲಕ ಶರಣರು ಮಾನವನ ದುರ್ಗುಣಗಳನ್ನು

ತಿದ್ದಿ, ಸತ್ಪಥದಲ್ಲಿ ನಡೆಯುವಂತೆ ಪ್ರೇರೆಪಿಸಿದ್ದಾರೆ. ಆದ್ದರಿಂದ ಶರಣರ ವಚನಗಳಲ್ಲಿ ಕಾಣುವ ಪ್ರಾಣಿ–ಪಕ್ಷಿಗಳ ರೂಪಕಗಳು ವಚನ ಸಾಹಿತ್ಯದ ಅರ್ಥಾವತ್ತೆಯನ್ನು ಹೆಚ್ಚಿಸುವ ಪ್ರಮುಖ ಅಂಶಗಳಾಗಿವೆ.

ಪ್ರಮುಖ ಪದಗಳು: ಪ್ರಾಣಿರೂಪಕತೆ, ಪಕ್ಷಿ ರೂಪಕತೆ, ಭಕ್ತಿ ತತ್ವ, ಜ್ಞಾನ ಮತ್ತು ಅಜ್ಞಾನ, ನೈತಿಕ ಮೌಲ್ಯಗಳು, ಧಾರ್ಮಿಕ ಹಾಗೂ ಅದ್ಯಾತ್ಮಿಕ ಸಂದೇಶ

ಪೀಠಿಕೆ:

ಶರಣರ ವಚನಗಳಲ್ಲಿ ಪ್ರಾಣಿ ಮತ್ತು ಪಕ್ಷಿಗಳನ್ನು ಕೇವಲ ಜೀವಿಗಳಾಗಿ ನೋಡದೆ ಮಾನವನ ಅಂತರಂಗದ ಗುಣಗಳು ಸಾಮಾಜಿಕ ಅಂಕುಡೊಂಕುಗಳು ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ವಿವರಿಸುವ ಅಪರೂಪದ ರೂಪಗಳಾಗಿ ಬಳಸಲಾಗಿದೆ. 12ನೇ ಶತಮಾನದ ಶಿವಶರಣರು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಗಹನವಾದ ವೇದಾಂತ ಮತ್ತು ತತ್ವಶಾಸ್ತ್ರವನ್ನು ಬೋಧಿಸಲು ತಮಗೆ ಪರಿಚಿತವಿದ್ದ ಪ್ರಕೃತಿ ಹಾಗೂ ಜೀವ ಸಂಕುಲವನ್ನು ಮಾಧ್ಯಮವಾಗಿ ಬಳಸಿಕೊಂಡರು. ವಚನ ಸಾಹಿತ್ಯದಲ್ಲಿ ಪ್ರಾಣಿ ಪಕ್ಷಿಗಳ ಬಳಕೆ ಕೇವಲ ಅಲಂಕಾರಿಕ್ಕಾಗಿ ಅಲ್ಲ; ಬದಲಾಗಿ ಅದು ಆಳವಾದ ಅರ್ಥವನ್ನು ಹೊತ್ತು ತರುತ್ತದೆ. ಶರಣರು ಮನುಷ್ಯನ ಅಹಂಕಾರ, ಕಾಮ, ಕ್ರೋಧಾದಿ, ಅರಿಷಡ್ವರ್ಗಗಳನ್ನು ವಿವರಿಸಲು ಪ್ರಾಣಿಗಳ ಸ್ವಭಾವವನ್ನು ಬಳಸಿದ್ದಾರೆ. ಅಂತರಂಗ ಶುದ್ಧಿಯಾಗಿ ಅಕ್ಕಮಹಾದೇವಿಯವರು ವಚನಗಳಲ್ಲಿ ಪಕ್ಷಿಗಳು ಆತ್ಮದ ಹಂಬಲದ ಸಂಕೇತಗಳಾಗಿ ಬರುತ್ತವೆ. ಲೌಕಿಕ ಬಂಧನದಿಂದ ಮುಕ್ತನಾಗಬಯಸುವ ಸಾಧಕರನ್ನು ಹಾರುವ ಹಕ್ಕಿಗೆ ಹೋಲಿಸುವುದು ಕಂಡುಬರುತ್ತದೆ. ಸಮಾಜದಲ್ಲಿನ ಬೂಟಾಟಿಕೆ ಮತ್ತು ಮೌಢ್ಯವನ್ನು ಖಂಡಿಸಲು ಶರಣರು ಪ್ರಾಣಿಗಳನ್ನು ರೂಪಕಗಳನ್ನಾಗಿ ಬಳಸಿದರು. ಹಂದಿ, ನರಿ, ನಾಯಿ ಮುಂತಾದ ಪ್ರಾಣಿಗಳ ಗುಣಗಳ ಮೂಲಕ ಮನುಷ್ಯನ ನಡುವಳಿಕೆಯನ್ನು ವಿಡಂಬನೆ ಮಾಡಿದ್ದಾರೆ. ದಯವೇ ಧರ್ಮದ ಮೂಲವನ್ನಾಗಿ ಮಾಡಿಕೊಂಡು, ಪ್ರಾಣಿಗಳನ್ನು ಬಲಿ ಕೊಡುವ ವೈದಿಕ ಪದ್ಧತಿಯನ್ನು ವಿರೋಧಿಸಿದ ಶರಣರು, 'ಸಕಲ ಜೀವರಾಶಿಗಳಿಗೆ ಲೇಸನ್ನೇ ಬಯಸುವವನೇ ಶರಣ' ಎಂದು ಸಾರಿದರು. ಈ ಮೂಲಕ ಪರಿಸರ ಪ್ರಜ್ಞೆ ಮತ್ತು ಪ್ರಾಣಿ ಹಿತರಕ್ಷಣೆಯ ಚಿಂತನೆಯನ್ನು ಅಂದೇ ಬಿತ್ತಿದ್ದರು. ವಚನಕಾರರು ಪ್ರಾಣಿಗಳನ್ನು ಉಪಮೇ ಮತ್ತು ರೂಪಕಗಳಾಗಿ ಬಳಸುವ ಮೂಲಕ ಅಧ್ಯಾತ್ಮಕ ಸಂಕೀರ್ಣ ವಿಚಾರಗಳನ್ನು ಅತ್ಯಂತ ಸರಳವಾಗಿ ಜನಮನಕ್ಕೆ ಮುಟ್ಟುವಂತೆ ಮಾಡಿದರು. ಒಟ್ಟಾರೆಯಾಗಿ ವಚನ ಸಾಹಿತ್ಯದಲ್ಲಿ ಪ್ರಾಣಿ ಪಕ್ಷಿಗಳು ಮನುಷ್ಯನ ಆತ್ಮದ ವಿಕಾಸವನ್ನು ಮತ್ತು ಅವನ ಸುತ್ತಲಿನ ಪ್ರಪಂಚದ ವಾಸ್ತವತೆಯನ್ನು ತೋರಿಸುವ ಕನ್ನಡಿಗಳಾಗಿ

ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಅವರ ವಚನಗಳ ನಿರ್ದೇಶನಗಳೊಂದಿಗೆ ಈ ಮುಂದೆ ನೋಡಲಾಗಿದೆ.

ಕನ್ನಡದ ಆದ್ಯ ವಚನಕಾರ ದೇವರ ದಾಸಿಮಯ್ಯ ಅವರು ತಮ್ಮ ವಚನಗಳಲ್ಲಿ ಪ್ರಾಣಿ ಮತ್ತು ಪಕ್ಷಿಗಳ ಉದಾಹರಣೆಗಳನ್ನು ನೀಡುವ ಮೂಲಕ ಮನುಷ್ಯನ ಸ್ವಭಾವ ಅಂತರಂಗದ ಶುದ್ಧಿ ಮತ್ತು ಭಕ್ತಿಯನ್ನು ಮಾರ್ಮಿಕವಾಗಿ ವಿವರಿಸಿದ್ದಾರೆ. ಇವರು ಬಾಹ್ಯ ಆಡಂಬರ ಮತ್ತು ಅಂತರಂಗದ ಕೊಳೆಯನ್ನು ವಿವರಿಸಲು ಪ್ರಾಣಿಗಳನ್ನು ಬಳಕೆ ಮಾಡಿಕೊಳ್ಳುತ್ತಾರೆ. ಶಿವಶರಣರ ಮೂಲತತ್ವವಾದ ಅಹಿಂಸೆ ದಾಸಿಮಯ್ಯನವರ ವಿಚಾರಗಳಲ್ಲಿಯೂ ಎದ್ದು ಕಾಣುತ್ತದೆ. ಅವರು ಪ್ರಾಣಿ ಬಲಿಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ದೇವರಿಗೆ ಪ್ರಾಣಿ ಬಲಿಗಳನ್ನು ಬಲಿಕೊಡುವುದರ ಮೂಲಕ ಮೋಕ್ಷ ಸಿಗುವುದಿಲ್ಲ ಬದಲಾಗಿ ಸಂಕಲ ಜೀವಿಗಳಲ್ಲಿಯೂ ಇರುವ ಚೈತನ್ಯವನ್ನು ಗೌರವಿಸುವುದೇ ನಿಜವಾದ ಭಕ್ತಿ ಎಂದು ಅವರು ಪ್ರತಿಪಾದಿಸಿದ್ದಾರೆ. ಪ್ರಕೃತಿ ಮತ್ತು ಜೀವಸಂಕುಲದ ನಡುವಿನ ಸಾಮರಸ್ಯದ ಕುರಿತು ತಮ್ಮ ವಚನಗಳಲ್ಲಿ ಭೂಮಿ, ಗಾಳಿ ಮತ್ತು ಆಕಾಶದ ಜೊತೆಗೆ ಜೀವ ಜಗತ್ತಿನ ವಿಸ್ಮಯವನ್ನು ಗುರುತಿಸಿದ್ದಾರೆ. ಭೂಮಿಯನ್ನು ಆಧಾರವಾಗಿಟ್ಟು ಗಾಳಿಯನ್ನು ಸ್ತಂಭವಾಗಿ ಮಾಡಿ ಈ ಜಗತ್ತಿನಲ್ಲಿ ಹೂವು, ಹಣ್ಣು, ಪ್ರಾಣಿ, ಪಕ್ಷಿಗಳನ್ನು ಸೃಷ್ಟಿಸಿದ ಆ ಮಹಾರಹಸ್ಯವನ್ನು ಅವರು ಕೊಂಡಾಡುತ್ತಾರೆ. ‘ಒಂದೇ ಮರದ ಹಣ್ಣುಗಳನ್ನು ಪಕ್ಷಿಗಳು ತಿನ್ನುವಂತೆ’ ಈ ಪ್ರಪಂಚದ ಸಂಪನ್ಮೂಲಗಳು ಎಲ್ಲಾ ಜೀವಿಗಳಿಗೂ ಸೇರಿದ್ದು ಎಂಬ ಸಮಾನತೆಯ ಭಾವಾ ಅವರ ವಚನಗಳಲ್ಲಿ ಅಡಗಿದೆ. ಅವರ ಎಲ್ಲಿ ವಚನಗಳು ‘ರಾಮನಾಥ’ಎಂಬ ಅಂಕಿತನಾಮದಿಂದ ಕೊನೆಗೊಳ್ಳುತ್ತವೆ. ಪ್ರಕೃತಿಯ ಪ್ರತಿಯೊಂದು ಕಣದಲ್ಲಿಯೂ ಅಂದರೆ ಗಿಡ, ಮರ, ಪ್ರಾಣಿ, ಪಕ್ಷಿಗಳಲ್ಲಿ ಅವರು ರಾಮನಾಥನನ್ನು ಕಂಡಿದ್ದರು. ಇವರ ದೃಷ್ಟಿಯಲ್ಲಿ ಪ್ರಾಣಿ ಪಕ್ಷಿಗಳು ಕೇವಲ ಜೀವಿಗಳಲ್ಲ ಅವು ಮನುಷ್ಯನನ್ನು ಅಹಂಕಾರವನ್ನು ತಿದ್ದುವ ಮತ್ತು ಪ್ರಕೃತಿಯ ಜೊತೆಗಿನ ಸಂಕೇತಗಳ ಸಂಬಂಧವನ್ನು ನೆನಪಿಸುವ ಸಂಕೇತಗಳಾಗಿವೆ ಎಂಬುದನ್ನು ಅವರ ವಚನಗಳ ಮೂಲಕ ಗಮನಿಸಬಹುದು.

“ನಾಯಿ ಎಲುಬು ಹಿಡಿದುಕೊಂಡು

ರಕ್ತದ ರುಚಿ ತನ್ನದೇ ಎಂದು

ಭ್ರಮಿಸುವಂತೆ

ಲೋಕದ ಆಸೆಗೆ ಬಿದ್ದವನು

ಅದನ್ನೇ ಸುಖವೆಂದು ಭಾವಿಸುತ್ತಾನೆ

ರಾಮನಾಥ”[1]

ದಾಸಿಮಯ್ಯನವರ ಈ ವಚನವು ಲೌಕಿಕ ಸುಖದ ಮಿಥ್ಯವನ್ನು ಅತ್ಯಂತ ಕಟುವಾಸ್ತುದೊಂದಿಗೆ ಬಿಚ್ಚಿಡುತ್ತದೆ. ಭ್ರಮೆಯ ಸ್ವರೂಪ ಎದ್ದು ಕಾಣಿಸುತ್ತದೆ. ನಾಯಿಯು ಒಣ ಎಲುಬನ್ನು ಕಚ್ಚಿದಾಗ ಅದರ ಹರಿತವಾದ ತುದಿಗಳಿಂದ ನಾಯಿಯ ದವಡೆಯೇ ಗಾಯಗೊಂಡು ರಕ್ತ ಸುರಿಯುತ್ತದೆ. ಆದರೆ ನಾಯಿಯು ಆ ರಕ್ತವು ಎಲುಬಿನಿಂದ ಬರುತ್ತಿದೆ ಎಂದು ಭಾವಿಸಿ ಸವಿಯುತ್ತದೆ. ಇಲ್ಲಿ ರಕ್ತ ನಾಯಿಯದ್ದೆ ಆಗಿದ್ದರು ಅದು ಎಲುಬಿನ ರುಚಿ ಎಂದು ಭ್ರಮಿಸುತ್ತದೆ. ಅಂದರೆ ಮನುಷ್ಯನು ಲೌಕಿಕ ಆಸೆಗಳಾದ ಹಣ ಅಂತಸ್ತು ಸಾಧನೆಗಳ ಬೆನ್ನತ್ತಿ ಹೋಗುತ್ತಾನೆ. ಈ ಸುಖಗಳು ಹೊರಗಿನ ವಸ್ತುಗಳಿಂದ ಸಿಗುತ್ತವೆ ಎಂದು ಅವನು ಭಾವಿಸುತ್ತಾನೆ. ಆದರೆ ವಾಸ್ತವದಲ್ಲಿ ಆ ವಸ್ತುಗಳನ್ನು ಪಡೆಯುವ ಭರದಲ್ಲಿ ಅವನು ವ್ಯಯಿಸುತ್ತಿರುವುದು ತನ್ನದೇ ಆದ ಆಯಸ್ಸು ಶಕ್ತಿ ಮತ್ತು ಮನಃಶಾಂತಿ ಎಂಬ ರಕ್ತವನ್ನು ಸುಖದ ಅನುಭವ ತನ್ನ ಅಂತರಂಗದ್ದೆ ಆಗಿದ್ದರೂ, ಅದರ ಮೂಲ ಹೊರಗಿನ ವಸ್ತು ಎಂದು ಭ್ರಮಿಸುವುದು ಅಜ್ಞಾನ ಮನುಷ್ಯನ ಆಸೆಗಳು ಸುಖವನ್ನು ನೀಡುವುದಿಲ್ಲ. ಬದಲಾಗಿ ಆ ವಸ್ತುವಿನ ಮೇಲಿನ ಹಂಬಲ ತೀರಿದಾಗ ಮನಸ್ಸು ಕ್ಷಣಕಾಲ ಶಾಂತವಾಗುತ್ತದೆ. ಆ ಶಾಂತಿಯನ್ನೇ ನಾವು 'ಸುಖ' ಎಂದು ತಪ್ಪಾಗಿ ಭಾವಿಸುತ್ತೇವೆ. ಎಲುಬನ್ನು ಕಚ್ಚುವ ನಾಯಿಗೆ ಕೊನೆಗೆ ಉಳಿಯುವುದು ನೋವು ಮಾತ್ರ. ಹಾಗೆಯೇ ಲೌಕಿಕ ಸುಖದ ಬೆನ್ನತ್ತಿದವನಿಗೆ ಕೊನೆಗೆ ಸಿಗುವುದು ದೈಹಿಕ ಮತ್ತು ಮಾನಸಿಕ ಬಳಲಿಕೆ.

"ಕತ್ತೆ ಮೇಲೆ ಚಂದಾನವ ಹಚ್ಚಿದರೆ
ಅದಕ್ಕೆ ಅದರ ಸುಗಂಧ ಅರಿವೇ?
ಅಜ್ಞಾನಿಯ ಮುಂದೆ ಜ್ಞಾನ ಹೇಳಿದರೆ
ಅದರ ಮೌಲ್ಯ ಅರಿಯಲಾರ
ರಾಮನಾಥ"[2]

ಈ ವಚನವು ಅರ್ಹತೆ ಮತ್ತು ಹರಿವಿನ ಮಹತ್ವವನ್ನು ಕುರಿತಾದ ಒಂದು ಅತ್ಯುತ್ತಮ ವಿಮರ್ಶೆಯವಾಗಿದೆ. ಕತ್ತೆಯು ಭಾರ ಹೊರುವ ಪ್ರಾಣಿ. ಅದರ ಮೇಲೆ ಬೆಲೆ ಬಾಳುವ ಸುಗಂಧ ಭರಿತ ಶ್ರೀಗಂಧವನ್ನು ಲೇಪಿಸಿದರೂ ಅದಕ್ಕೆ ಆ ಸುಗಂಧದ ಅರಿವಾಗುವುದಿಲ್ಲ. ಅದಕ್ಕೆ ಕೇವಲ ಭಾರದ ಅರಿವಾಗುತ್ತದೆ ಹೊರತು ವಸ್ತುವಿನ ಗುಣಮಟ್ಟದ್ದಲ್ಲ. ಹಾಗೆಯೇ ಜ್ಞಾನವನ್ನು ಸ್ವೀಕರಿಸುವ ಸಂಸ್ಕಾರ ಅಥವಾ ಹಂಬಲವಿಲ್ಲದ ಅಜ್ಞಾನಿಯ ಮುಂದೆ ಎಷ್ಟೇ ಉನ್ನತ ವಿಚಾರಗಳನ್ನು ಹೇಳಿದರೂ ಅವು ವ್ಯರ್ಥ ಎಂಬುದು ಶರಣರ ಅಭಿಮತ. ಅಜ್ಞಾನಿ ಎಂದರೆ ಕೇವಲ ಅಕ್ಷರಸ್ಥನಲ್ಲದವನಲ್ಲ; ಬದಲಾಗಿ ಹೊಸ

ವಿಚಾರಗಳನ್ನು ಸ್ವೀಕರಿಸುವ ಮನೋಭಾವವಿಲ್ಲದವನು. ಅಂತವನಿಗೆ 'ತತ್ವಗಳನ್ನು ಬೋಧಿಸುವುದು ಬೂದಿಯಲ್ಲಿ ಹೋಮ ಮಾಡಿದಂತೆ'. ಇಲ್ಲಿ ಜ್ಞಾನವು ಚಂದನದಂತೆ ಪವಿತ್ರವಾಗಿದ್ದರೂ ಕೇಳುಗನ ಅಸಮರ್ಥತೆಯಿಂದ ಅದು ಕೇವಲ ಶಬ್ದವಾಗಿ ಉಳಿಯುತ್ತದೆ. ಅರ್ಹತೆ ಇಲ್ಲದವರಿಗೆ ಉಪದೇಶ ನೀಡುವುದು ಕಾಲದ ವ್ಯರ್ಥ ಮತ್ತು ಜ್ಞಾನಕ್ಕೆ ಮಾಡುವ ಅಪಮಾನ ಎಂದು ದಾಸಿಮಯ್ಯನವರು ಎಚ್ಚರಿಸುತ್ತಾರೆ. ಚಂದನದ ಸುಗಂಧವನ್ನು ಆಸ್ವಾದಿಸಲು ನಾಸಿಕದ ಸಂವೇದನೆ ಬೇಕು. ಹಾಗೆಯೇ ಜ್ಞಾನವನ್ನರಿಯಲು 'ಅಂತರಂಗದ ಕಣ್ಣು' ಬೇಕು ಎಂಬುದು ಇಲ್ಲಿನ ಗಹನವಾದ ಅರ್ಥ.

ಅಲ್ಲಮಪ್ರಭುಗಳ ವಚನದ ಸಾಹಿತ್ಯವು ಅತ್ಯಂತ ಗಹನವಾದ ಮತ್ತು ಬೆರಗೊಳಿಸುವ ವ್ಯಕ್ತಿತ್ವ. ಅವರ ವಚನಗಳಲ್ಲಿ ಪ್ರಾಣಿ–ಪಕ್ಷಿಗಳ ರೂಪಗಳು ಕೇವಲ ಉಪಮೇಗಳಾಗಿ ಬರದೆ ಬೆಡಗಿನ ಸ್ವರೂಪದಲ್ಲಿ ಅಧ್ಯಾತ್ಮದ ಅತಿ ಎತ್ತರದ ಸ್ಥಿತಿಯನ್ನು ವಿವರಿಸಲು ಬಳಕೆಯಾಗಿದೆ. ಅಲ್ಲಮಪ್ರಭುಗಳು ಭೌತಿಕ ಪ್ರಪಂಚದ ನಿಯಮಗಳಿಗೆ ವಿರುದ್ಧವಾದ ಚಿತ್ರಣಗಳನ್ನು ನೀಡುವ ಮೂಲಕ ಅಧ್ಯಾತ್ಮವನ್ನು ವಿವರಿಸುತ್ತಾರೆ. ಜಗತ್ತಿನ ಮೋಹ ಅಥವಾ ಮಾಯೆಯನ್ನು ಬಣ್ಣದ ಜಿಂಕೆಗೆ ಹೋಲಿಸುತ್ತಾರೆ. ಮನುಷ್ಯ ಈ ಮೋಹಕವಾದ ಜಿಂಕೆಯ ಹಿಂದೆ ಬಿದ್ದು ತನ್ನ ಅಂತರಂಗದ ಶಾಂತಿಯನ್ನು ಕಳೆದುಕೊಳ್ಳುತ್ತಾನೆ. ಆ ಜಿಂಕೆಯನ್ನು ಬೆನ್ನಟ್ಟುವ ಬೇಟೆಗಾರನೇ ಮನುಷ್ಯ ಎಂದು ಅವರ ವಿಶ್ಲೇಷಿಸುತ್ತಾರೆ. ಮನುಷ್ಯ ಇಂದ್ರಿಯ ಸುಖಗಳನ್ನು ಮತ್ತು ಹಸಿವನ್ನು ದಮನ ಮಾಡದಿದ್ದರೆ; ಅವು ಮನುಷ್ಯನನ್ನೇ ನುಂಗುವ ಕ್ರೂರ ಪ್ರಾಣಿಗಳಂತೆ ವರ್ತಿಸುತ್ತವೆ ಎಂದು ಎಚ್ಚರಿಸುತ್ತಾರೆ. 'ಹಸಿವು' ಎಂಬುದು ಒಂದು ಹೆಬ್ಬಾವು'ಎಂಬುವಂತೆ ಅವರು ಶಾರಿರಕ ಬಯಕೆಯನ್ನು ಪ್ರಾಣಿಗಳಿಗೆ ಹೋಲಿಸುತ್ತಾರೆ. ಅವುಗಳನ್ನು ಮೀರಬೇಕಾದ ಅಗತ್ಯಗಳನ್ನು ಕೂಡ ಪ್ರತಿಪಾದಿಸಿದ್ದಾರೆ. ಪಕ್ಷಿಯು ಆಕಾಶದಲ್ಲಿ ಹಾರಿದರು ಅದರ ಹೆಜ್ಜೆ ಗುರುತುಗಳು ಕಾಣಿಸುವುದಿಲ್ಲ. ಅಲ್ಲಮಪ್ರಭುಗಳು ಶರಣ ಅಥವಾ ಮುಕ್ತನ ಸ್ಥಿತಿಯನ್ನು ಹೀಗೆ ವಿವರಿಸುತ್ತಾರೆ. 'ಆಕಾಶದಲ್ಲಿ ಹಕ್ಕಿ ಹಾರಿದಂತೆ ಶರಣ ಈ ಲೋಕದಲ್ಲಿ ಇದ್ದರೂ ಲೌಕಿಕಕ್ಕೆ ಅಂಟಿಕೊಳ್ಳುವುದಿಲ್ಲ, ಇದು ನಿರ್ವಾಹದ ಪರಮಾವಧಿ. ಇವರ ವಚನಗಳಲ್ಲಿ ಹುಲಿ, ಸಿಂಹ, ಹಾವುಗಳಂತಹ ಕ್ರೂರ ಪ್ರಾಣಿಗಳ ಹೆಚ್ಚು 'ಅಹಂಕಾರ'ಮತ್ತು ಇಂದ್ರಿಯಗಳ ಸಂಕೇತಗಳಾಗಿ ಬರುತ್ತವೆ. ಅವುಗಳನ್ನು ಪಳಗಿಸುವುದು ಅಥವಾ ಗೆಲ್ಲುವುದು ಎಂದರೆ ಪರಮಾತ್ಮನಾದ ಗುಹೇಶ್ವರನನ್ನು ಅರಿಯುವುದು ಎಂದರ್ಥ. ಬಸವಣ್ಣನವರ ವಚನಗಳಲ್ಲಿ ಪ್ರಾಣಿಗಳು ಹೆಚ್ಚಾಗಿ ಲೌಕಿಕ ನೀತಿಯನ್ನು ಹೇಳಲು ಬಂದರೆ ಅಲ್ಲಮಪ್ರಭುಗಳಲ್ಲಿ ಅವು ಪರಮಾರ್ಥಿಕ ರಹಸ್ಯಗಳನ್ನು ಬೇಧಿಸಲು ಬಳಕೆಯಾಗುತ್ತವೆ. ಅವರ ರೂಪಕಗಳು ಸಾಮಾನ್ಯ

ಬುದ್ಧಿಗೆ ತಕ್ಷಣ ನಿಲುಕದಿದ್ದರೂ ಚಿಂತಿಸಿದಾಗ ಜ್ಞಾನದ ಹೊಸ ಆಯಾಮಗಳನ್ನು ತೆರೆಯುತ್ತವೆ. ಅಂತಹ ವಚನಗಳನ್ನು ಉದಾಹರಣೆಯಾಗಿ ಈ ಕೆಳಗಿನಂತೆ ನೋಡಲಾಗಿದೆ.

“ಕಾಡಿನೊಳಗಿರುವ ಮೃಗವು ಬಲೆಗೆ

ಬಿದ್ದಂತೆ

ಮಾಯೆಯ ಬಲೆಗೆ ಬಿದ್ದ ಮಾನವನಾಗೆ

ದಾರಿ ತಿಳಿಯದೆ ಅಲೆದಾಡುತಿಹನು

ಗುಹೇಶ್ವರ”[3]

ಅಲ್ಲಮಪ್ರಭುಗಳ ಈ ವಚನವು ಮನುಷ್ಯನ ಅಸ್ತಿತ್ವ ಮತ್ತು ಆತ ‘ಮಾಯೆ’ ಎಂಬ ಸುಳಿಯಲ್ಲಿ ಸಿಲುಕಿರುವ ಬಗೆಯನ್ನು ಅತ್ಯಂತ ಕಲಾತ್ಮಕವಾಗಿ ವಿವರಿಸುತ್ತದೆ. ಮೃಗ ಮತ್ತು ಬಲೆಯ ರೂಪಕತೆಯನ್ನು ಇಟ್ಟುಕೊಂಡು ಕಾಡಿನಲ್ಲಿ ಮುಕ್ತವಾಗಿ ಅಲೆಯುವ ಪ್ರಾಣಿಯು ಹಸಿವಿಗೆ ಅಥವಾ ಆಮಿಷಕ್ಕೊಳ್ಳಗಾಗಿ ಬೇಟೆಗಾರನ ಬಲೆಗೆ ಬೀಳುತ್ತದೆ. ಒಮ್ಮೆ ಬಲೆಗೆ ಬಿದ್ದ ಮೇಲೆ ಅದು ಎಷ್ಟೋ ಪ್ರಯತ್ನಿಸಿದರು. ಇಲ್ಲಿ ‘ಕಾಡು’ ಎಂದರೆ ಇಡೀ ಸಂಸಾರ, ‘ಮೃಗ’ ಎಂದರೆ ಜೀವಾತ್ಮ ಮತ್ತು ‘ಬೆಲೆ’ ಎಂದರೆ ಮನುಷ್ಯನನ್ನು ಬಂಧಿಸಿರುವ ಮಾಯೆ. ಮಾಯ ಸ್ವರೂಪವನ್ನು ಇಟ್ಟುಕೊಂಡು ಕಣ್ಣಿಗೆ ಕಾಣುವ ಬಲೆಯಲ್ಲ; ಅದು ಆಸೆ ಅಹಂಕಾರ ಮಮಕಾರಗಳ ರೂಪದಲ್ಲಿರುತ್ತದೆ. ಮನುಷ್ಯನ ಲೌಕಿಕ ಸುಖಗಳೇ ಶಾಶ್ವತವೆಂದು ನಂಬಿ ಅವುಗಳ ಹಿಂದೆ ಓಡುತ್ತಾನೆ ಆದರೆ ಆ ಓಟವೇ ಅವನನ್ನು ಬಂಧನಕ್ಕೆ ಒಳಪಡಿಸುತ್ತದೆ ಎಂಬ ಸತ್ಯ ಅವನಿಗೆ ತಿಳಿದಿರುವುದಿಲ್ಲ. ಬಲೆಗೆ ಬಿದ್ದ ಪ್ರಾಣಿಗೆ ದಿಕ್ಕು ತಪ್ಪಿದಂತಾಗುತ್ತದೆ ಹಾಗೆಯೇ ಸಂಸಾರದ ಜಂಜಾಟಗಳಲ್ಲಿ ಸಿಲುಕಿದ ಮನುಷ್ಯನಿಗೆ ಆಧ್ಯಾತ್ಮದ ಅಥವಾ ಸರಿಯಾದ ದಾರಿ ತಿಳಿಯುವುದಿಲ್ಲ. ಅವನ್ನು ಪರಿಹಾರಕ್ಕಾಗಿ ಹೊರಗಿನ ಪ್ರಪಂಚದಲ್ಲಿ ಹುಡುಕುತ್ತಾ ಅಲೆದಾಡುತ್ತಾನೆ. ಉದಾ: ಕೇವಲ ಆಚರಣೆಗಳು ಅಂಧ ಶ್ರದ್ಧೆ ಆದರೆ ಅಂತರಂಗದಲ್ಲಿ ಅರಿವು ಇಲ್ಲದೆ ಈ ಎಳೆದಾಟ ಮುಗಿಯುವುದಿಲ್ಲ. ಈ ವಚನವು ಮನುಷ್ಯನ ಅಸಹಾಯತೆಯನ್ನು ಎತ್ತಿ ತೋರಿಸುತ್ತದೆ. ತಾನು ಸ್ವತಂತ್ರವೆಂದು ಭಾವಿಸುವ ಮಾನವನು ವಾಸ್ತವದಲ್ಲಿ ತನ್ನ ಆಸೆಗಳ ಕೈಗೊಂಬೆಯಾಗಿದ್ದರೆ ಬಲೆಯಿಂದ ಬಿಡಿಸಿಕೊಳ್ಳಲು ಬಲೆಯನ್ನು ಹರಿದು ಹಾಕುವ ಜ್ಞಾನ ಬೇಕು. ಅಲ್ಲಮಪ್ರಭುಗಳು ಪ್ರಕಾರ ಗುಹೇಶ್ವರನ ಅಂತರಂಗ ಶಿವನ ಅರಿವು ಮೂಡಿದಾಗ ಮಾತ್ರ ಆ ಮಾಯೆಯ ಬೆಲೆ ಕಳಚಲು ಸಾಧ್ಯ.

“ಕೋತಿ ಕೊಂಬೆಯಿಂದ ಕೊಂಬೆಗೆ

ಜಿಗಿಯುವಂತೆ

ಮನವು ವಿಷಯದಿಂದ ವಿಷಯಕ್ಕೆ

ಜಿಗಿಯುತ್ತದೆ
ನಿಲ್ಲದ ಮನವನ್ನು ಹಿಡಿಯದಿದ್ದರೆ
ತತ್ವ ಹರಿಯಲಾರದು
ಗುಹೇಶ್ವರ"[4]

ಅಲ್ಲಮಪ್ರಭುಗಳ ಈ ವಚನವು ಮನುಷ್ಯನ ಅಂತರಂಗದ ಅತಿ ದೊಡ್ಡ ಕರ್ತೃವಾದ 'ಚಂಚಲ' ಮನಸ್ಸನ್ನು ಅತ್ಯಂತ ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತದೆ. ಕೋತಿಯು ಒಂದು ಕಡೆ ಸ್ಥಿರವಾಗಿ ಇರಲಾರದು. ಅದು ಎಡಬಿಡದೆ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಜಿಗಿಯುತ್ತಿರುತ್ತದೆ. ಅವರು ಮನುಷ್ಯನ ಮನಸ್ಸು ಕೋತಿಗೆ ಹೋಲಿಸಿದ್ದಾರೆ. ಮನಸ್ಸು ಕೂಡ ಅಷ್ಟೆ. ಒಂದು ಆಸೆ ಈಡೇರುತ್ತಿದ್ದಂತೆ ಮತ್ತೊಂದರ ಕಡೆಗೆ ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಅಂದರೆ ಹಣ, ಅಂತಸ್ತು, ಕಾಮನೆಗಳಿಗೆ ನಿರಂತರವಾಗಿ ಜಿಗಿಯುತ್ತಿರುತ್ತದೆ. ಇಲ್ಲಿ ಕೊಂಬೆ ಎಂದರೆ ಲೌಕಿಕ ವಿಷಯಗಳು. ಮನಸ್ಸು ಇಂದ್ರಿಯ ಸುಖಗಳ ಬೆನ್ನತ್ತಿ ಹೋದಷ್ಟು ಅದು ಸುಸ್ತಾಗುತ್ತದೆ ಹೊರತು ಸ್ಥಿರವಾಗುವುದಿಲ್ಲ. ಈ ಚಂಚಲತೆಯ ಮನುಷ್ಯನ ಆಧ್ಯಾತ್ಮಿಕ ಪಥನಕ್ಕೆ ಕಾರಣವಾಗುತ್ತದೆ. ಮನಸ್ಸು ಹೊರಗಿನ ವಿಷಯಗಳಲ್ಲಿ ಮುಳುಗಿರುವವರಿಗೆ ಅದಕ್ಕೆ ತನ್ನ ಅಂತರಂಗವನ್ನು ನೋಡಲು ಪುರುಸೊತ್ತಿರುವುದಿಲ್ಲ. ತತ್ವವೆಂದರೆ ಪರಮ ಸತ್ಯ ಅಥವಾ ಆತ್ಮಧ್ಯಾನ. ಸ್ಥಿರವಾದ ನೀರಿನಲ್ಲಿ ಮಾತ್ರ ಪ್ರತಿಬಿಂಬವು ಸ್ಪಷ್ಟವಾಗಿ ಕಾಣುವಂತೆ ಶಾಂತವಾದ ಮತ್ತು ಸ್ಥಿರವಾದ ಮನಸ್ಸಿನಲ್ಲಿ ಮಾತ್ರ ಸತ್ಯ ದರ್ಶನ ಸಾಧ್ಯ. ಮನಸ್ಸು ಜಿಗಿಯುತ್ತಾ ಇದ್ದರೆ ಮನುಷ್ಯನು ಎಷ್ಟೇ ಶಾಸ್ತ್ರ ಓದಿದರೂ ಅವನಿಗೆ ಜೀವನದ ಮೂಲ ತತ್ವ ಅರ್ಥವಾಗದು. 'ನಿಲ್ಲದ ಮನವನ್ನು ಹಿಡಿಯದಿದ್ದರೆ'ಎಂಬ ಸಾಲು ಅತ್ಯಂತ ಮುಖ್ಯವಾದದ್ದು. ಮನಸ್ಸನ್ನು ಬಲವಂತವಾಗಿ ಕಟ್ಟುವುದಲ್ಲ; ಬದಲಾಗಿ ಅರಿವಿನ ಮೂಲಕ ಅದನ್ನು ಸ್ಥಿರಗೊಳಿಸಬೇಕು ಎಂಬುದು ಅಲ್ಲಮರ ಆಶಯ. ಇಂದಿನ ಕಾಲದ ಅನೇಕ ಗೊಂದಲಗಳಿಗೆ ಈ ವಚನ ಕನ್ನಡಿ ಹಿಡಿಯುತ್ತದೆ. ನೂರಾರು ವಿಷಯಗಳ ಕಡೆಗೆ ಹರಿಯುವ ಗಮನವನ್ನು ಒಟ್ಟುಗೂಡಿಸಿದರೆ ಮನುಷ್ಯನಿಗೆ ಜೀವನ ಕಲೆ ಸಿದ್ದಿಸದು.

ಬಸವಣ್ಣನವರು ತಮ್ಮ ವಚನಗಳಲ್ಲಿ ಪ್ರಾಣಿ ಮತ್ತು ಪಕ್ಷಿಗಳ ಕೇವಲ ಉದಾಹರಣೆಗಳಾಗಿ ಬಳಸದೆ ಮನುಷ್ಯನ ಅಹಂಕಾರವನ್ನು ತಿದ್ದುವ ಮತ್ತು ಅಂತರಂಗದ ಕೊಳೆಯನ್ನು ಎತ್ತಿ ತೋರಿಸುವ ನೈತಿಕ ಕನ್ನಡಿಯಾಗಿ ಬಳಸಿದ್ದಾರೆ. ಅವರ ವಚನಗಳಲ್ಲಿ ಪ್ರಾಣಿ–ಪಕ್ಷಿಗಳ ರೂಪಕಗಳ ಕುರಿತಾದ ಪ್ರಮುಖ ವಿಚಾರಗಳು ಇಲ್ಲಿವೆ. ಬಸವಣ್ಣನವರು

ಮನುಷ್ಯನ ಅಹಂಕಾರವನ್ನು ಮೃಗಿಯ ಗುಣಕ್ಕೆ ಹೋಲಿಸುತ್ತಾರೆ. ಅವರು ಹೇಳುವಂತೆ 'ಆನೆಗೆ ಅಂಕುಶವೇ ಮಾವುತ'ಎನ್ನುವಂತೆ ಮದವೇರಿದ ಆನೆಯಂತಿರುವ ಮನುಷ್ಯನ ಅಹಂಕಾರಕ್ಕೆ 'ಭಕ್ತಿ ಮತ್ತು ಗುರುಕಾರುಣ್ಯ'ಎಂಬ ಅಂಕುಶ ಬೇಕೆಂದು ಅವರು ಪ್ರತಿಪಾದಿಸಿದ್ದಾರೆ. ಶರಣಶಕ್ತಿಯನ್ನು ವಿವರಿಸುವಾಗ ಅವನು ಸಂಸಾರವೆಂಬ ಕಾಡಿನಲ್ಲಿ ಸಿಂಹದಂತೆ ನಿರ್ಭಯವಾಗಬೇಕು ಎಂದು ಅವರು ಆಶಿಸುತ್ತಾರೆ. ಅಲ್ಲಮಪ್ರಭುಗಳಂತೆ ಬಸವಣ್ಣನವರು ಮನಸ್ಸಿನ ಚಂಚಲತೆಯನ್ನು ವಿವರಿಸಲು ಪ್ರಾಣಿಗಳನ್ನು ಬಳಸುತ್ತಾರೆ. 'ಮರ್ಕಟನ ಕೈಯಲಿ ಮಾಣಿಕ್ಯದಂತೆ'ಎಂಬ ರೂಪಕದಲ್ಲಿ ಬೆಲೆಬಾಳುವ ಜ್ಞಾನವು ಅರಿವಿಲ್ಲದವನ ಕೈ ಸೇರಿದರೆ ಅದು ಹೇಗೆ ವ್ಯರ್ಥವಾಗುತ್ತದೆ ಎಂಬುದನ್ನು ಆತನಿಗೆ ಉದಾಹರಣೆಯನ್ನು ಮೂಲಕ ತಿಳಿಸುತ್ತಾರೆ. ಸಮಾಜದ ಕಪಟ ಭಕ್ತಿಯನ್ನು ಟೀಕಿಸಲು ಅವರು ಪಕ್ಷಿಗಳನ್ನು ಬಳಸಿಕೊಂಡಿದ್ದಾರೆ. ಉದಾ: ನೀರಿನಲ್ಲಿ ಮೀನಿಗಾಗಿ ಏಕಾಗ್ರತೆಯಿಂದ ಕಾಯುವ ಕೊಕ್ಕರೆಯು ನೋಡಲು ಜ್ಞಾನಸ್ತನಂತೆ ಕಂಡರು ಅದರ ಗುರಿ ಮಾತ್ರ ಕೊಲೆ. ಹಾಗೆಯೇ ಹೊರಗೆ ಭಕ್ತನಂತೆ ನಟಿಸಿ ಒಳಗೆ ಕೆಟ್ಟ ಆಲೋಚನೆಗಳನ್ನು ಮಾಡುವವರನ್ನು ಕೊಕ್ಕರೆ ಭಕ್ತರು ಎಂದು ಕರೆದಿದ್ದಾರೆ. "ಹಾಸಿಗೆಯ ಮೇಲೆ ನಾಯಿ ಕುಳಿತಂತೆ" ಎಂಬ ರೂಪಕದ ಮೂಲಕ ಅಧಿಕಾರ ಅಥವಾ ಪದವಿ ಸಿಕ್ಕಾಗ ಅಹಂಕಾರ ಪಡುವ ಅಯೋಗ್ಯರನ್ನು ವಿಡಂಬಿಸಿದ್ದಾರೆ. ಅವರ ವಚನಗಳಲ್ಲಿ ಪ್ರಾಣಿಗಳ ಮೇಲಿನ ಕರುಣೆ ಅತ್ಯಂತ ಮುಖ್ಯವಾದದ್ದು. "ಕೊಂದು ತಿನ್ನುವ ಮಾರಿಯಲ್ಲಿದೆ. ಕಾಯುವ ದೈವವಿದು ಎಂಥಯ್ಯ?" ಎಂದು ಪ್ರಶ್ನಿಸುವ ಮೂಲಕ ಯಜ್ಞ-ಯಾಗಾದಿಗಳಲ್ಲಿ ಪ್ರಾಣಿ ಬಲಿ ನೀಡುವುದನ್ನು ತೀರವಾಗಿ ಖಂಡಿಸಿದರು. ಸಕಲ ಜೀವಿ ರಾಶಿಗಳನ್ನು ತನ್ನಂತೆ ಪ್ರೀತಿಸುವುದೇ ನಿಜವಾದ ಧರ್ಮವೆಂದು ಸಾರಿದರು. ಅಕ್ಕಮಹಾದೇವಿಯಂತೆ ಇವರು ಕೂಡ ಆತ್ಮವನ್ನು ಹಕ್ಕಿಗೆ ಹೋಲಿಸುತ್ತಾರೆ. ಲೌಕಿಕದ ಪಂಜರದಿಂದ ಬಿಡುಗಡೆ ಹೊಂದಿ ಕೂಡಲಸಂಗಮ ದೇವನತ್ತ ಹಾರುವ ಅಕ್ಕಿಯಾಗಿ ಭಕ್ತರನ್ನು ಚಿತ್ರಿಸುತ್ತಾರೆ. ಅಂದರೆ ಒಟ್ಟಾರೆ ಇವರ ದೃಷ್ಟಿಯಲ್ಲಿ ಪ್ರಾಣಿ ಪಕ್ಷಿಗಳು ಮನುಷ್ಯನಿಗಿಂತ ಕೀಳಲ್ಲ ಮನುಷ್ಯ ತನ್ನ ವಿವೇಚನೆಗಳನ್ನು ಕಳೆದುಕೊಂಡಾಗ ಪ್ರಾಣಿಗಿಂತ ಕೀಳಾಗುತ್ತಾನೆ. ಅದೇ ಪ್ರಾಣಿಗಳಲ್ಲಿರುವ ಸಹಜ ಗುಣಗಳನ್ನು ಮನುಷ್ಯ ಅಳವಡಿಸಿಕೊಂಡಾಗ ಅವನು ದವತ್ವಕ್ಕೆ ಏರುತ್ತಾರೆ ಎಂಬುದು ಅವರ ಆಶಯ ಅಂತಹ ಕೆಲವು ವಚನಗಳ ವಿಶ್ಲೇಷಣೆಯನ್ನು ಇಲ್ಲಿ ನೋಡಲಾಗಿದೆ.

"ನಾಯಿಗೆ ಮುತ್ತಿನ ಹಾರ ಹಾಕಿದರೆ
ಅದು ಕಚ್ಚುವ ಸ್ವಭಾವ ಬಿಡುವುದೇ?
ಅಜ್ಞಾನಿಗೆ ಜ್ಞಾನ ಹೇಳಿದರೆ

ಅದು ಅರ್ಥವಾಗುವುದೇ?

ಕೂಡಲಸಂಗಮದೇವ”[5]

ಬಸವಣ್ಣನವರ ಈ ವಚನವು ಮನುಷ್ಯನ ಸಂಸ್ಕಾರ ಮತ್ತು ಅರ್ಹತೆಯ ಕುರಿತು ಅತ್ಯಂತ ಕಟುವಾದ ಸತ್ಯವನ್ನು ಎತ್ತಿ ತೋರಿಸುತ್ತದೆ. ನಾಯಿಗೆ ಮುತ್ತಿನ ಹಾರವು ಒಂದು ಬೆಲೆಬಾಳುವ ಆಭರಣವಾಗಿ ಕಾಣಿಸುವುದಿಲ್ಲ; ಬದಲಾಗಿ ಅದು ಕಚ್ಚಿ ತಿನ್ನಬಹುದಾದ ಒಂದು ವಸ್ತುವಾಗಿ ಮಾತ್ರ ಕಾಣುತ್ತದೆ. ಮುತ್ತಿನಹಾರದ ಸೌಂದರ್ಯ ಅಥವಾ ಮೌಲ್ಯ ನಾಯಿಗೆ ಅರ್ಥವಾಗದು. ಅದು ತನ್ನ ಮೂಲಭೂತ ಪ್ರವೃತ್ತಿಯಾದ ಕಚ್ಚುವುದನ್ನೇ ಮಾಡುತ್ತದೆ. ಹಾಗೆಯೇ ಆಧ್ಯಾತ್ಮಿಕ ಜ್ಞಾನವು ಮುತ್ತಿನ ಹಾರದಂತೆ ಅತ್ಯಂತ ಶ್ರೇಷ್ಠವಾದದ್ದು ಆದರೆ ಅದನ್ನು ಸ್ವೀಕರಿಸುವ ಮನಸ್ಸು ಅಜ್ಞಾನದಿಂದ ಕೂಡಿದರೆ; ಆ ಜ್ಞಾನದ ಬೆಲೆ ಅದಕ್ಕೆ ತಿಳಿಯುವುದಿಲ್ಲ. ಬಾಹ್ಯವಾಗಿ ಸುಧಾರಣೆ ಮಾಡಿದ ತಕ್ಷಣ ಅಂತರಂಗದ ಗುಣಗಳು ಬದಲಾಗುವುದಿಲ್ಲ ಎಂಬುದು ಇಲ್ಲಿನ ಮುಖ್ಯ ವಿಚಾರ. ನಾಯಿಗೆ ಅಲಂಕಾರ ಮಾಡಿದರೂ ಅದರ ಪ್ರಾಣಿ ಸಹಜ ಗುಣ ಹೇಗೆ ಹೋಗುವುದಿಲ್ಲವೋ ಹಾಗೆಯೇ ಅರಿವಿನ ಹಸಿವಿಲ್ಲದೆ ಅಜ್ಞಾನಿಗೆ ಎಷ್ಟೇ ಹಿತವಚನ ಹೇಳಿದರೂ ಅವನು ಅದನ್ನು ತನ್ನ ಹಳೆಯ ಕೆಟ್ಟ ಆಲೋಚನೆಯಿಂದ ಅಳೆಯುತ್ತಾನೆ. ಜ್ಞಾನವು ಸಾರ್ಥಕವಾಗಬೇಕಾದರೆ ಕೇಳುವವನಲ್ಲಿ ಅದನ್ನು ಗ್ರಹಿಸುವ ಪಾತ್ರ ಶುದ್ಧಿ ಇರಬೇಕು. ಅಯೋಗ್ಯರಿಗೆ ನೀಡುವ ಉಪದೇಶವು ಕೇವಲ ಸಮಯದ ವ್ಯರ್ಥವಷ್ಟೇ. ಅಲ್ಲಿ ಅದು ಜ್ಞಾನಕ್ಕೆ ಮಾಡುವ ಅಪಚಾರವು ಹೌದು ಎಂಬ ಸೂಚನೆಯೂ ಇಲ್ಲಿದೆ. ಬದಲಾವಣೆ ಎಂಬುದು ಹೊರಗಿನಿಂದ ಬರುವಂತದ್ದಲ್ಲ; ಅದು ಒಳಗಿನಿಂದ ಬರಬೇಕಾದ ಅರಿವು.

“ಹಂದಿಗೆ ಚಂದಲೇಪಿಸಿದರೆ

ಅದು ಮಲದೊಳಗೆ ಹೋಗುವುದನ್ನು ಬಿಡುವುದೇ?

ಅಜ್ಞಾನಿಗೆ ಉಪದೇಶ ಮಾಡಿದರೆ

ಅವನು ದುರಾಚಾರ ಬಿಡುವುದೇ?

ಕೂಡಲಸಂಗಮದೇವ”[6]

ಬಸವಣ್ಣನವರ ಈ ವಚನವು ಸಹಜ ಗುಣ ಮತ್ತು ಪರಿವರ್ತನೆಯ ನಡುವಿನ ಸಂಘರ್ಷವನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸುತ್ತದೆ. ಹಂದಿಯ ಸಹಜ ಗುಣ ಕೊಳಕಿನಲ್ಲಿ ಇರುವುದು. ಅದಕ್ಕೆ ಸುಗಂಧಭರಿತವಾದ ಶ್ರೀಗಂಧವನ್ನು ಲೇಪಿಸಿದರೂ ಅದರ ಬಾಹ್ಯ ರೂಪ ಬದಲಾಗಬಹುದೇ ಹೊರತು; ಅದರ ಆಂತರಿಕ ಪ್ರವೃತ್ತಿ ಬದಲಾಗುವುದಿಲ್ಲ. ಆದ

ತಕ್ಷಣವೇ ತನ್ನ ಹಳೆಯ ಅಭ್ಯಾಸವಾದ ಕೊಳಕಿನ ಕಡೆಗೆ ಓಡುತ್ತದೆ. ಹಾಗೆಯೇ ಅಂತರಂಗದಲ್ಲಿ ದುರಾಚಾರವನ್ನೇ ತುಂಬಿಕೊಂಡಿರುವ ಅಜ್ಞಾನಿಗೆ ಎಷ್ಟೇ ಪವಿತ್ರವಾದ ಉಪದೇಶವನ್ನು ನೀಡಿದರೂ ಅವು ಅವನ ಮೇಲೆ ತಾತ್ಕಾಲಿಕ ಪರಿಣಾಮ ಬೀರಬಹುದೇ ಹೊರತು ಅವನ ಕ್ರಿಯೆಗಳಲ್ಲಿ ಬದಲಾವಣೆ ತರಲಾರವು. ಇಲ್ಲಿ ಚಂದನ ಜ್ಞಾನದ ಸಂಕೇತವಾದರೆ, 'ಮಲವು' ಅಜ್ಞಾನದ ಮತ್ತು ಕೆಟ್ಟ ನಡುವಳಿಕೆಯ ಸಂಕೇತ. ಅಜ್ಞಾನಿಗೆ ಉಪದೇಶದ ಮಾತುಗಳು ಚಂದನದಂತೆ ಸುಗಂಧವನ್ನು ನೀಡುವ ಬದಲು ಅವು ಕೇವಲ ಓರೆಯಾಗಿ ಕಾಣುತ್ತವೆ. ಅವನಿಗೆ ತನ್ನ ಹಳೆಯ ಕೆಟ್ಟ ಹವ್ಯಾಸಗಳಲ್ಲಿ ಸುಖ ಕಾಣುತ್ತದೆ. ಕೇವಲ ಬಾಹ್ಯ ಉಪದೇಶಗಳಿಂದ ಅಥವಾ ಕೋರಿಕೆಯ ಭಕ್ತಿಯಿಂದ ಮನುಷ್ಯನ ಗುಣ ಬದಲಾಗುವುದಿಲ್ಲ. ಅಂತರಂಗದಲ್ಲಿ ಬದಲಾಗಬೇಕೆಂಬ ಹಂಬಲ ಇಲ್ಲದಿದ್ದರೆ ಯಾವ ಜ್ಞಾನವು ಕೆಲಸ ಮಾಡದು. ಅರ್ಹತೆ ಇಲ್ಲದವನಿಗೆ ನೀಡುವ ಸದೋಪದೇಶವು 'ಬೂದಿಯಲ್ಲಿ ಹೋಮ ಮಾಡಿದಂತೆ'ವ್ಯರ್ಥವಾಗುತ್ತದೆ ಎಂಬ ಕಟು ಸತ್ಯವನ್ನು ಬಸವಣ್ಣನವರು ಇಲ್ಲಿ ನೆನಪಿಸಿದ್ದಾರೆ.

ಅಕ್ಕಮಹಾದೇವಿಯವರ ವಚನಗಳಲ್ಲಿ ಪ್ರಾಣಿ ಪಕ್ಷಿಗಳ ಬಳಕೆ ಕೇವಲ ಉಪಮೇಯಗಳಾಗಿ ಬರದೆ ಅವು ವಿರಹ, ಹಂಬಲ ಮತ್ತು ಆಧ್ಯಾತ್ಮಿಕ ಸ್ವತಂತ್ರದ ಗಾಢವಾದ ಸಂಕೇತಗಳಾಗಿ ಮೂಡಿ ಬಂದಿವೆ. ಅವರು ಮಲ್ಲಿಕಾರ್ಜುನನನ್ನು ಹುಡುಕುತ್ತಾ ಕಾಡುಮೇಡನ್ನು ಅಲೆದವರು. ಅವರಿಗೆ ಪ್ರಾಣಿ–ಪಕ್ಷಿಗಳು ಪರಮಾತ್ಮನ ವಿಳಾಸ ಹೇಳುವ ಧೂತರಂತೆ ಕಂಡವು. 'ಗಿರಿಶೃಂಗದ ಮೇಲ ಗಿಳಿಯೆ'ಸರದಸ ಹಂಸವೇ, ಕೊಳದೊಳಗಣಾ ಕೋಗಿಲೆ' ಎಂದು ಪಕ್ಷಿಗಳನ್ನು ಉದ್ದೇಶಿಸಿ ತನ್ನ ಆರಾಧ್ಯದೈವನೆಲ್ಲಿದ್ದಾನೆಂದು ವಿಚರಿಸುತ್ತಾರೆ. ಇಲ್ಲಿ ಪಕ್ಷಿಗಳು ಕೇವಲ ಜೀವಿಗಳಲ್ಲಿ ಅವು ದೈವದ ಸಮ್ಮಿಶ್ರದಲ್ಲಿರುವ ಚೇತನಗಳು. ಅಕ್ಕನ ವಚನಗಳಲ್ಲಿ ಪಂಜರದ ಹಕ್ಕಿ ಅನ್ನುವುದು ಲೌಕಿಕ ಬಂಧನದಲ್ಲಿ ಸಿಲುಕಿದ ಆತ್ಮದ ಸಂಕೇತ. ಶರೀರ ಮತ್ತು ಸಂಸಾರವೆಂಬ ಪಂಜರದಿಂದ ಬಿಡುಗಡೆ ಹೊಂದಿ, ಚೆನ್ನಮಲ್ಲಿಕಾರ್ಜುನವೆಂಬ ವಿಶಾಲ ಆಕಾಶದಲ್ಲಿ ಹಾರಾಡಬೇಕೆಂಬ ಹಂಬಲ ಅವರ ವಚನಗಳಲ್ಲಿ ಎದ್ದು ಕಾಣುತ್ತದೆ. ಇದು ಆತ್ಮದ ಪರಮಾತ್ಮನಲ್ಲಿ ಲೀನವಾಗುವ ಹಂಬಲದ ರೂಪಕ. ಲೌಕಿಕದ ಆಸೆಗಳನ್ನು ಮತ್ತು ಕಾಮವನ್ನು ಅವರು ಕ್ರೂರ ಮೃಗಗಳಿಗೆ ಅಥವಾ ಬೆನ್ನಟ್ಟುವ ಬೇಟೆಗಾರನಿಗೆ ಹೋಲಿಸುತ್ತಾರೆ. 'ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗಂಜಿದಡೆಂತಯ್ಯ'ಎಂಬ ಪ್ರಸಿದ್ಧ ವಚನದಲ್ಲಿ ಸಂಸಾರದಲ್ಲಿ ಇದ್ದ ಮೇಲೆ ಅಲ್ಲಿನ ಟೀಕೆ ಟಿಪ್ಪಣಿಗಳ ಮತ್ತು ಕಾಮದಿ ಮೃಗಿಯ ಗುಣಗಳಿಗೆ ಹೆದರಬಾರದು. ಅವುಗಳನ್ನು ಎದುರಿಸಿ ಸ್ಥಿತ ಪ್ರಜ್ಞೆ ಆಗಿರಬೇಕು ಎಂದು ಸಾರುತ್ತಾರೆ. ಕೋಗಿಲೆಯು ವಸಂತ ಕಾಲಕ್ಕೆ ಕಾಯುವಂತೆ, ಭಕ್ತನು ಸಾಕ್ಷತ್ಕಾರಕ್ಕಾಗಿ ಕಾಯಬೇಕು ಎಂಬುದು ಅವರ ಆಶಯ. ಮಾವಿನ ಮರದ ಮೇಲೆ ಕುಳಿತು ಹಾಡುವ

ಕೋಗಿಲೆಯ ಸ್ವರವು, ಅಕ್ಕನಿಗೆ ಆರ್ತಧ್ವನಿಯಂತೆ ಕೇಳಿಸುತ್ತದೆ. ಅಕ್ಕಮಹಾದೇವಿಯವರ ದೃಷ್ಟಿಯಲ್ಲಿ ಪ್ರಾಣಿ–ಪಕ್ಷಿಗಳು ಸೋದರ ಸಮಾನರು. ಅವುಗಳನ್ನು ಹಿಂಸಿಸುವುದೆಂದರೆ, ಪರಮಾತ್ಮನನ್ನೇ ಹಿಂಸಿಸಿದಂತೆ. ಸಕಲ ಜೀವಿಗಳಲ್ಲೂ ಶಿವನನ್ನು ಕಾಣುವ ಅದ್ಭುತ ಭಾವ ಅವರ ವಚನಗಳಲ್ಲಿದೆ. ಬಸವಣ್ಣನವರಲ್ಲಿ ಪ್ರಾಣಿಗಳು ನೀತಿ 'ಕಲಿಸಲು ಬಂದರೆ, ಅಕ್ಕಮಹಾದೇವಿಯವರಲ್ಲಿ ಅವು 'ಪ್ರೀತಿ'ಮತ್ತು 'ವಿರಹ'ವನ್ನು ವ್ಯಕ್ತಪಡಿಸಲು ಬಳಕೆಯಾಗಿವೆ. ಅವರ ವಚನಗಳಲ್ಲಿ ಪಕ್ಷಿಗಳು ಆಧ್ಯಾತ್ಮಿಕ ಹೋರಾಟದ ಸಂಕೇತಗಳಾಗಿವೆ ಎಂಬುದನ್ನು ಅವರ ವಚನಗಳಲ್ಲಿ ನೋಡಲಾಗಿದೆ.

"ಜೇನುಗೂಸಿನಂತೆ ಹೂವ ಹೂವ ಸುತ್ತಿ
ಮಧುವನ್ನು ಶೇಖರಿಸುವಂತೆ
ನನ್ನ ಮನವು ನಿನ್ನ ಪಾದರವಿಂದದಲ್ಲಿ
ಮಧುವನ್ನು ಶೇಖರಿಸಲಿ
ಚನ್ನವಲ್ಲಿಕಾರ್ಜುನಯ್ಯ"[7]

ಅಕ್ಕಮಹಾದೇವಿಯವರ ಈ ವಚನವು ಭಕ್ತಿಯ ಪರಮಾಧಿಯನ್ನು ಮತ್ತು ವಯಸ್ಸಿನ ಏಕಾಗ್ರತೆಯನ್ನು ಅತ್ಯಂತ ಸುಂದರವಾದ 'ಜೇನುನೋಣ' ರೂಪಕದ ಮೂಲಕ ವಿವರಿಸುತ್ತದೆ. ಜೇನುನೊಣವು ನೂರಾರು ಹೂಗಳ ಮೇಲೆ ಕುಳಿತರೂ ಅದರ ಏಕೈಕ ಗುರಿ 'ಮಧು'ವನ್ನು ಸಂಗ್ರಹಿಸುವುದು ಮಾತ್ರ. ಅದು ಹೂವಿನ ಬಣ್ಣಕ್ಕಾಗಲಿ ಅಥವಾ ಸುಮ್ಮನೆ ಸುತ್ತಾಡುವುದಕ್ಕಾಗಲಿ ಹೋಗುವುದಿಲ್ಲ. ಸಾರವನ್ನಷ್ಟೇ ಹೀರುವುದು ಅದರ ಕೆಲಸ. ಹಾಗೆಯೇ ಭಕ್ತನ ಮನಸ್ಸು ಲೋಕದ ನಾನಾ ವಿಷಯಗಳ ಮಧ್ಯೆ ಇದ್ದರೂ ಅದರ ಏಕೈಕ ಗುರಿ ದೈವದ ಪಾದರವಿಂದ ಆಗಿರಬೇಕು. ಲೋಕದ ಆಸೆಗಳು ಹೂಗಳಂತೆ ಆಕರ್ಷಕವಾಗಿ ಕಂಡರೂ ಅವು ತಾತ್ಕಾಲಿಕ. ಆದರೆ ಪರಮಾತ್ಮನ ಪಾದಗಳಲ್ಲಿರುವ ಭಕ್ತಿಯ ಸಾರವು ಶಾಶ್ವತವಾದ ಜೇನುತುಪ್ಪದಂತೆ. ಮನುಷ್ಯನ ಮನಸ್ಸು ಹೊರಗಿನ ವಿಷಯಗಳಿಗೆ ಮರುಳಾಗದೆ ಕೇವಲ ಶಿವನ ಅರಿವಿನ ಸಾರವನ್ನು ಮಾತ್ರ ಹೀರುವಂತಾಗಬೇಕು ಎಂಬುದು ಅಕ್ಕನ ಹಂಬಲ. ಇಲ್ಲಿ ಮನಸ್ಸನ್ನು ಜೇನುನೊಣಕ್ಕೆ ಹೋಲಿಸಿರುವುದು ಗಮನಾರ್ಹ. ಜೇನುನೊಣವು ಹೂವಿಗೆ ನೋವುಂಟು ಮಾಡದೆ ಸಾರವನ್ನು ಪಡೆಯುತ್ತದೆ. ಭಕ್ತನೂ ಕೂಡ ಲೋಕಕ್ಕೆ ಹಾನಿ ಮಾಡದೆ ಅಂತರಂಗದ ಸತ್ಯವನ್ನು ಕಂಡುಕೊಳ್ಳಬೇಕು. 'ನಿನ್ನ ಪಾದರವಿಂದದಲಿ ಮಧುವನ್ನು ಶೇಖರಿಸಲಿ' ಎಂಬ ಸಾಲು ಸಂಪೂರ್ಣ ಶರಣಾಗತಿಯನ್ನು ಸೂಚಿಸುತ್ತದೆ. ಮನಸ್ಸು ಬೇರೆಯಲ್ಲೂ ಅಲೆಯದೆ ಸ್ಥಿರವಾಗಿ ಶಿವನಲ್ಲಿ ನೆಲೆ ನಿಂತಾಗ ಮಾತ್ರ ಮುಕ್ತಿ ಸಾಧ್ಯ. ಅಕ್ಕಮಹಾದೇವಿಯವರಲ್ಲಿ ಭಕ್ತಿಯು ಶುಷ್ಕವಾಗಿಲ್ಲ; ಅದು ಜೇನುತುಪ್ಪದಂತೆ ಸಿಹಿಯಾದ ಮತ್ತು ಹೂವಿನಂತೆ

ಸುಂದರವಾದ ಅನುಭವವಾಗಿದೆ. ಹೂವಿನಿಂದ ಹೂವಿಗೆ ಹಾರುವ ಜೇನುನೊಣವು ಮಧುವನ್ನು ಹೇಗೆ ಸಂಗ್ರಹಿಸುತ್ತದೆಯೋ ಹಾಗೆಯೇ ಲೌಕಿಕದ ಜಂಜಾಟಗಳ ನಡುವೆ ಇರುವ ಮನಸ್ಸು ಅಂತಿಮವಾಗಿ ಚೆನ್ನಮಲ್ಲಿಕಾರ್ಜುನನ ಪಾದಕಮಗಳಲಿ ನೆಲೆನಿಂತು ಅಧ್ಯಾತ್ಮದ ಆನಂದವನ್ನು ಪಡೆಯಬೇಕು ಎಂಬುದು ಈ ವಚನದ ಸಾರವಾಗಿದೆ.

"ಗೂಡಿಲ್ಲದ ಹಕ್ಕಿಯಂತೆ
ದಿಕ್ಕಿಲ್ಲದೆ ತಿರುಗುತಿದೆ ನನ್ನ ಮನ
ನಿನ್ನ ನೆನೆಯದೆ ನಿಲ್ಲದು
ಚೆನ್ನಮಲ್ಲಿಕಾರ್ಜುನಯ್ಯ"[8]

ಅಕ್ಕಮಹಾದೇವಿಯವರ ಈ ವಚನವು ಜೀವಾತ್ಮವು ಪರಮಾತ್ಮನಾಗಿ ಪಡುವ ಹಂಬಲವನ್ನು ಮತ್ತು ಲೌಕಿಕ ಜಗತ್ತಿನಲ್ಲಿ ಮನುಷ್ಯನು ಅನುಭವಿಸುವ ಅನಾಥ ಪ್ರಜ್ಞೆಯನ್ನು ಅತ್ಯಂತ ಆಪ್ತವಾಗಿ ಚಿತ್ರಿಸುತ್ತದೆ. 'ಹಕ್ಕಿಗೆ ಗೂಡು'ಎನ್ನುವುದು ವಿಶ್ರಾಂತಿ, ಸಾರಕ್ಷತೆ ಮತ್ತು ಅಸ್ತಿತ್ವದ ಸಂಕೇತ. ಸಂಜೆಯಾದಾಗ ಹಕ್ಕಿಯು ತನ್ನ ಗೂಡಿಗೆ ಮರಳಲೇಬೇಕು. ಇಲ್ಲಿ ಅಕ್ಕಮಹಾದೇವಿಯವರು ತಮ್ಮ ಮನಸ್ಸನ್ನು 'ಗೂಡಿಲ್ಲದ ಹಕ್ಕಿ' ಗೆ ಹೋಲಿಸಿದ್ದಾರೆ. ಅಂದರೆ ಈ ಸಂಸಾರದ ಮನಸ್ಸಿಗೆ ನಿಜವಾದ ಶಾಂತಿ ಅಥವಾ ನೆಲೆ ಸಿಗುತ್ತಿಲ್ಲ. ಅದು ಆಶ್ರಯವಿಲ್ಲದ ಆಕಾಶದಲ್ಲಿ ಹರಿದಾಡುವ ಹಕ್ಕಿಯಂತೆ ದಿಕ್ಕೆಟ್ಟು ಹೋಗಿದೆ. 'ದಿಕ್ಕಿಲ್ಲದೆ ತಿರುಗಿದೆ' ಎಂಬ ಸಾಲು ಭಕ್ತನ ಅಸಹಾಯಕತೆಯನ್ನು ತೋರಿಸುತ್ತದೆ. ಲೌಕಿಕ ಸಂಬಂಧಗಳು, ಸಂಪತ್ತು ಯಾವುದೂ ಮನಸ್ಸಿಗೆ ಸ್ಥಿರವಾದ 'ನೆಲೆ' ಯನ್ನು ನೀಡಲಾರವು. ಭಕ್ತನಿಗೆ ಈ ಲೋಕವು ಪರಕೀವಾಗಿ ಕಾಣಿಸುತ್ತದೆ. ಅವನಿಗೆ ನಿಜವಾದ ನೆಲೆ ಎಂದರೆ ಅದು ಕೇವಲ ಚೆನ್ನಮಲ್ಲಿಕಾರ್ಜುನ ಮಾತ್ರ. 'ನಿನ್ನ ನೆನೆಯದೆ ನಿಲ್ಲದು' ಅಲೆದಾಡುವ ಮನಸ್ಸನ್ನು ಸ್ಥಿರಗೊಳಿಸುವ ಏಕೈಕ ಶಕ್ತಿ ಎಂದರೆ 'ದೈವದ ಸ್ಮರಣೆ'. ಹಕ್ಕಿಯು ಗೂಡನ್ನು ಸೇರಿದಾಗ ಹೇಗೆ ನಿಶ್ಚಿತವಾಗಿರುತ್ತದೆಯೋ ಹಾಗೆಯೇ ಮನಸ್ಸು ಶಿವನ ಜ್ಞಾನದಲ್ಲಿ ತೊಡಗಿದಾಗ ಮಾತ್ರ ಅಲೆದಾಟ ನಿಲ್ಲಿಸಿ ಶಾಂತವಾಗುತ್ತದೆ. ಇಲ್ಲಿ 'ನೆನಪು'ಎನ್ನುವುದು ಕೇವಲ ನಾಮಸ್ಮರಣೆಯಲ್ಲಿ ಅದು ಅಂತರಂಗದ ಅನುಸಂಧಾನ. ಈ ವಚನವು ಅಕ್ಕನ ತೀವ್ರವಾದ ವೈರಾಗ್ಯವನ್ನು ಪ್ರತಿಬಿಂಬಿಸುತ್ತದೆ. ಲೌಕಿಕ ಜಗತ್ತನ್ನು ಅವರು 'ಗೂಡಿಲ್ಲದ ಕಾಡು'ಎಂದು ಭಾವಿಸಿದ್ದಾರೆ. ತನ್ನ ಮನಸ್ಸಿನ ಚಂಚಲತೆಯನ್ನು ಒಪ್ಪಿಕೊಂಡು ಅದನ್ನು ದೈವಕ್ಕೆ ಒಪ್ಪಿಸುವ ಇಲ್ಲಿನ ಆರ್ತತೆ ಶರಣಸಾಹಿತ್ಯದ ಸೌಂದರ್ಯವಾಗಿದೆ. ಮಾನವನ ಆತ್ಮವು ಪರಮಾತ್ಮನಿಂದ ಬೇರ್ಪಟ್ಟು ಹಕ್ಕಿಯಂತೆ ಅದು ತನ್ನ ಮೂಲ ನೆಲೆಗೆ ಸೇರುವವರೆಗೂ ಚಂಚಲತೆ ಮತ್ತು

ಅಲೆದಾಟ ತಪ್ಪಿದ್ದಲ್ಲ ಎಂಬುದು ಈ ವಚನದ ಸಾರ.

ಚನ್ನಬಸಣ್ಣನವರು ವಚನ ಸಾಹಿತ್ಯದ 'ಷಟ್ಸ್ಥಲ ಚಕ್ರವರ್ತಿ'ಎಂದು ಪ್ರಸಿದ್ಧರು. ಅವರ ವಚನಗಳಲ್ಲಿ ಪ್ರಾಣಿ–ಪಕ್ಷಿಗಳ ರೂಪಕಗಳು ಕೇವಲ ಭಾವನಾತ್ಮಕವಾಗಿರದೆ ಅತ್ಯಂತ ತಾರ್ಕಿಕ ಮತ್ತು ತಾತ್ವಿಕ ನೆಲಗಟ್ಟಿನಲ್ಲಿರುತ್ತವೆ. ಇವರು ಮನುಷ್ಯನ ಐದು ಇಂದ್ರಿಯಗಳನ್ನು ನಿಯಂತ್ರಿಸಲು ಪ್ರಾಣಿಗಳ ಉದಾಹರಣೆಗಳನ್ನು ನೀಡುತ್ತಾರೆ. ಮನುಷ್ಯನ ಐದು ಇಂದ್ರಿಯಗಳನ್ನು ಐದು ಹಸುಗಳಿಗೆ ಹೋಲಿಸಿ ಅವು ಐದು ದಿಕ್ಕಿಗೆ ಓಡದಂತೆ 'ಅರಿವು'ಎಂಬ ಹಗ್ಗದಿಂದ ಕಟ್ಟಿಯಾಬೇಕು ಎಂದು ಅವರು ವಿವರಿಸುತ್ತಾರೆ. ಆಸೆಯನ್ನು ಅಥವಾ ವಿಷಯ ಸುಖವನ್ನು ಹಾವಿಗೆ ಹೋಲಿಸಿ ಅದರ ವಿಷ(ಮೋಹ)ದಿಂದ ಪಾರಾಗಲು ಜ್ಞಾನದ ಗಾರುಡಿಗನಾಗಬೇಕೆಂದು ಬೋಧಿಸುತ್ತಾನೆ. ಇವರ ವಚನಗಳಲ್ಲಿ ಹಕ್ಕಿ ಎನ್ನುವುದು ಆಧ್ಯಾತ್ಮಿಕ ಜ್ಞಾನದ ಸಂಕೇತ. 'ಅರಿವೆಂಬ ಹಕ್ಕಿ ಹಾರಾಡುತ್ತಿದೆ' ಎಂಬ ರೂಪಕದ ಮೂಲಕ ಜ್ಞಾನವು ಎಲ್ಲೆಡೆ ವ್ಯಾಪ್ತಿಸಿದೆ. ಅದನ್ನು ಹಿಡಿಯುವ ಶಕ್ತಿ ಸಾಧಕನಿಗೆ ಇರಬೇಕೆಂದು ಹೇಳುತ್ತಾರೆ. ಅವರ ವಚನಗಳಲ್ಲಿ ಪಕ್ಷಿಯು ಎತ್ತರಕ್ಕೆ ಹಾರುವ ಜ್ಞಾನದ ಸಂಕೇತವಾಗಿದೆ. ಬೌದ್ಧಿಕವಾಗಿ ವಿಚಾರ ಮಾಡುವ ಚನ್ನಬಸವಣ್ಣನವರು ತರ್ಕವಿಲ್ಲದ ಭಕ್ತಿಯನ್ನು ಟೀಕಿಸಲು ಪ್ರಾಣಿಗಳನ್ನು ಬಳಸುತ್ತಾರೆ. ಕೇವಲ ವೇಷ ಹಾಕುವ ಭಕ್ತರನ್ನು 'ಊರ ಹಂದಿ ಅಥವಾ ಬೀದಿಯ ನಾಯಿ' ಗೆ ಹೋಲಿಸಿ ಅಂತರಂಗದ ಶುದ್ಧಿವಿಲ್ಲದ ಭಕ್ತಿ ವ್ಯರ್ಥವೆಂದು ಖಂಡಿಸಿದ್ದಾರೆ.

ನರಿಯಂತೆ ಕುತಂತ್ರ ಮಾಡುವ ಮನಸ್ಸನ್ನು ಶಿವನ ಪಾದದಲ್ಲಿ ಅರ್ಪಿಸಿ ಪಾವನಗೊಳಿಸಬೇಕು ಎಂದು ಕರೆ ನೀಡುತ್ತಾರೆ. ಸಂಸಾರವನ್ನು ಒಂದು ಭಯಾನಕ ಕಾಡಿಗೆ ಹೋಲಿಸುವರು, ಅದರಲ್ಲಿರುವ ಆಸೆ ಆಮಿಷಗಳನ್ನು ಕ್ರೂರ ಮೃಗಗಳೆಂದು ಕರೆಯುತ್ತಾರೆ. ಈ ಮೃಗಗಳಿಂದ ಪಾರಾಗಲು ಕೂಡ ಸಂಗಯ್ಯ ಎಂಬ ಗುರುವಿನ ಹಸ್ತ ಮಸ್ತಕದ ಮೇಲಿರಬೇಕು ಎಂಬುದು ಅವರ ದೃಢವಾದ ನಂಬಿಕೆ. ಅವರು ಒಂದು ಪ್ರಸಿದ್ಧ ರೂಪಕದಲ್ಲಿ 'ಕುರುಡನ ಹೆಗಲ ಮೇಲೆ ಕುಂಟ ಕುಳಿತಂತೆ'ಎಂಬ ಮಾತಿಗೆ ಇಲ್ಲಿ ಕುರುಡ, ಕುಂಟನ ಉದಾಹರಣೆಯ ಮೂಲಕ ಕ್ರಿಯೆ ಮತ್ತು ಜ್ಞಾನ ಎರಡು ಒಂದಕ್ಕೊಂದು ಪೂರಕವಾಗಿರಬೇಕು ಆಗಲೇ ಗುರಿ ತಲುಪಲು ಸಾಧ್ಯವೆಂದು ಹೇಳುತ್ತಾರೆ. ಇವರ ವಚನಗಳಲ್ಲಿ ಪ್ರಾಣಿಗಳ ಭಕ್ತಿ ಸಂವೇದನೆಗಿಂತ ಹೆಚ್ಚಾಗಿ 'ಸಂಸಾರ' ಮತ್ತು 'ಶಿಸ್ತಿ' ನ ಪಾಠಗಳನ್ನು ಕಲಿಸುತ್ತವೆ. ಅವರ ಅಂಕಿತನಾಮ 'ಕೂಡಲ ಚನ್ನಸಂಗಯ್ಯ' ಎಂಬುದರ ಅಡಿಯಲ್ಲಿ ಅವರು ಜ್ಞಾನದ ಮಹತ್ವವನ್ನು ಈ ರೂಪಕಗಳ ಮೂಲಕ ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

"ಕಾಗೆಗೂ ಗರುಡನಿಗೂ ಆಕಾಶ ಒಂದೇ ಆಗಿದ್ದರೂ

ಹಾರುವ ಚರಿತ್ರೆ ಒಂದಾಗದು

ಭಕ್ತನಿಗೂ ಅಭಕ್ತನಿಗೂ ದೇವರು ಒಂದೇ ಆಗಿದ್ದರೂ

ಭಕ್ತಿಯ ಗುಣ ಒಂದಾಗದು

ಕೂಡಲ ಚನ್ನಸಂಗಯ್ಯ"[9]

ಈ ವಚನದಲ್ಲಿ ಶರಣ ಕವಿ ಪ್ರಾಣಿ ಪಕ್ಷಿಗಳ ರೂಪಕವನ್ನು ಬಳಸಿ ಭಕ್ತಿ ಮತ್ತು ವ್ಯಕ್ತಿಯ ಆಂತರಿಕ ಗುಣಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತಾರೆ. ಮೊದಲಿನ ಸಾಲಿನಲ್ಲಿ 'ಕಾಗೆ' ಮತ್ತು 'ಗರುಡ' ಎಂಬ ಎರಡು ಪಕ್ಷಿಗಳನ್ನು ಉದಾಹರಣೆಯಾಗಿ ಕೊಡಲಾಗಿದೆ ಆಕಾಶವು ಎರಡಕ್ಕೂ ಒಂದೇ ಆದರೂ ಅವುಗಳ ಹಾರುವ ಶಕ್ತಿ ಗುರಿ ಮತ್ತು ಮಹತ್ವ ಒಂದೇ ಆಗಿರುವುದಿಲ್ಲ ಕಾಗೆ ಸಾಮಾನ್ಯ ಪಕ್ಷಿ ಅದು ಕೆಳಮಟ್ಟದ ಆಹಾರ ಹುಡುಕುತ್ತಾ ಹಾರುತ್ತದೆ ಆದರೆ ಗರುಡವು ಶಕ್ತಿಯುತ ಮತ್ತು ಉನ್ನತ ಗುರಿಯೊಂದಿಗೆ ಹಾರುವ ಮಹತ್ವದ ಪಕ್ಷಿ. ಆದ್ದರಿಂದ ಪರಿಸ್ಥಿತಿ ಒಂದೇ ಇದ್ದರೂ ಸ್ವಭಾವ ಮತ್ತು ಸಾಮರ್ಥ್ಯ ಭಿನ್ನವಾಗಿರುತ್ತವೆ ಎಂಬ ಸಂದೇಶ ಇಲ್ಲಿ ವ್ಯಕ್ತವಾಗಿದೆ. ಇದೇ ತತ್ವವನ್ನು ಕವಿ ಮಾನವನ ಜೀವನಕ್ಕೆ ಅನ್ವಯಿಸುತ್ತಾರೆ. ಭಕ್ತನಿಗೂ ಅಭಕ್ತನಿಗೂ ದೇವರು ಒಂದೇ ಆಗಿದ್ದರೂ ಅವರ ಭಕ್ತಿ, ನಂಬಿಕೆ ಮತ್ತು ಆಂತರಿಕ ಶುದ್ದಿ ಒಂದೇ ಆಗಿರುವುದಿಲ್ಲ. ನಿಜವಾದ ಭಕ್ತನು ದೇವರ ಬಗ್ಗೆ ಶ್ರದ್ಧೆ, ಸಮರ್ಪಣೆ ಮತ್ತು ನೈತಿಕ ಜೀವನವನ್ನು ಹೊಂದಿರುತ್ತಾನೆ. ಆದರೆ ಅಭಕ್ತನು ದೇವರ ಅಸ್ತಿತ್ವವನ್ನು ಅರಿಯದೆ ಅಥವಾ ನಿಜವಾದ ಭಕ್ತಿ ಇಲ್ಲದೆ ಬದುಕುತ್ತಾನೆ. ಹೀಗಾಗಿ ಈ ವಚನವು ಮಾನವ ಮೌಲ್ಯವನ್ನು ಅವನ ಬಾಹ್ಯ ಪರಿಸ್ಥಿತಿಯಿಂದಲ್ಲ; ಅವನ ಒಳಗಿನ ಗುಣಗಳಿಂದ ಅಳೆಯಬೇಕು ಎಂಬ ಸಂದೇಶವನ್ನು ನೀಡುತ್ತದೆ.

ಶರಣರು ಭಕ್ತಿಯನ್ನು ಕೇವಲ ಆಚರಣೆ ಅಥವಾ ರೂಪಕತೆಯ ವಿಷಯವಲ್ಲ; ಅದು ಅಂತರಂಗದ ಶುದ್ಧಿ ಮತ್ತು ಜೀವನ ಆಚರಣೆಯ ಗುಣ ಎಂದು ಇಲ್ಲಿ ಸ್ಪಷ್ಟಪಡಿಸುತ್ತಾರೆ. ಪ್ರಾಣಿ ಪಕ್ಷಿಗಳ ರೂಪಕದ ಮೂಲಕ ಆಳವಾದ ತತ್ವವನ್ನು ಸರಳವಾಗಿ ಹೇಳಿದ್ದಾರೆ. ಭಕ್ತಿ ಮತ್ತು ಅಭಕ್ತಿಯ ನಡುವಿನ ಮೂಲಭೂತ ವ್ಯತ್ಯಾಸವನ್ನು ವಿವರಿಸಲಾಗಿದೆ. ವ್ಯಕ್ತಿಯ ಮಹತ್ವದ ಅವನ ಅಂತರಂಗದ ಗುಣಗಳು ನಿರ್ಧರಿಸುತ್ತವೆ ಎಂಬ ಸಾಮಾಜಿಕ ಸಂದೇಶ ನೀಡಲಾಗಿರುತ್ತದೆ. ಶರಣರ ಸಾಹಿತ್ಯ ಸರಳಭಾಷೆ ಮತ್ತು ಗಾಢ ತತ್ವ ಚಿಂತನೆ ಈ ವಚನದಲ್ಲಿ ಸ್ಪಷ್ಟವಾಗುತ್ತದೆ.

ಈ ಮೇಲಿನ ಎಲ್ಲ ವಿಷಯವನ್ನು ಗಮನಿಸಿದಾಗ ಶರಣರ ವಚನ ಸಾಹಿತ್ಯದಲ್ಲಿ

ಪ್ರಾಣಿ ಮತ್ತು ಪಕ್ಷಿಗಳು ಕೇವಲ ಅಲಂಕಾರಿಕ ವಸ್ತುಗಳಾಗಿ ಉಳಿಯದೆ ಮಾನವನ ಅಂತರಂಗದ ಕೊಳೆಯನ್ನು ತೊಳೆಯುವ ನೈತಿಕ ಕನ್ನಡಿಯಾಗಿ ಕೆಲಸ ಮಾಡುತ್ತವೆ. ಶರಣರು ಕೋತಿಯ ಚಂಚಲತೆ ಹಂದಿಯ ಮೇಲಿನ ಪ್ರವೃತ್ತಿ ಆನೆಯ ಅಹಂಕಾರ ಮತ್ತು ಕಾಗೆ ಗರುಡರ ಹಾರಾಟದ ವ್ಯತ್ಯಾಸಗಳ ಮೂಲಕ ಮನುಷ್ಯನಿಗೆ ತನ್ನ ನೈಜ ಗುಣವನ್ನು ಅರ್ಥ ಮಾಡಿಕೊಳ್ಳಲು ನೆರವಾಗಿದ್ದಾರೆ. ಪ್ರಾಣಿ ಸಹಜಗುಣಗಳನ್ನು ಮೀರಿ ಶಿವ ಸಹಜಗುಣಗಳನ್ನು ಅಳವಡಿಸಿಕೊಳ್ಳುವುದೇ ಜೀವನದ ಪರಮ ಗುರಿಯನ್ನು ಸಾರಿದ್ದಾರೆ.

'ದಯುವೇ ಧರ್ಮದ ಮೂಲವಯ್ಯ' ಎಂಬ ತತ್ವದ ಅಡಿ ಸಕಲ ಜೀವರಾಶಿಗಳಲ್ಲಿಯೂ ದೈವತ್ವವನ್ನು ಕಾಣುವ ಮೂಲಕ ಪ್ರಾಣಿ ಹಿಂಸೆಯನ್ನು ವಿರೋಧಿಸಿ ಪರಿಸರ ಪ್ರೇಮಿ ಹಾಗೂ ಜೀವ ಕಾರುಣ್ಯದ ಬೀಜವನ್ನು ಅಂದೇ ಬಿತ್ತಿದ್ದಾರೆ. ಅಲ್ಲಮಪ್ರಭುಗಳ 'ಬೆಡಗಿನ ವಚನ'ಗಳಲ್ಲಿ ಗೂಡ ರೂಪಗಳಿಂದ ಹಿಡಿದು ಬಸವಣ್ಣನವರ ಸರಳ ಉಪಮೇಯಗಳವರಿಗೆ ಪ್ರತಿಯೊಂದು ಪ್ರಾಣಿ ರೂಪಕವು ಮನುಷ್ಯನ ಅಧ್ಯಾತ್ಮಿಕ ಉನ್ನತಿಗೆ ರೂಪಕವಾಗಿದೆ. ವ್ಯತ್ಯಾಸಗಳನ್ನು ಹಕ್ಕಿಗಳ ಹಾರಾಟಕ್ಕೆ ಹೋಲಿಸಿರುವುದು ಅವರ ಲೋಕಾನುಭವಕ್ಕೆ ಸಾಕ್ಷಿಯಾಗಿದೆ. ಒಟ್ಟಾರೆಯಾಗಿ ವಚನಕಾರರು ಪ್ರಾಣಿ ಪಕ್ಷಿಗಳನ್ನು ಬಳಸಿಕೊಂಡು ಅತ್ಯಂತ ಸಂಕೀರ್ಣವಾದ ವೇದಾಂತವನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳೀಕರಿಸಿದ್ದಾರೆ. ಈ ರೂಪಕಗಳು ಇಂದಿಗೂ ಮನುಷ್ಯನ ನಡಾವಳಿಕೆಯನ್ನು ತಿದ್ದುವಲ್ಲಿ ಮತ್ತು ಸಮಷ್ಟಿ ಪ್ರಜ್ಞೆಯನ್ನು ಮೂಡಿಸುವಲ್ಲಿ ಪ್ರಸ್ತುತವಾಗಿದೆ.

ಕೊನೆಯ ಟಿಪ್ಪಣಿಗಳು :

1. ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ (ಸಂ), ವಚನ ಕಮ್ಮಟ, ಪುಟ ಸಂಖ್ಯೆ 11
2. ಅದೇ ಪು. ಸಂ. 12
3. ಅದೇ ಪು. ಸಂ. 29
4. ಅದೇ ಪು. ಸಂ. 33
5. ಅದೇ ಪು. ಸಂ. 48
6. ಅದೇ ಪು. ಸಂ. 50
7. ಅದೇ ಪು. ಸಂ. 72
8. ಅದೇ ಪು. ಸಂ. 75
9. ಅದೇ ಪು. ಸಂ. 78

ಪರಾಮರ್ಶನ ಕೃತಿಗಳು :

1. ಭೂಸನೂರ ಮಠ ಮತ್ತು ಇತರರು, ಶೂನ್ಯ ಸಂಪಾದನೆ, 1960, ಕರ್ನಾಟಕ ವಿಶ್ವವಿದ್ಯಾಲಯ–ಧಾರವಾಡ
2. ವೀರಣ್ಣ ಸಿ., ವಚನ ಸಾಹಿತ್ಯ ಮತ್ತು ಪರಿಸರ ಪ್ರಜ್ಞೆ, 2000, ಸಪ್ನ ಬುಕ್ ಹೌಸ್–ಬೆಂಗಳೂರು
3. ಬಸವರಾಜ ಎಲ್., ಅಲ್ಲಮ ಪ್ರಭುವಿನ ಬೆಳಗಿನ ವಚನಗಳು, 1980, ಗೀತಾ ಬುಕ್ ಹೌಸ್–ಮೈಸೂರು
4. ಶಿವಪ್ರಕಾಶ ಹೆಚ್. ಎಸ್., ವಚನ ಸಾಹಿತ್ಯ ಮತ್ತು ಪ್ರಾಣಿಪ್ರಜ್ಞೆ, 1990
5. ಮರುಳ ಸಿದ್ದಪ್ಪ ಕೆ. ಕಿ.ರಂ. ನಾಗರಾಜ (ಸಂ), ವಚನ ಕಮ್ಮಟ, 2015, ಸಪ್ನ ಬುಕ್ ಹೌಸ್–ಬೆಂಗಳೂರು
6. ಚಿದಾನಂದಮೂರ್ತಿ ಎಂ., ವಚನ ಸಾಹಿತ್ಯ, 2018, ಸಪ್ನ ಬುಕ್ ಹೌಸ್–ಬೆಂಗಳೂರು
7. ಶಿವರಾಮ ಕಾರಂತ ಕೆ., ಸಿರಿಗನ್ನಡ ಅರ್ಥಕೋಶ ಕನ್ನಡ–ಕನ್ನಡ, 1990, ಎಸ್.ಬಿ.ಎಸ್. ಪ್ರಕಾಶನ ಬೆಂಗಳೂರು

***

21ನೇ ಶತಮಾನದಲ್ಲಿ ಭಾರತೀಯ ಜ್ಞಾನ ಪರಂಪರೆಯ ಮಹತ್ವ

1 ಡಾ. ರಾಜೇಶ್ವರಿ ವೈ. ಎಂ.
ಸಂಯೋಜಕರು ಮತ್ತು ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಜೈನ್ ಡೀಮ್ಡ್ ಟು–ಬಿ ವಿಶ್ವವಿದ್ಯಾಲಯ
ಬೆಂಗಳೂರು.

ಭಾರತವು ಸಾವಿರಾರು ವರ್ಷಗಳ ಸಂಸ್ಕೃತಿ ಮತ್ತು ಜ್ಞಾನ ಪರಂಪರೆಯ ತವರೂರು. ಮಾನವ ಇತಿಹಾಸವನ್ನು ಸಮಾಜ ವಿಜ್ಞಾನದ ಪ್ರಕಾರವಾಗಲಿ, ವಿಜ್ಞಾನದ ಹಿನ್ನೆಲೆಯಿಂದ ನೋಡಿದಾಗಲೂ ಭಾರತದಲ್ಲಿ ಅನೇಕ ಸಹಸ್ರಾರು ವರ್ಷಗಳ ನಾಗರಿಕ ಬದುಕಿನ ಕುರುಹುಗಳನ್ನು ನೋಡಿದ್ದಾರೆ. ಈ ಅನೇಕ ಕಾರಣಗಳಿಂದ ಪ್ರಪಂಚದ ಇತಿಹಾಸದ ಅತ್ಯಂತ ಪ್ರಾಚೀನ ನಾರಿಕತೆಗಳಲ್ಲಿ ಒಂದಾದ ಭಾರತೀಯ ಸಂಸ್ಕೃತಿ ಮನುಷ್ಯ ಜೀವನದ ಎಲ್ಲ ಆಯಾಮಗಳನ್ನು ಸಂಪೂರ್ಣವಾಗಿ ರೂಪಿಸಿದ ವಿಶಾಲವಾದ ಮತ್ತು ಅನಂತ ಜ್ಞಾನವನ್ನು ರೂಪಿಸಿದ ಪರಂಪರೆಯನ್ನು ಹುಟ್ಟು ಹಾಕಿದೆ ಅಲ್ಲದೇ ಅದನ್ನು ಸಮಗ್ರವಾಗಿ ಬೆಳೆಸಿದೆ ಎಂದರೂ ಉತ್ಪ್ರೇಕ್ಷೆಯಲ್ಲ. ಭಾರತೀಯ ಸಂಸ್ಕೃತಿ ಕೇವಲ ಒಂದು ಅಂಶದಿಂದ ವಿಕಾಸವಾದ ಸಂಸ್ಕೃತಿಯಲ್ಲ. ಇದು ಧರ್ಮ, ತತ್ತ್ವ, ವಿಜ್ಞಾನ, ವೈದ್ಯಶಾಸ್ತ್ರ, ಗಣಿತ, ಖಗೋಳಶಾಸ್ತ್ರ, ವಾಸ್ತುಶಿಲ್ಪ, ಕೃಷಿ, ಸಾಹಿತ್ಯ, ಸಂಗೀತ, ನೃತ್ಯ, ರಾಜಕೀಯ ಮತ್ತು ಬಹು ಮುಖ್ಯವಾಗಿ ಇತರ ನಾಗರಿಕತೆಗಿಂತ ವಿಶೇಷವಾಗಿ ಪ್ರಕೃತಿಯ ಆರಾಧನೆಯ ಪರಿಸರ ಸಂರಕ್ಷಣೆಯಂತಹ ಅನೇಕ ಕ್ಷೇತ್ರಗಳ ಮೂಲಕ ಸಮಗ್ರ ವಿಕಾಸವನ್ನು ಕಂಡಂತಹ ಅಪೂರ್ವವಾದ ಸಂಸ್ಕೃತಿಯಾಗಿದೆ.

ಇಂತಹ ಅಪರೂಪದ ಸಂಸ್ಕೃತಿಯ ಹುಟ್ಟು ಬೆಳವಣಿಗೆಯ ಬಗ್ಗೆ ನೋಡುವುದಾದರೆ ಈ ಭಾರತೀಯ ಜ್ಞಾನ ಪರಂಪರೆಯ ಶಕ್ತಿ ಹಾಗೂ ಸಾರ 'ಧರ್ಮ' ಎನ್ನುವ ಬೀಜದಲ್ಲಿ ಹುದುಗಿದೆ ಎನ್ನಬೇಕು. ಈ ಮಾತಿಗೆ ಇಲ್ಲೊಂದು ಸಾಕ್ಷಿ ಪುಷ್ಟಿ ಒದಗಿಸುತ್ತದೆ. "ಭಾರತದ ಸಾಂಸ್ಕೃತಿಕ ಸಂಪತ್ತು ಪ್ರಧಾನವಾಗಿ ಭಾರತೀಯ ದರ್ಶನ ಮತ್ತು ಧರ್ಮಗಳಲ್ಲಿ ದೊರಕುತ್ತದೆ. ಅದರ ದಾರ್ಶನಿಕ ಭಾವನೆಗಳು ಮತ್ತು ಧಾರ್ಮಿಕ ನಂಬಿಕೆಗಳಿಗೆ ವೇದಗಳು ಉಪನಿಷತ್ತುಗಳೇ ಉಗಮಸ್ಥಾನ. ಭಾರತದ ಸಾಂಸ್ಕೃತಿಕ ಸ್ಮಾರಕಗಳೇ ನಿರಂತರವಾಗಿ ಈ ಸಂಸ್ಕೃತಿಯ ಮುನ್ನಡೆಗೆ ಮಾರ್ಗಸೂಚಿಗಳಾಗಿವೆ. ಈ ಜಾಡನ್ನು ಹಿಡಿದೇ ಭಾರತವು ಕಾಲಕಾಲಕ್ಕೂ ಮೇಲೆ ಬಂದ ಆಘಾತಗಳಿಂದ ಪಾರಾಯಿತೆಂದು ಹೇಳಲು ಸಾಧ್ಯ. ಒಂದಾದ ಮೇಲೊಂದು ವಿದೇಶಿಯ ಪಂಗಡಗಳ ಆಕ್ರಮಣಗಳಿಗೆ ಮಣಿಯದೆ ಸುಕ್ಷೇಮವಾಗಿದ್ದುದಕ್ಕೂ ಭಾರತದ ಇತಿಹಾಸದ ಅಂಧಕಾರಮಯವಾದ ದಿನಗಳಲ್ಲಿಯೂ ಭಾರತೀಯ ಸಂಸ್ಕೃತಿಯ ಕಿಡಿಯು ನಂದದೆ ಇದ್ದದಕ್ಕೂ ಕಾರಣ, ಭಾರತವು ಧಾರ್ಮಿಕತೆಯ ನೆಲೆಯನ್ನು ಸಂಪೂರ್ಣವಾಗಿ ಕಿತ್ತು ಹಾಕದೇ ಅದಕ್ಕೆ ಭದ್ರವಾಗಿ ಅಂಟಿಕೊಂಡಿದ್ದುದು"[1].

ಧರ್ಮವೆಂದರೆ ಈಗ ಜನಮಾನಸದಲ್ಲಿರುವ ಧರ್ಮವೆಂದರೆ ತಪ್ಪಾದೀತು. ಅಂದರೆ ಈ ಪರಂಪರೆಯನ್ನು ಕೇವಲ ಧಾರ್ಮಿಕ ಪರಂಪರೆಯೆಂದರೆ ಅದು ಬಹು ದೊಡ್ಡ ಪ್ರಮಾದವಾದೀತು, ಏಕೆಂದರೆ ಧರ್ಮ ಎಂದರೆ ಕೇವಲ ಧಾರ್ಮಿಕ ಆಚರಣೆಗಳು ಅಲ್ಲ. ಇಲ್ಲಿ ಧರ್ಮ ಎನ್ನುವ ಶಬ್ದ ಹತ್ತು ಹಲವು ಅರ್ಥಗಳನ್ನು ತನ್ನ ಒಡಲಲ್ಲಿರಿಸಿಕೊಂಡು ಆ ಅಷ್ಟೂ ಅರ್ಥಗಳಿಗೆ ಸರಿಯಾದ ಬದುಕನ್ನು ರೂಪಿಸಿದ ಹೆಮ್ಮೆಯೂ ಈ ಭಾರತೀಯ ಸಂಸ್ಕೃತಿಗಿದೆ. ಧರ್ಮ ಎನ್ನುವುದಕ್ಕೆ ನಾನಾ ಅರ್ಥಗಳಿವೆ. ಧರ್ಮ ಎಂದರೆ, '1. ವಾಡಿಕೆಯ ಮತೀಯ ಅನುಷ್ಠಾನ 2. ಚತುರ್ವಿಧ ಪುರುಷಾರ್ಥಗಳಲ್ಲಿ ಒಂದು 3. ಕರ್ತವ್ಯ 4. ಗುಣ, ಸ್ವಭಾವ, ಲಕ್ಷಣ 5. ನ್ಯಾಯ ನೀತಿ 6. ದತ್ತಿ, ದಾನ 7. ಮತ, ದರ್ಶನ 8. ದಯೆ, ಕರುಣೆ 9. ಬಿಟ್ಟಿ, ಪುಕ್ಕಟೆ'[2]. ಈ ಎಲ್ಲ ಅರ್ಥಗಳನ್ನು ಒಂದುಗೂಡಿಸಿದಾಗ ಬಹುಶಃ ಭಾರತೀಯ ಸಂಸ್ಕೃತಿಯ ಪುಟ್ಟ ಪರಿಚಯವಾಗಬಹುದು. ಅದು ಜೀವನದ ಶಾಶ್ವತ ಸತ್ಯ, ನೀತಿ ಹಾಗೂ ಸಮತೋಲನವನ್ನು ಬದುಕಿ ತೋರಿಸಿದ ಜೀವನಶೈಲಿಯಾಗಿದೆ. ಪ್ರಾಚೀನ ಮತ್ತು ಈ ದೇಶದ ತಳಪಾಯ ಎನಿಸಿದ ವೇದಗಳು, ಉಪನಿಷತ್ತುಗಳು ಈ ಜ್ಞಾನ ಪರಂಪರೆಯ ಮೂಲ ಗ್ರಂಥಗಳೆನ್ನಬೇಕು. ಮುಖ್ಯವಾಗಿ ವೇದ ಮತ್ತು ಉಪನಿಷತ್ತುಗಳಲ್ಲಿ ಪ್ರಕೃತಿಯೇ ದೇವರೆಂದ ಅತಿ ದೊಡ್ಡ ಆಶಯವನ್ನು ಗಮನಿಸಬೇಕು. ಪ್ರಕೃತಿಯ ಕೂಸಾದ ಮಾನವನ ಮತ್ತು ಪ್ರಕೃತಿಯ ಆತ್ಯಂತಿಕವಾದ ಸಂಬಂಧವನ್ನು ಇವುಗಳಲ್ಲಿ ಹೇಳುತ್ತಾ ಅದರಿಂದಲೇ ಉಳಿದ ಜ್ಞಾನವನ್ನು ವಿಸ್ತರಿಸಿ ಹೇಳುವ ಸಶಕ್ತ ಪ್ರಯತ್ನವನ್ನು ಇವುಗಳಲ್ಲಿ

ನೋಡಬಹುದು. ಬಹಳ ಮುಖ್ಯವಾಗಿ ಇಂದು ಅಡಿಗಡಿಗೆ ಹೇಳುವ 'ವಸುದೈವ ಕುಟುಂಬಕಂ' ಎನ್ನುವ ಮಾತನ್ನೂ ಇದೇ ಉಪನಿಷತ್ತು ಸಾವಿರಾರು ವರ್ಷಗಳ ಮೊದಲೇ ಹೇಳಿದ್ದನ್ನು ಗಮನಿಸುವಾಗ ಭಾರತೀಯರ ಜ್ಞಾನದ ಉನ್ನತ ಮಟ್ಟವನ್ನು ಅರ್ಥ ಮಾಡಿಕೊಳ್ಳಬಹುದು. ಈ ಜ್ಞಾನ ಪರಂಪರೆ ವೈಜ್ಞಾನಿಕವಾದ ತಳಹದಿಯನ್ನು ಇಟ್ಟುಕೊಂಡು ಬೆಳೆದಂತೇ ತಾತ್ವಿಕವಾದ ಬೇರುಗಳನ್ನು ಹೊಂದಿರುವುದನ್ನು ಮರೆಯುವಂತಿಲ್ಲ. ಭಾರತೀಯರ ಹೆಮ್ಮೆಯ ಆರ್ಯುವೇದ ಅದು ಕೇವಲ ಔಷಧ ಶಾಸ್ತ್ರವಲ್ಲ ಅದು ಪರಿಪೂರ್ಣವಾದ ಜೀವನಶೈಲಿಯಾಗಿದೆ. ಆಧುನಿಕ ಕಾಲದ ಆಹಾರ ಪದ್ಧತಿಗಳು ಬದಲಾದ ಕಾರಣದಿಂದ ಆಯುರ್ವೇದವೂ ಹೊಂದಿಕೆಯಾಗದೇ ಹೋಗುವ ಅಪಾಯ ಕಾಣುತ್ತಿದೆ ಏಕೆಂದರೆ ಆಯುರ್ವೇದ ಅನ್ನುವುದು ಅಪ್ಪಟ ಜೀವನಶೈಲಿ ಆಧಾರಿತ ಔಷಧಶಾಸ್ತ್ರ. ಅದು ದೇಹ ಮತ್ತು ಮನಸ್ಸು ಹಾಗೂ ನಮ್ಮೊಳಗೇ ಇದೇ ಎನ್ನಲಾಗುವ ಆತ್ಮದ ಸಂಬಂಧವನ್ನು ಮತ್ತು ಸಮತೋಲನವನ್ನು ಕಾಪಿಡುತ್ತಾ ಸಾಗುವ ಸಮತೋಲಿತ ಜೀವನವಿಜ್ಞಾನದ ಪದ್ಧತಿಯಾಗಿದೆ. ಹಾಗೆಯೇ ಪಾಣಿನಿಯ ವ್ಯಾಕರಣ ಶಾಸ್ತ್ರವು ಸಮಸ್ತ ಭಾಷಾ ಶಾಸ್ತ್ರದ ಅತ್ಯಂತ ಪ್ರಾಚೀನವಾದ ಮತ್ತು ಅತ್ಯಂತ ಸಶಕ್ತವಾದ ಮಾದರಿಯಾಗಿದೆ. ಇಂದಿನ ಕಂಪ್ಯೂಟರ್ ಭಾಷಾ ಶಾಸ್ತ್ರಕ್ಕೂ ಇದು ಪ್ರೇರಣೆಯಾಗಿದೆ ಎನ್ನುವ ಅಂಶವನ್ನು ಅಲ್ಲಗಳೆಯುವಂತಿಲ್ಲ. ಅಂತೆಯೇ ಜಗದ ಆರ್ಥಿಕ, ಸಾಮಾಜಿಕ ವ್ಯವಹಾರದ ಗುಟ್ಟನ್ನು ಹೇಳಿದ ಕೌಟಿಲ್ಯನ ಅರ್ಥಶಾಸ್ತ್ರವೂ ಜಗತ್ತಿಗೇ ಮಾದರಿಯಾಗಿರುವುದನ್ನು ನೋಡಬಹುದು. ಹೀಗೆ ಆರ್ಯಭಟ, ಚರಕ, ಸುಶ್ರುತ, ಪತಂಜಲಿ, ಕೌಟಿಲ್ಯ ವಾಲ್ಮೀಕಿ, ವ್ಯಾಸರು ಆಯುರ್ವೇದ, ಅರ್ಥಶಾಸ್ತ್ರ, ಗಣಿತ, ಸಾಹಿತ್ಯ ಸಂಗೀತ ಮುಂತಾದ ಕ್ಷೇತ್ರಗಳನ್ನು ಪ್ರತಿನಿಧಿಸುವ ಪರಂಪರೆಯ ಋಷಿಗಳು.

ಭಾರತೀಯ ಜ್ಞಾನ ಪರಂಪರೆ ಶ್ರವಣ, ಮನನ ಮತ್ತು ನಿಧಿಧ್ಯಾಸನ ಎಂಬ ಮೂರು ಹಂತಗಳ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಸಾಗಿ ಬಂದಿದ್ದು, ಇದು ಗುರು ಶಿಷ್ಯ ಪರಂಪರೆಯ ಮೂಲಕ ನಿರಂತರವಾಗಿ ಜೀವಂತವಾಗಿದೆ. ಜ್ಞಾನದ ಜೊತೆಗಿನ ಅನುಸಂಧಾನವನ್ನು ನಮ್ಮ ಹಿರಿಯರು ಮೂರು ಹಂತಗಳಾಗಿ ವಿಂಗಡಿಸಿದ್ದಾರೆ. "ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ.. ಶ್ರವಣ, ಮನನ, ನಿಧಿಧ್ಯಾಸನ–ನ ಇವು ಮೂರು ಹಂತಗಳು. ಶ್ರವಣವೆಂದರೆ ಕೇಳುವುದು: ಅರ್ಥಾತ್ ಓದುವುದು ಅಥವಾ ಪಾರಾಯಣ. ಮನನವೆಂದರೆ ಅರ್ಥಚಿಂತನೆ ಮಾಡುವುದು.

ಸುಸಂಸ್ಕೃತವಾದ ಮನಸ್ಸು ಸುಶಿಕ್ಷಿತವಾದ ಬುದ್ಧಿಯೂ ಏಕೀಭವಿಸಿ ಗ್ರಂಥದ ಅರ್ಥವನ್ನು ವಿಚಾರ ಮಾಡುವುದು ಮನನ. ನಿಧಿಧ್ಯಾಸನವೆಂದರೆ ಮನನದಿಂದ ಗೊತ್ತಾದ ಸಿದ್ಧಾಂತವನ್ನು ನಡವಳಿಕೆಯಲ್ಲಿ ಸರ್ವದಾ ಗಮನದಲ್ಲಿರಿಸಿಕೊಂಡು ಅನುಸರಿಸುವುದು"[3].

ಬಹು ಮುಖ್ಯವಾಗಿ ಭಾರತೀಯ ಈ ಗುರುಶಿಷ್ಯ ಪರಂಪರೆಯಲ್ಲಿ ಜ್ಞಾನ ಸಂಪಾದನೆಯನ್ನು ಕೇವಲ ಭೌತಿಕ ರೂಪದ ವಸ್ತುವೈವಿಧ್ಯವಾಗಿ ನೋಡದೇ ಜ್ಞಾನವನ್ನು ಪ್ರತಿಯೊಂದಿ ಜೀವದ ಆತ್ಮೋದ್ಧಾರದ ಮಾರ್ಗವಾಗಿ ಪರಿಗಣಿಸಲಾಗಿದೆ. ಅದೇ ಕಾರಣದಿಂದಲೇ ಈ ಪರಂಪರೆ ಇಷ್ಟು ಸಾವಿರಾರು ವರ್ಷಗಳ ನಂತರವೂ ಜೀವಂತವಾಗಿರುವುದು ಎನ್ನಬೇಕು. ಇಲ್ಲಿ ಶಿಕ್ಷಣದ ಉದ್ದೇಶ ಬದುಕಿನ, ಜೀವನದ ಉದ್ದೇಶವನ್ನು 'ಸತ್ಯ'ವನ್ನು ಅರಿತು 'ಆನಂದ'ವನ್ನು ಪಡೆಯುವುದು ಅಥವಾ ಬ್ರಹ್ಮಾನಂದದೆಡೆಗೆ ಸಾಗುವುದೇ ಇಲ್ಲಿನ ಜ್ಞಾನಧಾರೆಗಳ ಮುಖ್ಯ ಆಶಯವಾಗಿದೆ.

ಆಧುನಿಕ ಯುಗದಲ್ಲಿ ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಭಾರತೀಯ ಜ್ಞಾನ ಪರಂಪರೆಗೆಡೆಗೆ ತುಸು ಆಸಕ್ತಿ ಕಡಿಮೆ ಆದಂತೇ ಅನಿಸಿದರೂ ಭಾರತೀಯ ಜ್ಞಾನ ಪರಂಪರೆ ಎನ್ನುವುದು ಅದು ಬತ್ತದ ಗಂಗೆ. ಅದು ವೈಯಕ್ತಿಯ ಆಸಕ್ತಿಯ ಕಾರಣದಿಂದಲೂ ದೇಶದಲ್ಲಿ ಇಂದಿಗೂ ಬೇರೆ ಬೇರೆ ಸ್ವರೂಪಗಳಲ್ಲಿ ಅಧ್ಯಯನ ವಸ್ತುವಾಗಿ ನಿರಂತರವಾಗಿ ಹರಿಯುತ್ತಲೇ ಇದೆ. ಈ ಪ್ರಬಂಧದಲ್ಲಿ ಆಧುನಿಕ ಶಿಕ್ಷಣ ಮತ್ತು ಆಧುನಿಕ ಹೊತ್ತಿನಲ್ಲಿ ಭಾರತೀಯ ಜ್ಞಾನ ಪರಂಪರೆಗಳ ಮಹತ್ವದ ಬಗ್ಗೆ ಕೆಲವೊಂದು ಮುಖ್ಯವಾದ ಅಧ್ಯಾಯಗಳ ಮೂಲಕ ಚರ್ಚೆ ಮಾಡುವ ಯತ್ನವನ್ನು ಮಾಡಲಾಗುತ್ತದೆ.

1. ಭಾರತೀಯ ಜ್ಞಾನ ಪರಂಪರೆ– ಒಂದು ಸಾಂಸ್ಕೃತಿಕ ಪ್ರತಿಬಿಂಬವಾಗಿ
2. ಸಮಗ್ರ ಬೆಳವಣಿಗೆ ಬುನಾದಿಯಾಗಿ
3. ವೈಜ್ಞಾನಿಕ ತಳಹದಿಯು ಆರಂಭಗೊಂಡ ಸಾಕ್ಷಿಗಳು
4. ಪ್ರಕೃತಿಯೊಂದಿಗಿನ ಸೌಹಾರ್ದ ಬದುಕಿನಲ್ಲಿ
5. ಮಾನವೀಯತೆ, ಸ್ವ ಅರಿವು ಮತ್ತು ಆಧುನಿಕ ಸಮಸ್ಯೆಗಳಿಗೆ ಪರಿಹಾರವಾಗಿ

ಅಧ್ಯಾಯ 1. ಭಾರತೀಯ ಜ್ಞಾನ ಪರಂಪರೆ – ಒಂದು ಸಾಂಸ್ಕೃತಿಕ ಪ್ರತಿಬಿಂಬವಾಗಿ

ಭಾರತದ ಸಾಂಸ್ಕೃತಿಕ ಪರಂಪರೆ ಅತ್ಯಂತ ಪ್ರಾಚೀನವಾದುದು ಮಾತ್ರವಲ್ಲ ಅತ್ಯಂತ ವ್ಯಾಪಕವೂ ವೈವಿಧ್ಯಪೂರ್ಣವೂ ಆದ ಸಾಮಸ್ಕೃತಿಕ ಇತಿಹಾಸವಾಗಿದೆ. ಸುಮಾರು ನಾಲ್ಕು ಸಾವಿರ ವರ್ಷಗಳಿಗಿಂತಲೂ ಹಿಂದೆ ಹುಟ್ಟಿ ಬೆಳೆದು ಬಂದ ಸಿಂಧೂ ಕಣಿವೆಯ ನಾಗರಿಕತೆಯಲ್ಲಿ ಕಂಡು ಬರುವ ನಮ್ಮ ಸಂಸ್ಕೃತಿಯ ಇತಿಹಾಸದಲ್ಲಿ ಅಧ್ಯಾತ್ಮಿಕ ತಳಹದಿಯನ್ನು ಹಾಕಿದ ಕಾಲ ಬಹಳ ಮುಖ್ಯವಾದ ಕಾಲವಾಗಿದೆ. ಏಕೆಂದರೆ ಭಾರತವನ್ನು ಇಂದಿನ ಕಾಲದವರೆಗೂ ಜಗತ್ತು ಗುರುತಿಸುತ್ತಿರುವುದೇ ಅದರ ಅಧ್ಯಾತ್ಮಿಕ ಸ್ಪರ್ಶದಿಂದ. ಆದ್ದರಿಂದ ಭಾರತೀಯ ಸಂಸ್ಕೃತಿಯ ಅತಿ ದೊಡ್ಡ ಕುರುಹು ಇಲ್ಲಿನ ಆಧ್ಯಾತ್ಮವಾಗಿದೆ. ಹೀಗೆ ಭಾರತವು ಅನಾದಿಕಾಲದಿಂದಲೂ ಜ್ಞಾನ, ಸಂಸ್ಕೃತಿ ಮತ್ತು ಆಧ್ಯಾತ್ಮದ ನೆಲೆಯಾಗಿದೆ. ಇಲ್ಲಿ ಹುಟ್ಟಿದ

ಪ್ರತಿಯೊಂದು ಚಿಂತನೆ, ವೈದ್ಯಶಾಸ್ತ್ರದ ಜ್ಞಾನ, ಸಂಗೀತ ಇತ್ಯಾದಿ ಕಲೆಗಳ ಉಗಮ ಎಲ್ಲವೂ ಕೇವಲ ಬೌದ್ಧಿಕ ಕಸರತ್ತು ಆಗಿಲ್ಲ. ಅದೆಲ್ಲವೂ ಮಾನವ ಜನ್ಮ ದೊಡ್ಡದು ಎಂದು ಸಾಧಿಸಿದ ಸಾಧನೆಯಾಗಿದೆ. ಅದು ಜೀವನದ ಸತ್ಯವನ್ನು ಅರಸುವ ದಾರಿಯಾಗಿಯೇ ಇತಿಹಾಸವಾಗಿದೆ. ಇದೇ ಭಾರತದ ವೈಶಿಷ್ಟ್ಯವಾಗಿದೆ. ಯಾವ ವಿದ್ಯೆಯು ಬದುಕಿನ ಅಗತ್ಯವಾಗುತ್ತಲೇ ಅದು ಜ್ಞಾನದ ಮಾರ್ಗವೂ ಆಗುತ್ತದೊ ಅದು ಇಲ್ಲಿಯ ಪರಂಪರೆಯಾಗಿದೆ. ಅದೇ ಸಾಂಸ್ಕೃತಿಕ ಕುರುಹಾಗಿದೆ. ಭಾರತೀಯರ ಜೀವನಶೈಲಿ, ಮೌಲ್ಯಾಧಾರಿತ ನಡೆನುಡಿಗಳು ಹಾಗೂ ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುತ್ತಾ ಸಾಗಿದ ವೈಶ್ವಿಕ ದೃಷ್ಟಿಯೇ ದೇಶದ ಬಹು ಮಹತ್ವರವಾದ ಸಾಂಸ್ಕೃತಿಕ ಕುರುಹಾಗಿದೆ.

ಈ ಸಾಂಸ್ಕೃತಿಕ ಕುರುಹುಗಳಲ್ಲಿ ಮುಖ್ಯವಾಗಿ ವೇದಗಳು ಮತ್ತು ಉಪನಿಷತ್ತುಗಳು ನಮಗೆ ಕಾಣುತ್ತವೆ. ಭಾರತೀಯರ ಜೀವನವನ್ನು ಕೇವಲ ನೆಲದ ಮೇಲಿನ ದೈನಂದಿನ ಜೀವನವಾಗದೇ ಅದು ಪ್ರಕೃತಿಯೊಂದಿಗೆ ನಡೆಯುವ ಸಹಯಾನವಾಗಿ ಉಪನಿಷತ್ತುಗಳು ಕಂಡಿವೆ. ಈ ವೇದ ಉಪನಿಷತ್ತುಗಳಲ್ಲಿ ನಮಗೆ ಕಾಣ ಸಿಗುವ ಅನೇಕ ಸೂಕ್ತಿಗಳು ಇಂಥ ಮಾತುಗಳನ್ನು ಪುಷ್ಟೀಕರಿಸುತ್ತವೆ. ಅಂದರೆ ಅವು ಕೇವಲ ಧಾರ್ಮಿಕ ಮಂತ್ರಗಳಲ್ಲ, ಅವು ಪ್ರಕೃತಿ, ಮಾನವ ಮತ್ತು ವಿಶ್ವದೊಂದಿಗಿನ ಸಂಬಂಧವನ್ನು ಹುಡುಕುವ ಸೂಕ್ತಿಗಳಾಗಿ ಕಾಣುತ್ತವೆ.

ಈ ಸಾಂಸ್ಕೃತಿಕ ಪರಂಪರೆಯ ಮೂಲವನ್ನು ಭಾರತೀಯರು ಸಹಜವಾಗಿ ವೇದ ಮತ್ತು ಉಪನಿಷತ್ತುಗಳಲ್ಲಿಯೇ ಹುಡುಕುತ್ತಾರೆ. ವೇದ ಉಪನಿಷತ್ತುಗಳ ಕೆಲವು ಬಹುಮುಖ್ಯವಾದ ವಿಚಾರಗಳನ್ನು ನೋಡುತ್ತಾ ಹೇಗೆ ಈ ಮಾತುಗಳು ಇಂದಿಗೂ ಮಾನ್ಯ ಎನಿಸಿವೆ ಎಂಬುದನ್ನು ಗಮನಿಸಬೇಕು. ಋಗ್ವೇದದ 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎನ್ನುವ ಸೂಕ್ತಿಯ ಅರ್ಥ 'ಸತ್ಯವೊಂದೇ, ಆದರೆ ತಿಳಿದವರು ಇದನ್ನು ಬೇರೆ ಬೇರೆ ರೀತಿಗಳಲ್ಲಿ ಹೆಸರುಗಳಲ್ಲಿ ಕರೆಯುತ್ತಾರೆ' ಎಂದು. ಇದು ವಿಶಾಲವಾದ ಅರ್ಥ, 'ದೇವರು ಒಬ್ಬನೇ ನಾಮ ಹಲವು' ಎಂಬುದು. ಯಾವುದೇ ಧರ್ಮವಿರಲಿ, ಜಗತ್ತಿನ ಯಾವುದೇ ದಿಕ್ಕಿನಲ್ಲಿರುವ ಯಾವುದೇ ಪ್ರದೇಶವಾಗಲಿ ಅಲ್ಲಿರುವ ಮನುಷ್ಯನಿಗೆ ಒದಗುವ, ನೆರವಾಗುವ ಸತ್ಯವೊಂದೇ, ಅಥವಾ ದೇವರೊಬ್ಬನೇ ಅದು ಪರಬ್ರಹ್ಮ, ಇಂಗ್ಲೀಷಿನ 'ಆಲ್ಮೈಟಿ' ಎಂದು. ಇದನ್ನು ಸಾವಿರಾರು ವರ್ಷಗಳ ಮೊದಲು ಜಗತ್ತಿನ ಇಂದು ಆಧುನಿಕ ಎಂದು ಕರೆಸಿಕೊಳ್ಳುವ ಜನರು ಹೇಳುವ ಸತ್ಯವನ್ನು ಆಗಲೇ ಉಪನಿಷತ್ತುಗಳಲ್ಲಿ ಹೇಳಿದ್ದಾರೆ.

ಇದರರ್ಥ ಅಥವಾ ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ 'ಅಸ್ತಿತ್ವದಲ್ಲಿರುವ ಪರಮ ಸತ್ಯ ಒಂದೇ, ಆದರೆ ಆ ಸತ್ಯವನ್ನು ನಮ್ಮ ಋಷಿ ಮುನಿಗಳು ಬಹು ಹೆಸರುಗಳಿಂದ

ಸಂಬೋಧಿಸಿದರು' ಎನ್ನುವುದು. ಎಲ್ಲ ಧರ್ಮದ ಋಷಿ ಸದೃಷ ವ್ಯಕ್ತಿತ್ವಗಳು ಆ ಸತ್ಯವನ್ನು ತಮಗೆ ಸರಿ ಕಂಡ ಹೆಸರುಗಳಿಂದ ಕರೆದು ಆ ಸಮುದಾಯವನ್ನು ಮುನ್ನಡೆಸಿದರು. ಆದರೆ ಎಷ್ಟೇ ಭಿನ್ನತೆಗಳಿದ್ದರೂ ಅವುಗಳ ಅಂತಿಮ ಸತ್ಯ ಒಂದೇ ಆಗಿದೆ ಎನ್ನುವುದನ್ನು ಮರೆಯುವಂತಿಲ್ಲ. ನಮ್ಮದೇ ಭಾರತೀಯ ನೆಲದ ಧಾರ್ಮಿಕ ಸಮುದಾಯಗಳ ಭಿನ್ನತೆಯನ್ನು ಗಮನಿಸುವುದಾದರೆ ನಮ್ಮಲ್ಲಿರುವ ಬಹು ವಿಧದ ಸಂಪ್ರದಾಯಗಳು ಅದ್ವೈತ, ದ್ವೈತ, ಶೈವ, ವೈಷ್ಣವ, ಶಾಕ್ತ ಹಾಗೂ ಗಾಣಪತ್ಯ ಎನ್ನುವ ಸಿದ್ಧಾಂತಗಳ ಮಾರ್ಗಗಳು ಹಾಗೂ ಹಲವಾರು ದೇವತೆಗಳ ಆರಾಧನೆ ಅದು ಶಿವ, ವಿಷ್ಣು, ಗಣೇಶ, ದುರ್ಗಾ, ಹನುಮಾನ್, ಸುಬ್ರಹ್ಮಣ್ಯ ಹೀಗೆ ಇವೆಲ್ಲವೂ ಮೇಲ್ನೋಟಕ್ಕೆ ಭಿನ್ನ ಭಿನ್ನ ಎನಿಸಿದರೂ ಅವೆಲ್ಲವೂ ಪ್ರತಿಪಾದಿಸುವ ಅಂತಿಮ ಉದ್ದೇಶ ಪರಬ್ರಹ್ಮವನ್ನು ಸೇರುವುದೇ ಆಗಿದೆ. ಅಂದರೆ ಭಿನ್ನ ಭಿನ್ನ ದಾರಿಗಳು ಇದ್ದರೂ ಮುಟ್ಟುವ ಗುರಿ ಒಂದೇ ಆಗಿದೆ ಎಂದು ಇದರಿಂದ ತಿಳಿದು ಬರುತ್ತದೆ. ಇದೇ 'ಏಕಂ ಸತ್ ವಿಪ್ರಾ ಬಹುಧಾ ವದಂತಿ'.

ಭಾರತೀಯ ಸಂಸ್ಕೃತಿಯಲ್ಲಿ ಕಲ್ಲು, ಮಣ್ಣು, ಮರ ಹೀಗೆ ದೇವರು ಒಬ್ಬನೇ ಆದರೂ ಅವನನ್ನು ಬೇರೆ ಬ ಏರೆ ವಿಧದಲ್ಲಿ ಪೂಜಿಸುವುದನ್ನು ಗೌರವದಿಂದಲೇ ನೋಡಿಕೊಂಡು ಬರಲಾಗಿದೆ. ಸಮಾಜದ ಪ್ರತಿಯೊಬ್ಬರೂ ಒಂದೇ ರೀತಿ ಯೋಚಿಸುವುದನ್ನು, ಒಂದೇ ರೀತಿ ಗ್ರಹಿಸುವುದನ್ನು ಊಹಿಸಲು ಸಾಧ್ಯವಿಲ್ಲ. ಯೋಚನೆಯ ರೀತಿಗಳಲ್ಲಿ ಭಿನ್ನತೆ ಕಂಡು ಬಂದರೂ ಅವುಗಳ ಉದ್ದೇಶ ಸಮಾಜದ ಒಳಿತೇ ಆಗುವುದನ್ನು ಕಂಡು ಅಂದರೆ ಮನುಷ್ಯನ ಮನಸ್ಸಿನ ಸೂಕ್ಷ್ಮ ವಿಚಾರಗಳನ್ನು ಅಷ್ಟು ಅರಿತಿದ್ದ ಭಾರತೀಯ ಋಷಿಮುನಿಗಳು ಸಮಾಜಕ್ಕೆ ಒಂದೇ ಆದ ಪರಮಸತ್ಯವನ್ನು ಅರಿಯಲೂ ಇಂಥ ವೈವಿಧ್ಯತೆಯ ಸತ್ಯವನ್ನು ಮನಗಂಡಿದ್ದರು. ಸಾವಿರಾರು ವರ್ಷಗಳ ಹಿಂದೆಯೇ ಇಂತಹ ಆಧುನಿಕವಾದ ಹಾಗೂ ಉದಾರವಾದಿಯಾದ ಚಿಂತನೆಯ ಸಮಾಜ ಹಾಗೂ ಅಧ್ಯಾತ್ಮಿಕ ನಾಯಕತ್ವ ಭಾರತದಲ್ಲಿ ಇದ್ದುದನ್ನು ಗಮನಿಸಬಹುದು.

ಇದರಿಂದ ಒಂದು ಅಂಶವನ್ನು ತಿಳಿದುಕೊಳ್ಳಬಹುದು, ಭಾರತೀಯ ಸಂಸ್ಕೃತಿ ಎಂದರೆ ಕೇವಲ ಆಚರಣೆಗಳು ಅಷ್ಟೇ ಅಲ್ಲ ಅದು ಆಚಾರಗಳು ವಿಚಾರಗಳೊಂದಿಗೆ ಮಥಿಸಿ ಬಂದ ಜೀವನಶೈಲಿ ಎಂದು. ಈ ಪರಂಪರೆಯು ಮಾನವನ ಒಳಜೀವನವನ್ನು ಶುದ್ಧಗೊಳಿಸುವ ಆತ್ಮಜ್ಞಾನವನ್ನು ಬೆಳೆಸುವ ಮಾರ್ಗವನ್ನು ಹೆಚ್ಚು ಪುರಸ್ಕರಿಸಿದೆ ಎಂದು. ಈ ಆಧುನಿಕ ಹೊತ್ತಿನಲ್ಲಿ ಹೊರಗಿನ ಜೀವನವೇ ಮುಖ್ಯವಾಗಿರುವ ಹೊತ್ತಿನಲ್ಲಿ ಇಂಥಹ ಅದ್ಭುತ ವಿಚಾರಗಳು ಮುನ್ನೆಲೆಗೆ ಬಂದರೆ ಪ್ರಾಯಶಃ ಮನುಷ್ಯನ ಬದುಕು ಮತ್ತೊಮ್ಮೆ ನೈತಿಕತೆಯನ್ನು ತುಂಬಿಕೊಂಡು ಮೇಲೇಳಬಹುದು.

ಉಪನಿಷತ್ತುಗಳಲ್ಲಿ ಹೇಳಿರುವ 'ತತ್ವಮಸಿ' ಮತ್ತು 'ಅಹಂ ಬ್ರಹ್ಮಾಸ್ಮಿ' ಎನ್ನುವ ಸಾಲುಗಳೂ ಬಹುತೇಕ ವೈಶ್ವಿಕ ತತ್ವವನ್ನು ಮತ್ತೊಮ್ಮೆ ಉಚ್ಚರಿಸುತ್ತದೆ ಎಂದೆನ್ನಬಹುದು. ಪ್ರತಿಯೊಂದೂ ಜೀವವೂ ವಿಶ್ವದ ಶಕ್ತಿಯಾದ ಪರಬ್ರಹ್ಮನ ಭಾಗವೇ ಆಗಿದೆ ಎನ್ನುವುದನ್ನು ಗಮನಿಸಿದಾಗ ಭಾರತೀಯ ಚಿಂತನೆಗಳ ಬಹುಮುಖತೆಯ ಅರಿವಾಗುತ್ತದೆ.

ಈ ಪರಂಪರೆ ಕೇವಲ ಧಾರ್ಮಿಕ ಅಥವಾ ತಾತ್ವಿಕವಾದ ವಿಚಾರಗಳಿಗೆ ಸೀಮಿತವಾದುದಲ್ಲ. ವಿಜ್ಞಾನ ಹಾಗೂ ಗಣಿತ ಕ್ಷೇತ್ರದಲ್ಲಿಯೂ ಮಹತ್ತರ ಕೊಡುಗೆಯನ್ನು ನೀಡಿದೆ. ಇಡೀ ಜಗತ್ತಿನ ಗಣಿತಶಾಸ್ತ್ರಕ್ಕೆ 'ಸೊನ್ನೆ'ಯನ್ನು ನೀಡಿ ಒಂದು ಮುಖ್ಯವಾದ ಸೂತ್ರವನ್ನು ನೀಡಿದವರು ಆರ್ಯಭಟ ಮತ್ತು ಬ್ರಹ್ಮಗುಪ್ತ ಅವರು. ಮುಖ್ಯವಾಗಿ ಗಣಿತ ಶಾಸ್ತ್ರದಲ್ಲಿ ಸ್ಥಾನನಿರ್ಣಯ ಮತ್ತು ಶೂನ್ಯವನ್ನು ಭಾರತೀಯರೇ ಕಂಡು ಹಿಡಿದರು ಎನ್ನುವುದು ಜಗತ್ತಿಗೆ ತಿಳಿದಿರುವ ವಿಷಯವಾಗಿದೆ. "ಶೂನ್ಯ ಎಂಬುದಕ್ಕೆ ಭಾರತೀಯ ಗಣಿತದ ಪರಿಭಾಷೆಯಲ್ಲಿ ಅಭಾವ, ತುಚ್ಛ, ಅಸಂಪೂರ್ಣ ಹಾಗೂ ಊನ ಎಂಬ ನಾಲ್ಕು ಅರ್ಥಗಳಿವೆ. ಆಧ್ಯಾತ್ಮಿಕ ದೃಷ್ಟಿಯಿಂದ ಪೂರ್ಣವೆಂದೂ ಅರ್ಥವಾಗುವುದು. ಶೂನ್ಯದಿಂದ ಗುಣಿಸಿದರೂ ಭಾಗಿಸಿದರೂ ಅದರ ಅನಂತತ್ವ ವ್ಯಕ್ತವಾಗುವುದೆಂದು ಗಣಿತಜ್ಞರಾ ಬ್ರಹ್ಮಗುಪ್ತ, ಭಾಸ್ಕರ, ಕೃಷ್ಣ, ಗಣೇಶ ಮುಂತಾದವರು ಹೇಳಿರುವರು. ಮಹಾವೀರಾಚಾರ್ಯನು ಗಣಿತಸಾರ ಸಂಗ್ರಹದಲ್ಲಿ ಒಂದರಿಂದ ಒಂಭತ್ತವರೆಗೆ ಇರುವ ಸಂಖ್ಯೆಗಳಂತೆಯೇ ಶೂನ್ಯವೂ ಒಂದು ಸಂಖ್ಯೆಯೆಂದು ಹೇಳುವನು. ಶೂನ್ಯದಿಂದ ವಿಭಾಗಿಸಿದರೆ ಶೂನ್ಯದ ಅನಂತತ್ವವು ಕಂಡು ಬರುವುದೆಂದು ಏಳನೆಯ ಶತಮಾಣದ ಬ್ರಹ್ಮಗುಪ್ತನು ಮೊದಲು ನಿಶ್ಚಿಯಿಸಿದಂತೆ ಕಂಡು ಬರುವುದು"[4].

ಚಾಣಕ್ಯನ ಅರ್ಥಶಾಸ್ತ್ರ ಇಂದಿಗೂ ಮನ್ನಣೆ ಗಳಿಸಿರುವ ಗ್ರಂಥ. ಅನೇಕ ಹಿರಿಯ ವಿದ್ವಾಂಸರ ಪ್ರಕಾರ ಕೌಟಿಲ್ಯ ಅಥವಾ ಚಾಣಕ್ಯ, ಅರ್ಥಶಾಸ್ತ್ರದ ಕೊನೆಯ ಮತ್ತು ಅತಿಶ್ರೇಷ್ಠ ಪರಿಣತ. ಏಕೆಂದರೆ ಅವನು ಅರ್ಥಶಾಸ್ತ್ರವನ್ನು ರಾಷ್ಟ್ರವನ್ನು ಕಟ್ಟುವ ಮತ್ತು ಕಾಪಾಡುವ ಬಗೆಯನ್ನು ಕುರಿತ ವಿಜ್ಞಾನ ಎಂದು ವಿವರಿಸಿದ್ದಾನೆ. ಆ ಶಬ್ದದ ಅತ್ಯಂತ ವಿಶಾಲವಾದ ಅರ್ಥದಲ್ಲಿ ಅದು ರಾಷ್ಟ್ರದ ಆಡಳಿತ ಕಲೆಯನ್ನು ಒಳಗೊಳ್ಳುತ್ತದೆ ಎಂದು ಹೇಳಲಾಗುತ್ತೆ. ಸುಮಾರು ನಾಲ್ಕನೆಯ ಶತಮಾನದ ಕೊನೆಯ ಹಂತದಲ್ಲಿ ರಚನೆಯಾಗಿರುವ ಈ ಕೃತಿ ಆ ಮಟ್ಟದ ಏಕೈಕ ಕೃತಿಯೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. "ಕೌಟಿಲ್ಯನ ಅರ್ಥಶಾಸ್ತ್ರ ಪರಿವಿಡಿಯಲ್ಲಿ ಆಂತರಿಕ ಹಾಗ ವಿದೇಶಾಂಗ ಆಡಳಿತ, ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳು, ಯುದ್ಧಕಲೆ ಇವು ಸೇರಿವೆ. ನೀತಿ ಶಾಸ್ತ್ರ ಎಂಬ ಶಬ್ದವಾದರೋ ರಾಜ್ಯಾಡಳಿತ ವ್ಯವಸ್ಥೆ (ಈಗಿನ ಪಾಲಿಟಿ) ಎಂಬ ಕಿರಿದಾದ ಅರ್ಥ ಬರುವಂತೆಯೂ

ಸರ್ವಸಾಮಾನ್ಯ ನೀತಿಗಳೂ ಎಂಬ ವಿಶಾಲವಾದ ಅರ್ಥ ಬರುವಂತೆಯೂ ಬಳಕೆಯಾಗಿದೆ. ಕೌಟಿಲ್ಯನ ರಾಜಕೀಯ ಪರಿಭಾಷೆಯಲ್ಲಿ ರಾಜನು ಪ್ರಜೆಗಳ ರಕ್ಷಣೆ ಮತ್ತು ಅಭಿವೃದ್ಧಿ ಯೋಗಕ್ಷೇಮಗಳನ್ನು ಒದಗಿಸುವುದನ್ನು ತಂತ್ರವೆಂದೂ ನೆರೆಯ ರಾಜರ ಮೇಲೆ ಅವನು ಕಣ್ಣಿಟ್ಟಿರಬೇಕಾದ ಸ್ಥಿತಿ, ಅದಕ್ಕೆ ಬೇಕಾದ ಸಿದ್ಧತೆಇವುಗಳನ್ನು ಆವಾಪ ಎಂಬ ಶಬ್ದದಿಂದಲೂ ನಿರ್ದೇಶಿಸಿದ್ದಾನೆ'[5].

ಸುಶ್ರುತ ಮತ್ತು ಚರಕನ ಆಯುರ್ವೇದ ಶಾಸ್ತ್ರವೂ ಭಾರತೀಯ ಜ್ಞಾನ ಪರಂಪರೆಯ ಅತೀ ದೊಡ್ಡ ಮೆಟ್ಟಿಲು. ಸಾವಿರಾರು ವರ್ಷಗಳಿಗೂ ಹಿಂದಿದ್ದ ಔಷಧ ಪದ್ಧತಿಯಿದು. ಮನುಷ್ಯನ ದೇಹ ಮತ್ತು ಮನಸ್ಸುಗಳು ಹೊಂದಿಕೊಂಡು ಬದುಕುವ ಜೀವನಪದ್ಧತಿಯನ್ನು ಬೆಂಬಲಿಸುವ ಈ ಆಯುರ್ವೇದವು ಆಧುನಿಕ ಕಾಲದಲ್ಲಿ ಮತ್ತೆ ಮನ್ನಣೆ ಪಡೆಯುತ್ತಿರುವುದು ಅದರ ಮಹತ್ವದಿಂದಲೇ ಆಗಿದೆ. ಆಯುರ್ವೇದದಲ್ಲಿರುವ ಶಸ್ತ್ರ ಚಿಕಿತ್ಸಾ ಪದ್ಧತಿಗಳನ್ನು ಆಧುನಿಕ ವೈದ್ಯ ಪದ್ಧತಿ ಕೂಡಾ ಅನುಸರಿಸುತ್ತಿದೆ. ಉದಾಹರಣೆಗೆ ಛೇಧನ, ಲೇಕನ ಅಥವಾ ಸ್ಕ್ರೇಪಿಂಗ್ ಹಾಗೂ ತಾಯಿಯ ಗರ್ಭದಲ್ಲಿ ಇರುವ ಭ್ರೂಣದ ಪ್ರತಿ ತಿಂಗಳಲ್ಲಾಗುವ ಬೆಳವಣಿಗೆ, ರಚನೆ ಹಾಗೂ ಮಗುವಿನ ಅಥವಾ ಮಾನವನ ಮನಸ್ಸು ಹೇಗೆ ಮೂಡುತ್ತದೆ ಎನ್ನುವ ವಿಚಾರಗಳೂ ಇದರಲ್ಲಿವೆ.

ಪಾಣಿನಿಯ ಅಷ್ಟಾಧ್ಯಾಯಿ, ಪತಂಜಲಿಯ ಯೋಗಸೂತ್ರಗಳು ಇವುಗಳೆಲ್ಲವೂ ಭಾರತೀಯ ಜ್ಞಾನ ಪರಂಪರೆಯು ವಿಶ್ವಕ್ಕೇ ನೀಡಿರುವ ಅಪರೂಪದ ಕೊಡುಗೆಗಳಾಗಿವೆ. ಇನ್ನು ಭಾರತೀಯ ಜ್ಞಾನ ಪರಂಪರೆಯ ಸಾಂಸ್ಕೃತಿಕ ಅಂಶಗಳಲ್ಲಿ ಕಲೆ, ಸಂಗೀತ, ನೃತ್ಯ ಮತ್ತು ಸಾಹಿತ್ಯ ಪ್ರಮುಖವಾದ ಮತ್ತು ಸಾಂಸ್ಕೃತಿಕ ಜಗತ್ತನ್ನು ಕಟ್ಟುವಲ್ಲಿ ಮಹತ್ವವಾದ ಸ್ಥಾನವನ್ನು ಪಡೆದಿವೆ. ನಾಟ್ಯಶಾಸ್ತ್ರದ ಬೃಹತ್ ಗ್ರಂಥವಾದ ಭರತ ಮುನಿಯ ನಾಟ್ಯಶಾಸ್ತ್ರ, ತ್ಯಾಗರಾಜರ ಕೀರ್ತನೆಗಳು ಕಾಳಿದಾಸನ ಕಾವ್ಯಗಳು ಇವೆಲ್ಲವೂ ಮಾನವನ ಮನಸ್ಸು ಕಂಡ ಅತ್ಯಂತ ಉನ್ನತವಾದ ಮಟ್ಟವನ್ನು ಪುಷ್ಟೀಕರಿಸುತ್ತದೆ. ಇವೆಲ್ಲವೂ ಮಾನವ ಜನ್ಮ ದೊಡ್ಡದೆಂದೂ ಅದು ಕಾಲಕಾಲಕ್ಕೆ ಆದ ವಿಕಾಸವನ್ನೂ ಈ ಕಲಾಭಿವ್ಯಕ್ತಿಯ ಮೂಲಕ ಸಾದರ ಪಡಿಸಿದೆ. ಇವು ಇಂದಿಗೂ ಭಾರತೀಯ ಸಾಮಸ್ಕೃತಿಕ ಕುರುಹುಗಳಲ್ಲಿ ಅತ್ಯಂತ ಮಹತ್ವದ ಮತ್ತು ಮುಖ್ಯವಾದ ಕುರುಹುಗಳೆಂದೇ ಜಗತ್ತು ನೋಡುತ್ತದೆ. ಅಷ್ಟೇ ಅಲ್ಲದೇ ಇಡೀ ಜಗತ್ತಿನ ಸಾಂಸ್ಕೃತಿಕ ಇತಿಹಾಸದಲ್ಲೇ ಅತ್ಯಂತ ಸೃಜನಶೀಲ ಮತ್ತು ಅಧ್ಯಾತ್ಮದ ಅತ್ಯಂತ ಸರಳವಾದ ಪಾಠ ಇನ್ನೂ ಹೇಳುತ್ತಿರುವ ಕೊಂಡಿಗಳಂತೇ ಜೀವಂತವಾಗಿವೆ.

ಭಾರತೀಯ ಜ್ಞಾನ ಪರಂಪರೆಯ ಬಹುಮುಖ್ಯ ಅಂಗವಾದ ಕುಟುಂಬ ಮುಖ್ಯವೆನುವ ಮತ್ತು ಹೆತ್ತವರನ್ನು ದೈವತ್ವಕ್ಕೇರಿಸಿ ನೋಡುವ ಸಂಸ್ಕೃತಿ ಪ್ರಾಯಶಃ ಪ್ರಪಂಚದಲ್ಲಿ

ಇನ್ನೆಲ್ಲೂ ಕಾಣಲು ಸಿಗದು. ನಮ್ಮಲ್ಲಿ ಹೆತ್ತವರನ್ನು ಹಾಗೂ ವಿದ್ಯೆ ಕಲಿಸಿ ಬದುಕಿನ ಪಾಠಗಳಿಗೆ ಎದೆಯೊಡ್ಡಲು ತಯಾರು ಮಾಡುವ ಶಿಕ್ಷಕರನ್ನೂ ದೈವತ್ವಕ್ಕೇರಿಸುವ ಸಂಪ್ರದಾಯ ನಮ್ಮದು. ಮಾತೃದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ ಎಂದೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಮನೆಗೆ ಬರುವ ಅತಿಥಿಯನ್ನು ಆಹಾರ ನೀಡಿ ಸತ್ಕರಿಸಿ ಆತನನ್ನೂ ಅತಿಥಿ ದೇವೋಭವ ಎಂದ ಮೊಟ್ಟ ಮೊದಲ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿಯಾಗಿದೆ.

ಭಾರತೀಯ ಜ್ಞಾನ ಪರಂಪರೆಯ ಇನ್ನೊಂದು ಅತಿ ದೊಡ್ಡ ಸಾಮಸ್ಕೃತಿಕ ಕುರುಹೆಂದರೆ ಎಲ್ಲರನ್ನೂ ಒಳಗೊಳ್ಳುವ ವಸುದೈವ ಕುಟುಂಬದ ಪರಿಕಲ್ಪನೆ. ಜಗತ್ತಿನ ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಅತ್ಯಂತ ಸಹಿಷ್ಣುತೆಯ ಪಾಠ ಹೇಳಿದ ಈ ಪರಂಪರೆಯಲ್ಲಿ ಜಗತ್ತಿನ ಎಲ್ಲ ಜೀವಿಗಳೂ ಒಂದೇ ಕುಟುಂಬಕ್ಕೆ ಸೇರುತ್ತವೆ ಎನ್ನುವ ವಿಶಾಲ ಮನೋಭಾವದ ವಸುದೈವ ಕುಟುಂಬಕಂ ಎನ್ನುವ ಸೂತ್ರ ನೀಡಿದ್ದೂ ಇದೇ ಜ್ಞಾನ ಪರಂಪರೆ.

ಭಾರತೀಯ ಜ್ಞಾನ ಪರಂಪರೆಯ ಅತೀ ದೊಡ್ಡ ಸಾಂಸ್ಕೃತಿಕ ಕುರುಹುಗಳಲ್ಲಿ ಯೋಗವೂ ಬಹು ಮುಖ್ಯವಾದುದು. ಯೋಗವೆಂದರೆ ಕೇವಲ ಶಾರೀರಿಕ ವ್ಯಾಯಾಮವಲ್ಲ. ಅದು ದೇಹ ಮನಸ್ಸನ್ನು ಆರೋಗ್ಯದೆಡೆಗೆ ಕೊಂಡೊಯ್ಯುವ ಧ್ಯಾನ, ವ್ಯಾಯಾಮಗಳಿಂದ ಕೂಡಿದ ಸೂತ್ರವೆಂದು ಜಗತ್ತಿಗೇ ತೋರಿಸಿಕೊಟ್ಟವರು ಭಾರತೀಯರು. ಅದು ಈ ಆಧುನಿಕ ಯುಗದಲ್ಲಿಯೂ ನಡೆಯುತ್ತಿದೆ ಎಂದು ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಆಧುನಿಕ ವಿಜ್ಞಾನ, ತಂತ್ರಜ್ಞಾನ ಹಾಗೂ ಆರ್ಥಿಕ ಅಭಿವೃದ್ಧಿ ಹೆಚ್ಚುತ್ತಿರುವ ಈ ಯುಗದ ಬಹು ದೊಡ್ಡ ತೊಂದರೆಯಾದ ನೈತಿಕ ಅಧಃಪತನಕ್ಕೆ ಯಾವುದಾದರೂ ಉತ್ತರ ನೀಡಬಲ್ಲದು ಎಂದಿದ್ದರೆ ಅದು ಭಾರತೀಯ ಜ್ಞಾನ ಪರಂಪರೆಯ ಯೋಗ, ಧ್ಯಾನ ಮತ್ತು ಆಯುರ್ವೇದ ಎಂದರೂ ಅಡ್ಡಿಯಿಲ್ಲ. ಏಕೆಂದರೆ ಆರೋಗ್ಯ ಕುಸಿಯುತ್ತಿರುವ ಈ ಹೊತ್ತಿನಲ್ಲಿ ಯೋಗ, ಧ್ಯಾನ ಆಯುರ್ವೇದ ಇವೆಲ್ಲವೂ ಮನುಷ್ಯನ ಬದುಕಿಗೊರೋಗ್ಯ ಮತ್ತು ನೆಮ್ಮದಿ ನೀಡುವ ಪರ್ಯಾಯ ಮಾರ್ಗಗಳಾಗಿವೆ.

ಈ ಎಲ್ಲ ಅಂಶಗಳನ್ನು ಗಮನಿಸುವಾಗ ಭಾರತೀಯ ಜ್ಞಾನ ಪರಂಪರೆಯ ಸಾಂಸ್ಕೃತಿಕ ಕುರುಹುಗಳೆಂದು ಮೇಲೆ ಚರ್ಚೆ ಮಾಡಿದ ವಿಚಾರಗಳೆಲ್ಲವೂ ಯಾವುದೂ ಭೂತಕಾಲದ ಸ್ಮರಣೆಯಾಗಿ ಅಷ್ಟೇ ಉಳಿಯದೇ ಅವು ವರ್ತಮಾನದ ಮತ್ತು ಭವಿಷ್ಯತ್ತನ್ನೂ ರೂಪಿಸುವ ಮಾಂತ್ರಿಕ ಸ್ಪರ್ಶವಿರುವ ಜ್ಞಾನಧಾರೆಗಳು ಎನ್ನಬೇಕು. ಇವೆಲ್ಲವೂ ಜಗತ್ತಿನ ನೆಮ್ಮದಿಯನ್ನು ಬಲಪಡಿಸುವ ಜೀವಂತ ಧಾತುಗಳಾಗಿವೆ. ಇಂಥ ಪರಂಪರೆಯು

ಯುಗಯುಗದಲ್ಲೂ ಪುನರುಜ್ಜೀವನಗೊಳ್ಳುತ್ತಾ ಸಾಗಿ ಮನುಕುಲವನ್ನು ನೆಮ್ಮದಿಯತ್ತ ಕೊಂಡೊಯ್ಯಲು ಸಹಕಾರಿಯಾಗುತ್ತವೆ. ಹೀಗೆ ಭಾರತೀಯ ಜ್ಞಾನ ಪರಂಪರೆಯು ನಮ್ಮ ಸಂಸ್ಕೃತಿಯ ಜೀವನಾಡಿ, ಬಹುದೊಡ್ಡ ಕುರುಹು ಅಲ್ಲದೇ ಅದು ಜ್ಞಾನವನ್ನು ಉದ್ಧಾರದ ಮಾರ್ಗವಾಗಿ ಕಂಡ ಅಮೃತಮಯ ಮಾರ್ಗವನ್ನು ಹೇಳಿದೆ ಎನ್ನುವುದನ್ನು ಅರಿಯಬಹುದು.

2. ಸಮಗ್ರ ಬೆಳವಣಿಗೆಯ ಬುನಾದಿಯಾಗಿ

ಭಾರತೀಯ ಜ್ಞಾನ ಪರಂಪರೆಯೆಂದರೆ ಅದು ಕೇವಲ ಧಾರ್ಮಿಕತೆಯ, ಆಚರಣೆಯ ಸಂಪ್ರದಾಯಗಳ ಪರಂಪರೆಯಲ್ಲ ಎಂದು ನಾವು ಈಗಾಗಲೇ ಗಮನಿಸಿದ್ದೇವೆ. ಈ ಜ್ಞಾನ ಪರಂಪರೆ ಲೌಕಿಕವನ್ನು ಅಲೌಕಿಕದೆಡೆಗೂ ಎಳೆದುಕೊಂಡು ಹೋದ ಮಾರ್ಗಗಳನ್ನು ಭಕ್ತಿ, ಜ್ಞಾನ ಕರ್ಮ ಸಿದ್ಧಾಂತಗಳ ಮೂಲಕ ಎಂದು ಗಮನಿಸಬೇಕು. ಇಡೀ ಜಗತ್ತು ಇಂದು ಭಾರತೀಯ ಜ್ಞಾನದೆಡೆಗೆ ನೋಡುತ್ತಿದೆ ಎಂದರೆ ಈ ನೆಲದ ಭಕ್ತಿ ಪರಂಪರೆಯೂ ಅದರಲ್ಲಿ ಗಮನಾರ್ಹವಾದ ಸ್ಥಾನವನ್ನು ಪಡೆದಿದೆ ಎನ್ನಬೇಕು. ಭಕ್ತಿ, ಮಾನವನ ಜೀವನದ ಎಲ್ಲ ಆಯಾಮಗಳಿಗೂ ಸ್ಪರ್ಶ ಮಾಡುವಂತಹ ವಿಶಾಲ ಮತ್ತು ಮಾನವೀಯ ಮೌಲ್ಯಗಳುಳ್ಳ ಒಂದು ಮನಸ್ಥಿತಿ. ಅದು ಶಂಕರರ ಕಾಲದಿಂದಲೂ ಮನುಜ ಕುಲವನ್ನು ಉದ್ಧರಿಸಿಕೊಂಡು ಹೋಗಿದ್ದನ್ನು ನಾವು ನೋಡಿದ್ದೇವೆ. ಒಂದು ಸಾವಿರ ವರ್ಷಗಳ ಕಾಲ ಇಡೀ ಭರತವರ್ಷದ ತುಂಬ ಹಬ್ಬಿದ್ದ ಭಕ್ತಿ ಪರಂಪರೆ ಖಂಡಿತವಾಗಿಯೂ ಮಾನವನ ಸಮಗ್ರ ಬೆಳವಣಿಗೆಯಲ್ಲಿ ಪಾಲು ಪಡೆಯುತ್ತದೆ. ಹನ್ನೆರಡನೆಯ ಶತಮಾನದ ಭಕ್ತಿಭಂಡಾರಿ ಬಸವಣ್ಣನವರಿಂದಲೂ ವಿಕಾಸವಾದ ಈ ಪರಂಪರೆ ಮಾನವ ಕುಲದ ಸಮಗ್ರ ಏಳಿಗೆಗೆ ನಿರಂತರವಾಗಿ ಶ್ರಮಿಸಿದ ಪರಂಪರೆಯಾಗಿದೆ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ಶಿಕ್ಷಣವು ಕೇವಲ ವೃತ್ತಿಯನ್ನು ಅರಸುವ ಸಾಧನವಾಗಿಲ್ಲ. ಶಿಕ್ಷಣವು ಕೇವಲ ಉದ್ಯೋಗವನ್ನುಪಡೆಯುವ ದಾರಿಯಾಘಿ ಇರಲೇ ಇಲ್ಲ. ಅದು ಜೀವನದ ಉನ್ನತವಾದ ಗುರಿಯನ್ನು ಅರಸುವ ಅರಿಯುವ ಮಾರ್ಗವಾಗಿಯೇ ಕಂಡು ಬಂದಿದೆ. ಭಾರತೀಯ ಶಿಕ್ಷಣ ಪದ್ಧತಿ ವ್ಯಕ್ತಿಯ ಶಾರೀರಿಕ, ಮಾನಸಿಕ, ಬೌದ್ಧಿಕ ಹಾಗೂ ಬಹುಮುಖ್ಯವಾಗಿ ಅಂತರಂಗದ ಆತ್ಮದ ಬೆಳವಣಿಗೆಯಲ್ಲಿ ಶ್ರದ್ಧೆ ತೋರುವ ಸಮಗ್ರ ವ್ಯವಸ್ಥೆಯಾಗಿದೆ.

ಪ್ರಾಚೀನ ಕಾಲದಲ್ಲಿ ಶಿಕ್ಷಣ ನೀಡುವ ಕೇಂದ್ರಗಳೆಂದರೆ ಗುರುಕುಲಗಳು ಆಗಿದ್ದವು. ವಿದ್ಯಾರ್ಥಿಗಳು, ಶಿಕ್ಷಣಾರ್ಥಿಗಳು ಶಿಕ್ಷಣ ಪಡೆಯುವ ಅಷ್ಟೂ ವರ್ಷಗಳನ್ನೂ ಗುರುಕುಲದಲ್ಲಿಯೇ ಕಳೆಯಬೇಕಿತ್ತು. ಅಲ್ಲಿ ಶಿಕ್ಷಣವೆಂದರೆ ಶಾಸ್ತ್ರ ಸಂಬಂಧಿತ ಪಾಠಗಳೊಂದಿಗೆ ಜೀವನೋಪಾಲಯದ ಕೌಶಲ್ಯಗಳನ್ನೂ, ಧರ್ಮ, ನೀತಿ, ಶಿಸ್ತು, ಸೇವೆ ಮತ್ತು ತ್ಯಾಗದ

ಅಗತ್ಯವಾದ ಶಿಕ್ಷಣವನ್ನು ಪಡೆಯುತ್ತಿದ್ದರು. ಗುರು ಮತ್ತು ಶಿಷ್ಯರ ನಡುವೆ ಕೇವಲ ವ್ಯವಹಾರದ ನಂಟು ಆಗಿರದೇ ಅದು ಪರಿಪೂರ್ಣ ಜೀವನದ ನಡೆಯನ್ನು ಕಲಿಸುವ ಆಧ್ಯಾತ್ಮಿಕ ನಂಟು ಆಗಿರುತ್ತಿತ್ತು. ವಿದ್ಯೆಗಾಗಿ ಶುಲ್ಕ ಎನ್ನುವ ಹಣ ಪಾವತಿಸುವ ವ್ಯವಸ್ಥೆ ಇಲ್ಲದೆ ಅಲ್ಲಿ ಗುರು ದಕ್ಷಿಣೆ ಎನ್ನುವ ಕೃತಜ್ಞತೆಯ ಪರಂಪರೆ ನಡೆಯುತ್ತಿತ್ತು.

ವೇದಗಳು, ಉಪನಿಷತ್ತುಗಳು, ಪುರಾಣಗಳು ಮತ್ತು ಸ್ಮೃತಿಗಳು ಅಂದಿನ ಗುರುಕುಲದ ವಿದ್ಯಾರ್ಥಿಗಳ ಮುಖ್ಯ ಪಾಠಪುಸ್ತಕಗಳಾಗಿದ್ದವು. ವೇದಾಧ್ಯಯನದ ಮೂಲಕ ಧಾರ್ಮಿಕ ಹಾಗೂ ನೈತಿಕ ಮೌಲ್ಯಗಳನ್ನು ಅರಿತುಕೊಳ್ಳುತ್ತಿದ್ದರು. ಅಂತೆಯೇ ಅವುಗಳ ಜೊತೆಗೆ ವ್ಯಕ್ತಿಗತ ಆಯ್ಕೆಗೂ ಅವಕಾಶವಿರುವಂತೆಯೇ ಭಾಸವಾಗುತ್ತಿತ್ತು ಏಕೆಂದರೆ ಇಂತಹ ಗುರುಕುಲದ ಶಿಷ್ಯಂದಿರಾದ ಅನೇಕ ವಿದ್ವಾಮಸರು ಒಂದೊಂದು ವಿಷಯದಲ್ಲಿ ಪರಿಣಿತಿ ಪಡೆದು ಗ್ರಂಥಗಳನ್ನು ರಚನೆ ಮಾಡಿರುವುದನ್ನು ನೋಡುವಾಗ ಆಗಿನ ಕಾಲದಲ್ಲಿಯೂ ವೈಯಕ್ತಿಯ ಆಯ್ಕೆಗೂ ಅವಕಾಶವಿತ್ತೆಂದು ಮನಗಾಣಬಹುದು. ಸಮಗ್ರವಾಗಿ ಗಣಿತ, ಆಯುರ್ವೇದ, ಖಗೋಳ ಶಾಸ್ತ್ರ, ಶಿಲ್ಪಕಲೆ, ಸಾಹಿತ್ಯ ಹಾಗೂ ವಿಜ್ಞಾನದ ಅಧ್ಯಯನಗಳು ನಡೆಯುತ್ತಿದ್ದವು ಎನ್ನುವುದಕ್ಕೇ ಜಗತ್ತಿಗೆ ವಿಶ್ವವಿದ್ಯಾಲಯದ ಬೃಹತ್ ಕಲ್ಪನೆಯನ್ನು ನೀಡಿದ ಪ್ರಾಚೀನ ವಿಶ್ವವಿದ್ಯಾನಿಲಯಗಳಾದ ನಾಲಂದಾ ಮತ್ತು ತಕ್ಷಶಿಲೆಯ ವಿಶ್ವವಿದ್ಯಾನಿಲಯಗಳೇ ಬಹು ದೊಡ್ಡ ಸಾಕ್ಷಿಗಳಾಗಿವೆ. ಈ ಮಹತ್ವದ ವಿಶ್ವವಿದ್ಯಾನಿಲಯಗಳಿಗೆ ವಿಶ್ವದ ಬೇರೆ ಬೇರೆ ದೇಶಗಳಿಂದ ವಿದ್ಯಾರ್ಥಿಗಳು ಬಂದು ಶಿಕ್ಷಣ ಪಡೆಯುತ್ತಿದ್ದರು ಅಲ್ಲದೇ ಈ ಶಿಕ್ಷಣ ಸಂಸ್ಥೆಗಳು ಸಂಶೋಧನೆ ಮತ್ತು ಚಿಂತನೆಯ ಕೇಂದ್ರಗಳಾಗಿದ್ದವು ಎನ್ನುವುದಕ್ಕೆ ಹಲವಾರು ಪುರಾವೆಗಳನ್ನು ನೋಡಬಹುದಾಗಿದೆ. ಇವೆಲ್ಲವನ್ನು ಗಮನಿಸುವಾಗ ಭಾರತೀಯ ಜ್ಞಾನ ಪರಂಪರೆಯ ಮೌಲ್ಯ ಅರ್ಥವಾಗುತ್ತದೆ.

ಭಾರತೀಯ ಜ್ಞಾನ ಪರಂಪರೆ ಅಥವಾ ಮುಖ್ಯವಾಗಿ ಭಾರತೀಯ ಶಿಕ್ಷಣ ಪರಂಪರೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಧಾನ್ಯ ನೀಡಿದ್ದನ್ನು ಗಮನಿಸಬಹುದು. ಗೀತೆಯ ಮಾತೊಂದು 'ಸಾ ವಿದ್ಯಾಯಾ ವಿಮುಕ್ತಯೇ' ಅಚಿದರೆದ ವಿದ್ಯೆಯಿಂದಲೇ ಮನುಷ್ಯನಿಗೆ ಮುಕ್ತಿ ಎನ್ನುವುದು. ವಿದ್ಯಾರ್ಥಿಯಾದವನು ಕೇವಲ ಪಾಠಗಳನ್ನು ಊರು ಹೊಡೆಯುವ ಗಿಳಿಯಾಗದೇ ಶಿಕ್ಷಣದ ಮಹತ್ವವನ್ನು ಅರಿಯುವ ಜ್ಞಾನಿಯಾಗಿ, ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬದುಕಲು ಪ್ರೇರಣೆ ನೀಡುವಂತಹ ಜೊತೆಯಲ್ಲಿ ಸಹಬಾಳ್ವೆಗೆ ಅತೀ ಅಗತ್ಯವಾದ ಸಹಿಷ್ಣುತೆ ಮತ್ತು ವಿನಯವನ್ನೂ ಕಲಿಸಲಾಗುತ್ತಿತ್ತು. ಸಂಸ್ಕೃತದ ಸುಭಾಷಿತವೊಂದು ಇದನ್ನು ಪುಷ್ಟೀಕರಿಸುತ್ತದೆ. 'ವಿದ್ಯಾ ದದಾತಿ ವಿನಯಂ' ಎಂದರೆ ಮನುಷ್ಯನಿಗೆ ಶಿಕ್ಷಣವು ವಿನಯದ ಪಾಠವನ್ನೂ ನೀಡುತ್ತದೆ ಎಂದು. ಸಹಬಾಳ್ವೆಯಲ್ಲಿ

ಅತೀ ಅಗತ್ಯವಾದ ಅಂಶಗಳಲ್ಲಿ ವಿನಯವೂ ಒಂದು. ವಿದ್ಯೆ ಮಾನವನ ಒಳಗಿರುವ ಅಹಂಕಾರವನ್ನು ಕರಗಿಸಿ ಸಹನೆ, ಅನುಕಂಪ, ವಿನಿಮಯ, ಸೇವಾ ಮನೋಭಾವ ಹಾಗೂ ಮುಖ್ಯವಾಗಿ ಎಲ್ಲರನ್ನೂ ಸಹಾನುಭೂತಿಯಿಂದ ಕಾಣುವ ಸಹಿಷ್ಣುತೆಯನ್ನು ಕಲಿಸುವ ಮಾರ್ಗವೆಂದು ಭಾರತೀಯ ಜ್ಞಾನ ಪರಂಪರೆ ವಿಶ್ವಕ್ಕೇ ಹೇಳಿ ಕೊಟ್ಟಿದೆ.

ಒಟ್ಟಿನಲ್ಲಿ ಭಾರತೀಯ ಶಿಕ್ಷಣ ಪದ್ಧತಿ ಕೇವಲ ಪಠ್ಯಾಧಾರಿತ ವ್ಯವಸ್ಥೆಯಲ್ಲ ಅದು ವ್ಯಕ್ತಿಯನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಜೀವನಕ್ಕೆ ಪೂರಕವಾದ ವಿದ್ಯಾವ್ಯವಸ್ಥೆಯೆಂಬುದನ್ನು ಮನಗಾಣಬಹುದು. ಅದು ಪ್ರತೀ ಮನುಷ್ಯನ ಒಳಗಿರುವ ಬೆಳಕನ್ನು ಬೆಳಗಿಸಿ ಅದರಿಂದ ಅವನೂ ಸಮಾಜವೂ ನೆಮ್ಮದಿಯಿಂದ ಬದುಕುವ ಮಾರ್ಗವನ್ನು ತೋರಿಸುತ್ತದೆ. ವಿದ್ಯೆ ಎಂದರೆ ಭಾರತೀಯ ಪರಂಪರೆಯಲ್ಲಿ ಜ್ಞಾನ ಮತ್ತು ಮೌಲ್ಯಗಳ ಸಮನ್ವಯದ ಮಾರ್ಗವೆಮದು ಹೇಳಲಾಗಿದೆ.

ಇನ್ನು ಭಾರತೀಯ ಜ್ಞಾನ ಪರಂಪರೆಯ ಬಹು ದೊಡ್ಡ ಮತ್ತು ಮಹತ್ವದ ಭಾಗವಾಗಿರುವ ಸೃಜನಶೀಲ ಕಲೆಗಳು ವ್ಯಕ್ತಿಯ ಸಮಗ್ರ ಬೆಳವಣಿಗೆಗೆ ಹೇಗೆ ಪೂರಕವಾಗಿ ಶ್ರಮಿಸಿವೆ ಎಂಬುದನ್ನು ನೋಡುವುದಾದರೆ ವಿವೇಕಾನಂದರ ಮಾತೊಂದು ಸ್ಮರಣೆಗೆ ಬರುತ್ತದೆ, 'ಕಲೆ ವಿಲಾಸಕ್ಕಲ್ಲ, ಆತ್ಮವಿಕಾಸಕ್ಕೆ' ಎನ್ನುವ ಎಲ್ಲ ಕಾಲಕ್ಕೂ ಸಲ್ಲುವ ಮಾತು ಕಲೆಯ ಬಗೆಗೆ ಇರುವ ಸತ್ಯವನ್ನು ಪ್ರತಿಫಲಿಸುತ್ತದೆ. ಕಲೆ ಎಂದರೆ ಕೇವಲ ಮನೋರಂಜನೆಯ ವಿಷಯವಲ್ಲ. ಅದು ಮನುಷ್ಯನ ಅಂತರಂಗದಲ್ಲಿ ಇರುವ ಸೌಂದರ್ಯದ ಅಭಿವ್ಯಕ್ತಿಯಾಗಿದೆ. ಕಲೆ ವ್ಯಕ್ತಿಯ ಮನದ ಭಾವನೆ, ಅವನ ಅನಂತವಾ ಸೃಜನಶೀಲತೆ ಮತ್ತು ಸೂಕ್ಷ್ಮ ಸಂವೇದನೆಗಳ ಸಮನ್ವಯವಾಗಿದೆ. ಮನುಷ್ಯನ ಅಂತರಂಗದ ಕಲಾತತ್ವದ ಸೌಂದರ್ಯ ಅದಕ್ಕೆ ಮಾನವೀಯತೆ ಮತ್ತುಸಹಾನುಭೂತಿ ಮಿಳಿತವಾದಾಗ ಅಪೂರ್ವವಾದ ಕಲಾಸೃಷ್ಟಿಯಾಗುತ್ತದೆ. ಅದು ವ್ಯಕ್ತಿಯ ಜೀವನಕ್ಕೆ ಸಮತೋಲನವನ್ನೂ ನೀಡುವುದರಿಂದ ಮನುಷ್ಯನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಪ್ರಾಚೀನ ಭಾರತದಲ್ಲಿ ಕಲೆಗಳನ್ನು ಸಪ್ತಕಲಾ ವಿದ್ಯೆಗಳು ಎಂದು ಕರೆಯಲಾಗುತ್ತಿತ್ತು. ಸಂಗೀತ, ನೃತ್ಯ, ನಾಟಕ, ಚಿತ್ರಕಲೆ. ಶಿಲ್ಪ, ಸಾಹಿತ್ಯ ಮತ್ತು ಕಾವ್ಯ ಇವು ಮಾನವನ ಅಂತರಂಗದ ಶುದ್ಧಿಕರಣಕ್ಕೆ ಸಾಧನಮಾರ್ಗಗಳೆಂದು ಪರಿಗಣಿಸುತ್ತಿದ್ದರು. ಕಲೆ, ಮಾನವನನ್ನು ಸಮಾಧಾನಗೊಳಿಸುತ್ತದೆ, ಸಾಂತ್ವನವನ್ನೂ ನೀಡುತ್ತದೆ. ಅದು ಮನುಷ್ಯನನ್ನು ಸಮಾಜದಲ್ಲಿ ಸಹಜವಾಗಿ ಎಲ್ಲರೊಂದಿಗೆ ಒಂದಾಗಿ ಬಾಳುವ ಸಂಸ್ಕಾರವನ್ನು ನೀಡುತ್ತದೆ. ಉದಾಹರಣೆಗೆ ಸಂಗೀತ ನೃತ್ಯದಂಥ ಪ್ರದರ್ಶಕ ಕಲೆಗಳು ಕಲಾವಿದನಿಗೂ ನೋಡುವವನಿಗೂ ಶಾಂತಿ, ಸಮಾಧಾನವನ್ನು ನೀಡಿದರೆ ಸಾಹಿತ್ಯ, ಚಿತ್ರಕಲೆಯಂಥ ಕಲೆಗಳು ಮಾನವನ ಕಲ್ಪನೆ ಮತ್ತು

ಚಿಂತನೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಮುಖ್ಯವಾಗಿ ಕಲೆ ಮಾನವನ ಶ್ರದ್ಧೆ, ಬುದ್ಧಿವಂತಿಕೆಗೆ ಸಹಾಯ ಮಾಡುತ್ತದೆ. ಕಲೆಯ ಮುಖ್ಯ ಉದ್ದೇಶಗಳಲ್ಲಿ ಅದು ಸಮಾಜದ ಅಥವಾ ಮನುಷ್ಯನ ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳಲು ಅನುವು ಮಾಡಿಕೊಡುತ್ತದೆ. ಇತರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು, ಮತ್ತು ಸಂವೇದನಾಶೀಲತೆಯಿಂದ ಪ್ರತಿಕ್ರಿಯಿಸಲೂ ಕಲ್ಪನೆಗಳನ್ನು ನೀಡಿ ಸಹಾಯ ಮಾಡುತ್ತದೆ.

ಮುಖ್ಯವಾಗಿ ನಮ್ಮ ಭಾರತೀಯ ಜ್ಞಾನ ಪರಂಪರೆಯಲ್ಲಿ ಕಲೆಯನ್ನು ದೈವಿಕವಾದ ವಿದ್ಯೆಯಾಗಿಯೇ ಪರಿಗಣಿಸಲಾಗಿದೆ, ಸಂಗೀತಗಾರರನ್ನು ಗಂಧರ್ವರು ಎನ್ನುವ ಅಭ್ಯಾಸವನ್ನು ಗಮನಿಸಿದಾಗ ಸಂಗೀತ, ನೃತ್ಯವೆಲ್ಲವೂ ಗಂಧರ್ವ ವಿದ್ಯೆಯಾಗಿ ಪರಿಗಣಿಸಲಾಗುತ್ತಿತ್ತು ಎಂದು ಗಮನಿಸಬಹುದು. ಸಂಗೀತ, ನೃತ್ಯ ಇವೆಲ್ಲವೂ ದೇವರ ಪೂಜೆಯ ಹೊತ್ತಿನಲ್ಲಿ ಸೇವೆಯ ಭಾಗವಾಗಿ ಕಂಡು ಬಂದಿದೆ. ಇಂದಿಗೂ ಕರಾವಳಿ ಕರ್ನಾಟಕದೆಡೆಗೆ ಹೆಚ್ಚು ಪ್ರಚಲಿತವಿರುವ ದುರ್ಗಾ ನಮಸ್ಕಾರದಂತಹ ಪೂಜಾ ಕಾರ್ಯಗಳಲ್ಲಿ ದೇವಿಗೆ ಆರತಿ ಎತ್ತುವ ಹೊತ್ತಿನಲ್ಲಿ ಸಂಗೀತ ಸೇವೆ ಮತ್ತು ನೃತ್ಯ ಮಾಡುವ ಮೂಲಕ ನೃತ್ಯ ಸೇವೆಯನ್ನು ನಡೆಸುವ ಪರಂಪರೆಯನ್ನು ನೋಡಬಹುದು. ದೇವಾಲಯಗಳಲ್ಲಿ ಕಂಡು ಬರುವ ಶಿಲ್ಪಗಳು, ಗೋಡೆಗಳ ಮೇಲೆ ಬರೆದ ಚಿತ್ರಗಳು ನೃತ್ಯ ಮೂರ್ತಿಗಳು ಇವೆಲ್ಲವು ಕೇವಲ ಮನರಂಜನೆಯ ಭಾಗವಲ್ಲ. ಇದು ಭಕ್ತಿಭಾವದಿಂದ ಪೂಜಿಸಿದ ತತ್ತ್ವಜ್ಞಾನದ ಭಾಗವಾಗಿಯೇ ಕಂಡು ಬರುತ್ತದೆ. ತಮಿಳುನಾಡಿನ ಚಿದಂಬರಂನಲ್ಲಿರುವ ನಟರಾಜನ ಅದ್ಭುತ ಮತ್ತು ಅಷ್ಟೇ ಬೃಹತ್ತಾಗಿರುವ ದೇವಾಲಯದಲ್ಲಿ ನೃತ್ಯ ಬಂಗಿಯಲ್ಲಿರುವ ನಟರಾಜನೇ ಮುಖ್ಯ ದೇವರು. ಅಲ್ಲಿ ನಿತ್ಯವೂ ಅವನಿಗೆ ಇತರ ಎಲ್ಲಾ ಪೂಜೆಗಳೊಂದಿಗೆ ನೃತ್ಯ ಸಂಗೀತದ ಸೇವೆಯನ್ನೂ ಮಾಡಲಾಗುತ್ತದೆ. ನೃತ್ಯವನ್ನು ನಾಟ್ಯವೇದ ಎಂದೇ ಕರೆದು ಅದರಿಂದ ಸಿಗುವ ಪ್ರಯೋಜನಗಳನ್ನು ಗಮನಿಸಬೇಕು. ಇದರರ್ಥ ಭಾರತೀಯ ಜ್ಞಾನ ಪರಂಪರೆಯಲ್ಲಿ ಸಂಗೀತ ನೃತ್ಯ ಮುಂತಾದ ಕಲೆಗಳನ್ನು ಅದೆಷ್ಟು ಉನ್ನತ ಭಾವದಿಂದ ನೋಡಲಾಗುತ್ತಿತ್ತು ಎಂಬುದನ್ನು ಅರಿಯಬಹುದು. ನಮ್ಮ ಕನ್ನಡ ರಾಜಮನೆತನದಲ್ಲಿ ಒಂದಾದ ಹೊಯ್ಸಳರ ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಲೆ 'ನಾಟ್ಯರಾಣಿ' ಎಂದೇ ಇಂದಿಗೂ ಶಾಶ್ವತವಾದ ಹೆಸರನ್ನು ಪಡೆದುಕೊಂಡಿದ್ದಾಳೆ.

ಭರತನ ನಾಟ್ಯಶಾಸ್ತ್ರದಂತಹ ಅಪರೂಪದ ಗ್ರಂಥಗಳು ಕೇವಲ ನಾಟ್ಯದ ಬಗ್ಗೆ ಅಲ್ಲದೇ ನಾಟಕದಿಂದ ಹಿಡಿದು ಪ್ರದರ್ಶಕ ಕಲೆಗಳಿಗೆ ಬೇಕಾದ ಅತೀ ದೊಡ್ಡ ಆಕರಗ್ರಂಥವಾಗಿದೆ. ಅದು ನೃತ್ಯ, ನಾಟಕ ಸಂಗೀತದ ಕಲಿಕೆ, ಪ್ರದರ್ಶನದಿಂದ ಹಿಡಿದು ಎಲ್ಲ ಮೂಲಭುತವಾದ ನಿಯಮಗಳನ್ನು ನಿರ್ಧರಿಸಿತು. ಇದರ ಉದ್ದೇಶವೇ ಸಾಮಾನ್ಯ

ಜನರಿಗೂ ಬದುಕಿನ ಮೂಲ ಪಾಠವಾಗಿರುವ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ನಡೆಗಳನ್ನು ತಿಳಿಸಿದ್ದು. ಹೀಗಾಗಿ ಕಲೆ ಅನ್ನುವುದು ಶಿಕ್ಷಣದ ಭಾಗವಾಗಿರುವುದು ಅತೀ ಅಗತ್ಯವಾಗಿದೆ. ಪ್ರಾಚೀನ ಕಾಲದಿಂದಲೂ ಸಂಗೀತದ, ಲಯದ ಮಹತ್ವವಿತ್ತು ಆದ್ದರಿಂದ ಅವುಗಳೆಲ್ಲವೂ ಒಂದಕ್ಕೊಂದು ಪೂರಕವಾಗಿಯೇ ಶಿಕ್ಷಣ ನೀಡಲಾಗುತ್ತಿತ್ತು. ವೇದಪಾಠಗಳಲ್ಲಿ ಅವುಗಳನ್ನು ಪಠಣದ ಹೊತ್ತಿನಲ್ಲಿ ಅದಕ್ಕೊಂದು ವಿಶೇಷವಾದ ಸ್ವರ ಮತ್ತು ಲಯ ಹಾಗೂ ವಿನ್ಯಾಸವೂ ಇದೆ ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ ವ್ಯಾಸ ವಾಲ್ಮೀಕಿಯ ಸಾಹಿತ್ಯವು ಇಡೀ ಮನುಜ ಕುಲದ ಉದ್ಧಾರಕ್ಕಾಗಿಯೇ ಸೃಷ್ಟಿಯಾದ ಸಾಹಿತ್ಯವೆನ್ನುವುದನ್ನು ಒಪ್ಪದಿರಲು ಸಾಧ್ಯವೇ ಇಲ್ಲ. ಏಕೆಂದರೆ ಅವೆರಡೂ ಗ್ರಂಥಗಳು ಮನುಷ್ಯಶಾಸ್ತ್ರವನ್ನು ಹೇಳಿದ ಗ್ರಂಥಗಳು. ಕಾಳಿದಾಸನ ಸಂಸ್ಕೃತ ನಾಟಕಗಳು, ನಂತರದ ಭಕ್ತಿ ಗೀತೆಗಳು ಬಸವಣ್ಣನ ವಚನಗಳವರೆಗೂ ಜನರ ಹೃದಯದಲ್ಲಿ ನೈತಿಕತೆಯನ್ನು ಹುಟ್ಟಿಸಿ ಬೆಳೆಸುವ ಕೆಲಸ ಮಾಡುತ್ತವೆ. ಆದ್ದರಿಂದ ಇವುಗಳು ಶಿಕ್ಷಣದ ಮಹತ್ವದ ಭಾಗಗಳು ಎಂದೇ ಪರಿಗಣಿಸಲಾಗುತ್ತದೆ.

ಶಿಲ್ಪ ಕಲೆ ಮತ್ತು ವಾಸ್ತು ಶಿಲ್ಪವೂ ಆ ಕಾಲದ ಉನ್ನತವಾದ ಯೋಚನೆಯ ಮಟ್ಟವನ್ನು ಹೇಳುತ್ತದೆ. ಇಂದಿಗೂ ವಾಸ್ತುಶಿಲ್ಪದ ಅದ್ಭುತಕ್ಕೆ ಹೆಸರಾದ ತಮಿಳುನಾಡಿನ ತಂಜಾವೂರಿನ ಬೃಹದೀಶ್ವರ ದೇವಸ್ಥಾನವಿರಬಹುದು, ಲೇಪಾಕ್ಷಿಯ ತೂಗುಕಂಬವಿರಬಹುದು ಅವೆಲ್ಲವೂ ಉನ್ನತವಾದ ವಾಸ್ತುಶಿಲ್ಪದ ಲೆಕ್ಕಾಚಾರದ ಪ್ರತಿಫಲವಾಗಿದೆ. ತಂಜಾವೂರಿನ ಬೃಹತ್ ಗೋಪುರದ ನೆರಳು ದೇವಾಲಯದ ಯಾವ ಭಾಗವದಲ್ಲಿಯೂ ಬೀಳದಂತೇ ಆ ಗೋಪುರವನ್ನು ನಿರ್ಮಾಣ ಮಾಡಿದ ವಾಸ್ತುಶಿಲ್ಪಿಯ ಜಾಣ್ಮೆ ಇಂದಿಗೂ ಒಂದು ಕುತೂಹಲಿಕಾರಿಯಾದ ವಿಚಾರವಾಗಿಯೇ ಉಳಿದುಕೊಂಡಿದೆ. ಅಜಂತಾ, ಎಲ್ಲೋರಾದ ಗುಹೆಗಳು, ಹೊಯ್ಸಳ ರಾಜರ ಬೇಲೂರು ಹಳೇಬೀಡಿನ ವಾಸ್ತುವೈಭವ ಎಲ್ಲವೂ ಅತ್ಯಂತ ಉನ್ನತ ಮಟ್ಟದ ವಾಸ್ತುವೈಭವಕ್ಕೆ ಸಾಕ್ಷಿಗಳು ಅಲ್ಲದೇ ಸಮಸ್ತ ಭಾರತದಲ್ಲಿ ಇಂತಹ ವಾಸ್ತುಶಿಲ್ಪದ ಉದಾಹರಣೆಗಳು ಸಾವಿರಕ್ಕೂ ಹೆಚ್ಚು ಇರುವುದನ್ನು ನೋಡಿದಾಗ ಪ್ರಾಚೀನ ಭಾರತೀಯರ ವಾಸ್ತುಶಿಲ್ಪದ ಉನ್ನತವಾದ ಮಟ್ಟವನ್ನು ಅರಿತುಕೊಳ್ಳಬಹುದು.

ಪ್ರಾಚೀನ ಕಾಲದಲ್ಲಿ ದೇವಾಲಯಗಳು ಕೇವಲ ಪೂಜಾ ಸ್ಥಳ ಅಥವಾ ಧಾರ್ಮಿಕ ಆಚರಣೆಗಳ ಸ್ಥಳವಾಗದೇ ಆ ದೇವಾಲಯಗಳ ಸುತ್ತಲಿನ ಪ್ರಾಂಗಣಗಳು ಇಡೀ ಸಮಾಜದ ಉಪಯೋಗಕ್ಕೆ ಸಿಗುತ್ತಿದ್ದ ಸ್ಥಳವಾಗಿರುತ್ತಿತ್ತು. ದೇವಾಲಯದ ಗರ್ಭಗುಡಿಯ ಸುತ್ತಲಿನ ನಾಲ್ಕು ದಿಕ್ಕಿನ ಅಂತಸ್ತುಗಳು, ಭಜನೆ, ನೃತ್ಯ ಅಲ್ಲದೇ ಸಮುದಾಯದ ಜನರ ಉಪಯೋಗಕ್ಕೆ ಸಿಗುತ್ತಿದ್ದವು ಎನ್ನುವುದನ್ನು ತಿಳಿಯುವಾಗ ಆ ಹೊತ್ತಿನ ಜನಜೀವನದ ಕೂಡಿ ಬಾಳುವ

ಸೊಬಗನ್ನು ಅರಿಯಬಹುದು. ಹೀಗೆ ವಾಸ್ತುಶಿಲ್ಪ ಅದರ ಸುತ್ತ ಇರುವ ವಿಚಾರಗಳನ್ನು ಅರಿಯುವಾಗ ಕಲೆ ಎನ್ನುವುದು ಒಂದು ಕೇವಲ ಮನರಂಜನೆಯ ವಿಚಾರವಾಗಿ ಇರದೇ ಅದು ಆ ಕಾಲದ ತತ್ತ್ವವೂ, ಧಾರ್ಮಿಕ ನಂಬಿಕೆಯ ಶಕ್ತಿಯಾಗಿಯೂ ಮುಖ್ಯವಾಗಿ ಜೀವನಮೌಲ್ಯಗಳ ಪ್ರತೀಕವಾಗಿಯೂ ನೋಡಬಹುದು.

ಇದೆಲ್ಲವನ್ನು ನೋಡಿದಾಗ ಭಾರತೀಯ ಜ್ಞಾನ ಪರಂಪರೆ ಎನ್ನುವುದು ಮನುಷ್ಯಯನ ಸಮಗ್ರ ಬೆಳವಣಿಗೆಯಲ್ಲಿ ಹೇಗೆ ಪೂರಕವಾಗಿ ಕೆಲಸ ಮಾಡಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಒಟ್ಟಿನಲ್ಲಿ ಭಾರತೀಯ ಜ್ಞಾನ ಪರಂಪರೆ ಎನ್ನುವುದು ಮಾನವನ ಸಮಗ್ರ ಬೆಳವಣಿಗೆಯ ಪಥ್ಯವೆಂದರೆ ಹೆಚ್ಚಲ್ಲ. ಅದು ಮಾನವನನ್ನು ಮಾಧವನಾಗಿಸುವ ದಾರಿಯಾಗಿದೆ. ಜ್ಞಾನವೆಂದರೆ ಅಕ್ಷರಾಭ್ಯಾಸವಲ್ಲ ಅದು ನಮ್ಮೊಳಗಿನ ಬೆಳಕು. ಮತ್ತು ಇದನ್ನು ಅರಿಯುವಲ್ಲಿ ಈ ನೆಲದ ಜ್ಞಾನಧಾರೆಗಳು ನಿರಂತರವಾಗಿ ಶ್ರಮಿಸಿವೆ ಎಂಬುದನ್ನು ಗಮನಿಸಲಾಗಿದೆ.

3. ವೈಜ್ಞಾನಿಕ ತಳಹದಿ ಆರಂಭಗೊಂಡ ಸಾಕ್ಷಿಯಾಗಿ

ಭಾರತೀಯ ಜ್ಞಾನ ಪರಂಪರೆಯನ್ನು ಅವಲೋಕಿಸುವಾಗ ಗಮನಕ್ಕೆ ಬರುವ ಅಂಶವೆಂದರೆ ಅದರ ಸರಳತೆ. ಆಧುನಿಕ ಕಾಲದ ಬಹು ದೊಡ್ಡ ಭ್ರಮೆಯೆಂದರೆ ಆಧುನಿಕವಾದುದು ಯಾವುದೂ ಧರ್ಮ, ದೇಶದ ಚೌಕಟ್ಟಿನಲ್ಲಿರುವುದಿಲ್ಲ ಎಂದು. ಭಾರತೀಯರ ಜೀವನಶೈಲಿಯೇ ಅದು ಆಹಾರವಿರಬಹುದು ಉಡುಪಿರಬಹುದು ಇದೆಲ್ಲವೂ ಇಲ್ಲಿನ ಹವಾಮಾನಕ್ಕೆ ಅನುಗುಣವಾಗಿ ರೂಪಿಸಿದ ಜೀವನಶೈಲಿಯಾಗಿದೆ. ಪ್ರಕೃತಿಗೆ ಸರಿಯಾಗಿ ಬದುಕಿದ ಭಾರತೀಯ ಜೀವನಶೈಲಿ ಪ್ರಕೃತಿಯ ನಿಯಮಗಳಿಗೇ ಬದ್ಧರಾಗಿಯೇ ಬದುಕಿನ ಸೂತ್ರಗಳನ್ನು ಅಳವಡಿಸಿಕೊಂಡಿದ್ದರು. ಇಲ್ಲಿನ ಔಷಧೀಯ ಜಗತ್ತೂ ಇಲ್ಲಿನ ಶಕ್ತಿಯಾಗಿಯೇ ಬೆಳೆದಿತ್ತು. ಆದ್ದರಿಂದಲೇ ಭಾರತೀಯರ ಬದುಕು ವೈಜ್ಞಾನಿಕ ಹಿನ್ನೆಲೆಯಿಂದಲೇ ಆರಂಭಗೊಂಡಿತು ಎನ್ನಲು ಯಾವ ಹೆಚ್ಚಿನ ವಿವರಗಳ ಅಗತ್ಯವಿಲ್ಲಬೇಕು. ಅನುಭವ, ತಾರ್ಕಿಕ ವಿಶ್ಲೇಷಣೆ ಮತ್ತು ಪ್ರಯೋಗದ ಆಧಾರದ ಮೇಲೆ ವಿಕಾಸಗೊಂಡ ಭಾರತೀಯ ಜ್ಞಾನ ಪರಂಪರೆ ಅಪ್ಪಟ ವೈಜ್ಞಾನಿಕ ಆಧಾರಗಳಿಂದ ಸಮೃದ್ಧವಾಗಿತ್ತು.

ಭಾರತೀಯ ಪುರಾತನ ಗ್ರಂಥಗಳಲ್ಲಿ ಕಂಡು ಬರುವ ವೇದಗಳು, ಉಪನಿಷತ್ತಿನ ಸಾರ, ಋಗ್ವೇದ, ವಾಸ್ತುಶಿಲ್ಪ, ಗಣಿತಶಾಸ್ತ್ರ, ವೈದ್ಯಶಾಸ್ತ್ರ ಎಲ್ಲವೂ ಜ್ಞಾನ ಪರಂಪರೆಯ ವೈಜ್ಞಾನಿಕ ಸಾಧನೆಗಳು. 'ಜ್ಞಾನಂ ವಿಜ್ಞಾನಸಹಿತಂ' ಎಂದರೆ ಇಲ್ಲಿ ಸಿಕ್ಕಿದ ಜ್ಞಾನ ಪರಂಪರೆಯು ಪ್ರಯೋಗದಿಂದ ದೊರಕಿದ ಫಲವೇ ಆಗಿದೆ. ಜ್ಞಾನ ಮತ್ತು ವಿಜ್ಞಾನ ನಾಣ್ಯದ ಎರಡು ಮುಖಗಳಾಗಿವೆ.

ಆರ್ಯುವೇದವನ್ನು ಗಮನಿಸುವುದಾದರೆ ಮಾನವನ ಶರೀರ ಮತ್ತು ಪ್ರಕೃತಿಯ ನಡುವಿನ ಸಂಬಂಧದ ವೈಜ್ಞಾನಿಕ ಅಧ್ಯಯನವೆಂದು ಹೇಳಬಹುದು. ಚರಕ ಮತ್ತು ಸುಶ್ರುತರು ರಚಿಸಿದ ಗ್ರಂಥಗಳಿಂದ ಇದು ತಿಳಿದು ಬರುತ್ತದೆ. ಶರೀರದ ಧಾತು, ದೋಷಗಳು, ನಾಡಿಗಳು, ಹೃದಯದ ಕಾರ್ಯ, ಆಹಾರದ ಫಲ, ಔಷಧದ ಅಗತ್ಯ ಈ ಎಲ್ಲ ವಿಷಯಗಳ ಬಗ್ಗೆ ಅವರು ಅನುಭವ ಮತು ಪ್ರಯೋಗದ ಆಧಾರದಿಂದ ಗ್ರಂಥದಲ್ಲಿ ವಿವರಿಸಿದ್ದಾರೆ. ಸುಶ್ರುತನನ್ನು ಶಸ್ತ್ರ ಚಿಕಿತ್ಸೆಯ ಮೊದಲಿಗೆ ಎನ್ನುವುದುಂಟು. ಅಂದರೆ ಈ ಆಧುನಿಕ ಕಾಲದಲ್ಲಿ ನಡೆಸುವ ಶಸ್ತ್ರ ಚಿಕಿತ್ಸೆಯಲ್ಲಿ ಪೂರ್ವಭಾವಿಯಾಗಿ ನಡೆಸುವ ಪರೀಕ್ಷೆಗಳ ವಿವರಗಳು ಸುಶ್ರುತರು ನೀಡಿದ ವಿವರಗಳೇ ಆಗಿವೆ.

ಗಣಿತ ಮತ್ತು ಖಗೋಳಶಾಸ್ತ್ರದ ವಿವರಗಳನ್ನು ನೋಡುವುದಾದರೆ ಆರ್ಯಭಟ, ಬ್ರಹ್ಮಗುಪ್ತನ ಶೂನ್ಯ ಸಂಖ್ಯೆಯ ಸಾಧನೆ, ದಶಮಾನ ಪದ್ಧತಿ, ಅಂಕಗಣಿತ ಹಾಗೂ ಬೀಜಗಣಿತದ ತತ್ತ್ವಗಳನ್ನು ಪ್ರಪಂಚಕ್ಕೆ ಪರಿಚಯಿಸಿದರು. ವರಾಹಮಿಹಿರನ ನೀಡಿದ ಗ್ರಹಗಳ ಚಲನೆಯ ವಿವರಗಳು ಎಲ್ಲವೂ ಭಾರತೀಯರ ವೈಜ್ಞಾನಿಕ ತಳಹದಿಗೆ ಮಹತ್ವದ ಸಾಕ್ಷಿಯಾಗಿದೆ.

ಪತಂಜಲಿಯ ಯೋಗಸೂತ್ರಗಳು ದೇಹ, ಮನಸ್ಸು, ಚಿತ್ರ ಹಾಗೂ ಪ್ರಾಣದ ವೈಜ್ಞಾನಿಕ ವಿಶ್ಲೇಷಣೆಯ ಫಲಿತವಾಗಿದೆ. ಅವನು ಹೇಳಿದ ಧ್ಯಾನ, ಪ್ರಾಣಾಯಾಮ, ಆಸನಗಳ ಪರಿಣಾಮವನ್ನು ಆಧುನಿಕ ವಿಜ್ಞಾನವೂ ಗೌರವದಿಂದ ನೋಡುತ್ತಿದೆ.

ವಾಸ್ತುಶಿಲ್ಪ– ಪ್ರಾಯಶಃ ಇದೊಂದು ವೈಜ್ಞಾನಿಕ ಯೋಚನೆಯ ಫಲಿತವೇ ಆಗಿದೆ ಎನ್ನುವುದಕ್ಕೆ ಸಾವಿರಾರು ವರ್ಷಗಳ ಹಿಂದೆ ನೀರಿನ ಮೂಲಗಳನ್ನು ಹಾಗೂ ಸೂರ್ಯನ ಬೆಳಕನ್ನು ಬಳಸಿಕೊಂಡು ದೇವಾಲಯಗಳನ್ನು ಕಟ್ಟಿದ್ದ ಸಾಕ್ಷಿಗಳನ್ನು ನೋಡಬಹುದು. ವಾಸ್ತುಶಾಸ್ತ್ರ ಕೇವಲ ಮನೆ ಕಟ್ಟುವ ವಿಧಾನವನ್ನು ಹೇಳುವ ಶಾಸ್ತ್ರವಲ್ಲ. ಅದು ಗಾಳಿ, ಬೆಳಕು, ಭೂಮಿಯ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಕಟ್ಟಡ ಕಟ್ಟುವ ವಿಜ್ಞಾನವಾಗಿದೆ. ಇದಕ್ಕೆ ಸಾಕ್ಷಿಯಾಗಿ ಎಷ್ಟೋಂದು ಸ್ಮಾರಕಗಳನ್ನು ನಾವು ನೋಡಬಹುದಾಗಿದೆ. ಸಂಗೀತಶಾಸ್ತ್ರದಲ್ಲಿಯೂ ಧ್ವನಿಯ ತಂತುಗಳು, ತರಂಗಗಳು, ಸ್ವರ, ಲಯ, ಕಂಪನ ಇವುಗಳ ವೈಜ್ಞಾನಿಕವಾದ ವಿಶ್ಲೇಷಣೆಯು ಕಂಡು ಬರುತ್ತದೆ.

ಬಹುಮುಖ್ಯವಾಗಿ ಭಾರತೀಯ ಜ್ಞಾನ ಪರಂಪರೆಯ ವೈಶಿಷ್ಟ್ಯವೆಂದರೆ ಅದು ಧರ್ಮ ಮತ್ತು ವಿಜ್ಞಾನವನ್ನು ಪರಸ್ಪರ ವಿರೋಧಿ ನೆಲೆಯಲ.ಲಿ ನೋಡುವುದಿಲ್ಲ ಎನ್ನುವುದು. ಅದು ಒಂದಕ್ಕೊಂದು ಪೂರಕವಾಗಿಯೂ ಭಿನ್ನತೆಯನ್ನು ಭಿನ್ನತೆಯಾಗಿಯೇ ಗೌರವಿಸುವ ದೃಷ್ಟಿಯನ್ನು ಹೊತ್ತುಕೊಂಡಿದೆ. ಇಂದಿನ ವಿಜ್ಞಾನವು ಪ್ರಾಚೀನ ಭಾರತೀಯರ ಅನೇಕ

ದೃಷ್ಟಿಕೋನಗಳನ್ನು ತತ್ವಗಳನ್ನು ಸರಿಯೆಂದು ದೃಢಪಡಿಸಿದೆ. ಉದಾಹರಣೆಗೆ ಆಯುರ್ವೇದದ ಔಷಧ ಸಂಯೋಜನೆ ಮಾಡುವ ವಿಧಾನವಿರಬಹುದು, ನಿತ್ಯದ ಸರಳ ಯೋಗ ಹಾಗೂ ಅಷ್ಟಾಂಗ ಯೋಗದಂತಹ ಸಾಧನೆಯ ಮಾರ್ಗಗಲು ದೇಹ ಮತ್ತು ಮನಸ್ಸನ್ನು ಆರೈಕೆಗೊಳಿಸುವ ಶಕ್ತಿಯನ್ನು ಪಡೆದಿವೆ ಎನ್ನುವುದು, ಖಗೋಳಶಾಸ್ತ್ರದ ಗಣನೆಗಳು ಹಾಗೂ ಇಂದಿಗೂ ಜಗತ್ತಿನ ಬೆರಗಿಗೆ ಸಾಕ್ಷಿಯಾಗಿರುವ ಭಾರತೀಯ ವಾಸ್ತುಶಿಲ್ಪ ನಿಜಕ್ಕೂ ಭಾರತೀಯ ಜ್ಞಾನ ಪರಂಪರೆ ಎನ್ನುವುದು ವೈಜ್ಞಾನಿಕ ತಳಹದಿಯನ್ನು ಹೊಂದಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಒಟ್ಟಿನಲ್ಲಿ ಭಾರತೀಯ ಜ್ಞಾನ ಪರಂಪರೆ ಅನುಭವ, ವಿಶ್ಲೇಷಣೆ ಹಾಗೂ ಪ್ರಯೋಗದ ಆಧಾರದ ಮೇಲೆ ನಿರ್ಮಿತಿಯಾದ ಪರಂಪರೆಯಾಗಿದೆ ಇದು ನಂಬಿಕೆಗಳ ಆಧಾರದಿಂದ ಆರಂಭಗೊಂಡ ಜ್ಞಾನ ಪರಂಪರೆಯಲ್ಲ ಎನ್ನುವುದನ್ನು ಈ ಮೇಲಿನ ಮಾತುಗಳಿಂದ ಮನಗಾಣಬಹುದು.

4. ಪ್ರಕೃತಿಯೊಂದಿಗಿನ ಸೌಹಾರ್ದ ಬದುಕಿನಲ್ಲಿ

ಭಾರತೀಯರು ಮೂಲತಃ ಪ್ರಕೃತಿಯ ಆರಾಧಕರು. ಭಾರತೀಯ ಪರಂಪರೆಯಲ್ಲಿ ಮಾನವನ ಸಂಬಂಧ ಪ್ರಕೃತಿಯೊಂದಿಗೆ ಕೇವಲ ಭೌತಿಕವಾಗಿ ಅಷ್ಟೇ ಅಲ್ಲದೇ ಆಧ್ಯಾತ್ಮಿಕವಾಗಿಯೂ ಮಹತ್ವದ ಸಂಬಂಧವಾಗಿಯೇ ಮುಖ್ಯವಾಗಿದೆ. ಪ್ರಕೃತಿಯನ್ನು ತಾಯಾಗಿ ಕಾಣುವ ಮನಸ್ಸು ಭಾರತೀಯರದ್ದು. ನಮ್ಮಲ್ಲಿ ಭೂಮಾತೆ ಎನ್ನುತ್ತೇವೆ. ಭೂಮಿಯನ್ನೂ ತಾಯಿ ಎಂದು ಸಂಬೋಧಿಸಿ ಆಕೆಯನ್ನು ಗೌರವಿಸುವ ಪರಂಪರೆಯು ಭೂಮಿ ಮೇಲೆ ಆಗುವ ಆಕ್ರಮಣಗಳಿಗೆ ಕಡಿವಾಣ ಹಾಕಲು ಒಂದು ಕಾರಣವಾಗಬೇಕು ಎನ್ನುವ ಮುಂದಾಲೋಚನೆಯೂ ಆಗಿದ್ದೀತು.

ವೇದ ಮತ್ತು ಉಪನಿಷತ್ತುಗಳಲ್ಲಿ ಪ್ರಕೃತಿಯ ಪೂಜೆಯನ್ನು ಹೇಳಿದ್ದಾರೆ. ಇಲ್ಲಿ ಬರುವ ಸೂರ್ಯ, ವಾಯು, ಅಗ್ನಿ, ಜಲ, ಭೂಮಿ ಎಲ್ಲವನ್ನೂ ದೈವತ್ವದಲ್ಲಿ ಕಾಣಲಾಗಿದೆ. ಇದು ದೇವರ ಆರಾಧನೆಯ ಮೂಲಕ ಪ್ರಕೃತಿಯನ್ನು ಕಾಪಿಡುವ ಅದ್ಭುತ ಉಪಾಯವಾಗಿ ಕಂಡು ಬರುತ್ತದೆ. ಕರ್ನಾಟಕದ ಅನೇಕ ಕಡೆಗಳಲ್ಲಿ ಅಂದರೆ ದಟ್ಟ ಅರಣ್ಯವಿರುವ ಮಲೆನಾಡು ಹಾಗೂ ಕರಾವಳಿಯ ನಡುವಿನಿಂದ ಹಾದು ಹೋಗುವ ಪಶ್ಚಿಮ ಘಟ್ಟದ ಅನೇಕ ಕಡೆಗಳಲ್ಲಿ ರಕ್ಷಿತಾರಣ್ಯದಲ್ಲಿ 'ದೇವರ ಕಾಡು' ಎನ್ನುವ ಅರಣ್ಯ ಪ್ರದೇಶವಿರುತ್ತದೆ. ಅಲ್ಲಿ ಯಾವುದೇ ಕಾರಣಕ್ಕೂ ಒಂದು ಎಲೆಯನ್ನಾಗಲಿ ಮರದ ಪುಟ್ಟ ಕಡ್ಡಿಯೂ ಕಡಿಯಲಾಗದು. ಏಕೆಂದರೆ ಅದು ದೇವರಿಗೆ ಬಿಟ್ಟ ಅರಣ್ಯವಾಗಿದೆ. ಇದರ ಮೂಲ ಉದ್ದೇಶ ಜೀವವೈವಿಧ್ಯವನ್ನು ಸಂರಕ್ಷಿಸುವ ಮಹತ್ತರವಾದ ಗುರಿಯೇ ಈ ತಂತ್ರದಲ್ಲಿ ಕಾಣಬಹುದು. ಪ್ರಕೃತಿಯಲ್ಲಿ ಮಾನವ ಒಬ್ಬನೇ ಇರುವ ಜೀವಿಯಲ್ಲ. ಆದರೆ ಮಾನವ ತನ್ನ ಅಳಿವು ಮತ್ತು ಉಳಿವಿಗಾಗಿ

ಉಳಿದ ಅಷ್ಟೂ ಪ್ರಕೃತಿಯನ್ನು ತನ್ನ ಅಗತ್ಯಕ್ಕೆ ತಕ್ಕಂತೇ ಬಳಸುತ್ತಾ ಹೋಗುತ್ತಿದ್ದರೆ ಮುಂದೊಂದು ದಿನ ಭುಮಿ ಮೇಲೆ ಅರಣ್ಯವೇ ಉಳಿಯದು ಎನ್ನುವುದನ್ನು ಅರಿತ ನಮ್ಮ ಹಿರಿಯರು ಭೂಮಿಯ ಸಮತೋಲನವನ್ನು ಕಾಪಿಡುವ ಮಹತ್ತರವಾದ ಉದ್ದೇಶದಿಂದ ಮನುಷ್ಯ ಕಾಡುನ್ನು ಬಳಸುವುದನ್ನು ಮಿತಿಗೊಳಿಸಲು ಇಂತಹ ಪ್ರಕೃತಿಯನ್ನು ರಕ್ಷಿಸುವ ಯೋಜನೆಗಳನ್ನು ಹಾಕಿಕೊಂಡು ಬಂದಿದ್ದಾನೆ. ಇದು ಅಪ್ಪಟವಾದ ಪರಸರ ಸಂರಕ್ಷಣೆಯ ಸಂಕೇತವಾಗಿದೆ.

ಋಗ್ವೇದದಲ್ಲಿ ಈಶಾವಾಸ್ಯೋಪನಿಷತ್ತಿನಲ್ಲಿ ಒಂದು ಸೂಕ್ತಿ ಹೀಗಿದೆ. 'ಈಶಾವಾಸ್ಯಂ ಮಿದಂ ಸರ್ವಂ ಯತ್ಕಿಂಚ ಜಗತ್ಯಾಂಯ ಜಗತ್ ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಂ।' ಈ ಜಗತ್ತಿನಲ್ಲಿ ಏನೆಲ್ಲ ಇದೆಯೋ ಅದೆಲ್ಲ ಈಶ್ವರನಿಂದಲೇ, ಆದ್ದರಿಂದ ಇತರರಿಗೆ ಕೊಟ್ಟು ಉಣ್ಣುವ ಅಭ್ಯಾಸವಿರಲಿ, ಏಕೆಂದರೆ ಎನನ್ನು ಪಡೆದಿದ್ದೇವೆಯೋ ಅದು ಇಲ್ಲಿಗೇ ಸೇರಿದ್ದು ಮತ್ತು ಇಲ್ಲಿಯೇ ಬಿಟ್ಟು ಹೋಗುತ್ತೇವೆ. ಆ ಕಾರಣದಿಂದ ದುರಾಸೆಯನ್ನು ಮಾಡದೇ ಅಗತ್ಯವಿರುವಷ್ಟನ್ನು ಮಾತ್ರ ಸ್ವೀಕರಿಸಬೇಕು ಎಂದು ಈ ಸೂಕ್ತಿಯ ಅರ್ಥವಾಗಿದೆ. ಪ್ರಾಯಶಃ ಇದೊಂದು ಮಾತನ್ನೇ ಇಡೀ ಜಗತ್ತು ಅರಿತುಕೊಂಡಿದ್ದರೂ ಸಾಕಿತ್ತು, ದುರಾಸೆಯ ಬಾಹುಗಳಿಂದ ಬಿಡಿಸಿಕೊಂಡು ಬದುಕಲು ಸಾಧ್ಯವಾಗುತ್ತಿತ್ತು. ಇಂತಹ ಸಾರ್ವಕಾಲಿಕವಾದ ಮಾತುಗಳನ್ನು ನೀಡಿದ ಉಪನಿಷತ್ತು ಪ್ರಕೃತಿಯನ್ನು ನಾವು ಬದುಕಿನ ಅಗತ್ಯಕ್ಕೆ ಬೇಕಾದಷ್ಟೇ ಬಳಸಿಕೊಂಡು ಉಳಿದುದನ್ನು ಅದರ ಪಾಡಿಗೆ ಬಿಟ್ಟು ಬಿಡಬೇಕು ಎನ್ನುವುದನ್ನು ಹೇಳಿ ಎಚ್ಚರಿಸಿದೆ. ಅಂದರೆ ಪ್ರಕೃತಿಯನ್ನು ಅಗತ್ಯಕ್ಕೆ ಬೇಕಾದಷ್ಟು ಮಾತ್ರವೇ ಬಳಸಬೇಕೇ ಹೊರತು ಪ್ರಕೃತಿಯನ್ನು ಶೋಷಿಸಬಾರದು ಎಂದಿದೆ.

ಭಾರತದ ಕೃಷಿ ಪದ್ಧತಿಯೂ ಮಾನವ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡುವತ್ತ ದೃಷ್ಟಿ ಹರಿಸಿತ್ತು. ಆದರೆ ಆಧುನಿಕ ಕೃಷಿ ಪದ್ಧತಿಗೆ ಈ ಮಾತು ಅನ್ವಯಿಸದು. ಪಾರಂಪರಿಕ ಕೃಷಿ ಪದ್ಧತಿಯು ಭೂಮಿಯನ್ನು ಹೆಚ್ಚು ಹಾಳು ಮಾಡದೇ ಕೃಷಿ ಮಾಡುವ ಉಪಾಯಗಳಿಗೆ ಮೊದಲಾಗಿತ್ತು. ಇಂದಿಗೂ ರೈನ ಮಾಡುವ ಭೂಮಿ ಪೂಜೆಯಿರಬಹುದು, ತಮಿಳು ನಾಡಿನ ಜನರು ವರ್ಷದ ಮೊದಲಲ್ಲಿ ಬತ್ತಿ ಹೋಗಿದ್ದ ಕಾವೇರಿ ನದಿಯ ನೀರು ಪುನಃ ಬರುವ ದಾರಿಯಲ್ಲಿ ಆಕೆಯನ್ನು ಪೂಜಿಸುತ್ತಾ ಬರಮಾಡಿಕೊಳ್ಳುವ ಸಂಪ್ರದಾಯಗಳು ನಾವು ಪ್ರಕೃತಿಯ ಆರಾಧಕರು ಎನ್ನುವುದಕ್ಕೆ ಸಾಕ್ಷಿಯಾಗಿ ತೋರುತ್ತದೆ.

ಯೋಗಶಾಸ್ತ್ರವು ಕೂಡಾ ಪ್ರಕೃತಿಯೊಂದಿಗಿನ ಸ್ನೇಹಮಯವಾದ ಸಂಬಂಧದ ಸಾಕ್ಷಿಯೇ ಆಗಿದೆ. ಪತಂಜಲಿ ತನ್ನ ಯೋಗಸೂತ್ರದಲ್ಲಿ ಸತ್ಯ, ಅಹಿಂಸಾ, ಅಸ್ತೇಯ, ಅಪರಿಗ್ರಹ ಮುಂತಾದ ನೈತಿಕ ನಿಯಮಗಳನ್ನು ಹೇಳಿ ಮಾನವ ಬದುಕಿಗೆ ಪ್ರಕೃತಿಯೊಂದಿಗೆ

ಸಮತೋಲನ ಸಾಧಿಸುತ್ತ ಬದುಕುವುದನ್ನು ಹೇಳಿದ್ದಾನೆ. ಪ್ರಾಣಾಯಾಮದ ಮೂಲಕಗಾಳಿಯ ಶುದ್ಧ ಶಕ್ತಿಯನ್ನು ಸ್ವೀಕರಿಸುವುದು, ಧ್ಯಾನದ ಮೂಲಕ ಮನಸ್ಸನ್ನು ಪ್ರಕೃತಿಯ ಶಾಂತತೆಗೆ ತೆರೆದುಕೊಳ್ಳುವುದು ಮಾನವನ ಪ್ರಕೃತಿಯೊಂದಿಗಿನ ಸಾಮರಸ್ಯವೇ ಆಗಿದೆ.

ಭಾರತೀಯರು ಅನಾದಿ ಕಾಲದಿಂದಲೂ ಪ್ರಕೃತಿಯನ್ನು ಅರಿತುಕೊಳ್ಳುವಲ್ಲಿ ಮುಂದಾಗಿದ್ದರು ಎನ್ನುವದಕ್ಕೆ ಅನೇಕ ಉದಾಹರಣೆಗಳಿವೆ. ಸೂರ್ಯನ ಚಲನೆ, ಋತುಚಕ್ರ, ವೃಕ್ಷಗಳ ಬೆಳವಣಿಗೆ, ನೀರಿನ ಪಾವಿತ್ರ್ಯತೆ, ಗಾಳಿಯ ಸಂಚಾರಕ್ಕೆ ಅನುಗುಣವಾಗಿ ಮನೆಯ ವಾಸ್ತುಶಿಲ್ಪ ಇವುಗಳೆನ್ನೆಲ್ಲ ಗಮನಿಸುವಾಗ ಪ್ರಕೃತಿಯೊಂದಿಗೆ ಅನುಸಂಧಾನ ನಡೆಸುತ್ತಾ ಬಾಳುವುದು ಭಾರತೀಯರಿಗೆ ಅಭ್ಯಾಸವಾಗಿದೆ ಎಂದು ಮನಗಾಣಬಹುದು.

5. ಮಾನವೀಯತೆ, ಸ್ವ ಅರಿವು ಮತ್ತು ಆಧುನಿಕ ಸಮಸ್ಯೆಗಳಿಗೆ ಪರಿಹಾರವಾಗಿ

ಭಾರತೀಯ ಸಂಸ್ಕೃತಿಯ ಮೂಲವೇ ಮಾನವೀಯತೆ. ಇಂದಿನ ಆಧುನಿಕ ಜಗತ್ತಿನ ಮಂತ್ರವಾದ ಗ್ಲೋಬಲ್ ವಿಲೇಜ್ ಎಂಬ ಪದವು ಪ್ರಪಂಚದ ಎಲ್ಲ ಭಾಗಗಳನ್ನು ಅಂತರ್ಜಾಲ ಮತು ಇತರ ವಿದ್ಯುನ್ಮಾನ ಸಂವಹನ ಸಂಪರ್ಕಗಳ ಮೂಲಕ ಒಟ್ಟುಗೂಡಿಸುತ್ತಿದೆ ಎನ್ನುವ ವ್ಯಾಖ್ಯಾನವಿದೆ. ಇದು ಲೌಕಿಕದ ಮಾತಾದರೆ ಇಂಥದ್ದೇ ಅಲೌಕಿಕ ಸ್ಪರ್ಶವಿರುವ 'ವಸುದೈವ ಕುಟುಂಬಕಂ' ಮಾತನ್ನು ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ಋಷಿಮುನಿಗಳು ನುಡಿದಿದ್ದರು. ಇದರರ್ಥ ಭೂಮಿಯಲ್ಲಿ ಎಲ್ಲ ಜೀವಿಗಳು ಒಂದೇ ಕುಟುಂಬಕ್ಕೆ ಸೇರಿದವರು ಎಂದು ಇದಕ್ಕೆ ಬಹು ದೊಡ್ಡದಾದ ವಿಶಾಲವಾದ ಅರ್ಥವಿದೆ ಎನ್ನುವುದನ್ನು ಒಪ್ಪುತ್ತಲೇ ಈ ವೈಶ್ವಿಕ ನಿಲುವು ಪ್ರತಿಯೊಬ್ಬ ಮನುಷ್ಯನನ್ನು ಉಳಿದ ಮನುಷ್ಯರನ್ನು ಸಹಾನುಭೂತಿಯಿಂದ, ಪರಸ್ಪರ ಗೌರವದಿಂದ ನೋಡುವಂತೇ ಸಹಕರಿಸುತ್ತದೆ. ಎಲ್ಲರಲ್ಲೂ ಭಗವಂತನ ಅಂಶವಿದೆ ಎನ್ನುವ ಸಹೃದಯ ಭಾವವಿದ್ದಾಗ ಇತರರನ್ನು ದ್ವೇಷಿಸುವ, ಪರಸ್ಪರ ಸ್ಪರ್ಧೆ ಮಾಡುವ ಮನಸ್ಸು ಮತ್ತು ಆ ಸ್ಪರ್ಧೆಯಿಂದ ಉಂಟಾಗುವ ಹಿಂಸೆಯ ಮನಸ್ಥಿತಿಯಿಂದ ದೂರವುಳಿಯಲು ಸಾಹಾಯಕವಾಗುತ್ತದೆ ಎನ್ನುವುದೂ ಇದರ ಹಿಂದಿನ ಮರ್ಮವಾಗಿರಲೂಬಹುದು. ಹೀಗಾಗಿ ಇದು ಮಾನವೀಯತೆಯನ್ನು ಬೋಧಿಸಿದ ಮಂತ್ರವಾಗಿದೆ ಎನ್ನಲಡ್ಡಿಯಿಲ್ಲ.

ಭಾರತೀಯ ಪುರಾಣ ಕತೆಗಳಲ್ಲಿ ಬುದ್ಧನ ಕತೆಗಳಲ್ಲಿ ರಾಮಾಯಣ ಮಹಾಭಾರತದ ಅನೇಕ ಉಪಕತೆಗಳಲ್ಲಿ ನಮಗೆ ಮಾನವೀಯತೆಯ ಅನೇಕ ನಿದರ್ಶನಗಳು ದೊರೆಯುತ್ತವೆ. ಇವುಗಳು ಕೇವಲ ಕತೆಯಾಗಿ ನಮಗೆ ಓದಲು ಸಿಗುವ ಸಾಹಿತ್ಯವಷ್ಟೇ ಆಗದೇ ಅವುಗಳಿಂದ ಹೇಗೆ ಪ್ರಯೋಜನವನ್ನು ಪಡೆಯಬಹುದು ಎನ್ನುವುದಕ್ಕೂ ಅವು ದಾರಿದೀಪಗಳಂತಿವೆ. ದಯೆ, ಅಹಿಂಸೆ, ಸತ್ಯ, ಶಾಂತಿ, ಸಹಿಷ್ಣುತೆ ಎಂಬ ಮೌಲ್ಯಗಳನ್ನು ಜೀವನದ ಅವಿಭಾಜ್ಯ

ಅಂಗಗಳಾಗಿ ಪರಿಗಣಿಸಲಾಗುತ್ತದೆ. ಇಂದಿಗೂ ಅವುಗಳು ವಿಶ್ವದ ಮಾನವತೆಗೆ ಮಾರ್ಗದರ್ಶನ ಮಾಡುತ್ತಿವೆ.

ಬಹುಮುಖ್ಯವಾಗಿ ಭಾರತೀಯ ಜ್ಞಾನ ಪರಂಪರೆ ಅದು ಕೇವಲ ವಿದ್ಯೆಯ ಹಂಚಿಕೆಯ ವ್ಯವಸ್ಥೆಯಲ್ಲ. ಅದು ವ್ಯಕ್ತಿಯ ಸಮಗ್ರ ಅಥವಾ ಅಮೂಲಾಗ್ರವಾದ ವಿಕಾಸದ ಬೆಳವಣಿಗೆಯ ಮಾರ್ಗವಾಗಿದೆ. ಇದಕ್ಕೆ ಉದಾಹರಣೆಯಾಗಿ ನಚಿಕೇತನ ಕತೆಯನ್ನು ನೋಡಬಹುದು. ತನ್ನ ತಂದೆ ದಾನಕ್ಕಾಗಿ ಬಡಕಲು ಹಸುಗಳನ್ನು ನೀಡುತ್ತಿದ್ದುದನ್ನು ನೋಡಿದ ನಚಿಕೇತನಲ್ಲಿ ಅದು ತಪ್ಪೆನ್ನುವ ಅರಿವು ಜಾಗೃತವಾಗಿ ತನ್ನ ತಂದೆಯನ್ನೇ ಪ್ರಶ್ನೆ ಮಾಡುತ್ತಾನೆ. ವಿದ್ಯೆ ಅನ್ನುವುದು ಜ್ಞಾನವಾಗಿ ಮಾರ್ಪಾಡಾದ ಉದಾಹರಣೆಯಿದು.

ಭಾರತೀಯ ಶಿಕ್ಷಣದ ಅದರಲ್ಲೂ ಗುರುಕುಲದ ಶಿಕ್ಷಣವು ವಿದ್ಯಾರ್ಥಿಗಳನ್ನು ವಿದ್ಯೆಯ ಜೊತೆಗೆ ಜೀವನೋಪಾಯದ ಅರಿವನ್ನು ವಿಸ್ತರಿಸುವ ಕಾರಣ ವ್ಯಕ್ತಿಯಲ್ಲಿ ಸ್ವ ಅರಿವು ಹುಟ್ಟಿಕೊಳ್ಳುತ್ತದೆ. ಸ್ವರಿವು ಎಂದರೆ ತನ್ನ ನಿಜವಾದ ಶಕ್ತಿಗಳನ್ನು ಅರಿಯುವುದು. ತನ್ನ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಅರಿಯುತ್ತಾ ಅವುಗಳ ಪರಿಣಾಮವು ತನ್ನ ವ್ಯಕ್ತಿತ್ವದ ಗುಣ ಮತ್ತು ದೋಷಗಳಾಗಿ ಬಿಂಬಿತವಾಗುವುದನ್ನು ಗಮನಿಸಿ ಯಾವುದನ್ನು ಬೆಳೆಸಬೇಕು ಮತ್ತು ಯಾವ ಕೆಟ್ಟ ದೋಷಗಳನ್ನು ನಿವಾರಿಸಿಕೊಳ್ಳಬೇಕು ಎನ್ನುವ ಪ್ರಜ್ಞೆ ಜಾಗೃತವಾಗುವುದು ಸ್ವ ಅರಿವು. ಅದು ವ್ಯಕ್ತಿಯನ್ನು ಕೇವಲ ಜಾಣನಾಗಿಸದೇ ಅದರ ಜೊತೆಗೆ ಸಂವೇದನಾಶೀಲನಾಗಿಯೂ ಸಮಾಜಕ್ಕೆ ಮಾತ್ರವಲ್ಲದೇ ತನ್ನ ಬದುಕು ಸಾಧನಶರೀರವಾಗುವತ್ತ ಮುನ್ನಡೆಸುವಂತೆ ಶಕ್ತಿ ಮೂಡುವುದೇ ಸ್ವ ಅರಿವು.

ಸ್ವ ಅರಿವನ್ನು ಮೂಡಿಸುವಲ್ಲಿ ಭಾರತೀಯ ಗುರುಕುಲ ಪದ್ಧತಿಯು ಸಾಕಷ್ಟು ಸಹಕಾರಿಯಾಗಿತ್ತು. ಅದು ಶಿಷ್ಯನೊಬ್ಬನ ಸಂಪೂರ್ಣ ವ್ಯಕ್ತಿತ್ವವನ್ನು ಪ್ರಭಾವಿಸುತ್ತಿತ್ತು. ಗುರುವಾದವನು ತಮ್ಮ ಶಿಷ್ಯಂದಿರನ್ನು ಶಿಕ್ಷಣದ ಜೊತೆಗೆ ಇತರ ಕೌಶಲ್ಯಗಳನ್ನು ನಿತ್ಯದ ಕೆಲಸಗಳ ಜೊತೆಗೇ ಹೇಳಿ ಕೊಡುತ್ತಾ ಪ್ರಕೃತಿಯೊಂದಿಗೆ, ಸಹಪಾಠಿಗಳೊಂದಿಗೆ ಸಹನೆ, ಶಿಸ್ತಿನಿಂದ ಬದುಕುತ್ತಾ ಅಭ್ಯಾಸ ಮಾಡಬೇಕಾಗುತ್ತಿತ್ತು. ಅಲ್ಲಿ ಜೀವನವೇ ಒಂದು ಶಿಕ್ಷಣವಾಗಿ ಬದಲಾಗುತ್ತಿತ್ತು. ಕರ್ತವ್ಯ ಪ್ರಜ್ಞೆ, ಯೋಗ, ಕರ್ಮ, ಧ್ಯಾನ, ಶಾಂತಿ ಮತ್ತು ಸಹಬಾಳ್ವೆ ಮುಣತಾದ ಜೀವನ ಮೌಲ್ಯಗಳನ್ನು ಅಭ್ಯಾಸ ಮಾಡಿ ತಾನೂ ಸಮಾಜದ ಜವಾಬ್ದಾರಿಯುತ ಅಂಗವೆಂದು ಅರಿಯುತ್ತಿದ್ದನು. ಈ ಅರಿವೇ ಸ್ವ ಅರಿವಾಗಿ ವಿಕಾಸವಾಗುತ್ತಿತ್ತು.

ಭಾರತೀಯ ಪರಂಪರೆಯಲ್ಲಿ ಶಿಕ್ಷಣದ ನಿಜವಾದ ಉದ್ದೇಶ ಕೇವಲ ವೃತ್ತಿಯೊಂದರ ಆಯ್ಕೆಯಷ್ಟೇ ಅಲ್ಲ. ಅದು ಸಮಗ್ರ ಜೀವನಕ್ಕೆ ಹಾಕುವ ಭದ್ರ ಬುನಾದಿ. ಧ್ಯಾನ ಮುಂತಾದ ವೈಯಕ್ತಿಕ ಅಭ್ಯಾಸಗಳು ಸ್ವಅರಿವನ್ನು ಜಾಗೃತಗೊಳಿಸುತ್ತಾ ಏಕಾಗ್ರತೆಯನ್ನು ಹೆಚ್ಚಿಸಿ ಸಾಧನೆಯ

ಬದುಕಿಗೆ ನೆರವಾಗುತ್ತದೆ. ಆದ್ದರಿಂದ ಈ ಆಧುನಿಕ ಕಾಲದಲ್ಲಿ ಭಾರತೀಯ ಜ್ಞಾನ ಪರಂಪರೆಯ ಪರಿಚಯವಾದರೆ ಪ್ರಾಯಶಃ ಶಿಕ್ಷಣವೆಂದರೆ ಸ್ಫರ್ಧೆಯ ಒಂದು ಭಾಗವಾಗಿಯೂ ಉದ್ಯೋಗ ಪಡೆಯಲು ಇರುವ ಅವಕಾಶವಾಗಿಯೂ ಕಾಣುತ್ತಿರುವಾಗ ಬದುಕಿನ ಇನ್ನೊಂದು ಮಗ್ಗುಲಾದ ಆತ್ಮಜ್ಞಾನವನ್ನು ಅರಿಯುವ ಸಾಧನವಾಗಿ ಕಾಣಬಹುದು. ಈ ಹೊತ್ತಿನ ಜಗತ್ತು ಸ್ಪರ್ಧೆಯ ಜಗತ್ತಾಗಿ ಮಾರ್ಪಟ್ಟಿದೆ. ತಂತ್ರಜ್ಞಾನ ಮನುಷ್ಯನ ಅನುಕೂಲಕ್ಕೆ ಒದಗುವುದಕ್ಕಿಂತ ಹೆಚ್ಚು ಅಪಾಯಕಾರಿಯಾಗಿ ಪರಿಣಮಿಸುತ್ತಿದೆ. ವೈಭವದ ಬದುಕಿನ ಆಸೆ ಎಲ್ಲರಲ್ಲೂ ಹೆಚ್ಚಾಗುತ್ತಿದೆ, ಕಾರಣ ಹೊರಗಿನ ಒತ್ತಡವಾಗಿದೆ. ಆದ ಕಾರಣವೇ ನೈತಿಕತೆಯ ಅಧಃಪತನವಾಗುತ್ತಿದೆ. ಯಾವುದೇ ಕ್ಷೇತ್ರದಲ್ಲಿಯೂ ಅನೈತಿಕತೆಯೇ ರಾಜ್ಯಾವಾಳುತ್ತಿದೆ ಎನ್ನುವುದು ಎಲ್ಲರ ನೋವಿನ ಸಂಗತಿಯಾಗಿದೆ. ಎಲ್ಲಿ ನೋಡಿದರೂ ಅಹಂಕಾರ ಹೆಚ್ಚಾಗಿ ಹಿಂಸೆ ಯುದ್ಧಗಳು, ಪರಿಸರ ನಾಶ, ಮಾನಸಿಕ ಅಶಾಂತಿ, ಸಾಮಾಜಿಕವಾಗಿಯೂ ಅನ್ಯಾಯಗಳನ್ನು ನೋಡುತ್ತಾ ಸಾಮಾನ್ಯ ಜನರ ಮನಸ್ಥಿತಿ ಬದಲಾಗುತ್ತಿದೆ. ಈ ಎಲ್ಲ ಸಮಸ್ಯೆಗಳಿಗೆ ಮೂಲಕಾರಣವೇ ಒಳಮನಸ್ಸಿನ ಅಥವಾ ಅಂತರಾಳವು ಖಾಲಿಯಾಗಿರುವುದು. ಭಾರತೀಯ ಜ್ಞಾನ ಪರಂಪರೆ ಖಂಡಿತವಾಗಿಯೂ ಇದಕ್ಕೆ ಪರಿಹಾರವನ್ನು ನೀಡುತ್ತದೆ ಎನ್ನಬೇಕು. ಈ ಹೊತ್ತಿನ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾದ ಲಕ್ಷ್ಮೀಶ ತೋಳ್ಪಾಡಿಯವರ ಪ್ರಕಾರ 'ಜಗತ್ತಿನ ಎಲ್ಲ ಸಂಕಟಗಳಿಗೂ ಭಕ್ತಿ ಮದ್ದಾಗಬಲ್ಲದು' ಆಧುನಿಕ ಮಾನವನ ಅತೀ ದೊಡ್ಡ ಸಮಸ್ಯೆ ಎಂದರೆ ಆತಂಕ, ಒತ್ತಡ ಮತ್ತು ಅತೃಪ್ತಿ. ಜೀವನದ ವೇಗ ಹೆಚ್ಚಾದಂತೇ ಅದು ಕೊಡುತ್ತಿರುವ ಆನಂದ ಮತ್ತು ತೃಪ್ತಿ ಕಡಿಮೆಯಾಗುತ್ತಾ ಹೋಗಿದೆ. ಭಾರತೀಯ ಜ್ಞಾನ ಪರಂಪರೆ ಇಂತಹ ಒತ್ತಡಗಳಿಂದ ಮುಕ್ತವಾಗಲು ಯೋಗ, ಧ್ಯಾನದಂತಹ ಪ್ರಾಣಾಯಾಮ ಮೊದಲಾದ ಕ್ರಿಯೆಗಳ ಮೂಲಕ ಮನಸ್ಸು ಮತ್ತು ದೇಹವನ್ನು ಸಮತೋಲನದಲ್ಲಿ ಇರಿಸುವ ಉಪಾಯವನ್ನು ನೀಡಿದೆ. ಆಧುನಿಕ ಜನಾಂಗವು ದೂರ ಮಾಡುತ್ತಿರುವ ಆಧ್ಯಾತ್ಮದ ಸೆಲೆಯೇ ಅವರಿಗೆ ಮಾನಸಿಕ ಆರೋಗ್ಯದೆಡೆಗೆ ಕೊಂಡೊಯ್ಯುವ ದಾರಿಯಾಗಿದೆ ಎಂದರೆ ತಪ್ಪಾಗದು.

ಇಂದಿನ ಯುಗದ ನಿತ್ಯ ಸುದ್ದಿಗಳಾದ ಲಂಚ, ಭ್ರಷ್ಟಾಚಾರ, ಅಸಮಾನತೆ, ಹಿಂಸಾಚಾರ ಎಲ್ಲವೂ ಮನುಷ್ಯನನ್ನು ನಲುಗಿಸುತ್ತಿದೆ. ಇದರ ಮೂಲ ಮನುಷ್ಯನ ನೈತಿಕ ಪತನ. ಇದಕ್ಕೆ ಕಾರಣದ ಧರ್ಮದ ಅಪವ್ಯಾಖ್ಯಾನ. ಧರ್ಮವೂ ಮತೀಯ ಬಣ್ಣ ಪಡೆದುಕೊಂಡು ಧರ್ಮದ ಉಳಿದ ಅರ್ಥಗಳನ್ನು ಮರೆತು ಮನುಷ್ಯನ ಕಪಿಮುಷ್ಠಿಯಲ್ಲಿ ಸಿಕ್ಕಿ ತೊಳಲುತ್ತಿರುವ ಈ ಸಂದರ್ಭದಲ್ಲಿ ಮತ್ತೊಮ್ಮೆ ನೈತಿಕ ಮೌಲ್ಯಗಳು ಮೂಡಲು ಭಾರತೀಯ ಜ್ಞಾನ ಪರಂಪರೆಯ ಶಿಕ್ಷಣದ ಅಗತ್ಯವು ಹೆಚ್ಚಾಗಿದೆ. ಭಕ್ತಿಯು ಈ ಪರಂಪರೆಯ

ಬಹು ದೊಡ್ಡ ಮೌಲ್ಯವಾಗಿದೆ. ನಾನು ಎನ್ನುವ ಅಹಂಕಾರವನ್ನು ತ್ಯಜಿಸುವುದು ಭಕ್ತಿಯ ದೊಡ್ಡ ಅಂಗ. ದಾಸರು ಹೇಳಿದ ಮಾನವ ಜನ್ಮ ದೊಡ್ಡದು ಇದು ಹಾನಿ ಮಾಡಲಿ ಬೇಡ ಹುಚ್ಚಪ್ಪಗಳಿರಾ ಎನ್ನುವ ಕೀರ್ತನೆಯ ಸಾಲುಗಳಿಂದ ಅರಿಯಬೇಕಾಗಿದೆ, ಮನುಷ್ಯನ ಜೀವನದ ಮೌಲ್ಯವನ್ನು. ಆತಂಕ, ಖಿನ್ನತೆಗಳು ಆವರಿಸಿಕೊಳ್ಳುತ್ತಿರುವ ಈಗ ಭಾರತೀಯ ಪರಂಪರೆಯಲ್ಲಿ ಹೇಳಿರುವ ಭಕ್ತಿ, ಧ್ಯಾನ ಮುಂತಾದ ಕ್ರಿಯೆಗಳಿಂದ ಏಕಾಗ್ರತೆಯನ್ನು ಪಡೆದುಕೊಂಡು ಈಸಬೇಕು ಇದ್ದು ಜಯಿಸಬೇಕು ಎನ್ನುವ ಬದುಕಿನತ್ತ ಮುಖ ಮಾಡಬೇಕಾಗಿದೆ. ಮನುಷ್ಯನು ತನ್ನ ಬದುಕಿನ ಕರ್ತವ್ಯವನ್ನು ಶ್ರದ್ಧೆಯಿಂದ ನಡೆಸಿಕೊಂಡು ಹೋಗುತ್ತಾ ಸಾಗುವುದೇ ಒಂದು ಮೌಲ್ಯವಾಗಿದೆ. ಶ್ರದ್ಧೆ, ಪರಿಶ್ರಮಗಳು ಕುಸಿಯುತ್ತಿರುವ ಈ ಹೊತ್ತಿನಲ್ಲಿ ಕರ್ತವ್ಯಪ್ರಜ್ಞೆ, ಸಹಾನುಭೂತಿಗಳು ಮನುಷ್ಯನನ್ನು ಮಾಧವನಾಗಿಸುವತ್ತ ಕೂ ಹಿಡಿದು ನಡೆಸುತ್ತವೆ.

ಈ ಯುಗದ ಇನ್ನೊಂದು ಸಮಸ್ಯೆ ಎಂದರೆ ಪರಿಸರ ನಾಶ. ಭೂಮಿ, ನೀರು, ಗಾಳಿ ಹಾಗೂ ಆಮ್ಲಜನಕದ ದೊಡ್ಡ ಕೇಂದ್ರವಾಗಿರುವ ಅರಣ್ಯಗಳ ನಾಶ ಮಾನವನ ಅತಿಯಾದ ಆಸೆಯಿಂದ ನಡೆಯುತ್ತಿದೆ. ಭಾರತೀಯ ಪರಂಪರೆಯಲ್ಲಿ ಭೂಮಿ, ಕಾಡನ್ನು ದೇವರಂತೆ ನೋಡುವ ಸಂಪ್ರದಾಯವಿದೆ. ಇಲ್ಲಿ ಮರಗಳು, ಗಿಡಗಳು ಪುಟ್ಟ ದೇವತೆಗಳೇ ಆಗಿವೆ. ಈ ದೃಷ್ಟಿಯನ್ನು ಮೂಡಿಸಲು ಪುನಃ ಭಾರತೀಯ ಜ್ಞಾನಧಾರೆಗಳ ಪರಿಚಯವಾದಾಗ ಮನುಷ್ಯ ಎಚ್ಚೆತ್ತುಕೊಂಡು ತನ್ನ ರಕ್ಷಣೆಗಾಗಿಯೇ ಇರುವ ಪರಿಸರವನ್ನು ಸಂರಕ್ಷಿಸುವತ್ತ ಮನಸ್ಸು ಮಾಡಬೇಕಾಗಿದೆ. ಭಾರತೀಯ ಜ್ಞಾನ ಪರಂಪರೆಯ ಶಿಕ್ಷಣವಷ್ಟೇ ಇದನ್ನು ಮಾಡಲು ಸಾಧ್ಯವಿದೆ.

ಭಾರತವು ಜ್ಞಾನ, ತತ್ತ್ವ ಮತ್ತು ಅಭೂತಪೂರ್ವ ಸಂಸ್ಕೃತಿಯ ನಾಡು. ಈ ದೇಶದ ಇತಿಹಾಸವು ಸಾವಿರಾರು ವರ್ಷಗಳಿಂದಲೇ ಜ್ಞಾನದಿಂದಲೇ ಬದುಕನ್ನು ಹಸನಾಗಿಸುವ ಪರಂಪರೆಯನ್ನು ಕಟ್ಟಿಕೊಂಡಿದೆ. ಈ ಪರಂಪರೆಯ ವಿಚಾರಧಾರೆ ಅದು ಪುಸ್ತಕಗಳಲ್ಲಿ ಹುದುಗಿರುವ ವಿಚಾರವಲ್ಲ, ಅದು ದಿನನಿತ್ಯದ ಜೀವನದ ನೈಜ ಅನುಭವದ, ಧರ್ಮದ, ನೈತಿಕತೆಯ ಆಧ್ಯಾತ್ಮದ, ವಿಜ್ಞಾನದ ಹಾಗೂ ಮಾನವೀಯ ಮೌಲ್ಯಗಳ ಸೊಗಸಾದ ಮಿಶ್ರಣದಂತಿರುವ ಹದರೂಪವಾಗಿದೆ. ವೈಶ್ವಿಕ ತತ್ತ್ವವನ್ನು ಉಸಿರಾಡುವ ಈ ವಿಚಾರಧಾರೆ ನಿಜಕ್ಕೂ ವಿಶ್ವದ ಎಲ್ಲೆಡೆಗೂ ಖಂಡಿತವಾಗಿ ಬೆಳಕು ತೋರುವ ದೀಪಸ್ತಂಭವೆಂದರೆ ಅತಿಶಯೋಕ್ತಿಯಲ್ಲ.

ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಅದು ಸರ್ವಾಂಗೀಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ನಡೆದಿದ್ದು. ಮನುಷ್ಯನ ದೇಹ, ಮನಸ್ಸು ಮತ್ತು ಆತ್ಮವನ್ನು

ಸಮತೋಲನದಲ್ಲಿಡುವ ಮಾರ್ಗಗಳನ್ನು ಮುಂದೆ ಇಡುತ್ತಲೇ ನಡೆದಿದೆ. ವೇದಗಳಲ್ಲಿ ಬರುವ ಈಗ ಎಲ್ಲರ ಬಾಯಿಪಾಠವಾಗಿರುವ 'ಸರ್ವೇ ಭವಂತು ಸುಖಿನಃ' ಎನ್ನುವಂತೇ ಎಲ್ಲ ಜೀವಗಳ, ಎಲ್ಲ ಜೀವಿಗಳ ಕಲ್ಯಾಣವನ್ನು ಹೇಳಿದ ಪರಂಪರೆಯಾಗಿದೆ. ಈ ವಿಶ್ವ ಕಲ್ಯಾಣದ ಸಮದೃಷ್ಟಿಯೇ ಭಾರತದ ಜ್ಞಾನದ ಹೃದಯವಾಗಿದೆ. ಏಕೆಂದರೆ ಹೃದಯಕ್ಕೆ ಗೊತ್ತಿದೆ ಉಳಿದ ಯಾವುದೇ ಅಂಗದಲ್ಲಿ ದೋಷವಾದರೂ ಅದು ದೇಹವನ್ನು ಸಂಕಟಕ್ಕೆ ತಂದೊಡ್ಡುತ್ತದೆ ಎಂದು. ಇಡೀ ಶರೀರ ಆರೋಗ್ಯವಾಗಿದ್ದರಷ್ಟೇ ಮನುಷ್ಯನ ಜೀವನಕ್ಕೆ ಮೌಲ್ಯ, ಅಂತೆಯೇ ವಿಶ್ವದ ಎಲ್ಲ ಭಾಗವೂ ಸಂತುಷ್ಟಿ, ಸಮೃದ್ಧಿಯಿಂದ ಇದ್ದರಷ್ಟೇ ಈ ಭೂಮಿ ನೆಮ್ಮದಿಯ ತಾಣವಾಘುವುದು. ಇದನ್ನು ಮೊದಲೇ ಅರಿತಿದ್ದ ಭಾರತೀಯ ಋಷಿಮುನಿಗಳು ವಿಶಾಲ ದೃಷ್ಟಿಯನ್ನಿಟ್ಟುಕೊಂಡು ಇಡೀ ವಿಶ್ವದ ನೆಮ್ಮದಿಗೆ ಹಾರೈಸಿರುವುದು. ಧರ್ಮ, ಸತ್ಯ, ಅಹಿಂಸೆ, ಕರುಣೆ ಮತ್ತು ಬಹಳ ಮುಖ್ಯವಾಗಿ ಸೇವೆ ಇವೆಲ್ಲವೂ ಭಾರತೀಯ ಜೀವನದ ಮೌಲ್ಯಗಳು ಇವುಗಳ ತಳಹದಿಯಲ್ಲಿಯೇ ಇಲ್ಲಿನ ಸಾಮಾಜಿಕ ಜೀವನ ಸುಸ್ಥಿರತೆಯನ್ನೂ ಸಮೃದ್ಧತೆಯನ್ನು ಕಂಡಿರುವುದು. ಇವುಗಳು ಮತ್ತೊಮ್ಮೆ ಸ್ಥಾಪನೆಯಾಗಬೇಕು. ಆಗಲೇ ಭಾರತೀಯ ಜನಜೀವನದಲ್ಲಿ ಶಾಂತಿ ನೆಮ್ಮದಿ ನೋಡಲು ಸಾಧ್ಯವಾಗುತ್ತದೆ.

ಈ ಪರಂಪರೆಯು ಜಗತ್ತು ನೋಡುವಂತೇ ಕೇವಲ ಧಾರ್ಮಿಕ ಆಚರಣೆಗಳಲ್ಲ ಅದಕ್ಕೂ ಮೀರಿ ಅದು ವೈಜ್ಞಾನಿಕವಾಗಿ ಸಾಧನೆಗಳ ಮಾಡಿರುವ ಪರಂಪರೆಯಾಗಿದೆ. ಈ ಸಂಶೋಧನೆಗಳ ಫಲವನ್ನು ಜಗತ್ತು ಕಂಡಿದೆ ಮತ್ತು ಬಳಕೆಯನ್ನೂ ಮಾಡಿಕೊಂಡು ಬಂದಿದೆ. ಭಾರತೀಯ ವೈದ್ಯಶಾಸ್ತ್ರವಿರಲಿ, ಖಗೋಳಶಾಸ್ತ್ರವಿರಲಿ ಪ್ರಪಂಚದ ಜ್ಞಾನಧಾರೆಗೆ ತನ್ನ ಆರಂಭದ ಭದ್ರ ಬುನಾದಿಯನ್ನು ನೀಡಿದೆ. ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡೇ ಬದುಕಿದ ಭಾರತೀಯ ಜ್ಞಾನ ಪರಂಪರೆ ತನ್ನ ಸಂಸ್ಕೃತಿಯ ಮೂಲತತ್ತ್ವವನ್ನು ಮತ್ತೊಮ್ಮೆ ಮುನ್ನೆಲೆಗೆ ತಂದು ಹಳೆಯ ವೈಭವದ ಜ್ಞಾನವನ್ನು ತಂದು ಜಗತ್ತಿಗೆ ದಾರಿದೀಪವಾಗಬೇಕಾಗಿದೆ. ಏಕೆಂದರೆ ಇದರ ಒಡಲಲ್ಲಿ ಜಗತ್ತಿನ ಹಿಂಸೆ, ಯುದ್ಧದ ಮನಸ್ಥಿತಿಯಂತಹ ಕ್ರೂರ ಯೋಚನೆಗಳನ್ನು ನಾಶ ಪಡಿಸಿ ಶಾಂತಿಯನ್ನು ಮೂಡಿಸುವ ಸಾಮರ್ಥ್ಯವಿದೆ. ಬುದ್ಧ, ಮಹಾವೀರ, ಶಂಕರ, ರಾಮಾನುಜರ ಜ್ಞಾನದ ದಾರಿಯಲ್ಲಿ ಮತ್ತೊಮ್ಮೆ ಸಾಗುವಲ್ಲಿ ಭಾರತೀಯ ಜ್ಞಾನ ಪರಂಪರೆ ಸಾಗಬೇಕು. ಏಕೆಂದರೆ ಭಾರತೀಯ ಜ್ಞಾನ ಪರಂಪರೆಯು ಕಾಲಾತೀತವಾದ ಸಾರ್ವಕಾಲಿಕವಾದ ಸತ್ಯವನ್ನು ತನ್ನೊಡಲಲ್ಲಿ ಇಟ್ಟುಕೊಂಡ ಇಂದಿಗೂ ಜಗತ್ತಿಗೆ ಮಾರ್ಗದರ್ಶಕವಾಗುವ ಸಮರ್ಥ ಜೀವನಶ್ರದ್ಧೆಯಾಗಿದೆ. ಅಂದರೆ ಅಂತಹ ಕಾಲಾತೀತ ಪರಂಪರೆಯಿದು, ನಿರಂತರವಾಗಿ ಮುನ್ನಡೆಯುವ ಮಾನವನನ್ನು ಮುಕ್ತವಾಗಲು ಹೇಳಿದ ಸತ್ಯದ ಶಾಶ್ವತತೆಯನ್ನು ಹೇಳಿದ ಅಲ್ಲದೇ ಮನುಷ್ಯನ ಒಳಜೀವನವನ್ನು ಬೆಳಗಿಸಿದ ಜ್ಞಾನ ಪರಂಪರೆಯಾಗಿದೆ.

ಪರಾಮರ್ಶನ ಗ್ರಂಥಗಳು :

1. ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ 1–ಸಂ: ಕೆ.ವಿ. ಪುಟ್ಟಪ್ಪ–ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ–1970
2. ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ 2–ಸಂ: ಎಸ್.ಕೆ.ಡೇ, ಯು. ಎನ್. ಘೋಷಾಲ್, ಎ.ಡಿ.ಪುಲಸ್ಕರ್, ಆರ್.ಸಿ. ಹಾಜರಾ–ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ–1971
3. ಸಂಶೋಧನ ಲೇಖನಗಳು–ಎಸ್ ಶ್ರೀಕಂಠ ಶಾಸ್ತ್ರೀ–ಕಾಮಧೇನು ಪುಸ್ತಕ ಭವನ ಬೆಂಗಳೂರು–1975
4. ಕನ್ನಡ–ಕನ್ನಡ–ಇಂಗ್ಲೀಷ್ ನಿಘಂಟು–ಸಂ: ಪ್ರೊ ಜಿ ವೆಂಕಟಸುಬ್ಬಯ್ಯ, ಪ್ರೊ ಎಲ್. ಎಸ್. ಶೇಷಗಿರಿರಾವ್, ಪ್ರೋ ಎಚ್. ಕೆ. ರಾಮಚಂದ್ರ ಮೂರ್ತಿ– ಐಬಿಎಚ್ ಪ್ರಕಾಶನ ಬೆಂಗಳುರು–ಪುಟ 388–389)
5. ಶ್ರೀಮದ್ಭಗವದ್ಗೀತಾತಾತ್ಪರ್ಯ–ಡಿ.ವಿ.ಜಿ–ಕಾವ್ಯಾಲಯ ಪ್ರಕಾಶನ ಮೈಸೂರು–1996

ಆಕರಗಳು :

1. ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ 1–ಸಂ: ಸುನೀತಕುಮಾರ ಚಟರ್ಜಿ, ನಲಿನಾಕ್ಷ ದತ್, ಎ.ಡಿ. ಪುಸಲ್ಕರ್, ನಿರ್ಮಲದ ಕುಮಾರ್ ಬೋಸ್– ಪ್ರಸಾರಾಂಗ ಮೈಸೂರು ವಿವಿ–ಪುಟ 125
2. ಕನ್ನಡ–ಕನ್ನಡ–ಇಂಗ್ಲೀಷ್ ನಿಘಂಟು–ಸಂ: ಪ್ರೊ ಜಿ ವೆಂಕಟಸುಬ್ಬಯ್ಯ, ಪ್ರೊ ಎಲ್. ಎಸ್. ಶೇಷಗಿರಿರಾವ್, ಪ್ರೋ ಎಚ್. ಕೆ. ರಾಮಚಂದ್ರ ಮೂರ್ತಿ– ಐಬಿಎಚ್ ಪ್ರಕಾಶನ ಬೆಂಗಳುರು–ಪುಟ 388–389
3. ಶ್ರೀಮದ್ಭಗವದ್ಗೀತಾತಾತ್ಪರ್ಯ–ಡಿ.ವಿ.ಜಿ–ಕಾವ್ಯಾಲಯ ಮೈಸೂರು–ಪುಟ 46
4. ಸಂಶೋಧನ ಲೇಖನಗಳು–ಎಸ್ ಶ್ರೀಕಂಠಶಾಸ್ತ್ರೀ–ಕಾಮಧೇನು ಪುಸ್ತಕ ಭವನ ಬೆಂಗಳೂರು–1975–ಪುಟ 304
5. ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ 2–ಸಂ: ಕೆ. ವಿ. ಪುಟ್ಟಪ್ಪ–ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ–ಪುಟ 339–340)

***

ಕಪಿಲೆ ಕಂಡ ಕತೆಗಳು–ಜೀವನ ಪ್ರೀತಿಯ ರೂಪಕಗಳು

1 ಡಾ. ಕವಿತಾ ಎಂ. ಎನ್.

ಕನ್ನಡ ಸಹ–ಪ್ರಾಧ್ಯಾಪಕಿ

ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ

ಸರಳವಾಗಿ ಸ್ನೇಹ, ಪ್ರೀತಿ, ಆತ್ಮೀಯತೆ ಮತ್ತು ಜೀವನ ಪ್ರೀತಿಯನ್ನು ಬೆಸೆದಿರುವ ಕಥಾ ಸಂಕಲನ ಕಪಿಲೆ ಕಂಡ ಕತೆಗಳು. ಇದು ಕುಸುಮಾ ಆಯರಹಳ್ಳಿ ಅವರ ಮೊದಲ ಕಥಾ ಸಂಕಲನ. ಸಂಕಲನ ಮೊದಲನೆಯದೇ ಆದರೂ ಕತೆಗಳು ಮಾತ್ರ ಪ್ರಬುದ್ಧತೆಯನ್ನು ಸಾಧಿಸಿರುವ ಅನುಭವ ನೀಡುತ್ತದೆ. ಓದುಗರಿಗೆ ಹೊಸ ಭರವಸೆ ಮತ್ತು ಒಳನೋಟಗಳನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾದ ಹನ್ನೆರಡು ಕತೆಗಳು ಇಲ್ಲಿವೆ. ಮುನ್ನುಡಿ ಬೆನ್ನುಡಿಗಳಿಲ್ಲದಿರುವುದೇ ಈ ಸಂಕಲನದ ವಿಶೇಷತೆ ಎನಿಸಿತು. ಬಹುಶಃ ಕತೆಗಾರ್ತಿ ಓದುಗರಿಗೆ ನೀಡಿರುವ ಸ್ಪೇಸ್ ಇದಾಗಿರಬಹುದು. ಪ್ರತಿಯೊಬ್ಬ ಓದುಗನೂ ಕತೆ ಎಂದರೇನು? ಎಂಬುದಕ್ಕೆ ಕತೆಗಳ ಓದಿಗು ಮುನ್ನ ಕುಸುಮಾರವರು ನಿರೂಪಿಸುವ ವಿವರಣೆ ಅರ್ಥಪೂರ್ಣವೂ ಜೀವನಸತ್ಯವೂ ಆಗಿದೆ. ‘ಕತೆ ಎಂಬುದು ಒಳಲೋಕ ಬಗೆದಾಗ ಕಾಣುವ ನೋಟ. ಬದುಕು ಕೊಡುವ ಆಘಾತಗಳಿಂದ ಕಾಣುವ ಬೆಳಕನ್ನೂ ಕಾಣ್ಕೆಯನ್ನೂ ದೀಪವಾಗಿಸಿ ದಾಟಿಸಲು ಕಂಡುಕೊಂಡ ದಾರಿ. ಕತೆ, ನಮ್ಮನ್ನು ಈ ಜಗತ್ತಿನಲ್ಲಿರುತ್ತಲೇ, ಈ ಜಗತ್ತಿನಿಂದ ಕೆಲಹೊತ್ತಾದರೂ ಬೇರೆಡೆಗೆ ಒಯ್ಯುವ ಮಾಯಾಚಾಪೆ. ಒಂದು ದಿವ್ಯೌಷಧ. ಕಲೆ ಮತ್ತು ಆಧ್ಯಾತ್ಮ ಎರಡೂ ಮನುಷ್ಯರ ವೈಯಕ್ತಿಕ ಸಂಕಟಗಳನ್ನು ಲೋಕದ ಪ್ರಶ್ನೆಗಳಾಗಿಸುವ, ಉತ್ತರ ಹುಡುಕುವ, ಸಂಕಟಗಳನ್ನು ಸಾಂತ್ವಾನವಾಗಿಸುವ ಪ್ರಕ್ರಿಯೆಗಳು’1. ಕತೆಗಳ ಕುರಿತಾದ ಈ ಆತ್ಮೀಯ ನಿರೂಪಣೆಯನ್ನು ಓದದೇ ಕತೆಗಳ ಕಡೆಗೆ ಕಣ್ಣನ್ನು ಹೊರಳಿಸಲಾದೀತೇ? ಕತೆಗಳ ಓದನ್ನು ಉತ್ತೇಜಿಸುವ ಈ ಮಾತುಗಳು ಬರಿಯ ಮಾತುಗಳಾಗಿರದೆ, ಮೀಮಾಂಸೆಯ ಸೊಬಗನ್ನು ಪಡೆದಿವೆ.

ಕಪಿಲಾ ನದಿಪಾತ್ರಕ್ಕೆ ಹತ್ತಿರವಿರುವ ಕುಸುಮಾ ನದಿಯ ಏರಿಳಿತಗಳನ್ನು ನೋಡುತ್ತಲೇ ಬೆಳೆದ ಬಾಲೆ. ಬದುಕಿನ ಸಮಸ್ತವನ್ನೂ ಕಾಣುವ ಕಪಿಲೆ ಕತೆಗಾರ್ತಿಗೆ ಭಾವಬಂಧದ ಸೇತು. ಆದುದರಿಂದ ಅದೊಂದು ನದಿಯಷ್ಟೇ ಅಲ್ಲ, ನಮ್ಮ ನಡುವಿನ ಅಂತಃಸಾಕ್ಷಿ. ಮನಸ್ಸಿನ ನಿರಾಳಕ್ಕೊಂದು ವೇದಿಕೆ. ಆದುದರಿಂದ, ಕಥಾ ಸಂಕಲನಕ್ಕೆ ಶೀರ್ಷಿಕೆಯಾಗಿ ನದಿಯ ಹೆಸರನ್ನೇ ಇಟ್ಟಿದ್ದಾರೆ. ಕಪಿಲೆ ಎನ್ನುವುದು ಕೇವಲ ನದಿಯ ಹೆಸರಲ್ಲ, ಅದು ಇಡೀ ಸಂಕಲನದ ಸಾಕ್ಷಿಪ್ರಜ್ಞೆ. ನದಿ ಎಂದರೆ ಬರೀ ನೀರೇ? ಅಲ್ಲ ಕುಸುಮಾ ಹೇಳುತ್ತಾರೆ, 'ಪ್ರತಿ ನದಿಗೂ ಅದರದೇ ಗುಣ, ಸ್ಪರ್ಶ ಇದೆ ಎಂದು ನಾನು ನಂಬುತ್ತೇನೆ. ಎಷ್ಟು ಹೊತ್ತಾದರೂ ಕಳೆಯಬಹುದು ಹರಿವು ನೋಡುತ್ತಾ ಕಪಿಲೆ ಅಂದರೆ ನನಗೆ ಬಹಳ ಪ್ರೀತಿ. ಅವಳು ನನ್ನ ಬದುಕಿನ ಒಡನಾಡಿ. ಇಲ್ಲಿನ ಎಲ್ಲ ಕತೆಗಳ ಬದುಕು. ಭಾಷೆ ಕಪಿಲೆಯ ಹರಿವಿನ ಸುತ್ತಲವು. ಹಾಗಾಗಿ ಇವು 'ಕಪಿಲೆ ಕಂಡ ಕತೆಗಳು'2

ಮಹಿಳೆಯರು ಬರೆದ ಕತೆ, ಕಾದಂಬರಿಗಳಲ್ಲಿ 'ಹೆಣ್ಣೇ' ಕೇಂದ್ರ ಬೇರೆ ದೃಷ್ಟಿಕೋನಗಳು ತೀರಾ ಕಡಿಮೆ ಎಂಬ ಆಪಾದನೆಯನ್ನು ಪಕ್ಕಕ್ಕೆ ಸರಿಸಿರುವ ಕುಸುಮಾ ರವರ ಕೆಲವು ಕತೆಗಳು ಮಹಿಳೆಯರು ಬರೆದ ಕತೆಗಳಲ್ಲಿ 'ಹೆಣ್ಣೇ' ಕೇಂದ್ರ ಯಾಕಾಗಬಾರದು? ಎಂಬಂತಿವೆಯಾದರೂ ಅದರಾಚೆಗೆ 'ಗಂಡು' 'ಗಂಡಿನ ಅಂತರಂಗ' 'ಗಂಡಿನ ಅಂತಃ ಸಾಕ್ಷಿ' 'ಗಂಡಿನ ನಿರ್ಧಾರ' 'ಗಂಡಿನ ತಳಮಳ' 'ಗಂಡಿನ ಪ್ರತಿಭೆ' 'ಗಂಡಿನ ಜಾಣ್ಮೆ'ಯನ್ನೂ ಕೇಂದ್ರೀಕರಿಸಿ ನಿರೂಪಣೆಗೊಂಡಿದೆ. ಈ ಅರ್ಥದಲ್ಲಿ ಹೆಣ್ಣು–ಗಂಡು ಜೊತೆಯಾದ ಸ್ತ್ರೀವಾದ ದೃಷ್ಟಿಕೋನದ ಕತೆಗಳು ಇಲ್ಲಿವೆ.

ತನ್ನೊಳಗಿನ ಆಸೆ, ಕನಸಿನ ಬೆನ್ನುಹತ್ತಿ ಸಾಗುವ ಹೆಣ್ಣು–ಗಂಡು, ಕೌಶಲ್ಯದಿಂದ ಬೆಳೆಯುವ ಹೆಣ್ಣು–ಗಂಡು, ದೌರ್ಬಲ್ಯಗಳಿಂದ ನಲುಗುವ ಹೆಣ್ಣು–ಗಂಡು, ಅವಿವಾಹಿತ ಹೆಣ್ಣು–ಗಂಡಿನ ಕಷ್ಟ, ಸುಶಿಕ್ಷಿತ ಮಹಿಳೆಯರ ತಲ್ಲಣ, ಜಾಣ್ಮೆಯಿಂದ ಬದುಕು ಬೆಳಗಿಸಿಕೊಳ್ಳುವ ಹೆಣ್ಣು–ಗಂಡು, ಆತ್ಮ ಗೌರವಕ್ಕಾಗಿ ಹಂಬಲಿಸುವ ಹೆಣ್ಣು–ಗಂಡು, ವಲ್ಲದ್ದನ್ನು ಪ್ರತಿರೋಧಿಸುವ ಹೆಣ್ಣು–ಗಂಡು, ಛಲದಿಂದ ಜೀವನಕ್ಕಾಗಿ ಹೋರಾಡುವ ಹೆಣ್ಣು–ಗಂಡು ಒಟ್ಟಾರೆಯಾಗಿ ಎಲ್ಲಕ್ಕಿಂತಲೂ ಬದುಕೇ ದೊಡ್ಡದು ಜೀವನವೇ ಚೈತನ್ಯ, ಬಂದದ್ದೆಲ್ಲಾ ಬರಲಿ ಬಂದಂತೆಯೇ ಬದುಕಿಯೇ ಬಿಡೋಣ, ನೋಡಿಯೇ ಬಿಡೋಣ ಎಂಬಂತಹ ಜೀವನ್ಮುಖಿ ಧೋರಣೆ ಕುಸುಮಾರವರ ಕತೆಗಳಲ್ಲಿ ಪಾತ್ರಗಳಾಗಿವೆ, ಪಾತ್ರಗಳ ಶಕ್ತಿಗಳಾಗಿವೆ.

'ಕಪಿಲೆ ಕಂಡ ಕತೆಗಳು' ಸಂಕಲನದಲ್ಲಿನ ಹನ್ನೆರಡಕ್ಕೆ ಹನ್ನೆರಡೂ ಕತೆಗಳು ಚೆನ್ನಾಗಿವೆ. ಅಂದರೆ, ಓದುಗರನ್ನು ಬಿಡದೆ ಓದಿಸುವ ಕತೆಗಳು ಇಲ್ಲಿವೆ. ವಿಭಿನ್ನ ದೃಷ್ಟಿಕೋನದ, ವೈವಿಧ್ಯ ವಸ್ತುವನ್ನು ವಾಸ್ತವಕ್ಕೆ ತಾಗಿಸಿ ಹೇಳುವ ಗುಣ ಇಲ್ಲಿನ ಪ್ರತಿ ಕತೆಗಳಿಗಿವೆ. ಈ

ಸಂಕಲನದ ಮೊದಲ ಕತೆಯೇ ಬಹುತೇಕ ಎಲ್ಲರಿಗೂ ಮೆಚ್ಚುಗೆಯಾಗುವ ಕತೆ. 'ಸ್ವಾಮಗೆ ಉಪ್ಪಿಟ್ಟು' ಹೆಸರಿನ ಈ ಕತೆ ನಾಗಕ್ಕಳ ಮನದ ಬಯಕೆಯಿಂದ ಆರಂಭವಾಗಿ, ಹಳ್ಳಿಯ ಮದುವೆ ದಿಬ್ಬಣಗಳನ್ನೆಲ್ಲಾ ಸುತ್ತಿ ನಗರಕ್ಕೆ ಬಂದು ಸುತ್ತಾಡಿ, ನಗರ ಸಂಸ್ಕೃತಿಯ ಆಹಾರಗಳನ್ನೆಲ್ಲಾ ಪರಿಚಯಿಸಿ ಅದರೊಂದಿಗೆ ಆಹಾರ ರಾಜಕಾರಣವಾಗುತ್ತಿರುವ ಸೂಕ್ಷತೆಯನ್ನು ತಟ್ಟಿಕೊಂಡು ಮತ್ತೆ ಊರು ಸೇರುವವರೆಗೂ ಸಾಗುತ್ತದೆ. ನಾಲಗೆ ರುಚಿಯಿಂದ ಆಹಾರ ರಾಜಕಾರಣದವರೆಗೆ ವಿಸ್ತಾರಗೊಳ್ಳುವ ಈ ಕತೆ ರುಚಿ–ಅಭಿರುಚಿ–ಭಾವರುಚಿಗಳನ್ನು ಬೆಸೆಯುತ್ತಾ ಸಾಗುವ ವಿಶೇಷ ಕತೆ. ನಾಗಕ್ಕನೆಂಬ ಕಥಾ ನಾಯಕಿಯ ಮೂಲಕ, ಹಳ್ಳಿಯಲ್ಲಿದ್ದ ಮಾತ್ರಕ್ಕೆ ಹಳ್ಳಿಯ ಜನ ಅದರಲ್ಲೂ ಹೆಣ್ಣುಮಕ್ಕಳು ರುಚಿ ವೈವಿಧ್ಯತೆಯಿಂದ ದೂರ ಉಳಿಯಬೇಕೆಂದೇನೂ ಇಲ್ಲ, ನಗರದವರಿಗೆ ಹೇಗೋ ಹಾಗೇ ವಿವಿಧ ರುಚಿಗಳು ಅವರಿಗೂ ಮೆಚ್ಚು ಎಂಬ ಸತ್ಯವನ್ನು ಸರಳವಾಗಿ ನಿರೂಪಿಸಿರುವ ಕತೆಯ ಗತಿಯೇ ಎಲ್ಲರಿಗೂ ಮೆಚ್ಚು.

ನೀರಿನ ಋಣ, ಮಣ್ಣಿನ ಋಣಗಳನ್ನು ಪದೇ ಪದೇ ನೆನಪಿಸಿಕೊಳ್ಳುವ ನಾವು, ನಮ್ಮ ನದಿ ತಟ, ಅಲ್ಲಿನ ಮಣ್ಣಿನ ಗುಣ, ಮತ್ತು ಪ್ರಕೃತಿಯ ಒಡನಾಟದಿಂದ ನಮ್ಮದೇ ಬದುಕಿನ ನಡೆಯನ್ನು ರೂಪಿಸಿಕೊಂಡಿರುತ್ತೇವೆ. ಈ ನಡವಳಿಕೆ ವಿಸ್ತಾರ ಜಗತ್ತಿನೊಂದಿಗೆ ಬೆರೆತಾಗ ನಮ್ಮ ನಡೆ ಬದಲಾಗಬಹುದು, ಒಗ್ಗಲಾರದೆ ಊರಿಗೆ ಮರಳಬಹುದು. ಬದಲಾದರೂ ನಾವು ನಾವಾಗೇ ಉಳಿಯಬಹುದು. ಹೀಗೆ ಬಹು ರೀತಿಯ ಬದಲಾವಣೆಗೆ ತೆರೆದುಕೊಳ್ಳಲು ಅವಕಾಶ ನೀಡುತ್ತದೆ. ಇಲ್ಲಿನ ಅನೇಕ ಪಾತ್ರಗಳು ಹಳ್ಳಿ–ನಗರಗಳ ನಡುವೆ ಬದುಕು ಕಟ್ಟಿಕೊಳ್ಳಲು ನಡೆಸುವ ಹೊಯ್ದಾಟ, ಹೋರಾಟಗಳಿಗೆ ಸಾಕ್ಷಿಯಾಗಿವೆ. ಹಳ್ಳಿಯಲ್ಲಿದ್ದ ಸಾವಿತ್ರಿ ನಗರದ ಸೀಮಾ ಆದ 'ಸೀಮೋಲ್ಲಂಘನ' ಕತೆ, ಸಾಮಾಜಿಕ ಜಾಲತಾಣಗಳ ದೆಸೆಯಿಂದ ಫೇಮಸ್ ಆದ 'ಶಂಕರ ಟೀ ಸ್ಟಾಲ್' 'ರಾಹುಲ್ಲಾ' ಕತೆಗಳು, ಬೇರೆಯವರ ಕಷ್ಟಗಳಿಗೆ ಸ್ಪಂದಿಸಿ ಸ್ವತಃ ಕಷ್ಟಕ್ಕೆ ಸಿಲುಕುವ ಧರ್ಮಣ್ಣನಂತಹ ಪ್ರಬುದ್ಧ ಪಾತ್ರದ 'ಬಾಳಿಗೊಂದು ನಂಬಿಕೆ' ಕತೆಗಳು ಈ ಜಾಡಿನಲ್ಲಿ ಸಾಗುತ್ತವೆ.

'ಶಂಕರ ಟೀ ಸ್ಟಾಲ್' ಕತೆಯಲ್ಲಿ ಬರುವ ಶಂಕರ, ತನ್ನ ಹೆಂಡತಿ ಮಕ್ಕಳ ಜೊತೆಗಿನ ಬದುಕನ್ನು ಸುಂದರವಾಗಿ ಕಟ್ಟಿಕೊಂಡು ನೆಲೆ–ಬೆಲೆ ರೂಪಿಸಿಕೊಳ್ಳುವ ಹಂಬಲದಿಂದ ನಗರ ಸೇರಿ, ಬೇರೆ ಬೇರೆ ಕೆಲಸಗಳನ್ನು ನಿರ್ವಹಿಸಿ, ಯಾವುದರಲ್ಲೂ ನೆಲೆ ಕಾಣಲಾರದಾಗ, ತನ್ನ ಕೌಶಲ್ಯವನ್ನೇ ಬಂಡವಾಳವಾಗಿಸಿಕೊಂಡು ಗಾಜಿನ ಲೋಟಗಳನ್ನು ಚಮತ್ಕಾರದಿಂದ ಎಸೆಯುವ ಹಿಡಿಯುವ ಚಾಣಕ್ಷತನ ಬಳಸಿ ಟೀ ವ್ಯಾಪಾರ ಆರಂಭಿಸುತ್ತಾನೆ. ವ್ಯಾಪಾರ ಅವನ ಕಲ್ಪನೆಯನ್ನೂ ಮೀರಿ ಬೆಳೆಯಲಾರಂಭಿಸಿ, ಸಾಮಾಜಿಕ ಜಾಲತಾಣದಲ್ಲಿ

ಪ್ರಸಿದ್ಧಿಯನ್ನೂ ಪಡೆಯುತ್ತಾನೆ. ಆದರೆ ಆಕಸ್ಮಿಕವಾಗಿ, ಅವನ ಹಿಡಿತ ತಪ್ಪಿ ಒಡೆದ ಗಾಜಿನ ಲೋಟಗಳು ಅವನ ಬದುಕನ್ನೂ ಒಡೆಯುವ ಕಥ ಹಂದರವನ್ನೊಳಗೊಂಡಿದೆ. ಮನುಷ್ಯರ ಸಂಕಟಗಳಿಗೆ ಸ್ಪಂದಿಸ ಬೇಕಿದ್ದ ಮನುಷ್ಯರು ಘಟನೆಗಳನ್ನು ವಿಡಿಯೋ ಮಾಡುವ, ಅಪ್‌ಲೋಡ್ ಮಾಡುವ, ಶೇರ್ ಮಾಡಿ ಲೈಕ್ ಗಿಟ್ಟಿಸುವ ಭರದಲ್ಲಿ ಹೇಗೆ ನಿರತರಾಗಿದ್ದಾರೆಂಬ ವಾಸ್ತವತೆಯ ಮೇಲೆ ಬೆಳಕು ಚೆಲ್ಲುತ್ತಾ, ಆತ್ಮ ವಿಮರ್ಶೆ ಎಂಬುದಕ್ಕೆ ಸ್ಪೇಸ್ ಕಲ್ಪಿಸಿದ್ದಾರೆ.

ಆಧುನಿಕ ಜಗತ್ತು ತಾಂತ್ರಿಕ ಶಕ್ತಿಯನ್ನೇ ಮುಂದು ಮಾಡಿ ಮೆರೆಸುತ್ತಿರುವ ಕಾಲ ಎಂಬುದರಲ್ಲಿ ಎರಡು ಮಾತಿಲ್ಲ. ಬಹುತೇಕರು ಇಂತಹ ತಂತ್ರಜ್ಞಾನಗಳು ನಮ್ಮ ಪ್ರತಿಭೆಗೆ, ಕೌಶಲ್ಯಕ್ಕೆ ಅಡ್ಡಗಾಲು, ಇದರಿಂದ ಜನ ಹಾಳಾಗುತ್ತಿದ್ದಾರೆಂದು ದೂಷಿಸಿದರೆ, ತಂತ್ರಜ್ಞಾನದಿಂದಲೇ ಜಗತ್ತಿನ ವೇಗದ ಬೆಳವಣಿಗೆ ಸಾಧ್ಯ ಎಂದು ಖುಷಿ ಪಡುವವರೂ ಇದ್ದಾರೆ. ಹೊಸತನಕ್ಕೆ ತೆರೆದುಕೊಂಡಾಗ, ಹೊಸ ಆವಿಷ್ಕಾರಗಳೊಂದಿಗೆ ಬದುಕು ಹೆಣೆದುಕೊಳ್ಳುವುದು ಸಹಜ. ತಂತ್ರಜ್ಞಾನವನ್ನು ಒಪ್ಪಿಕೊಂಡ ಮೇಲೆ, ಅದು ಕೊಟ್ಟದ್ದನ್ನು ಸ್ವೀಕರಿಸಬೇಕು ನಿಜ, ಹಾಗಂತ ಅದನ್ನೇ ಎಲ್ಲಕ್ಕಿಂತ ದೊಡ್ಡದು ಮಾಡುವ ಬದಲು ಅಂತರ ಕಾಯ್ದುಕೊಳ್ಳುವ ಜಾಣ್ಮೆ ತಿಳಿದಿರಬೇಕು ಎಂದು ವಿವೇಕ ಹೇಳುವವರೂ ಇದ್ದಾರೆ. ಹೀಗೆ ಎಲ್ಲರೆಲ್ಲರೊಂದಿಗೆ ಬದಲಾದ ಕಾಲದೊಳಗೆ, ಹೆಜ್ಜೆ ಇಡುತ್ತಿರುವ ನಾವು, ಒಮ್ಮೊಮ್ಮೆ ಸಕಾರಾತ್ಮಕವಾಗಿ ಚಿಂತಿಸಿದರೆ ಹೇಗೆ? ಕುಸುಮಾ ಅವರೂ ಹೀಗೆ ಯೋಚಿಸಿದ್ದಿರಬೇಕು. ಎ.ಐ ಕಾಲದಲ್ಲಿ ಎಐಗೂ ಮಾನವೀಯ ಮೌಲ್ಯವಿದ್ದರೆ, ಮನುಷ್ಯನಿಗಿಂತ ಭಾವವಿಲ್ಲದ ತಂತ್ರಶಕ್ತಿಯು, ನಂಬಿಕೆ ಮುರಿದು ಅಮಾನವೀಯವಾಗಿ ನಡೆದುಬಿಡುವ ಮನುಷ್ಯನಿಗಿಂತ ಉತ್ತಮವಾಗುವುದಿಲ್ಲವೇ?. ಇಂತದ್ದೇ ಕಥಾವಸ್ತುವನ್ನಿಟ್ಟುಕೊಂಡು ಹೆಣೆದ 'ಹಾಯಿದೋಣಿ' ತುಂಬಾ ವಿಶಿಷ್ಟವಾದ ಅನುಭವವೊಂದನ್ನು ಓದುಗರೆದುರು ತೆರೆದಿಡುತ್ತದೆ.

ಮೊಬೈಲ್ ದೆಸೆಯಿಂದಾಗಿ ಖಾಸಗಿ ಕ್ಷಣಗಳನ್ನು ಸಾರ್ವತ್ರಿಕಗೊಳಿಸಿ ವಿಕೃತಿ ಮೆರೆಯುವ ಆ ಮೂಲಕ ಹೆಣ್ಣನ್ನು ಮಾನಸಿಕವಾಗಿ ಚಿತ್ರಹಿಂಸೆ ಪಡಿಸುವ, ಆತ್ಮಹತ್ಯೆಗೆ ಯೋಚಿಸುವ ಹಾಗೆ ಮಾಡುವ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದೇ ಸಂಗತಿಯನ್ನು ಕಥಾ ವಸ್ತುವಾಗಿಟ್ಟುಕೊಂಡು 'ಹಾಯಿದೋಣಿ' ಗೆ ರೂಪ ನೀಡಿರುವ ಕತೆಗಾರ್ತಿ, ಕಥಾ ನಾಯಕಿ ಈ ಸಮಸ್ಯೆಯಿಂದ ಹೊರಬರಲು ಮೊದ ಮೊದಲು ಆಲೋಚನೆಗಳ ಮೊರೆಹೊಕ್ಕು, ಕೊನೆಗೆ ಎಐನ ಮೊರೆ ಹೋಗುತ್ತಾಳೆ, ಅದು ಸುಭವಾಗಿ ಸಾಯುವ ವಿಧಾನ ಹೇಳುತ್ತಲೇ ಸಾವಿಗಿಂತ ಬದುಕೇ ಮುಖ್ಯ ಎಂಬುದನ್ನು ಅರ್ಥೈಸುವಲ್ಲಿ ಗೆಲ್ಲುತ್ತದೆ. ಕಥಾನಾಯಕಿಯ ಆಲೋಚನೆಗಳನ್ನು ಬದಲಿಸುವಲ್ಲಿ ಯಶಸ್ವಿಯಾಗುತ್ತದೆ.

'ಕಪಿಲೆ ಕಂಡ ಕತೆಗಳು' ಕೇವಲ ಕಲ್ಪಿತ ಕತೆಗಳಾಗದೇ, ಜೀವನ ಪ್ರೀತಿಯ

ರೂಪಕಗಳಾಗಿ ಬೆಳೆಯುತ್ತಾ ಹೋಗುತ್ತದೆ. ಇಲ್ಲಿನ ಪಾತ್ರ, ವಸ್ತುಗಳೆಲ್ಲ ನಮ್ಮ ನಡುವಿನ ಜೀವಂತಿಕೆಯ ಸಂಗತಿಗಳಾಗಿ ತೆರೆದುಕೊಳ್ಳುತ್ತಾ ನಮ್ಮೊಂದಿಗೆ ಹೆಜ್ಜೆ ಇಡುತ್ತಲೇ ಸಾಗುತ್ತವೆ. ನೈಜತೆಗೆ, ವಾಸ್ತವಕ್ಕೆ ಹತ್ತಿರವಿರುವ ಇಲ್ಲಿನ ಎಲ್ಲಾ ಕತೆಗಳೂ ಓದುವ ಪ್ರತಿಯೊಬ್ಬ ಓದುಗನವೂ ಆಗಿದೆ. ಹಾಗಾಗಿ, 'ಕಪಿಲೆ ಕಂಡ ಕತೆಗಳು' ಸದಾ ನಮ್ಮೊಂದಿಗೆ ಪ್ರವಹಿಸುತ್ತಲೇ ಇರುತ್ತವೆ. ಕತೆಗಳು ಮತ್ತು ಪಾತ್ರಗಳನ್ನು ನೆನೆದಾಗಲೆಲ್ಲಾ ತಣ್ಣನೆಯ ಆನಂದ ನೀಡುತ್ತಲೇ ಇರುತ್ತವೆ.

ಕತೆಗಳ ನಿರೂಪಣೆಗೆ ಬಳಕೆಯಾಗಿರುವ ಭಾಷೆಯಂತೂ ಕುಸುಮಾ ಅವರ ಸಿಗ್ನೇಚರ್ ಶೈಲಿಯಾಗಿದೆ. ಗ್ರಾಮೀಣ ಭಾಷೆಯ ಸೊಗಡು ಕಥೆಯ ಗುಣ ಮೌಲ್ಯವನ್ನು ಇನ್ನಷ್ಟು ಸತ್ವಶಾಲಿಯಾಗಿಸಿದೆ. ಸರಳವಾದ ನಿರೂಪಣೆ ಉಳ್ಳ ಇಡೀ ಸಂಕಲನದ ಕತೆಗಳು ಭಾಷೆಯ ಶಕ್ತಿಯಿಂದ ವಿಶಿಷ್ಟತೆಯ ಮೆರಗು ಪಡೆದಿದೆ. 'ಬಸ್ ಬಂದದ ಅತ್ಕಳಿ ಬನ್ನಿ' 'ಬ್ಯಾಡ ಕಣಾ ಕೂಸೇ' 'ಮನ್ಸಾ ಬದ್ಕದು ಮಾನಕ್ ಸಲ್ವಾಗಿ, ಅಲ್ವಾ ಕೂಸೈ?' 'ಯೋಳವ್ವ ನೀನೇ ಯೋಳೆವ್ವಾ..' ಇಂತಹ ನೂರಾರು ವಾಕ್ಯಗಳು ಗ್ರಾಮ್ಯ ಭಾಷೆಯ ಸೊಗಸನ್ನು ತೆರದಿಡುತ್ತಾ, ಇಡೀ ಸಂಕಲನದ ಸೊಗಸಿಗೆ ಕಾರಣವಾಗಿದೆ. ಭಾಷೆಗೆ ಅನುರೂಪವಾದ ಕಥಾ ನಿರೂಪಣಾ ಶೈಲಿಯೂ ವಿಶಿಷ್ಟವಾಗಿದ್ದು, ಸಂಕೀರ್ಣತೆಗಳಿಲ್ಲದೆ ಕತೆಗಳ ವಿಷಯ, ವಸ್ತು, ಮತ್ತು ಪಾತ್ರಗಳು ಓದುಗನ ಮನಸ್ಸಲ್ಲಿ ನೆಲೆಗೊಳ್ಳುತ್ತವೆ.

ಜಾತಿ–ಧರ್ಮಾದಿಗಳ ಆಚೆಗೆ ಚಿಂತಿಸುವ, ಮನುಷ್ಯರನ್ನು ಮನುಷ್ಯರಾಗಿ ಪ್ರೀತಿಸುವ ಇರಾದೆಯುಳ್ಳ ಕುಸುಮಾ 'ಬಡತನವೇ ಒಂದು ಜಾತಿ ಅಲ್ವೇನಪ್ಪಾ?'3 ಎಂದು ಬಡತನದ ಕಾರಣಕ್ಕೆ ನೋವು–ವ್ಯಥೆಗಳನ್ನು ಅನುಭವಿಸುವವರ ಪರವಾಗಿ ದನಿಯಾಗುವ ಪ್ರಯತ್ನ ಮಾಡಿರುವುದು 'ದೈತ್ಯ' ಕತೆಯಲ್ಲಿ ಕಾಣಬಹುದಾದ ವಿಶೇಷ ಸಂಗತಿಯಾಗಿದೆ. ಕುಟುಂಬದ ಒಡಲಿನಿಂದ ಸಾಮಾಜಿಕ ಸಮಸ್ಯೆಗಳ ಕಡೆಗೆ ಆಲೋಚನೆಗಳನ್ನು ಹೊರಳುವಂತೆ ಮಾಡುವ ಕತೆಗಾರ್ತಿ, ನಮ್ಮ ನಡುವಿನ ಸಮಸ್ಯೆಗಳನ್ನು ಸಮರ್ಥವಾಗಿ ಓದುಗರ ಎದುರು ತೆರೆದಿಡುವಲ್ಲಿ ಸಫಲರಾಗಿದ್ದಾರೆ. ಇನ್ನಷ್ಟು ಸಾಮಾಜಿಕ ಕಳಕಳಿಯನ್ನೇ ಕೇಂದ್ರೀಕರಿಸುವ ಅವರ ರಚನೆಗಳು ಹೆಚ್ಚಾಗಲಿ ಎಂದು ಈ ಮೂಲಕ ಹಾರೈಸುತ್ತೇನೆ.

ಟಿಪ್ಪಣಿಗಳು :

1 ಕಪಿಲೆ ಕಂಡ ಕತೆಗಳು – ಕುಸುಮಾ ಆಯರಹಳ್ಳಿ, ಪು–7, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು– 2025

2 ಕಪಿಲೆ ಕಂಡ ಕತೆಗಳು – ಕುಸುಮಾ ಆಯರಹಳ್ಳಿ, ಪು–8, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು– 2025

3 ಕಪಿಲೆ ಕಂಡ ಕತೆಗಳು – ಕುಸುಮಾ ಆಯರಹಳ್ಳಿ, ಪು–60, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು– 2025

***

ಕರಾವಳಿಯಲ್ಲಿ ಕೊಂಕಣಿ ಭಾಷೆಯ ಅಸ್ಮಿತೆ
(ಗೌಡ ಸಾರಸ್ವತ ಕೊಂಕಣಿಯನ್ನು ಅನುಲಕ್ಷಿಸಿ)

1 ಲತಾ ಶೆಣೈ
ಸಂಶೋಧನಾರ್ಥಿ, ಕನ್ನಡ ವಿಭಾಗ
ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ
ತೇಜಸ್ವಿನಿ ಹಿಲ್ಸ್ ಪೆರಿಯ,
ಕಾಸರಗೋಡು ಜಿಲ್ಲೆ.

ಕರ್ನಾಟಕ ರಾಜ್ಯದ ಪಶ್ಚಿಮಕ್ಕೆ ಇರುವ ಕಡಲತೀರಕ್ಕೆ ಕರಾವಳಿಯೆನ್ನುತ್ತಾರೆ. ಕರ್ನಾಟಕದ ಕರಾವಳಿ ಪ್ರದೇಶವು ಕಾರವಾರದಿಂದ ಕಾಸರಗೋಡಿನವರೆಗೆ ಹಬ್ಬಿದೆ. ಪಶ್ಚಿಮ ಕರಾವಳಿಯ ಈ ಭೂಭಾಗವನ್ನು 'ಕೆನರಾ' ಎಂದು ಕರೆದವರು ಪೋರ್ಚುಗೀಸರು. ಅವರ ಭಾಷೆಯಲ್ಲಿ 'ಡ'ಕಾರದ ಉಚ್ಚಾರವಿಲ್ಲವಾಗಿ ಕನ್ನಡ 'ಕೆನರಾ' ಆಯಿತು ಎಂಬುದನ್ನು ಕಯ್ಯಾರ ಕಿಞ್ಞಣ್ಣ ರೈ ಹೇಳುತ್ತಾರೆ. (ಪು–88 ಪೊಲಿ)1799ರಲ್ಲಿ ನಾಲ್ಕನೇ ಆಂಗ್ಲೋ–ಮೈಸೂರು ಕದನದಲ್ಲಿ ಟಿಪ್ಪು ಸುಲ್ತಾನನು ಹತನಾದ ಬಳಿಕ ಆಳ್ವಿಕೆಗೆ ಬಂದ ಬ್ರಿಟಿಷರೂ ಈ ಪ್ರದೇಶವನ್ನು "ಕೆನರಾ' ಎಂದೇ ಕರೆದರು. ಕರಾವಳಿಯು ಅವಿಭಜಿತ ದಕ್ಷಿಣ ಕನ್ನಡ(ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡಿನ ನೀಲೇಶ್ವರದ ವರಗೆ) ಮತ್ತು ಇಂದಿನ ಉತ್ತರ ಕನ್ನಡ ಜಿಲ್ಲೆಯನ್ನು ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಅಂದರೆ 1860ರಲ್ಲಿ 'ನೋರ್ತ್ ಕೆನರಾ' ಮತ್ತು ಇಂದಿನ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯು ಸಂಪೂರ್ಣವಾಗಿ 'ಸೌತ್ ಕೆನರಾ ಎಂದು ವಿಂಗಡಿಸಿದರು. 1862ರಲ್ಲಿ ಉತ್ತರ ಕೆನರಾವನ್ನು ಬಾಂಬೆ ಪ್ರೆಸಿಡೆನ್ಸಿ ಹಾಗೂ ದಕ್ಷಿಣ ಕೆನರಾವನ್ನು ಮದ್ರಾಸ್ ಪ್ರೆಸಿಡೆನ್ಸಿ ಸೇರಿಸಲಾಯಿತು. ಕುಂದಾಪುರ ತಾಲೂಕು ಮೊದಲು ಉತ್ತರ ಕೆನರಾದಲ್ಲಿದ್ದು ನಂತರ ದಕ್ಷಿಣ ಕೆನರಾಕ್ಕೆ ಸೇರಿತು. ಸ್ವಾತಂತ್ರ್ಯಾ ನಂತರದಲ್ಲಿ ಈ ಎರಡೂ ಜಿಲ್ಲೆಗಳೂ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಾಗಿ ಬದಲಾದವು.

1956ರಲ್ಲಿ ನಡೆದ ಪ್ರಾಂತ್ಯವಾರು ವಿಂಗಡಣೆಯ ಸಂದರ್ಭ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯನ್ನು ಮೈಸೂರು ರಾಜ್ಯಕ್ಕೂ, ಹಾಗೂ ಕಾಸರಗೋಡು ಪ್ರದೇಶವನ್ನು ಕೇರಳ ರಾಜ್ಯಕ್ಕೆ ಸೇರಿತು. ನಂತರ ಕರ್ನಾಟಕ ಸರಕಾರ 1997ರಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ (ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯೆಂದು ಎರಡು ವಿಭಾಗವಾಯಿತು. ಆದರೂ ಈ ಜಿಲ್ಲೆಗಳು ಭಾಷಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಒಂದೇ ಆಗಿದೆ.

ಕರಾವಳಿಯಲ್ಲಿ ಕನ್ನಡ ರಾಜ್ಯಭಾಷೆಯಾಗಿ, ಶೈಕ್ಷಣಿಕವಾಗಿ ಬಳಕೆಯಲ್ಲಿದ್ದರೆ ತುಳು ಭಾಷೆ ಸಂವಹನ ಮಾಧ್ಯಮವಾಗಿ ಬಳಕೆಯಲ್ಲಿದೆ. ಇಲ್ಲಿ ಮಲಯಾಳಂ, ಉರ್ದು, ಬ್ಯಾರಿ, ಮರಾಠಿ, ಹವ್ಯಕ ಕನ್ನಡ, ಗೌಡಕನ್ನಡ, ಕುಂದಾಪುರ ಕನ್ನಡಗಳನ್ನೂ ಮಾತನಾಡಲಾಗುತ್ತದೆ. ಜೊತೆಗೆ ಗೋವೆಯಿಂದ ವಲಸೆ ಬಂದ ಸಾರಸ್ವತರು ಕೊಂಕಣಿಯುನ್ನು ಮನೆಮಾತಾಗಿಟ್ಟುಕೊಂಡಿದ್ದಾರೆ. ಹೀಗೆ 'ಒಂದೇ ಪ್ರದೇಶದಲ್ಲಿ ಹಲವಾರು ಭಾಷೆಗಳನ್ನು ಮಾತನಾಡುವುದರಿಂದ ಕರಾವಳಿ ಭಾಷೆಗಳ ಆಡುಂಬಲ' ಎಂದು ವಿದ್ವಾಂಸ, ನಿಂಘಟುಕಾರ ಪ್ರೊ. ಎಂ ಮರಿಯಪ್ಪ ಭಟ್ಟ ಹೇಳುತ್ತಾರೆ.(96 ಕರಾವಳಿಯ ಭಾಷಾನುಸಂಧಾನ)

- ಈ ಸಂಶೋಧನಾ ಲೇಖನದ ಉದ್ದೇಶ ಕರಾವಳಿಯ ಪರಿಸರದಲ್ಲಿ ನೆಲೆಸಿರುವ ಗೌಡ ಸಾರಸ್ವತ ಸಮುದಾಯ ತಮ್ಮ ಮಾತೃಭಾಷೆಯಾದ ಕೊಂಕಣಿಯನ್ನು ವಲಸೆಯ ಕಾಲಘಟ್ಟದಲ್ಲಿ ಭಾಷೆಯ ಉಳಿವಿಗಾಗಿ ನಡೆಸಿದ ಸತತ ಹೋರಾಟವನ್ನು ಪರಿಚಯಿಸುವುದು.
- ಕೊಂಕಣಿ ಭಾಷೆಗೆ ಸ್ವಂತ ಲಿಪಿ ಇಲ್ಲದಿದ್ದರೂ ಕರಾವಳಿಯಲ್ಲಿ ಕನ್ನಡ ಲಿಪಿಯನ್ನು ಬಳಸುವ ಮೂಲಕ ಭಾಷಾ ಸಾಮರಸ್ಯವನ್ನು ಪರಿಚಯಿಸುವುದು.
- ಕರಾವಳಿಯಲ್ಲಿ ಕೊಂಕಣಿ ಭಾಷೆ ಉಳಿವಿಗಾಗಿ ನಡೆದ ಕಾರ್ಯಗಳ ವಿಶ್ಲೇಷಣೆ.
- ಗೌಡ ಸಾರಸ್ವತರ ಭಾಷೆ, ಸಂಸ್ಕೃತಿ, ಆಹಾರ ಮತ್ತು ಸಾಹಿತ್ಯದ ಮೂಲಕ ಅಸ್ಮಿತೆಯ ಹುಡುಕಾಟ.
- ಕೊಂಕಣಿ ಭಾಷೆ ಉಳಿವಿಗೆ ಸವಾಲುಗಳು ಮತ್ತು ಇಂದಿನ ಸ್ಥಿತಿಯ ಮೂಲಕ ಅಸ್ಮಿತೆಯನ್ನು ನೋಡುವುದು.

ಈ ಲೇಖನದ ವ್ಯಾಪ್ತಿ : ಭೌಗೋಳಿಕ ವ್ಯಾಪ್ತಿಯನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಮಾತ್ರ ಈ ಸಂಶೋಧನಾ ಲೇಖನ ಒಳಗೊಂಡಿದೆ.

ಕರಾವಳಿಯಲ್ಲಿ ನೆಲೆಸಿದ ಕೊಂಕಣಿ ಮಾತನಾಡುವ ಸಮುದಾಯಗಳಾದ ಕ್ರಿಶ್ಚನ್ ಕೊಂಕಣಿ(ಕ್ಯಾಥೋಲಿಕ್), ಸಾರಸ್ವತ ಕೊಂಕಣಿ, ಖಾರ್ವಿ, ಕುಡುಬಿ, ನವಾಯಿತಿ

ಮುಂತಾದವುಗಳಿಗಿಂದ ಗೌಡ ಸಾರಸ್ವತ ಕೊಂಕಣಿ ಹೇಗೆ ಭಿನ್ನವಾಗಿದೆ. ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದೆ ಎಂಬುದರ ಕುರಿತು ವಿಶ್ಲೇಷಣೆ ಮಾಡಲಾಗುವುದು.

1. ಗೌಡ ಸಾರಸ್ವತರ ವಲಸೆ ಮತ್ತು ಭಾಷೆಯ ವೈಶಿಷ್ಟತೆ

ಕರಾವಳಿಯಲ್ಲಿ ನೆಲೆಸಿದ ಗೌಡ ಸಾರಸ್ವತ ಸಮುದಾಯದವರು ಮೂಲತಃ ಪಂಜಾಬ್ ನ (ಉತ್ತರ ಭಾರತ) ಸರಸ್ವತೀ ನದಿಯ ತೀರದ ನಿವಾಸಿಗಳು. ಸರಸ್ವತೀ ಮತ್ತು ದೃಶ್ವತಿ ನದಿಯ ಮಧ್ಯ ಭಾಗಕ್ಕೆ 'ಬ್ರಹ್ಮಾವರ್ತ'ವೆಂದು ಕರೆಯುತ್ತಾರೆ. ಸರಸ್ವತೀ ನದಿಯ ನೀರು ಬತ್ತಿ ಹೋಗಿ ಭೀಕರ ಕ್ಷಾಮ ಉಂಟಾಯಿತು. ನದಿಯ ತೀರದ ನಿವಾಸಿಗಳು ಜೀವನೋಪಾಯಕ್ಕಾಗಿ ಸರಸ್ವತೀ ನದಿಯ ಹರಿವಿಗೆ ಅನುಗುಣವಾಗಿ ವಲಸೆ ಹೋಗುತ್ತಾರೆ. ಒಂದು ಗುಂಪು ಇಂದಿನ ಬಂಗಾಳದ ಗೌಡ ದೇಶದಲ್ಲಿ ದೀರ್ಘಕಾಲ ಆಶ್ರಯ ಪಡೆದಿದ್ದರಿಂದ ಗೌಡ ಸಾರಸ್ವತರಾದರು. ಸಾರಸ್ವತರು ತಮ್ಮ ಸ್ವಸ್ಥಾನವನ್ನು ಬಿಟ್ಟು ಎಲ್ಲೆಲ್ಲಿ ಹೋಗಿ ನೆಲೆ ನಿಂತಿದ್ದರೋ ಅವರನ್ನು ಆಯಾ ಪ್ರದೇಶದ ಹೆಸರಿನಿಂದ ಗುರುತಿಸುತ್ತಾರೆ. ಪರಶುರಾಮ ನಿರ್ಮಿತ ಎಂದು ಹೇಳಲಾದ ಸಪ್ತಕೊಂಕಣದಲ್ಲಿ ಒಂದಾದ ಗೋವಾ ಪ್ರದೇಶಕ್ಕೆ ಇವರನ್ನು ಕರೆತರಲಾಯಿತು. ಪೋರ್ಚುಗೀಸರ ದಬ್ಬಾಳಿಕೆಯಿಂದ ಗೋವಾವನ್ನು ತ್ಯಜಿಸಿ ಕರಾವಳಿಯ ಕನ್ನಡ ನೆಲದಲ್ಲಿ ನೆಲದಲ್ಲಿ, ಕೇರಳದ ಕೊಚ್ಚಿಯವರೆಗೂ ನೆಲೆನಿಲ್ಲುತ್ತಾರೆ.

ಸಾರಸ್ವತರ ಭಾಷೆ

ಭಾರತ ಸಾವಿರಾರು ಭಾಷೆಗಳ ಬೀಡು. ಆ ಭಾಷೆಗಳ ಸಾಲಿನಲ್ಲಿ ಕೊಂಕಣಿಯೂ ಒಂದು. ಈ ಭಾಷೆಯನ್ನು ಸಾರಸ್ವತರು 'ಸರಸ್ವತೀ ನದಿಯ ತೀರದಲ್ಲಿರದ ಬ್ರಹ್ಮಾವರ್ತದಲ್ಲಿರುವಾಗ ಸಾರಸ್ವತರು 'ಸರಸ್ವತೀ ಭಾಷೆ'ಯನ್ನು ಬಳಸುತ್ತಿದ್ದರು. ಈ ಭಾಷೆ ಸಂಸ್ಕೃತದ ಸುಲಭ ರೂಪ ಪ್ರಾಕೃತವಾಗಿದೆ. ಮಾಗಧಿ ಅಥವಾ ಅರ್ಧಮಾಗದಿ ಪ್ರಾಕೃತದ ಒಂದು ಕವಲು ಎನ್ನಬಹುದು. ಇದೇ ಮುಂದೆ ಕೊಂಕಣಿ ಭಾಷೆಯಾಯಿತು'. (ಕೊಂಕಣಿ ಭಾಸ್ ಆನಿ ಸಂಸ್ಕೃತಿ–20, ಅಂತೊನ್ ಆ ಸಲ್ದನ್)

ಕೊಂಕಣದ ವ್ಯಾಪ್ತಿಯು ಗೋವಾ ಮತ್ತು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ, ಅರಬ್ಬೀ ಸಮುದ್ರ ಮತ್ತು ಸಹ್ಯಾದ್ರಿ ಶ್ರೇಣಿಯ ನಡುವಣ ಕರಾವಳಿ ಪ್ರದೇಶ. ಈ ಪ್ರದೇಶದವರ ಭಾಷೆ ಕೊಂಕಣಿ. 1976ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಕೊಂಕಣಿ ಒಂದು ಸ್ವತಂತ್ರ ಭಾಷೆ ಎಂದು ಘೋಷಿಸಿತು. ಇದಕ್ಕಾಗಿ ಸುನಿತ್ ಕುಮಾರ್ ಚಟರ್ಜಿ, ಜಾನ್ ಮುರ್ರೆ ಮಿಶೆಲ್, ಗರ್ಸನ್ ದ ಕುನ್ಹಾ ಮುಂತಾದ ವಿದ್ವಾಂಸರು ಸೇರಿ ಕೊಂಕಣಿ ಮರಾಠಿಯಿಂದ ಹುಟ್ಟಿದ ಉಪಭಾಷೆಯಲ್ಲ ಬದಲಾಗಿ ಸ್ವತಂತ್ರ ಭಾಷೆ ಎಂಬ ವಾದಮಂಡಿಸಿದರು. ಇಂಡೋ ಯುರೋಪಿಯನ್ನು ಭಾಷಾಪರಿವಾರದ ವಾಯುವ್ಯ ಪಂಗಡಕ್ಕೆ ಸೇರಿದ ಭಾಷೆ

ಕೊಂಕಣಿಯಾಗಿದೆ. ಯಾವುದೇ ಸ್ವತಂತ್ರ ಲಿಪಿ ಇಲ್ಲದ ಕಾರಣ ಗೋವೆಯಲ್ಲಿ ಕದಂಬರ ಆಡಳಿತ ಕಾಲದಲ್ಲಿ 11ನೇ ಶತಮಾನದಲ್ಲಿ ಕನ್ನಡ ಲಿಪಿಯಲ್ಲಿ ಬರೆಯಲು ಪ್ರೋತ್ಸಾಹ ನೀಡಿದರು. ತದನಂತರದಲ್ಲಿ ದೇವನಾಗರಿ ಲಿಪಿಯಲ್ಲಿ ಬರವಣಿಗೆಯ ಲಿಪಿಯಲ್ಲಿ ಗೋವಾದಲ್ಲಿ ಬಳಕೆಗೆ ಬಂತು. ಆದರೆ ಕೊಂಕಣಿಗೆ ಸ್ವತಂತ್ರ ಲಿಪಿ ಇಲ್ಲದ ಕಾರಣ ಸ್ಥಳೀಯ ಭಾಷೆಯಲ್ಲಿ ಬರವಣಿಗೆಯ ಲಿಪಿಯನ್ನು ಬಳಸಲಾಗುತ್ತದೆ,

ಕೊಂಕಣಿ ಭಾಷೆಯಲ್ಲಿ 17 ಪ್ರಭೇಧಗಳಿವೆ : ಭಟ್ಕಳಿ, ನವಾಯ್ತಿ, ಗೌಡಸಾರಸ್ವತ, ಕೊಂಕಣಿ, ಕುಡುಬಿ, ಕೊಬ್ಬಿಲಿ, ಕಾರ್ವಾರಿ, ಚೆಟ್ಟಭಾಷಾ, ಗೌಡ ಪ್ರಾಕೃತ, ದಾಲ್ದಿ, ಕೊರ್ಲಿಣಿ, ಫಿರಂಗಿ, ಕಾಂಗೋಣಿ, ಮೋಪಣ್, ಮಾಲ್ವಾಣಿ, ಗೋವಾನೀಜ್, ಕಾಂಗೊಣಿ ಮುಂತಾದ ಪ್ರಭೇಗಳಿವೆ. ಆದರೆ ಭಾಷಾಶಾಸ್ತ್ರಜ್ಞರ ಪ್ರಕಾರ ಕೇರಳೀ, ಕಾರ್ವಾರಿ, ಮಂಗ್ಳೂರೀ, ಬಾಹರ್ದೇಶೀ, ಶಷ್ಟೀ, ಕೋಡಿಯಾಳೀ, ಅಂತ್ರೂಝಿ ಎನ್ನುವ ಏಳು ಪ್ರಭೇದಗಳನ್ನು ಮಾತ್ರ ಗುರುತಿಸಲಾಗಿದೆ. ಪ್ರದೇಶಕ್ಕೆ ಅನುಗುಣವಾಗಿ ಈ ಭಾಷೆಗಳು ಬಳಕೆಯಲ್ಲಿವೆ. ಉದಾಹರಣೆಗೆ:ಮಂಗ್ಳೂರೀಯೂ–ಮಂಗಳೂರಿನಲ್ಲಿ, ಕಾರ್ವಾರಿಯು ಕಾರವಾರದಲ್ಲಿ, ಶಷ್ಟಿಯು ಗೋವೆಯ ಭಾಗದಲ್ಲಿ ಬಳಕೆಯಲ್ಲಿದೆ.

ಕರಾವಳಿಯಲ್ಲಿ ಕೊಂಕಣಿ ಭಾಷೆ :

ಕರಾವಳಿಯಲ್ಲಿ ಕೊಂಕಣಿ ಭಾಷೆಯನ್ನು ಗೌಡಸಾರಸ್ವತರು, ರಾಜಪುರಿ ಸಾರಸ್ವತರು, ಸಾರಸ್ವತರು, ರೋಮನ್ ಕೆಥೋಲಿಕರು ತಮ್ಮ ಮನೆಮಾತಾಗಿ ಬಳಸುತ್ತಾರೆ. ಆದರೆ ಇವರ ಆಡುಮಾತಿನೊಳಗೆ ಹಲವು ಬಗೆಯ ವ್ಯತ್ಯಾಸಗಳಿವೆ. ಸಾರಸ್ವತರ ಹಾಗೂ ಗೌಡಸಾರಸ್ವತರ ಕೊಂಕಣಿಯಲ್ಲಿ ಸಂಸ್ಕೃತ ಶಬ್ದ ಸೇರಿಕೊಂಡಿದ್ದರೆ, ರಾಜಪುರಿ ಸಾರಸ್ವತರ ಕೊಂಕಣಿಯಲ್ಲಿ ಮರಾಠಿ ಶಬ್ದಗಳ ಬಳಕೆಯ ಅಧಿಕವಾಗಿದೆ. ಅದೇ ರೀತಿ ರೋಮನ್ ಕೆಥೋಲಿಕರ ಕೊಂಕಣಿಯಲ್ಲಿ ಪೋರ್ಚುಗೀಸ್ ಭಾಷೆಯ ಪ್ರಭಾವ ಉದಾಹರಣೆಗೆ

ಕೊಂಕಣಿ	**ಸಂಸ್ಕೃತ**	**ಕನ್ನಡ**	**ಮರಾಠಿ**	**ರೋಮನ್ ಕ್ಯಾಥೋಲೀಕ್**
ಬಾಪಯ	ಪಿತಾ	ತಂದೆ	ಬಾಪ	ಬಾಪಾಯ್
ವಯಿ	ಮಾತಾ	ತಾಯಿ	ಆಯಿ	ಮಾಂಯ್
ಚಲ್ಲೊ	ಚೇಟಃ	ಮಗ	ಮುಲಗಾ	ಪುತೋ
ಮನುಷು	ಮಾನವ	ಮನುಷ್ಯ	ಮನುಷ್ಯ	ಮನೀಸ್

ಕರಾವಳಿಯಲ್ಲಿ ಕನ್ನಡ ಕೊಂಕಣಿ ಭಾಷಾ ಬಾಂಧವ್ಯ

ಕರಾವಳಿಯಲ್ಲಿ ಕೊಂಕಣಿ ಭಾಷೆ ಮತ್ತು ಕನ್ನಡ ಲಿಪಿಯ ನಡುವಿನ ಸಂಬಂಧವು ಕೇವಲ ಅಕ್ಷರಗಳ ಜೋಡಣೆಯಲ್ಲ, ಅದು ಎರಡು ಸಂಸ್ಕೃತಿಗಳ ನಡುವಿನ ಸಂಬಂಧ.

ಕೊಂಕಣಿ ಭಾಷೆಗೆ ತನ್ನದೇ ಪ್ರತ್ಯೇಕ ಲಿಪಿ ಇಲ್ಲದಿದ್ದರೂ ಕರಾವಳಿಯಲ್ಲಿ ಕನ್ನಡ ಲಿಪಿಯನ್ನು ಅಪ್ಪಿಕೊಂಡಿದೆ.

ಕೊಂಕಣಿ ಇಂಡೋ ಆರ್ಯನ್ ಭಾಷಾ ಪರಿವಾರಕ್ಕೆ ಸೇರಿದರೆ, ಕನ್ನಡ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದೆ. ಗೋವಾದಿಂದ ಕರಾವಳಿಗೆ ವಲಸೆ ಬಂದಾಗ ಅವರಿಗೆ ಆಶ್ರಯ ನೀಡಿದ್ದು ಕನ್ನಡದ ಮಣ್ಣು. ಈ ಸಂದರ್ಭದಲ್ಲಿ ಕೊಂಕಣಿ ಭಾಷೆಯ ಉಳಿಸಿಕೊಳ್ಳಲು ಸ್ಥಳೀಯ ಕನ್ನಡ ಭಾಷೆ,ಲಿಪಿಯನ್ನು ಬಳಸಿಕೊಂಡರು. ಇದು ಅಂದಿನಿಂದ ಇಂದಿನವರೆಗೂ ಸಹಬಾಳ್ವೆಯ ಸಂಕೇತವಾಗಿದೆ.

ಗೌಡ ಸಾರಸ್ವತ ಕೊಂಕಣಿಯಲ್ಲಿ ಸಂಸ್ಕೃತದೊಂದಿಗೆ ನಂಟು

ಕೊಂಕಣಿಯು ಇಂಡೋ–ಆರ್ಯನ್ ಭಾಷಾ ವರ್ಗಕ್ಕೆ ಸೇರಿದ್ದರೂ, ಈ ಭಾಷೆಗಳ ಮೂಲ ಸಂಸ್ಕೃತ. ಕೊಂಕಣಿ ಭಾಷೆಯ ಶಬ್ದಕೋಶದಲ್ಲಿ ಹೆಚ್ಚಿನ ಪದಗಳು ನೇರವಾಗಿ ಸಂಸ್ಕೃತದಿಂದ ಅಥವಾ ಸಂಸ್ಕೃತದ ರೂಪಾಂತರವಾಗಿ ಬಂದಿವೆ. ಕರಾವಳಿಯಲ್ಲಿ ನೆಲೆಸಿದ್ದರಿಂದ ದ್ರಾವಿಡ ಭಾಷೆಗಳಾದ ಕನ್ನಡ ಮತ್ತು ತುಳುವಿನ ಪ್ರಭಾವಕ್ಕೆ ಒಳಗಾಗಿದೆ.

ಸಂಸ್ಕೃತ ಭಾಷೆಯ ಪ್ರಭಾವ

1. ಕ್ರಿಯಾಪದಗಳ ಮೂಲ

ಕೊಂಕಣಿಯ ಕ್ರಿಯಾಪದಗಳು ಸಂಸ್ಕೃತದ 'ಧಾತು'ಗಳಿಂದಲೇ ಹುಟ್ಟಿವೆ.

ಸಂಸ್ಕೃತ **ಕೊಂಕಣಿ**

ಖಾದತಿ (ತಿನ್ನುವುದು) –> ಖಾತ್ತಾ

ಪಶ್ಯತಿ (ನೋಡುವುದು) –> ಪಳಯ್ತಾ

ಕರೋತಿ (ಮಾಡುವುದು) –> ಕರ್ತಾ

ಗಚ್ಛತಿ (ಹೋಗುವುದು) –> ಗೆಲ್ಲೊ (ಹೋದ)

2. ಸರ್ವನಾಮಗಳು

ದೈನಂದಿನ ಸಂಭಾಷಣೆಯಲ್ಲಿ ಬಳಸುವ ಸರ್ವನಾಮಗಳು ಸಂಸ್ಕೃತಕ್ಕೆ ಬಹಳ ಹತ್ತಿರವಾಗಿವೆ:

ಸಂಸ್ಕೃತ **ಕೊಂಕಣಿ**

ಅಹಮ್ (ನಾನು) –> ಹಾಂವ್.

ತ್ವಮ್ (ನೀನು) –> ತೂ.

ವಯಮ್ (ನಾವು) –> ಆಮಿ.

3. ಸಂಬಂಧ ವಾಚಕಗಳು

ಕುಟುಂಬದ ಸಂಬಂಧಗಳನ್ನು ಸೂಚಿಸುವ ಪದಗಳಲ್ಲಿ ಸಂಸ್ಕೃತದ ಛಾಪು

ದಟ್ಟವಾಗಿದೆ:

ಸಂಸ್ಕೃತ ಕೊಂಕಣಿ

ಪಿತೃ –> ಬಾಪೂಸು / ಬಾಪಯ್.

ಮಾತೃ –> ಆಮ್ಮ / ಆವಯ್.

ಭ್ರಾತೃ –> ಭಾವ್.

ಜಾಮಾತೃ (ಅಳಿಯ) –> ಜಾವಂಯ್.

4. ವಿಶಿಷ್ಟ ಉಚ್ಚಾರಣಾ ಶೈಲಿ

ಗೌಡ ಸಾರಸ್ವತರ ಕೊಂಕಣಿಯಲ್ಲಿ ಸಂಸ್ಕೃತದ ದೀರ್ಘ ಸ್ವರಗಳು ಮತ್ತು ಒತ್ತಕ್ಷರಗಳ ಬಳಕೆ ಹೆಚ್ಚಾಗಿ ಕಂಡುಬರುತ್ತದೆ. ಇತರ ಕೊಂಕಣಿ ಉಪಭಾಷೆಗಳಿಗೆ (ಉದಾಹರಣೆಗೆ ಕ್ರೈಸ್ತ ಕೊಂಕಣಿ) ಹೋಲಿಸಿದರೆ, ಗೌಡಸಾರಸ್ವತ ಕೊಂಕಣಿಯಲ್ಲಿ ಸಂಸ್ಕೃತ ಮೂಲದ ಶಬ್ದಗಳು ಅದರ ಮೂಲ ರೂಪಕ್ಕೆ ಹೆಚ್ಚು ಹತ್ತಿರವಾಗಿರುತ್ತವೆ.

5. 'ಶಿಷ್ಟ' ಭಾಷೆಯ ಬಳಕೆ

ಗೌಡ ಸಾರಸ್ವತರು ಮನೆಯಲ್ಲಿ ಮಾತನಾಡುವಾಗ ಸಂಸ್ಕೃತ ಮೂಲದ ಪದಗಳನ್ನೇ ಹೆಚ್ಚು ಬಳಸುತ್ತಾರೆ. ಉದಾಹರಣೆಗೆ:

ಮನೆಯನ್ನು 'ಘರ್' (ಗೃಹ)

ನೀರನ್ನು 'ಉದಕ್' (ಉದಕ)

ಊಟವನ್ನು 'ಜೇವಣ್' (ಜೇಮನ)

6. ವಿಭಕ್ತಿ ಪ್ರತ್ಯಯಗಳು

ಸಂಸ್ಕೃತದ ಎಂಟು ವಿಭಕ್ತಿಗಳ ಪ್ರಭಾವ ಕೊಂಕಣಿಯ ಮೇಲೆ ಪ್ರಭಾವವಿದೆ. ನಾಮಪದಗಳ ರೂಪಾಂತರಗೊಳ್ಳುವ ರೀತಿ ಸಂಸ್ಕೃತವನ್ನು ಹೋಲುತ್ತದೆ.

ಸಂಸ್ಕೃತ ಕೊಂಕಣಿ

ರಾಮಸ್ಯ (ರಾಮನ) –> ರಾಮಾಲೊ / ರಾಮಾಚೊ.

ಗೃಹೇ (ಮನೆಯಲ್ಲಿ) –> ಘರಾಂತು.

7. ತತ್ಸಮ ಕ್ರಿಯಾಪದಗಳ ನೇರ ಬಳಕೆ

ಗೌಡಸಾರಸ್ವತ ಕೊಂಕಣಿಯಲ್ಲಿ ಸಂಸ್ಕೃತದ ಮೂಲ ಧಾತುಗಳು ಹಾಗೆಯೇ ಇವೆ:

ಸಂಸ್ಕೃತ ಕೊಂಕಣಿ

ಲಿಖತಿ (ಬರೆಯುವುದು) –> ಲಿಖ್ತಾ.

ಗಾಯತಿ (ಹಾಡುವುದು) –> ಗಾಯ್ತಾ.

ಪಿಬತಿ (ಕುಡಿಯುವುದು) –> ಪಿಯೆತಾ.

ಸ್ಮರತಿ (ನೆನಪಿಸಿಕೊಳ್ಳುವುದು) –> ಉಡಾಸು ಯೆತಾ (ಸ್ಮರಣೆ/ಉದಾಸ).

8. ಅಂಕಿಸಂಖ್ಯೆಗಳ ವೈಶಿಷ್ಟ್ಯ

ಕೊಂಕಣಿಯಲ್ಲಿ 1 ರಿಂದ 100 ರವರೆಗಿನ ಸಂಖ್ಯೆಗಳನ್ನು ಹೇಳುವ ಕ್ರಮವು ಸಂಸ್ಕೃತದ 'ಗಣಿತ' ಪದ್ಧತಿಯನ್ನೇ ಅನುಸರಿಸುತ್ತದೆ.

ಸಂಸ್ಕೃತ –> ಕೊಂಕಣಿ

ಏಕಾದಶ (11) –> ಇಕ್ರಾ.

ಪಂಚವಿಂಶತಿ (25) –> ಪಂಚವಿಸ್ .

ಸಪ್ತತಿ (70) –> ಸತ್ತರ್.

9. ಸಮಯ ಮತ್ತು ಕಾಲದ ಪರಿಕಲ್ಪನೆ

ಸಮಯವನ್ನು ಸೂಚಿಸುವ ಪದಗಳು ಸಂಸ್ಕೃತದ ಕಾಲಗಣನೆಯಿಂದ ಬಂದಿವೆ:

ಸಂಸ್ಕೃತ: ಅದ್ಯ (ಇಂದು) –> ಕೊಂಕಣಿ: ಆಜಿ.

ಸಂಸ್ಕೃತ: ಶ್ವಃ (ನಾಳೆ) –> ಕೊಂಕಣಿ: ಫಾಲ್ಯಾಂ

ಸಂಸ್ಕೃತ: ಸಂಧ್ಯಾಕಾಲ –> ಕೊಂಕಣಿ: ಸಾಂಜೇಚೆ.

10. ವಿಶೇಷಣಗಳು

ವಸ್ತುವಿನ ಗುಣವನ್ನು ವಿವರಿಸುವಾಗ ಬಳಸುವ ಪದಗಳು ಹೆಚ್ಚು 'ಸಂಸ್ಕೃತ'ವಾಗಿವೆ:

ಶುದ್ಧ (Clean) –> ನಿತಳ್ / ಶುದ್ಧ್.

ಉಷ್ಣ (Hot) –> ಹುನ್ / ಉಷ್ಣ್.

ಶೀತ (Cold) –> ಶೀತಳ್ / ತಾಂಡ್.

ಗೌಡಸಾರಸ್ವತ ಕೊಂಕಣಿಯ ಭಾಷೆಗಳ ಮೇಲೆ ಕನ್ನಡ ಮತ್ತು ತುಳು ಭಾಷೆಗಳ ಪ್ರಭಾವ ಕರ್ನಾಟಕದ ಕರಾವಳಿಯಲ್ಲಿ (ಅವಿಭಜಿತ ದಕ್ಷಿಣ ಕನ್ನಡ) ನೆಲೆಸಿದ ಕೊಂಕಣಿ ಭಾಷೆಯ ಮೇಲೆ ಈ ಕೆಳಗಿನ ಪ್ರಭಾವಗಳು:

ದೈನಂದಿನ ಸಂಭಾಷಣೆಯಲ್ಲಿ ಬಳಸುವ ಅನೇಕ ಪದಗಳು ಕನ್ನಡದಿಂದ ಬಂದಿವೆ.

ಉದಾಹರಣೆಗೆ: ಕನ್ನಡದ 'ಬೇಗ', 'ಬೇರೆ', 'ಗೊತ್ತು' ಎಂಬ ಪದಗಳನ್ನು ಕೊಂಕಣಿ ಮಾತನಾಡುವವರು ಯಥಾವತ್ತಾಗಿ ಬಳಸುತ್ತಾರೆ.

ಪ್ರತ್ಯಯಗಳ ಬಳಕೆ: ನಾಮಪದಗಳಿಗೆ ಹೆಚ್ಚು ವಿಭಕ್ತಿ ಪ್ರತ್ಯಯಗಳು ಕನ್ನಡದ ಮಾದರಿಯನ್ನು ಅನುಸರಿಸುತ್ತವೆ.

ಕನ್ನಡದ 'ಗೆ' (ಮನೆಗೆ) ಪ್ರತ್ಯಯವು ಕೊಂಕಣಿಯಲ್ಲಿ 'ಕಾ' (ಘರಾಕಾ) ಅಥವಾ

'ಕ್' (ಫರಾಕ್) ಎಂಬ ರೂಪ ಪಡೆದಿದೆ.

ಧ್ವನಿ ವ್ಯತ್ಯಾಸ: ದ್ರಾವಿಡ ಭಾಷೆಗಳಲ್ಲಿರುವ 'ಳ' ಮತ್ತು 'ಣ' ಕಾರಗಳ ಉಚ್ಚಾರಣೆ ಕೊಂಕಣಿಯಲ್ಲೂ ಇದೆ.

'ಕೊಂಕಣಿ' ಭಾಷೆಯ ಪ್ರಾಚೀನತೆಯ ಕುರಿತು ಶಾಸನದ ಉಲ್ಲೇಖಗಳು:

1.ಕ್ರಿ.ಶ. 2ನೆಯ ಶತಮಾನದ ಗೋವೆಯ 'ಅರವಲೆ ಶಾಸನ'ದಲ್ಲಿ 'ಸಾಚಿಪುರಾಚಾ ಶಿರಾಚೀ', ಅಂದರೆ 'ಸಾಚಿಪುರದ ತುದಿಯಲ್ಲಿ' ಎಂಬ ಶಾಸನದಲ್ಲಿ 'ಚಾ' ಎಂಬುದು ಕೊಂಣಿಯ ಅಂತ್ಯ ಪ್ರತ್ಯಯ ಎಂದು ಗುರುತಿಸಲಾಗಿದೆ.

2.ಕ್ರಿ.ಶ 1116–17ರ ಶ್ರವಣಬೆಳಗೊಳದ ಗೊಮ್ಮಟನ ಪಾದದಲ್ಲಿರುವ 'ಶ್ರೀ ಚಾವುಂಡರಾಯ ಕರವಿಯಾಲೆಂ' ಎಂಬ 'ಕರವಿಯಾಲೆಂ' (ಮಾಡಿಸಿದ) ಎಂಬ ಶಬ್ದ 'ಯಾ' ಎಂಬ ಪ್ರೇರಣಾರ್ಥಕ ಪ್ರತ್ಯಯವಿದ್ದು ಅದು ಕೊಂಕಣಿಯದ್ದು.

3.1166ರ ಶಿಲಾಹರ ರಾಜ ಅಪರಾದಿತ್ಯನ ಶಾಸನದಲ್ಲಿ ಸಂತ ನಾಮದೇವನ ಕಾವ್ಯದಲ್ಲಿ ಶ್ರೀ ಚಕ್ರಧರ ಸ್ವಾಮಿಯ 'ಲೀಲಾ ಚರಿತ'ದಲ್ಲಿ ಜ್ಞಾನದೇವನ 'ಜ್ಞಾನೇಶ್ವರಿ'ಯಲ್ಲಿ ವಿಪುಲವಾದ ಕೊಂಕಣಿ ಶಬ್ದಗಳು ದೊರಕುತ್ತವೆ.

ಕೊಂಕಣಿ ಭಾಷೆಗೆ ಸಂವಿಧಾನದಲ್ಲಿ ಮನ್ನಣೆ

ಭಾರತದ ಸಂವಿಧಾನದಲ್ಲಿ ಗುರುತಿಸಲ್ಪಟ್ಟ 22 ಭಾಷೆಗಳಲ್ಲಿ ಕೊಂಕಣಿ ಭಾಷೆಯೂ ಒಂದು. ಇದು ಸಂವಿಧಾನದ ಎಂಟನೇ ಪರಿಚ್ಚೇದಕ್ಕೆ 1992 ಆಗಸ್ಟ್ 20 ರಂದು ಸೇರ್ಪಡೆಗೊಂಡಿತು. ಈ ದಿನವನ್ನು 'ಕೊಂಕಣಿ ಮಾನ್ಯತಾ ದಿನ'ವೆಂದು ಆಚರಿಸಲಾಗುತ್ತದೆ. ಕೊಂಕಣಿ ಭಾಷಿಕರು ಹೆಚ್ಚು ಸಂಖ್ಯೆಯಲ್ಲಿ ಕರ್ನಾಟಕದಲ್ಲಿದ್ದಾರೆ ಎಂಬ ಕಾರಣಕ್ಕೆ 1994ರಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿ ಎಂಬ ಸ್ವಾಯತ್ತ ಸಂಸ್ಥೆಯನ್ನು ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿ ಬೆಳವಣಿಗೆಗಾಗಿ ಆರಂಭಿಸಿತು.

2. ಗೌಡಸಾರಸ್ವತರ ಅಸ್ಮಿತೆಯ ಆಧಾರ ಸ್ತಂಭಗಳು

ಕರಾವಳಿಯ ಗೌಡಸಾರಸ್ವತರ ಕುಲದೇವತಾ ಮತ್ತು ಇಷ್ಟದೇವತಾ ಆರಾಧನೆ (ವೆಂಕಟರಮಣ). ಮತ್ತು ಗೋವಾದ ಮೂಲ ದೇವಾಲಯಗಳೊಂದಿಗಿನ ಸಂಬಂಧ:

ಗೌಡ ಸಾರಸ್ವತರಿಗೆ ಕುಲದೇವರು ಅವರ ಅಸ್ತಿತ್ವದ ಸ್ವರೂಪ. ಗೋವಾದಿಂದ ವಲಸೆ ಬಂದ ನಂತರ, ಇಂದಿಗೂ ಕುಲದೇವರನ್ನು ಆರಾಧನೆಯನ್ನು ಮಾಡುತ್ತಾ ಬಂದಿದ್ದಾರೆ. ಯಾವ ಕುಟುಂಬಕ್ಕೆ ಯಾವ ದೇವರು ಕುಲದೇವರೂ ಆ ಕುಟುಂಬದವರವರನ್ನು ಆ ದೇವರ 'ಕುಳಾವಿ' ಎಂದು ಕರೆಯಲಾಗುತ್ತದೆ. ವರ್ಷಕ್ಕೊಮ್ಮೆ ಗೋವಾದ ಮೂಲ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುವುದು ಹಿರಿಯರಿಂದ ನಡೆದುಕೊಂಡು ಬಂದಿದೆ. ಉದಾ:

ಮಂಗೇಶಿ, ನಾಗೇಶಿ, ಶಾಂತದುರ್ಗ, ವಿಜಯದುರ್ಗ, ಮಹಾಲಸಾ ನಾರಾಯಣಿ ಮುಂತಾದ ಅನೇಕ ದೇವತಾ ಆರಾಧನೆ.

ಕರಾವಳಿಯ 'ವೆಂಕಟರಮಣ' ದೇವಸ್ಥಾನಗಳ ಸುತ್ತ ಬೆಳೆದ ಸಮುದಾಯದ ಸಾಮಾಜಿಕ ಜೀವನ.

- 16ನೇ ಶತಮಾನದಲ್ಲಿ ಗೋವಾದ ಮೇಲೆ ಪೋರ್ಚುಗೀಸರ ಆಕ್ರಮಣವಾದಾಗ, ಸಾರಸ್ವತರು ತಮ್ಮ 'ಧರ್ಮ ಮತ್ತು ಸಂಸ್ಕೃತಿ'ಯನ್ನು ಉಳಿಸಿಕೊಳ್ಳಲು ದಕ್ಷಿಣದ ಕಡೆಗೆ ವಲಸೆ ಬಂದರು. ತಮ್ಮ ಮೂಲ ನೆಲೆ ಮತ್ತು ಕುಲದೇವರನ್ನು ಬಿಟ್ಟು ಬರುವಾಗ ಅವರು ಅನುಭವಿಸಿದ ಕಷ್ಟ ಅಪಾರ. ಆ ಅನಾಥ ಪ್ರಜ್ಞೆಯ ಸಮಯದಲ್ಲಿ ಅವರಿಗೆ ಆಸರೆಯಾಗಿದ್ದು ತಿರುಪತಿಯ ವೆಂಕಟರಮಣ.
- ಗೌಡ ಸಾರಸ್ವತರ ಸಮುದಾಯದವರು ಮೂಲತಃ ಮಾಧ್ವ ಪರಂಪರೆಯನ್ನು ಅನುಸರಿಸುವವರು. ಶ್ರೀ ಮಧ್ವಾಚಾರ್ಯರು ಸ್ಥಾಪಿಸಿದ ದ್ವೈತ ಮತದಲ್ಲಿ ಹರಿ (ವಿಷ್ಣು) ಸರ್ವೋತ್ತಮ. ಈ ಪರಂಪರೆಯ ಗುರುಗಳು ವೆಂಕಟರಮಣನನ್ನು ಆಪದ್ಬಾಂಧವನಾಗಿ ಆರಾಧಿಸಲು ಪ್ರೇರೇಪಿಸಿದರು. ವಿಶೇಷವಾಗಿ ಶ್ರೀ ವಿಜಯೀಂದ್ರ ತೀರ್ಥರು ಮತ್ತು ಶ್ರೀ ಸುಧೀಂದ್ರ ತೀರ್ಥರಂತಹ ಮಹಾನ್ ಗುರುಗಳು ಈ ಸಮುದಾಯಕ್ಕೆ ವೆಂಕಟರಮಣನ ವಿಗ್ರಹಗಳನ್ನು ನೀಡಿ ಆರಾಧಿಸಲು ಸೂಚಿಸಿದರು.
- ಕಾರ್ಕಳಕ್ಕೆ ಸಂಬಂಧಿಸಿದಂತೆ ದಂತ ಕಥೆಯಿದೆ: ಗೋವಾದಿಂದ ಬಂದ ಕುಟುಂಬವೊಂದು ತನ್ನೊಂದಿಗೆ ವೆಂಕಟರಮಣನ ವಿಗ್ರಹವನ್ನು ತಂದಿತ್ತು. ಆ ಕುಟುಂಬವು ಬಡತನದಲ್ಲಿದ್ದಾಗ, ತಿರುಪತಿಯಿಂದ ಬಂದ ಸನ್ಯಾಸಿಯೊಬ್ಬರು ಆ ವಿಗ್ರಹದ ಮಹಿಮೆಯನ್ನು ತಿಳಿಸಿ, ಅದನ್ನು ಕಾರ್ಕಳದಲ್ಲಿ ಪ್ರತಿಷ್ಠಾಪಿಸಲು ದಾರಿ ಮಾಡಿಕೊಟ್ಟರು ಎನ್ನಲಾಗುತ್ತದೆ. ಹೀಗೆ ಪ್ರತಿಯೊಂದು ಊರಿನಲ್ಲೂ ವೆಂಕಟರಮಣ ತನ್ನ ಮಹಿಮೆಯನ್ನು ತೋರಿಸಿ ಸಮುದಾಯದ ರಕ್ಷಕನಾದ.
- ಗೌಡ ಸಾರಸ್ವತರು ಸಮುದಾಯವು ಮೂಲತಃ ವ್ಯಾಪಾರ-ವಹಿವಾಟಿನಲ್ಲಿ ತೊಡಗಿಸಿಕೊಂಡವರು. ವೆಂಕಟರಮಣನನ್ನು "ಲಕ್ಷ್ಮೀಪತಿ" ಎಂದು ಕರೆಯಲಾಗುತ್ತದೆ. ಈ ಸಮುದಾಯದವರು ತಮ್ಮ ವ್ಯಾಪಾರದ ಯಶಸ್ಸಿಗೆ ವೆಂಕಟರಮಣನೇ ಕಾರಣ ಎಂದು ನಂಬುತ್ತಾರೆ. ಅವರ ಲಾಭದ ಒಂದು ಪಾಲನ್ನು ದೇವರಿಗಾಗಿ ಮೀಸಲಿಡುವ ಪದ್ಧತಿ ಇದೆ.
- ಗೌಡ ಸಾರಸ್ವತರು ಗೋವಾದಿಂದ ವಲಸೆ ಬಂದಾಗ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯ ಉತ್ತುಂಗದಲ್ಲಿತ್ತು. ಆ ಕಾಲದ ಅರಸರು (ಉದಾಹರಣೆಗೆ ಕೃಷ್ಣದೇವರಾಯ)

ವೆಂಕಟರಮಣನ ಪರಮ ಭಕ್ತರಾಗಿದ್ದರು. ರಾಜಾಶ್ರಯ ಮತ್ತು ಸಾಮಾಜಿಕ ಭದ್ರತೆಗಾಗಿ ವಲಸೆ ಬಂದ ಸಮುದಾಯವು ಅಂದಿನ ಪ್ರಬಲ ದೈವವಾಗಿದ್ದ ವೆಂಕಟರಮಣನ ಆರಾಧನೆಯನ್ನು ಅಪ್ಪಿಕೊಂಡಿತು. ಇದು ಅವರಿಗೆ ಹೊಸ ಪರಿಸರದಲ್ಲಿ ಬೇಗನೆ ಬೆರೆಯಲು ಸಹಕಾರಿಯಾಯಿತು.

- ಪ್ರಾಚೀನ ಕಾಲದಲ್ಲಿ ತಿರುಪತಿಗೆ ಹೋಗುವುದು ಬಹಳ ಕಷ್ಟದ ಮತ್ತು ಅಪಾಯಕಾರಿ ಪ್ರಯಾಣವಾಗಿತ್ತು. ಆಗಿನ ಗುರುಗಳು ಭಕ್ತರ ಅನುಕೂಲಕ್ಕಾಗಿ ಮಂಗಳೂರು, ಕಾರ್ಕಳ, ಮುಲ್ಕಿ, ಕೊಚ್ಚಿ ಮುಂತಾದ ಕಡೆಗಳಲ್ಲಿ ವೆಂಕಟರಮಣನ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು. ಈ ಸ್ಥಳೀಯ ದೇವಸ್ಥಾನಗಳೇ ಅವರಿಗೆ "ಪ್ರತ್ಯಕ್ಷ ತಿರುಪತಿ"ಗಳಾದವು. ಹೀಗಾಗಿ ಸಮುದಾಯವು ಈ ದೇವಸ್ಥಾನಗಳ ಸುತ್ತಲೇ ತಮ್ಮ ಬದುಕನ್ನು ಕಟ್ಟಿಕೊಂಡಿತು.
- ಪುರಂದರದಾಸರು, ಕನಕದಾಸರಂತಹ ಹರಿದಾಸರು ವೆಂಕಟರಮಣನ ಮಹಿಮೆಯನ್ನು ಕೀರ್ತನೆಗಳ ಮೂಲಕ ಸಾಮಾನ್ಯ ಜನರಿಗೆ ತಲುಪಿಸಿದರು. ಮಾಧ್ವ ಪರಂಪರೆಯವರಾದ ಸಾರಸ್ವತರು ಈ ಕೀರ್ತನೆಗಳಿಂದ ಪ್ರಭಾವಿತರಾಗಿ, ಭಕ್ತಿ ಮಾರ್ಗದ ಮೂಲಕ ವೆಂಕಟರಮಣನಿಗೆ ಹತ್ತಿರವಾದರು.

3. ಗೌಡ ಸಾರಸ್ವತರ ಆಹಾರ ಸಂಸ್ಕೃತಿಯಲ್ಲಿ ಅಸ್ಮಿತೆ

ಗೌಡ ಸಾರಸ್ವತರ ಮನೆಗಳಲ್ಲಿ ಬೆಳಗ್ಗೆ ಅಥವಾ ಸಂಜೆ 'ಪೇಜ್'(ಗಂಜಿ) ಮುಖ್ಯ ಆಹಾರವಾಗಿ ಬಳಕೆಯಾಗುತ್ತದೆ.ಮಜ್ಜಿಗೆ ದೋಸೆ', ರಂದೋಣು(ಹುರುಳಿ,ಅಕ್ಕಿ,ಉದ್ದು ಹಾಕಿದ ಇಡ್ಡಿಯ ರೂಪ),ಸೌತೆಕಾಯಿ ಇಡ್ಲಿ/ದೋಸೆ, ಶಾವಿಗೆ ಕಾಯಿ ರಸ ಮುಂತಾದ ಆಹಾರವು ದೈನಂದಿನ ಬಳಕೆಯಲ್ಲಿವೆ. ದಾಳಿತೊಯ್'(ಬೇಳೆಸಾರು) ಕುಲದೇವರ ಸ್ಥಾನ ನೀಡಿದ್ದಾರೆ. 'ಬಿಬ್ಬೆ ಉಪ್ಕರಿ'(ಹಸಿಗೇರು ಬೀಜದ ಪಲ್ಯ), ವಲ್‌ವಲ್, ಗಜ್ಬಜ್ ಅಂಬಾಟ್ (ಮಿಶ್ರ ತರಕಾರಿ ಸಾಂಬಾರ್) ಮಾವಿನ ಮಿಡಿ ಉಪ್ಪಿನಕಾಯಿ, ವಾಗು, ಸೋಗ್(ಬಟಾಟೆ ಟೊಮೆಟೋ ಹಾಕಿದ ಪದಾರ್ಥ) ಸೊಲ್ ಕಡಿ(ಪುನರ್ಪುಳಿ ಸಾರು),ಕಡ್ಗಿಚಕ್ಕೊ (ಹಲಸಿನ ಪಲ್ಯ), ಪೋಡಿ, ಅಡ್ಡಾಯಿ(ಹಲಸಿನ ಉಪ್ಪಿನಕಾಯಿ),ಮಡ್ಗಣೆ(ಕಡ್ಲೆ ಬೇಳೆ ಪಾಯಸ), ಕಿಚಿಡಿಪೋಳೊ (ಹಯಗ್ರೀವ,ದೋಸೆ)ಮುಂತಾದ ಖಾದ್ಯಗಳು ಶುಭ ಸಮಾರಂಭಗಳಲ್ಲಿ ಮುಖ್ಯವಾಗುತ್ತದೆ. ಋತುಮಾನದ ಆಹಾರ: ಪತ್ರೊಡೆ, ಹಲಸಿನ ಹಣ್ಣಿನ ಖಾದ್ಯ, ಮಾವಿನ ಹಣ್ಣಿನ ಖಾದ್ಯ, ಬಿದಿರಿನ ಕಣೆಯ ಖಾದ್ಯ ಮುಂತಾದ ಖಾದ್ಯಗಳು ಬಳಸುತ್ತಾರೆ.

ಹಿಂಗಿನ ಬಳಕೆ: ಹೆಚ್ಚಿನ ಸಾಂಪ್ರದಾಯಿಕ ಅಡುಗೆಯಲ್ಲಿ ನೀರುಳ್ಳಿ ಬೆಳ್ಳುಳ್ಳಿ ಬಳಕೆಯಿಲ್ಲ. ಬದಲಿಗೆ ಇಂಗು ಜೀರ್ಣಕ್ರಿಯೆ ಮತ್ತು ಘಮಕ್ಕಾಗಿ ಬಳಕೆಯಲ್ಲಿದೆ.

ತೆಂಗಿನಕಾಯಿ ಬಳಕೆ: ಅಡುಗೆಯ ಪ್ರತಿಯೊಂದು ಹಂತದಲ್ಲೂ, ತೆಂಗಿನತುರಿ, ಹಾಲು,

ತೆಂಗಿನ ಎಣ್ಣೆ ಇಲ್ಲದೇ ಯಾವ ಅಡುಗೆಯೂ ಪೂರ್ಣವಾಗುವುದಿಲ್ಲ.

4. ಗೌಡಸಾರಸ್ವತರ ಸಾಹಿತ್ಯ, ಪತ್ರಿಕೋದ್ಯಮ ಮತ್ತು ಶೈಕ್ಷಣಿಕ ಕೊಡುಗೆಗಳು ಮೂಲಕ ಅಸ್ಮಿತೆ

ಕೊಂಕಣಿ ಭಾಷಿಕರು ತಮ್ಮ ಮಾತೃಭಾಷೆ ಕೊಂಕಣಿಯಾಗಿದ್ದರೂ ಕನ್ನಡ ಭಾಷೆಯನ್ನು ಸಮೃದ್ಧಗೊಳಿಸಿದರು. ಮಂಜೇಶ್ವರ ಗೋವಿಂದ ಪೈ ಇವರು ಕನ್ನಡದ ಮೊದಲ ರಾಷ್ಟ್ರಕವಿ, ಅಲ್ಲದೆ ಕನ್ನಡದಲ್ಲಿ ಪ್ರಾಸಬಿಟ್ಟು ಮೊದಲಬಾರಿಗೆ ಕವಿತೆ ಬರೆದರು. ಎಂ.ಎನ್. ಕಾಮತ್ ಅವರು ಕಥೆಗಳನ್ನು, ನಾಟಕಗಳನ್ನು ಬರೆದಿದ್ದಾರೆ. ಕುಡ್ಪಿ ವಾಸುದೇವ ಶೆಣ್ಯೈ ಕಥೆಗಳನ್ನು ಬರೆದಿದ್ದಾರೆ.

ಮಂಗಳೂರಿನ ಪತ್ರಿಕೋದ್ಯಮಕ್ಕೆ ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಇಲ್ಲಿನ ಕನ್ನಡ ಪತ್ರಿಕೋದ್ಯಮದ ಜೊತೆಗೆ ಕೊಂಕಣಿ ತನ್ನದೇ ಛಾಪು ಮೂಡಿಸಿದೆ. ಕೊಂಕಣಿ ಭಾಷೆಗೆ ಸ್ವತಂತ್ರ ಲಿಪಿ ಇಲ್ಲದ್ದರಿಂದ ಸ್ಥಳೀಯರಿಗೆ ಕನ್ನಡ ಲಿಪಿಯ ಮೂಲಕ ಕೊಂಕಣಿ ಭಾಷೆಯ ನಿಯತಕಾಲಿಕೆಯ ಮೂಲಕ ಸುದ್ಧಿ ಪ್ರಸಾರಮಾಡುವ ಕಾರ್ಯ ಈ ಪತ್ರಿಕೆಗಳು ಮಾಡುತ್ತಿದ್ದವು. ಕೊಂಕಣಿ ಭಾಷೆಯ ಕುರಿತು ಅಪಾರ ಕಾಳಜಿಯ ಮೂಲಕ ಬಿ.ವಿ ಬಾಳಿಗ ಎಂದೇ ಪ್ರಸಿದ್ಧಿ ಪಡೆದ ಬಂಟ್ವಾಳ ವಾಸುದೇವ ಬಾಳಿಗ ಅವರು 'ಪಂಚ್ಕಾದಯಿ' ಎಂಬ ಹೆಸರಿನ ಪತ್ರಿಕೆಯನ್ನು ಸಹಸಂಪಾದಕರಾಗಿ ಮಣಿಪಾಲದಿಂದ ಪ್ರಾರಂಭಿಸಿದರು. 'ಸಾರಸ್ವತ' ಎಂಬ ಪತ್ರಿಕೆಯನ್ನು ವಿ. ಎನ್. ಕುಡ್ವರ ಸಂಪಾದಕತ್ವದಲ್ಲಿ ಮಂಗಳೂರಿನಿಂದ ಪ್ರಾರಂಭಿಸಿದರು. ಅಲ್ಲದೆ ಕೊಡಿಯಾಲ್ 'ಖಬ್ಬಾರ್', 'ಮಿತ್ರ' ಮಂತಾದ ಅನೇಕ ಪತ್ರಿಕೆಗಳು ಮಂಗಳೂರಿನಿಂದ ಪ್ರಕಟವಾಗುತ್ತಿತ್ತು

ಕನ್ನಡ ಪತ್ರಿಕೋದ್ಯಮ

ಕನ್ನಡ ಪತ್ರಿಕೋದ್ಯಮದಲ್ಲಿ ಮಣಿಪಾಲದ ಟಿ.ಎಂ.ಎ. ಪೈ ಮತ್ತು ಟಿ. ಸತೀಶ್ ಪೈ ಅವರು 'ಉದಯವಾಣಿ' ಪತ್ರಿಕೆಯ ಮೂಲಕ ಕನ್ನಡ ನಾಡು–ನುಡಿಯ ರಕ್ಷಣೆಗೆ ಕೊಡುಗೆ ನೀಡಿದ್ದಾರೆ. ಕರಾವಳಿಯ ಸಾಂಸ್ಕೃತಿಕ ವಿಶೇಷತೆಗಳಿಗೆ ಈ ಪತ್ರಿಕೆಯು ದೊಡ್ಡ ವೇದಿಕೆ ಒದಗಿಸಿದೆ.

ಶೈಕ್ಷಣಿಕ ಕೊಡುಗೆಗಳು

ಕರಾವಳಿಯಲ್ಲಿ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಗೌಡ ಸಾರಸ್ವತ ಸಮುದಾಯದ ಕೊಡುಗೆ ಅಪಾರವಾದ್ದು. ಕೇವಲ ತಮ್ಮ ಸಮುದಾಯಕ್ಕೆ ಸೀಮಿತವಾಗದೆ, ಸಮಾಜದ ಎಲ್ಲಾ ವರ್ಗದವರಿಗೂ ಶಿಕ್ಷಣ ಸಿಗಬೇಕು ಎಂಬ ದೂರದೃಷ್ಟಿಯಿಂದ ಅವರು ಅನೇಕ ಸಂಸ್ಥೆಗಳನ್ನು ಕಟ್ಟಿದರು. ಮಂಗಳೂರಿನಲ್ಲಿ ಅಮ್ಮೆಂಬಳ ಸುಬ್ಬರಾಯ ಪೈ ನೇತೃತ್ವದಲ್ಲಿ

'ಕೆನರಾ ಎಜುಕೇಶನ್ ಸೊಸೈಟಿ', ಟಿ.ಎಂ.ಎ. ಪೈಯವರ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ಮಂಗಳೂರಿನಲ್ಲಿ ರಾಘವೇಂದ್ರ ರಾವ್ ಅವರ 'ಶ್ರೀನಿವಾಸ್ ಗ್ರೂಪ್' ಮುಂತಾದವುಗಳ ಮೂಲಕ ಕರಾವಳಿಯಲ್ಲಿ ತಮ್ಮ ಅಸ್ಮಿತೆಯನ್ನು ಕಂಡರು.

ಆರ್ಥಿಕ ಕ್ಷೇತ್ರ

ಭಾರತದ ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದಲ್ಲಿ ಕರಾವಳಿಯ ಗೌಡ ಸಾರಸ್ವತರ ಕೊಡುಗೆ ಅಮುಲ್ಯವಾದದ್ದು.ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು 'ಭಾರತದ ಬ್ಯಾಂಕಿಂಗ್ ಕಾಶಿ' ಎಂದು ಕರೆಯಲಾಗುತ್ತದೆ.

ಕೆನರಾ ಬ್ಯಾಂಕ್: 1906 ರಲ್ಲಿ ಮಂಗಳೂರಿನಲ್ಲಿ ಅಮ್ಮೆಂಬಳ ಸುಬ್ಬರಾವ್ ಪೈ ಅವರು ಸ್ಥಾಪಿಸಿದರು. ಇದು ಕೇವಲ ಲಾಭಕ್ಕಾಗಿ ಅಲ್ಲದೆ, ಸಮಾಜದ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಉಳಿತಾಯದ ಹವ್ಯಾಸ ಬೆಳೆಸಲು ಈ ಬ್ಯಾಂಕ್ ಮಂಗಳೂರಿನಲ್ಲಿ ಪ್ರಾರಂಭವಾಯಿತು.

ಸಿಂಡಿಕೇಟ್ ಬ್ಯಾಂಕ್ : 1925 ರಲ್ಲಿ ಉಡುಪಿಯಲ್ಲಿ ಟಿ. ಎಂ. ಎ. ಪೈ, ಉಪೇಂದ್ರ ಪೈ ಮತ್ತು ವಾಮನ್ ಕುಡ್ವ ಅವರು ಸೇರಿ ಇದನ್ನು ಸ್ಥಾಪಿಸಿದರು. 'ಪಿಗ್ಮಿ ಡಿಪಾಸಿಟ್' ಎಂಬ ದಿನಂಪ್ರತಿ ಉಳಿತಾಯ ಯೋಜನೆಯನ್ನು ಜಗತ್ತಿಗೆ ಪರಿಚಯಿಸಿದ್ದೇ ಈ ಬ್ಯಾಂಕ್. ಇದೇ ಮುಂದೆ ಕೆನರಾ ಬ್ಯಾಂಕ್ ಆಗಿ ವಿಲೀನಗೊಂಡಿತು.

5. ಗೌಡ ಸಾರಸ್ವತರ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಕೃತಿಯಲ್ಲಿ ಅಸ್ಮಿತೆ

ಗೌಡಸಾರಸ್ವತ ಸಮಾಜದ ಧಾರ್ಮಿಕ ಅಸ್ಮಿತೆಯನ್ನು ಕಾಪಾಡುವಲ್ಲಿ ಮತ್ತು ಸಮಾಜಕ್ಕೆ ಸರಿಯಾದ ದಾರಿಯನ್ನು ತೋರಿಸುವಲ್ಲಿ 'ಮಠ ಪರಂಪರೆ' ಬೆನ್ನೆಲುಬಾಗಿ ನಿಂತಿದೆ. 'ಗುರು ಇಲ್ಲದೆ ಗುರಿ ಇಲ್ಲ' ಎಂಬ ಮಾತಿನಂತೆ, ಈ ಸಮಾಜವು ತನ್ನದೇ ಆದ ಗುರು ಪರಂಪರೆಯನ್ನು ಹೊಂದಿದೆ.

ಅ) ಕಾಶೀ ಮಠ ಸಂಸ್ಥಾನ : ಸಮಾಜದ ಅತಿದೊಡ್ಡ ಅನುಯಾಯಿಗಳನ್ನು ಹೊಂದಿರುವ ಮಠ. 16ನೇ ಶತಮಾನದಲ್ಲಿ (ಸುಮಾರು 1542) ವಾರಣಾಸಿಯಲ್ಲಿ ಸ್ಥಾಪನೆಯಾಯಿತು. ಶ್ರೀ ಹನುಮಂತ ತೀರ್ಥರು ಮೊದಲ ಪೀಠಾಧಿಪತಿಗಳು. ದ್ವೈತ ಮತ (ಮಧ್ವ)ಸಂಪ್ರದಾಯದ ಅನುಯಾಯಿಗಳು. ಇವರ ಆರಾಧ್ಯ ದೈವರು ಶ್ರೀ ವ್ಯಾಸ ರಘುಪತಿ. ಈ ಮಠದ ಸ್ವಾಮೀಜಿಗಳು ಸದಾ ಸಂಚಾರಿಗಳಾಗಿದ್ದು, ಧರ್ಮ ಪ್ರಚಾರ ಮಾಡುತ್ತಾರೆ. ಪ್ರಸ್ತುತ ಶ್ರೀ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರು 21ನೇ ಪೀಠಾಧಿಪತಿಗಳಾಗಿದ್ದಾರೆ.

ಆ) ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ : ಈ ಮಠ ಸಮಾಜದ ಅತ್ಯಂತ ಹಳೆಯ ಮಠವೆಂದು ಪರಿಗಣಿಸಲ್ಪಟ್ಟಿದೆ. 15ನೇ ಶತಮಾನದಲ್ಲಿ (1475) ಗೋವಾದಲ್ಲಿ

ಶ್ರೀ ನಾರಾಯಣ ತೀರ್ಥರಿಂದ ಸ್ಥಾಪನೆಯಾಯಿತು. ದ್ವೈತ ಮತದ ಅನುಯಾಯಿ .ಆರಾಧ್ಯ ದೇವರು ಶ್ರೀರಾಮಚಂದ್ರ ಮತ್ತು ವೀರ ವಿಠ್ಠಲ. ಈ ಮಠದ ಗುರು ಪರಂಪರೆಯಲ್ಲಿ ಬರುವ 'ಜೀವೋತ್ತಮ' ಎಂಬ ಹೆಸರು ಬಹಳ ಪ್ರಸಿದ್ಧ. ಪ್ರಸ್ತುತ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿಯವರು ಪೀಠಾಧಿಪತಿಗಳಾಗಿದ್ದಾರೆ.

ಇ) ಕವಳೆ ಮಠ (ಕೈವಲ್ಯ ಮಠ): ಈ ಮಠ ಗೌಡಸಾರಸ್ವತರ ಮೂಲ ಮಠವಾಗಿದ್ದು, ಸ್ಮಾರ್ತ ಸಂಪ್ರದಾಯವನ್ನು ಪಾಲಿಸುತ್ತದೆ. ಆದಿ ಶಂಕರಾಚಾರ್ಯರ ಕಾಲಕ್ಕಿಂತಲೂ ಹಿಂದಿನದು ಎನ್ನಲಾಗುತ್ತದೆ. ಶ್ರೀ ವಿವೇಕಾನಂದ ಸರಸ್ವತಿ (ಗೌಡಪಾದಾಚಾರ್ಯರ ಪರಂಪರೆ) ಅದ್ವೈತ ವೇದಾಂತ. ಆರಾಧ್ಯ ದೇವರು ಶ್ರೀ ಶಾಂತಾದುರ್ಗಾ ಮತ್ತು ಶ್ರೀ ಮಂಗೇಶ. ಪೀಠಾಧಿಪತಿಗಳನ್ನು 'ಶ್ರೀಮದ್ ಗೌಡಪಾದಾಚಾರ್ಯ' ಎಂದು ಕರೆಯಲಾಗುತ್ತದೆ. ಪ್ರಸ್ತುತ ಶ್ರೀ ಶಿವಾನಂದ ಸರಸ್ವತಿ ಸ್ವಾಮೀಜಿಯವರು 77ನೇ ಪೀಠಾಧಿಪತಿಗಳು.

ಭಜನೆಗಳ ಮೂಲಕ ದೇವರ ಸ್ಮರಣೆ

ಗೌಡಸಾರಸ್ವತ ಸಮುದಾಯಕ್ಕೂ ಮತ್ತು ಭಜನಾ ಸಂಪ್ರದಾಯಕ್ಕೂ ಅವಿನಾಭಾವ ಸಂಬಂಧವಿದೆ. ಸಾರಸ್ವತರು ತಮ್ಮ ದೈನಂದಿನ ಜೀವನದಲ್ಲಿ ಭಜನೆಗೆ ಅತ್ಯಂತ ಹೆಚ್ಚಿನ ಭಕ್ತಿ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ನೀಡುತ್ತಾರೆ.

ಭಜನೆಯ ಶೈಲಿ ಮತ್ತು ಭಾಷೆ

ಸಾರಸ್ವತರ ಭಜನೆಗಳು ಕೇವಲ ಒಂದು ಭಾಷೆಗೆ ಸೀಮಿತವಾಗಿಲ್ಲ. ಇವರು ಬಹುಭಾಷಾ ಪ್ರವೀಣರಾದ್ದರಿಂದ ಅವರ ಭಜನೆಗಳಲ್ಲಿ ವೈವಿಧ್ಯತೆ ಕಾಣಬಹುದು:

ಕೊಂಕಣಿ: ತಮ್ಮ ಮಾತೃಭಾಷೆಯಾದ ಕೊಂಕಣಿಯಲ್ಲಿ ಭಜನೆಗಳನ್ನು ಹಾಡುತ್ತಾರೆ.

ಕನ್ನಡ: ಕರಾವಳಿಯಲ್ಲಿ ನೆಲೆಸಿರುವುದರಿಂದ ದಾಸ ಸಾಹಿತ್ಯದ (ಪುರಂದರದಾಸರು, ಕನಕದಾಸರು) ಪ್ರಭಾವ ಹೆಚ್ಚಿದೆ.

ಮರಾಠಿ: ತುಕಾರಾಂ, ನಾಮದೇವ್ ವಿರಚಿತ ಭಜನೆ ಮುಖ್ಯವಾಗಿದೆ.

ಸಂಸ್ಕೃತ: ದೇವರ ಸ್ತೋತ್ರಗಳು ಮತ್ತು ನಾಮಾವಳಿಗಳನ್ನು ಪಠಿಸುತ್ತಾರೆ.

ಭಜನಾ ಸಪ್ತಾಹ ಮತ್ತು ಉತ್ಸವಗಳು

ಸಾರಸ್ವತರು ನೆಲೆಸಿರುವ ದೇವಸ್ಥಾನಗಳಲ್ಲಿ (ಉದಾಹರಣೆಗೆ ಮಂಗಳೂರು, ಕಾರ್ಕಳ, ಉಡುಪಿ, ಮುಂತಾದೆಡೆ) 'ಭಜನಾ ಸಪ್ತಾಹ' ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಅಖಂಡ ಭಜನೆ 7 ದಿನಗಳ ಕಾಲ ಅಥವಾ 24 ಗಂಟೆಗಳ ಕಾಲ ನಿರಂತರವಾಗಿ ಭಜನೆ ಮಾಡುವ ಪದ್ಧತಿ ಹಲವೆಡೆ ಇದೆ. ಕಾರ್ತಿಕ ಮಾಸದಲ್ಲಿ ತುಳಸಿ ಪೂಜೆ ಮತ್ತು ದೀಪೋತ್ಸವದ ಜೊತೆಗೆ ಭಜನೆಗೆ ವಿಶೇಷ ಒತ್ತು ನೀಡಲಾಗುತ್ತದೆ.

ಪ್ರಮುಖ ವಾದ್ಯಗಳು

ಸಾರಸ್ವತ ಭಜನೆಗಳಲ್ಲಿ ಸರಳತೆ ಮತ್ತು ಲಯಕ್ಕೆ ಆದ್ಯತೆ. ಸಾಮಾನ್ಯವಾಗಿ ಬಳಸುವ ವಾದ್ಯಗಳೆಂದರೆ:

ತಾಳ: ಪ್ರತಿಯೊಬ್ಬ ಭಜನಾಕಾರನ ಕೈಯಲ್ಲೂ ತಾಳವಿರುತ್ತದೆ.

ಹಾರ್ಮೋನಿಯಂ: ಶ್ರುತಿ ಮತ್ತು ರಾಗಕ್ಕಾಗಿ.

ಮೃದಂಗ ಅಥವಾ ತಬಲ: ಲಯಬದ್ಧವಾದ ತಾಳಕ್ಕಾಗಿ.

ಸಾಂಸ್ಕೃತಿಕ ಮಹತ್ವ

ಸಾರಸ್ವತರಲ್ಲಿ ಭಜನೆಯು ಕೇವಲ ದೇವೋಪಾಸನೆಯಲ್ಲ, ಅದು ಸಮುದಾಯವನ್ನು ಒಂದುಗೂಡಿಸುವ ಮಾಧ್ಯಮ.

ಮನೆ ಭಜನೆ: ವಿಶೇಷ ಸಂದರ್ಭಗಳಲ್ಲಿ ಮನೆಗಳಿಗೆ ಭಜನಾ ಮಂಡಳಿಗಳನ್ನು ಕರೆಸಿ ಭಜನೆ ಮಾಡಿಸುವುದು ಒಂದು ಸಂಪ್ರದಾಯ.

ಗೌಡ ಸಾರಸ್ವತರು ಆರಾಧಿಸುವ 'ವಿಠ್ಠಲ' (ಪಂಡರಿನಾಥ) ಭಜನಾ ಸಂಪ್ರದಾಯದ ಕೇಂದ್ರಬಿಂದು. 'ವಿಠ್ಠಲ ವಿಠ್ಠಲ ಪಾಂಡುರಂಗ' ಎಂಬ ನಾಮಸ್ಮರಣೆ ಇವರ ಭಜನೆಗಳಲ್ಲಿ ಮಧುರವಾಗಿ ಕೇಳಿಬರುತ್ತದೆ.

6. ಕರಾವಳಿಯಲ್ಲಿ ಕೊಂಕಣಿ ಭಾಷೆಯ ಸಾಹಿತ್ಯ-ಸಂಸ್ಕೃತಿಗಳ ಉಳಿವು ಬೆಳವಣಿಗೆಗಾಗಿ ನಡೆದ ಕಾರ್ಯಗಳು:

1. ಕೊಂಕಣಿ ಅಧ್ಯಯನ ಪೀಠ

ಕೊಂಕಣಿ ಅಧ್ಯಯನ ಪೀಠವು 1992ಲ್ಲಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿಯಲ್ಲಿ ಪ್ರಾರಂಭವಾಯಿತು. ಈ ಪೀಠದಲ್ಲಿ ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಅಧ್ಯಯನ ಮತ್ತು ಪ್ರಕಟಣೆ ಮಾಡಲಾಗುತ್ತದೆ.

2. 'ಪ್ರಾಥಮಿಕ ಶಾಲೆಗಳಲ್ಲಿ ಕೊಂಕಣಿ ಶಿಕ್ಷಣ'

ಪ್ರಾಥಮಿಕ ಶಾಲೆಗಳಲ್ಲಿ ಕೊಂಕಣಿ ಭಾಷೆಯ ಶಿಕ್ಷಣದ ಆರಂಭವು ಕರಾವಳಿಯ ಭಾಗದದಲ್ಲಿ ಪ್ರಮುಖ ಮೈಲಿಗಲ್ಲು. ಮಾತೃಭಾಷೆಯ ಮೂಲಕ ಶಿಕ್ಷಣ ನೀಡಬೇಕು ಎಂಬ ಕೊಂಕಣಿ ಭಾಷಿಕರ ಬೇಡಿಕೆಯ ಫಲವಾಗಿ ಕರ್ನಾಟಕ ಸರಕಾರವು 2007–08ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 6ನೇ ತರಗತಿಯಿಂದ ಕೊಂಕಣಿಯನ್ನು ಮೂರನೇ ಭಾಷೆಯಾಗಿ ಕಲಿಯಲು ಅನುಮತಿ ನೀಡಿದೆ. ಮತ್ತು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಶಿಕ್ಷಣ ಇಲಾಖೆ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುತ್ತದೆ. ಈ ಪಠ್ಯಗಳು ಕೊಂಣಿ ಭಾಷೆ, ಸಂಸ್ಕೃತಿ, ಜಾನಪದ ಮತ್ತು ಸಾಹಿತ್ಯವನ್ನು ಒಳಗೊಂಡಿದೆ. ಈ ಶಿಕ್ಷಣಕ್ಕೆ ಕನ್ನಡ ಲಿಪಿಯನ್ನು ಬಳಸಲಾಗುತ್ತದೆ.

3. ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಕೊಂಕಣಿ ಭಾಷೆಯ ಕಲಿಕೆ

ಮಂಗಳೂರು ವಿಶ್ವವಿದ್ಯಾನಿಲಯು ಪದವಿ ಕಾಲೇಜುಗಳಲ್ಲಿ 2014ರಲ್ಲಿ ಕೊಂಕಣಿಯನ್ನು ದ್ವಿತೀಯ ಭಾಷೆಯಾಗಿ ಕಲಿಯಲು ಅವಕಾಶ ಕಲ್ಪಿಸಲಾಗಿದೆ. ಕೊಂಕಣಿ ಕೇವಲ ಭಾಷೆಯಾಗಿ ಅಲ್ಲದೆ ಶೈಕ್ಷಣಿಕ ಶಿಸ್ತಾಗಿ ಬೆಳೆದಿದೆ. ಕಾಲೇಜುಗಳಲ್ಲಿ ಬಿ.ಎ, ಬಿ.ಕೋಂವ್ ಪದವಿಯಲ್ಲಿ ಭಾಷಾ ವಿಷಯುವಾಗಿ, ಐಚ್ಛಿಕ ಪಠ್ಯವಾಗಿಯೂ ಬೋಧಿಸಲಾಗುತ್ತದೆ.

4. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಕೊಂಕಣಿ ಅಧ್ಯಯನ ಪೀಠ'ದ ಸ್ಥಾಪನೆ

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 2015ರಲ್ಲಿ ಕೊಂಕಣಿ ಅಧ್ಯಯನ ಪೀಠವು ಕರ್ನಾಟಕ ಸರಕಾರದ ನೆರವಿನೊಂದಿಗೆ ಸ್ಥಾಪನೆಯಾಯಿತು. ಇದರ ಉದ್ದೇಶ ಕೊಂಕಣಿ ಸಮುದಾಯದ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಮುಂತಾದವುಗಳನ್ನು ಸಂರಕ್ಷಿಸುವ ಮತ್ತು ಅಧ್ಯಯನ ಮಾಡುವ ಉದ್ದೇಶದಿಂದ ಈ ಪೀಠ ಪ್ರಾರಂಭವಾಯಿತು.

5. ಕೊಂಕಣಿ ಭಾಷೆಯಲ್ಲಿ ಸ್ನಾತಕೋತ್ತರ ಪದವಿ

ಕೊಂಕಣಿ ಭಾಷೆಯಲ್ಲಿ ಉನ್ನತ ಸಂಶೋಧನೆ ದಾರಿ ಎನ್ನುವಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಧ್ಯಾ ಕಾಲೇಜಿನಲ್ಲಿ 2016ರಲ್ಲಿ ಕೊಂಕಣಿ ಸ್ನಾತಕೋತರ ಪದವಿ ಪ್ರಾರಂಭವಾಯಿತು. ಭಾಷಾ ಆಸಕ್ತರಿಗಾಗಿ ಮತ್ತು ಉದೋಗಸ್ಥರಿಗೆ ಅನುಕೂಲವಾಗಿದೆ.

6. ಆಕಾಶವಾಣಿ ಮೂಲಕ ಕೊಂಕಣಿ ಕಾರ್ಯಕ್ರಮ ಪ್ರಸಾರ

ಕೊಂಕಣಿ ಯುವವಾಣಿ, ಕೊಂಕಣಿ ಸೌರಭ, ಮುಂತಾದ ಕಾರ್ಯಕ್ರಮಗಳಲ್ಲಿ ಯುವ ಜನ ಸಂದರ್ಶನ, ಚರ್ಚೆ, ಹಾಡು, ಜಾನಪದ ಕಾರ್ಯಕ್ರಮಗಳ ಮೂಲಕ ಯುವಜತೆಗೆ ಪ್ರೋತ್ಸಾಹಿಸುವ ಕಾರ್ಯಕ್ರಮವಾಗಿದೆ. ಅಲ್ಲದೆ ನಾಟಕ ಮತ್ತು ರೂಪಕ, ಭಜನೆ, ಚಿಂತನೆ ಕೊಂಕಣಿಯಲ್ಲಿ ಪ್ರಾದೇಶಿಕ ಸುದ್ಧಿಗಳ ಸಾರಾಂಶ ಹೇಳುವ ಕಾರ್ಯಕ್ರಮ ನಡೆಯುತ್ತಿದೆ.

7. ವಿಶ್ವ ಕೊಂಕಣಿ ಕೇಂದ್ರ

ಕೊಂಕಣಿ ಭಾಷೆ, ಸಂಸ್ಕೃತಿ, ಇತಿಹಾಸ, ಸಂಶೋಧನೆ ಮುಂತಾದವುಗಳನ್ನು ಉತ್ತೇಜಿಸು ನೆಲೆಯಲ್ಲಿ 2009 ರಲ್ಲಿ 'ವಿಶ್ವಕೊಂಕಣಿ ಕೇಂದ್ರ' ಶಕ್ತಿ ನಗರ ಮಂಗಳೂರಿನಲ್ಲಿ ಪ್ರಾರಂಭವಾಯಿತು. 'ಕೊಂಕಣಿ ಸರ್ದಾರ್' ಎಂದೇ ಖ್ಯಾತಿ ಪಡೆದ ಬಸ್ತಿ ವಾಮನ ಶೆಣೈಯವರು ಈ ಕೇಂದ್ರವನ್ನು ಸ್ಥಾಪಿಸಿದರು. ವಿಶ್ವದ ಎಲ್ಲಾ ಕೊಂಕಣಿಗರನ್ನು ಒಟ್ಟು ಸೇರಿಸುವುದು, ಕೊಂಕಣಿ ಭಾಷಿಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತದೆ. ಈ

ಕೇಂದ್ರದಲ್ಲಿ ಗ್ರಂಥಾಲಯ, ವಿಶ್ವಕೊಂಕಣಿ ಮ್ಯೂಸಿಯಂ, ಕೀರ್ತಿಮಂದಿರ್, ತರಬೇತಿ ಕೇಂದ್ರಗಳನ್ನು ಹೊಂದಿದೆ.

ಕರ್ನಾಟಕದಲ್ಲಿ ಕೊಂಕಣಿ ಭಾಷೆ ಉಳಿವಿಗೆ ಇರುವ ಸವಾಲುಗಳು

* **ಲಿಪಿಗಳ ನಡುವಿನ ಸಂಘರ್ಷ:** ಒಂದು ಭಾಷೆಗೆ ಒಂದಕ್ಕಿಂತ ಹೆಚ್ಚು ಲಿಪಿಗಳಿರುವುದು(ಸ್ಥಳೀಯ ಲಿಪಿಗಳ ಬಳಕೆ) ಸಂವಹನ ಮತ್ತು ಸಾಹಿತ್ಯ ಪ್ರಸಾರಕ್ಕೆ ದೊಡ್ಡ ಅಡ್ಡಿ. ಕರ್ನಾಟಕದ ಕೊಂಕಣಿ ಓದುಗರಿಗೆ ದೇವನಾಗರಿ ಓದಲು ಕಷ್ಟವಾಗುವುದು.

* **ಕೊಂಕಣಿ ಭಾಷೆಯ ಬಳಕೆ ಶಿಕ್ಷಣದಲ್ಲಿ ಕಡಿಮೆಯಿರುವುದು:** ಹೆಚ್ಚಿನ ಕೊಂಕಣಿ ಭಾಷಿಗರು ತಮ್ಮ ಮಕ್ಕಳನ್ನು ಇಂಗ್ಲಿಷ್ ಅಥವಾ ಪ್ರಾದೇಶಿಕ ಭಾಷೆಗಳ (ಕನ್ನಡ/ಮರಾಠಿ) ಮಾಧ್ಯಮದ ಶಾಲೆಗಳಿಗೆ ಸೇರಿಸುತ್ತಾರೆ. ಇದರಿಂದ ಹೊಸ ಪೀಳಿಗೆಗೆ ಭಾಷೆಯ ಬರವಣಿಗೆ ಮತ್ತು ಓದುವ ಕೌಶಲ ದೂರವಾಗುತ್ತಿದೆ.

* **ವಲಸೆ ಮತ್ತು ಜಾಗತೀಕರಣ:** ಉದ್ಯೋಗಕ್ಕಾಗಿ ಜನರು ಬೇರೆಡೆಗೆ ವಲಸೆ ಹೋದಾಗ, ಮನೆಯಲ್ಲಿ ಕೊಂಕಣಿ ಮಾತನಾಡುವ ಪ್ರಮಾಣ ಕಡಿಮೆಯಾಗುತ್ತಿದೆ. 'ಮಾತೃ ಭಾಷೆ'ಯಾಗಿದ್ದ ಕೊಂಕಣಿ ಇಂದು ಕ್ರಮೇಣ ಇಂಗ್ಲಿಷ್ ಆವರಿಸಿದೆ.

* **ಸಿನಿಮಾ ಮತ್ತು ಮಾಧ್ಯಮದ ಕೊರತೆ:** ಇತರೆ ಭಾಷೆಗಳಿಗೆ ಹೋಲಿಸಿದರೆ ಕೊಂಕಣಿ ಚಲನಚಿತ್ರ ರಂಗ ಮತ್ತು ಸಮೂಹ ಮಾಧ್ಯಮಗಳು ಅಷ್ಟು ಪ್ರಬಲವಾಗಿಲ್ಲ. ಇದು ಯುವ ಪೀಳಿಗೆಯನ್ನು ಭಾಷೆಯಿಂದ ದೂರ ಮಾಡುತ್ತಿದೆ.

* ಕರ್ನಾಟಕದಲ್ಲಿ ಕೊಂಕಣಿಯನ್ನು ಮೂರನೇ ಭಾಷೆಯಾಗಿ ಕಲಿಯಲು ಅವಕಾಶವಿದ್ದರೂ, ವಿದ್ಯಾರ್ಥಿಗಳ ಆಸಕ್ತಿ ಕಡಿಮೆಯಿದೆ.

* ಕೊಂಕಣಿ ಕಲಿತರೆ ಉದ್ಯೋಗ ಸಿಗುತ್ತದೆ ಎಂಬ ಭರವಸೆ ಇಲ್ಲದಿರುವುದು ಭಾಷೆಯ ಬೆಳವಣಿಗೆ ಕುಂಠಿತವಾಗುತ್ತಿದೆ.

* ಮಹಾರಾಷ್ಟ್ರದಲ್ಲಿ ಮರಾಠಿ, ಕರ್ನಾಟಕದಲ್ಲಿ ಕನ್ನಡ ಮತ್ತು ಕೇರಳದಲ್ಲಿ ಮಲಯಾಳಂ ಭಾಷೆಗಳ ಪ್ರಭಾವದಿಂದಾಗಿ ಕೊಂಕಣಿಯ ಮೂಲ ಶಬ್ದಗಳು ಮರೆಯಾಗಿ, ಪರಭಾಷೆಯ ಶಬ್ದಗಳು ಹೆಚ್ಚಾಗಿ ಬಳಕೆಯಾಗುತ್ತಿವೆ.

ಕೊಂಕಣಿ ಭಾಷೆ ಉಳಿಸುವ ಮಾರ್ಗಗಳು

* ಡಿಜಿಟಲೀಕರಣ: ಕೊಂಕಣಿ ಶಬ್ದಕೋಶಗಳನ್ನು ಯ್ಯಾಪ್ಸ್ ರೂಪದಲ್ಲಿ ತರುವುದು ಮತ್ತು ಆನ್‌ಲೈನ್‌ನಲ್ಲಿ ಕಲಿಯಲು ಅವಕಾಶ ಕಲ್ಪಿಸುವುದು.
* ಲಿಪಿಗಳ ನಡುವೆ ಸೇತುವೆ: ಲಿಪಿ ಪರಿವರ್ತಕ ತಂತ್ರಜ್ಞಾನವನ್ನು ಬಳಸಿ, ಒಂದು ಲಿಪಿಯ ಸಾಹಿತ್ಯವನ್ನು ಇನ್ನೊಂದು ಲಿಪಿಗೆ ಸುಲಭವಾಗಿ ಬದಲಾಯಿಸುವ ವ್ಯವಸ್ಥೆ

ಮಾಡುವುದು.

* ಮಾಧ್ಯಮದಲ್ಲಿ ಕೊಂಕಣಿ ಬಳಕೆ: ಸಿನಿಮಾ, ವೆಬ್ ಸಿರೀಸ್ ಮತ್ತು ಸಂಗೀತದ ಮೂಲಕ ಜನರನ್ನು ಸೆಳೆಯುವುದು.
* ಸಮುದಾಯದ ಪಾತ್ರ: ಪ್ರತಿಯೊಬ್ಬ ಕೊಂಕಣಿ ಭಾಷಿಕನೂ "ನಾನು ಮನೆಯಲ್ಲಿ ಕೊಂಕಣಿ ಮಾತ್ರ ಮಾತನಾಡುತ್ತೇನೆ" ಎಂಬ ಸಂಕಲ್ಪ ಮಾಡುವುದು.
* ಮನೆಯಲ್ಲಿ ಬಳಕೆ: ಪೋಷಕರು ತಮ್ಮ ಮಕ್ಕಳೊಂದಿಗೆ ಕೊಂಕಣಿಯಲ್ಲಿ ಮಾತನಾಡುವುದು.
* ತಂತ್ರಜ್ಞಾನದ ಬಳಕೆ: ಕೊಂಕಣಿ ಸಾಹಿತ್ಯವನ್ನು ಡಿಜಿಟಲೀಕರಣ ಮಾಡುವುದು ಮತ್ತು ಆಡಿಯೋ ಬುಕ್‌ಗಳನ್ನು ಪ್ರೋತ್ಸಾಹಿಸುವುದು.
* ಸ್ಥಳೀಯ ಲಿಪಿಯಲ್ಲಿ ಸಾಹಿತ್ಯದ ಸತ್ವವನ್ನು ತಲುಪಿಸಲು ಅನುವಾದ ಕಾರ್ಯಗಳು ನಡೆಯಬೇಕು.

ಒಟ್ಟಾರೆಯಾಗಿ ಕರಾವಳಿಯ ಗೌಡ ಸಾರಸ್ವತರ ಕೊಂಕಣಿ ಭಾಷೆ ಮಾತ್ರ ಅಸ್ಮಿತೆ ಅಲ್ಲ. ಅವರ ಬದುಕಿನ ಪ್ರತಿ ಹಂತದಲ್ಲೂ ಹಾಸುಹೊಕ್ಕಾಗಿದೆ. ಮಠಾಧೀಶರ ಮಾರ್ಗದರ್ಶನ, ದೇವಸ್ಥಾನಗಳ ಮೇಲಿನ ನಂಬಿಕೆಗಳು, ಆಹಾರ ಪದ್ಧತಿ ಭಾಷೆಯ ಮೇಲಿನ ಪ್ರೀತಿ ಈ ಮೂರು ಜೊತೆಯಾದಾಗ ಕೊಂಕಣಿ ಭಾಷೆಗೆ ಅಸ್ಮಿತೆ ದೊರೆಯುತ್ತದೆ.

ಪರಾಮರ್ಶನ ಗ್ರಂಥಗಳು:

1. ಐಗಳ್ ಗಣಪತಿ ರಾವ್, ‘ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ’, ರಾಷ್ಟ್ರಕವಿ ಗೋವಿಂದ ಪೈ, ಸಂಶೋಧನಾ ಕೇಂದ್ರ ಉಡುಪಿ, 2021 (ನಾಲ್ಕನೇ ಮುದ್ರಣ).
2. ಪ್ರಭು ಮುಕುಂದ ಎಂ (ಸಂ), ‘ಪೊಲಿ’, ಪ್ರಕಾಶಕರು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, 2000.
3. ಹಿರಿಯಡ್ಕ ಮುರಳೀಧರ ಉಪಾಧ್ಯಾಯ (ಸಂ), ’ಕೊಂಕಣಿ ಭಾಷೆ–ಸಾಹಿತ್ಯ’, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, 1995.
4. Prabhu Sasikanth R (Translated), ‘Gowda Saraswat Konkani Brahmans- A History’, P.G Kamath Foundation Ernakulam, 2022
5. ರೈ ಬಿ.ಎ ವಿವೇಕ(ಸಂ), ‘ಮಂಗಳೂರು ದರ್ಶನ’ ಸಂಪುಟ–1, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ,2016.

6. ಕೇಕುಣ್ಣಾಯ ಪದ್ಮನಾಭ ಕೆ (ಡಾ), 'ಕರಾವಳಿಯ ಭಾಷಾನುಸಂಧಾನ', ಪ್ರಸಾರಂಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳ ಗಂಗೋತ್ರಿ, 2015

7. Dhume Chandranath V.S, The Gaud Saraswath Brahminns (Their Footprints), Designed, Printed and Published by Printers Devil Goa,2023

8. ಕುಡ್ವ ವೆಂಕಟನಾರಾಯಣ, 'ದಾಕಿಣಾತ್ಯ ಸಾರಸ್ವತರ ಇತಿಹಾಸ', ಸಂಯುಕ್ತ ಗೌಡಸಾರಸ್ವತ ಸಭಾ ಚೆನ್ನೈ,2012

9. ಕಶ್ಯಪ್ ಆರ್. ಎಲ್, 'ಋಗ್ವೇದ ಸಂಹಿತ'(ಮಂಡಳ–7)(ಅನು),ಸಾಕ್ಷಿಟ್ರಸ್ಟ್ ಬೆಂಗಳೂರು,2010

10. ಮಾಡ್ತ ಪ್ರಶಾಂತ್ (ಸಂ),'ಕೊಂಕ್ಣಿ ದಾಯ್ಜ್',ಕೊಂಕ್ಣಿ ಸಂಸ್ಥೊ ಸಾಂ ಕಾಲೇಜ್, ಮಂಗಳೂರು,1996

11. ಪೆರ್ಮುದೆ ಸ್ಟಿವನ್ ಕ್ವಾಡ್ರಸ್, 'ಕೊಂಕಣಿ ಕಸ್ತೂರಿ', 'ಹೇಮಂತ ಸಾಹಿತ್ಯ ಪ್ರಕಾಶನ', ಬೆಂಗಳೂರು.

12. ಪಾದೂರು ಗುರುರಾಜ ಭಟ್, 'ತುಳುನಾಡು', ಕೆ.ಲಕ್ಷ್ಮೀನಾರಾಯಣ ಭಟ್ 'ಭವ್ಯವಾಣಿ', ಸಂಪಾದಕರು, ಉಡುಪಿ 1963.

13. ಬಾಳಿಗಾ ಶಾಂತರಾಮ, 'ಗೌಡಾಸರಸ್ವತರ ಮೂಲ ಮತ್ತು ಪ್ರಸರಣ(ಅನು), ಬಿ.ರಾದಾಕೃಷ್ಣ ಬಾಳಿಗ , ಕೃಷ್ಣ ವಿಟ್ಠಲ ಪ್ರಕಾಶನ, ಮಂಗಳೂರು,2003

14. Dhume Chandranath V.S, The Gaud Saraswath Brahminns (Their Footprints), Designed, Printed and Published by Printers Devil Goa,2023

15. ಮಾಡ್ತ ಪ್ರಶಾಂತ್ (ಸಂ), ಕೊಂಕ್ಣಿ ದಾಯ್ಜ್, ಕೊಂಕ್ಣಿ ಸಂಸ್ಥೊ ಸಾಂ. ಕಾಲೇಜ್, ಮಂಗಳೂರು,1996

16. ಪೆರ್ಮುದೆ ಸ್ಟಿವನ್ ಕ್ವಾಡ್ರಸ್, 'ಕೊಂಕಣಿ ಕಸ್ತೂರಿ', 'ಹೇಮಂತ ಸಾಹಿತ್ಯ ಪ್ರಕಾಶನ', ಬೆಂಗಳೂರು.

17. ಪಾದೂರು ಗುರುರಾಜ ಭಟ್, ತುಳುನಾಡು, ಕೆ.ಲಕ್ಷ್ಮೀನಾರಾಯಣ ಭಟ್, ಭವ್ಯವಾಣಿ, ಸಂಪಾದಕರು, ಉಡುಪಿ 1963.

18. ಶೆಣ್ಯೈ ಗೀತ, ‘Migration and Settlement Pattern of Konkani people in Karnataka: a Geographical, Social, Anthropological, Linguistic and Cultural Perspective’,ಕೊಂಕಣಿ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯಕ್ಕೆ, ಡಾ. ಜಯವಂತ ನಾಯಕ್ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ಸಂಶೋಧನಾ ಯೋಜನೆ.

1 **ಮಾರ್ಗದರ್ಶಕರು : ಡಾ. ಪ್ರವೀಣ. ಪದ್ಯಾಣ**
ಸಹಾಯಕ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ(ಪ್ರಭಾರ)
ಕನ್ನಡ ವಿಭಾಗ
ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ
ತೇಜಸ್ವಿನಿ ಹಿಲ್ಸ್ ಪೆರಿಯ
ಕಾಸರಗೋಡು ಜಿಲ್ಲೆ.

***

ಮೊಗವೀರ ಸಮುದಾಯದಲ್ಲಿ ಗುರಿಕಾರ ಪದ್ಧತಿ : ಒಂದು ಸಾಂಸ್ಕೃತಿಕ ವಿಶ್ಲೇಷಣೆ

1 ರಾಮು

ಸಂಶೋಧನಾ ವಿದ್ಯಾರ್ಥಿ

ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿ.ವಿ, ಮಂಗಳೂರು

ಭಾರತೀಯ ಸಂಸ್ಕೃತಿಯ ಅನೇಕ ಉಪಸಂಸ್ಕೃತಿಗಳಲ್ಲಿ ಒಂದಾಗಿ ತನ್ನ ವಿಶಿಷ್ಟವಾದ ಹೆಜ್ಜೆ ಗುರುತುಗಳೊಂದಿಗೆ ತನಗೆ ಎದುರಾದ ಅನೇಕ ಅಡೆತಡೆಗಳನ್ನು ಮೇಲು ಕೀಳುಗಳನ್ನು ದಾಟಿ ಸಮುದಾಯದ ನಂಬಿಕೆ ಪ್ರಾಮಾಣಿಕತೆಗೆ ಪ್ರಾಮುಖ್ಯತೆಯನ್ನು ನೀಡಿ, ಚದುರಿದ ಸಮಾಜ ಬಾಂಧವರನ್ನು ಸಂಘಟಿಸಿ ಮೊಗವೀರ ಸಂಸ್ಕೃತಿಯನ್ನು ಎತ್ತಿ ಹಿಡಿದ ಕೀರ್ತಿ ಸಮುದಾಯದ ಮೊಗವೀರ ಗುರಿಕಾರರಿಗೆ ಸಲ್ಲುತ್ತದೆ. ಗುರಿಕಾರರು ಮೊಗವೀರ ಸಂಸ್ಕೃತಿಯ ರಕ್ಷಣೆಯಲ್ಲಿ ಬಹು ಮುಖ್ಯ ಪಾತ್ರ ನಿರ್ವಹಿಸುತ್ತಾ ಬಂದಿದ್ದಾರೆ ಆದ್ದರಿಂದಲೇ ಮೊಗವೀರ ಸಮಾಜದಲ್ಲಿ ಗುರಿಕಾರರಿಗೆ ನಾಯಕ ಸ್ಥಾನಮಾನ ನೀಡಲಾಗಿದೆ. ಸಮುದಾಯದ ಕುಟುಂಬ, ಕೇರಿ, ಗ್ರಾಮದಲ್ಲಿರುವ ಕಟ್ಟುಕಟ್ಟಳೆ, ಸಂಪ್ರದಾಯ, ಆಚರಣೆಗಳು, ವಿಧಿ–ವಿಧಾನಗಳು ಇವೆಲ್ಲವುಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಒಬ್ಬ ಯಜಮಾನತ್ವದ ಅಥವಾ ಮುಖಂಡತ್ವದ ಅಗತ್ಯವಿತ್ತು. ಇದನ್ನು ಮೊಗವೀರ ಸಮುದಾಯದಲ್ಲಿ ತಲೆತಲಾಂತರದಿಂದ ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಬಂದವನೇ ಗುರಿಕಾರ ಎಂದು ಹೇಳಲಾಗಿದೆ.

ಗುರಿಕಾರ ಎನ್ನುವ ಪದದ ವಿಶ್ಲೇಷಣೆಯಲ್ಲಿ ತೊಡಗಿದರೆ ಕನ್ನಡದಲ್ಲಿ ಗುರಿ ಹೊಡೆಯುವುದರಲ್ಲಿ ನಿಪುಣ, ಇಡುಗಾರ, ಗಡಿ ಪ್ರದೇಶ ಮೊದಲಾದವುಗಳಲ್ಲಿ ಮೇಲ್ವಿಚಾರಣೆ ಮಾಡುವುದಕ್ಕೆ ಸಂಯುಕ್ತನಾದ ಉನ್ನತ ಅಧಿಕಾರಿ ಎನ್ನುವ ಅರ್ಥಗಳನ್ನು ಹೊಂದಿದೆ. ಈ ಗುರಿಕಾರ ಎನ್ನುವ ಪದವನ್ನು ಮೊದಲು ತುಳುನಾಡನ್ನು ಆಳಿದ ವಿಜಯನಗರದ

ಅರಸರ ಕಾಲದಲ್ಲಿ ಉಪಯೋಗಿಸಿರುವುದನ್ನು ತುಳುನಾಡಿನ ಸಾಹಿತ್ಯಗಳು ಉಲ್ಲೇಖಿಸಿವೆ. ವಿಜಯನಗರದ ಅರಸರ ಆಳ್ವಿಕೆಯ ಸಂದರ್ಭದಲ್ಲಿ ಸುಗಮ ಆಡಳಿತ ನಿರ್ವಹಣೆಗಾಗಿ ರಾಜ್ಯ ಆಡಳಿತವನ್ನು ವಿಭಾಗಗಳಾಗಿ ವಿಂಗಡಿಸಿ ವಿಭಾಗಾಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಗ್ರಾಮ ಮಟ್ಟದಲ್ಲಿ ಮೇಲ್ವಿಚಾರಣೆ, ಶುಲ್ಕ ವಸೂಲಿ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು ನಿಯುಕ್ತಿಯಾದ ಅಧಿಕಾರಿಯನ್ನು 'ಗುರಿಕಾರ' ಎಂದು ಸಂಬೋಧಿಸಲಾಗುತ್ತಿತ್ತು. ಆದರೆ ಮೊಗವೀರ ಸಮುದಾಯದಲ್ಲಿ ಸಮಾಜಭಂಧವರನ್ನೆಲ್ಲ ಉಗ್ಗೂಡಿಸಿ ಮೊಗವೀರ ಸಮುದಾಯದ ಸಂಸ್ಕೃತಿಯನ್ನು ಮುನ್ನಡೆಸುವ ಸಮುದಾಯದ ಮುಖಂಡನನ್ನು 'ಗುರಿಕಾರ' ಎಂದು ಕರೆಯಲಾಯಿತು.

ಮೊಗವೀರ ಸಮುದಾಯದಲ್ಲಿ ತಲೆತಲಾಂತರಗಳಿಂದ ಅಸ್ತಿತ್ವದಲ್ಲಿದ್ದ ಗುರಿಕಾರತ್ವವನ್ನು ಕುರಿತು ಹಲವು ವಿದೇಶಿ ಪ್ರವಾಸಿಗರು ತಮ್ಮ ಬರಹಗಳಲ್ಲಿ ಉಲ್ಲೇಖಿಸಿದ್ದಾರೆ. "ಮೊಗವೀರರು ಒಂದು ಅತ್ಯಂತ ಉತ್ತಮವೆನ್ನಬಹುದಾದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ್ದಾರೆ. ಪ್ರತಿ ಗ್ರಾಮದಲ್ಲಿ ಕನಿಷ್ಠ ಎರಡರಿಂದ ನಾಲ್ಕು ಮಂದಿ ಗುರಿಕಾರು ಇರುತ್ತಾರೆ. ಅವರು ಚಿನ್ನದ ಕಡಗವನ್ನು ಎಡಗೈಯಲ್ಲಿ ಧರಿಸುತ್ತಾರೆ. ಗುರಿಕಾರತ್ವ ಒಂದು ನಿರ್ದಿಷ್ಟ ಕುಟುಂಬಕ್ಕೆ ಸಿಗುತ್ತದೆ. ಅದು ಅಳಿಯ ಕಟ್ಟಿನ ಆಧಾರದ ಮೇಲೆ ಮಾವನಿಂದ ಅಳಿಯನಿಗೆ ಸಲ್ಲುತ್ತದೆ.."[1] ಎಂದು ಖ್ಯಾತ ಫ್ರೆಂಚ್ ಇತಿಹಾಸಕಾರ ಎಡ್ಗರ್ ಥರ್ಸ್ಟನ್ ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೇ "ಮೊಗವೀರ ಸಮಾಜ ಬಾಂಧವರು ತಮ್ಮ ಸಮುದಾಯದ ಮುಖ್ಯಸ್ಥನನ್ನು ಅಥವಾ ಮುಖಂಡನನ್ನು 'ಗುರಿಕಾರರು' ಎಂದು ಕರೆಯುತ್ತಿದ್ದರು. ಇವರು ಆ ಸಮುದಾಯವನ್ನು ಅಚ್ಚುಕಟ್ಟಾಗಿ ಮುನ್ನಡೆಸುವ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಆಗಾಗ ಸಭೆ ಸೇರಿ ಸಮಾಜ ಬಾಂಧವರನ್ನು ಒಂದುಗೂಡಿಸಿ ಸಮುದಾಯದಲ್ಲಿನ ವಿವಾದಗಳನ್ನು ಬಗೆಹರಿಸುತ್ತಿದ್ದರು. ಅಲ್ಲದೇ ಜಾತಿ ಕಟ್ಟಳೆಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ವಿಧಿಸುತ್ತಿದ್ದರು"[2] ಎಂದು ಗುರಿಕಾರನ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಫ್ರಾನ್ಸಿಸ್ ಬುಚನನ್ ತನ್ನ ಯಾತ್ರಾ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗೆ ಕರಾವಳಿಯ ಒಂದು ಸಣ್ಣ ಸಮುದಾಯದ ಗುರಿಕಾರ ಪದ್ಧತಿಯಂತಹ ಸಾಂಸ್ಕೃತಿಕ ಸಂಗತಿಗಳನ್ನು ವಿದೇಶಿ ಪ್ರವಾಸಿಗರು ಹಾಗೂ ಇತಿಹಾಸಕಾರರು ಗಮನಿಸಿರುವುದು ಮತ್ತು ಮೆಚ್ಚಿಕೊಂಡಿರುವುದು ವಿಶೇಷವೆನಿಸುತ್ತದೆ.

ಮೊಗವೀರ ಸಮಾಜದಲ್ಲಿ ಯಾವನೇ ಒಬ್ಬ ವ್ಯಕ್ತಿ ಕಳ್ಳತನ, ವಂಚನೆ, ಹಾದರ, ಧರ್ಮದ್ರೋಹ ಅಥವಾ ಸಮಾಜವನ್ನು ಕೀಳಾಗಿ ಬಿಂಬಿಸುವಂತಹ ಕಾರ್ಯಗಳನ್ನು ಮಾಡಿದರೆ ಅಂತಹ ವ್ಯಕ್ತಿಗೆ ಸಾಮಾಜಿಕ ಬಹಿಷ್ಕಾರ ವಿಧಿಸುವಂತಹ ಕಠಿಣ ಜವಾಬ್ದಾರಿಯು ಗುರಿಕಾರರದ್ದಾಗಿತ್ತು. ಇವರು ವಿಧಿಸುವ ಬಹಿಷ್ಕಾರವನ್ನು ಇಡೀ ಮೊಗವೀರ ಸಮುದಾಯವೇ ಒಪ್ಪಿಗೆ

ಸೂಚಿಸಿದಂತಿರುತ್ತಿತ್ತು. "ಒಂದು ನಿರ್ದಿಷ್ಟವಾದ ಮನೆತನದ ಹಿರಿಯ ವ್ಯಕ್ತಿಯು ವಂಶಪಾರಂಪರೆಯವಾಗಿ ತಲೆತಲಾಂತರದಿಂದ ಮೊಗವೀರರ ಮನೆತನದ ಹಿರಿಯ ವ್ಯಕ್ತಿಯು ವಂಶಪಾರಂಪರ್ಯವಾಗಿ ತಲೆತಲಾಂತರದಿಂದ ಮೊಗವೀರ

ಕೂಡುಕಟ್ಟಿನ ನಾಯಕನಾಗಿ, ಮುಂದಾಳಾಗಿ ಕಾರ್ಯನಿರ್ವಹಿಸುವ ಈ ಗುರಿಕಾರರು ವಿವಾಹ, ಶೋಭಾನ, ವ್ಯಾಜ್ಯ ತೀರ್ಮಾನ, ಮರಣ ಇತ್ಯಾದಿ ಸಂದರ್ಭಗಳಲ್ಲಿ ಬಹಳ ಜವಾಬ್ದಾರಿಯಿಂದ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದನು . ಸ್ವಲ್ಪ ಹೆಚ್ಚು ಕಡಿಮೆಯಾದರೂ ಈ ಹಿಂದೆ ಗುರಿಕಾರನ ಪ್ರತಿಷ್ಠೆಗೆ ಕುಂದು ಬರುತ್ತಿತ್ತು. ಅಲ್ಲದೆ ಹೊಣೆಗಾರರು ಅವರೇ ಆಗಿರುತ್ತಿದ್ದರು"[3] ಹೀಗೆ ಮೊಗವೀರ ಸಮುದಾಯದಲ್ಲಿ ಇಂತಹ ಬಹುಮುಖ್ಯವಾದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದ ಈ ಪದ್ದತಿ ಇಂದು ಆ ಪ್ರಮಾಣದಲ್ಲಿ ಅಸ್ತಿತ್ವದಲ್ಲಿಲ್ಲ. ಪ್ರಸ್ತುತ ಪರಿಸ್ಥಿತಿ ಬದಲಾಗಿದೆ. ಸಾಮಾಜಿಕ ಬಹಿಷ್ಕಾರದಂತಹ ಕಠಿಣ ಕ್ರಮದ ವಿರುದ್ಧ ಕಾನೂನುಗಳು ರಚನೆಗೊಂಡಿವೆ. ಅಲ್ಲದೆ ಮೊಗವೀರ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿರುವುದರಿಂದ ಬಹಿಷ್ಕಾರದಂತಹ ಕಠಿಣ ಕ್ರಮಕ್ಕೆ ಇಂದು ಅವಕಾಶ ಇಲ್ಲವಾಗಿದೆ. ಹಾಗಾಗಿ ಗುರಿಕಾರರಿಗೆ ಈ ಹಿಂದೆ ಎದುರಾಗುತ್ತಿದ್ದ ಬಹಿಷ್ಕಾರದಂತಹ ಕಠಿಣ ಸವಾಲುಗಳು ಇಂದು ಇಲ್ಲವಾಗಿದೆ. ಅಲ್ಲದೇ ಇಂದು ಮೊಗವೀರ ಸಮಾಜದಲ್ಲಿ ದೇವಸ್ಥಾನದ ಮೊಕ್ತೇಸರನಂತೆ ಕಾರ್ಯನಿರ್ವಹಿಸುವ ಗುರಿಕಾರರು ಜಾತಿ ಬಾಂಧವರ ನಿಶ್ಚಿತಾರ್ಥ, ಮದುವೆ ಕಾರ್ಯಕ್ರಮ ಇತ್ಯಾದಿ ನಡಾವಳಿಗಳ ಮೇಲೆ ಮಾತ್ರವಲ್ಲದೆ, ಕುಲ ದೇವಸ್ಥಾನದ ದೀಪಾರಾಧನೆ ಕಾಣಿಕೆ ಅಥವಾ ವರ್ಷಾವಧಿ ಶುಲ್ಕ ವಸೂಲಿ, ದೇವಸ್ಥಾನದ ಜೀವನೋದ್ಧಾರ, ಪೂಜಾ ವಿಧಿ–ವಿಧಾನಗಳು ಇತ್ಯಾದಿ ಕೆಲಸಗಳನ್ನು ತಮ್ಮ ಕರ್ತವ್ಯದಂತೆ ನಿರ್ವಹಿಸುತ್ತಿದ್ದಾರೆ.

ಮೊಗವೀರ ಸಮಾಜದಲ್ಲಿ ಕಾರ್ಯಾಧಾರಿತವಾಗಿ ಎರಡು ರೀತಿಯ ಗುರಿಕಾರರನ್ನು ಗುರುತಿಸಬಹುದು. ಮೊದಲನೆಯದು ಸಮಾಜವನ್ನು ಮುನ್ನಡೆಸುವ, ಮೊಗವೀರ ಸಂಸ್ಕೃತಿಯನ್ನು ಮುನ್ನಡೆಸಿಕೊಂಡು ಹೋಗುವ ಗುರಿಕಾರರು. ಎರಡನೆಯದು ವೃತ್ತಿಯಾಧಾರಿತವಾಗಿ ಕಾರ್ಯನಿರ್ವಹಿಸುವ ಗುರಿಕಾರರು. "ಹಿಂದೆ ಮೊಗವೀರರನ್ನು ಒಗ್ಗೂಡಿಸುವ ಪ್ರಮುಖ ಅಸ್ತ್ರಗಳಲ್ಲಿ ಒಂದಾಗಿರುವುದು ಮೀನುಗಾರಿಕೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದ ಮಾರಿಬಲೆ. ಕರ್ನಾಟಕದ ಕರಾವಳಿಯ ತ್ರಿವಳಿ ಜಿಲ್ಲೆಗಳ ಮತ್ಸ್ಯೋದ್ಯಮದಲ್ಲಿ ಕಂಡುಬರುವ ಸುಮಾರು ಐವತ್ತಕ್ಕೂ ಹೆಚ್ಚಿನ ಬಲೆಗಳಲ್ಲಿಯೇ ಮಾರಿಬಲೆ ಅತ್ಯಂತ ದೊಡ್ಡದಾದ ಹಾಗೂ ಉದ್ದವಾದ ಬಲೆಯಾಗಿತ್ತು. ಇದರ ಒಂದು ಘಟಕದಲ್ಲಿ ಸುಮಾರು ಎಂಭತ್ತರಿಂದ ನೂರು ಮೀನುಗಾರ ಮೊಗವೀರರು ಸದಸ್ಯರಾಗಿರುತ್ತಿದ್ದರು. ಇಂತಹ ಒಂದು ಘಟಕದ ಯಜಮಾನನಿಗೆ 'ತಂಡೇಲ' ಎಂದು ಕರೆಯಲಾಗುತ್ತಿತ್ತು.

ಅಲ್ಲದೇ ಈ ಘಟಕದಲ್ಲಿ ಇನ್ನಿಬ್ಬರು ಮುಖಂಡರು ಇರುತ್ತಿದ್ದರು. ಇವರಿಗೆ 'ಜಾಮಗುರಿಕಾರ' ಎಂದು ಕರೆಯುತ್ತಿದ್ದರು. ಇಲ್ಲಿಯ ಗುರಿಕಾರ ಊರಿನ ಗುರಿಕಾರನಾಗಿರದೆ ಬಲೆಯ ಗುರಿಕಾರರಾಗಿರುತ್ತಿದ್ದರು.."[4] ಊರಿನ ಗುರಿಕಾರರ ನಡೆ–ನುಡಿ, ಹವಾ–ಭಾವ ಗತ್ತು–ಗಮ್ಮತ್ತು ಇವೆಲ್ಲವುಗಳಲ್ಲಿಯೂ ಒಂದು ಆಕರ್ಷಣೆ, ಗಾಂಭೀರ್ಯ ಇದೆ. ನೀಳವಾದ ದೃಢಕಾಯ ದೇಹ, ಬಿಲ್ಲಿನ ಆಕಾರದಂತಿರುವ ಕೋಲಗಲ್ಲದ ಗಲ್ಲ, ಮೀಸೆ, ಕಿವಿಯಲ್ಲಿ ನೇತುಬಿಟ್ಟ ಚಿನ್ನದ ಗಾಳೊಂಟಿ, ಸೊಂಟದಲ್ಲಿ ಬಿಗಿದಿಟ್ಟ ಬೆಳ್ಳಿಯ ಉಡಿದಾರ, ಎದುರು ಜೋಲುಬಿಟ್ಟ ದೊಡ್ಡ ಬೈರಾಸು, ತಲೆಯ ಮೇಲೆ ಅಲಂಕಾರಿಕ ಸುರುಳಿ ಹೊಂದಿದ ನಾಯಕತ್ವದ ಮುಂಡಾಸು ಇಂತಹ ಗಾಂಭೀರ್ಯತೆಗಳಿಂದ ಶೋಭಿಸುವ ಗುರಿಕಾರ ತೂಗಿ ನೋಡಿ ಹೊರ ಹಾಕುವ ಬಿರುಸಿನ ಮಾತುಗಳೊಂದಿಗೆ, ಸಂದರ್ಭಕ್ಕೆ ಅನುಸಾರವಾಗಿ ಹಾಸ್ಯಭರಿತ ನಡೆ ನುಡಿಯೊಂದಿಗೆ ತನ್ನ ವಿಶಿಷ್ಟ ವ್ಯಕ್ತಿತ್ವದ ಮೂಲಕ ಎಲ್ಲರ ಗಮನ ಸೆಳೆಯುತ್ತಿದ್ದರು.

ಮೊಗವೀರ ಸಮಾಜದೊಳಗಿನ ಅಂತಃಕಲಹವನ್ನು ಅಥವಾ ವಿವಾದವನ್ನು ಗುರಿಕಾರರು ತಮ್ಮ ತಮ್ಮ ಮಟ್ಟದಲ್ಲೇ ರಾಜಿ ಮಾತುಕತೆಯ ಮೂಲಕ ತಮ್ಮ ವ್ಯಾಪ್ತಿಯ ಸಮಾಜಬಾಂಧವರ ಉಪಸ್ಥಿತಿಯಲ್ಲಿ ಬಗೆಹರಿಸುತ್ತಿದ್ದರು. ಪೊಲೀಸ್ ಕಛೇರಿ, ಕೋರ್ಟ್ ಕಛೇರಿ ಇತ್ಯಾದಿಗಳ ಕಡೆ ಅಲೆದಾಡುವ ಅವಕಾಶವೇ ಕೊಡುತ್ತಿರಲಿಲ್ಲ. ಒಂದು ವೇಳೆ ಮಾತು ಧಿಕ್ಕರಿಸಿ ಹೋದರೆ ಅವರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುತ್ತಿತ್ತು. ಅಲ್ಲದೆ ಸಮಾಜ ಬಾಂಧವರಲ್ಲಿ ಪೊಲೀಸು, ಕೋರ್ಟು ಕಛೇರಿಗೆ ಅಲೆದಾಡುವುದು ಮರ್ಯಾದೆ ಕೇಡಿನ ವಿಚಾರವೆಂಬ ಭಾವನೆ ಸಾರ್ವತ್ರಿಕವಾಗಿ ಇದ್ದುದರಿಂದ ಇದು ಗುರಿಕಾರರ ರಾಜಿ ಸಂಧಾನಕ್ಕೆ, ಮಾತುಕತೆಗೆ ಸಹಾಯಕವಾಗುತ್ತಿತ್ತು. ಮೊಗವೀರ ಸಮುದಾಯದ ಯಾವುದಾದರೂ ಕುಟುಂಬದಲ್ಲಿ ಏನಾದರೂ ಜಗಳ ವೈಮನಸ್ಸು ವಿವಾದಗಳು ಉಂಟಾದರೆ ಗುರಿಕಾರರು ಆ ಎರಡೂ ಕುಟುಂಬದವರನ್ನು ಕರೆಸಿ, ತನಿಖೆ ನಡೆಸಿ, ನಿಷ್ಪಕ್ಷಪಾತವಾದ ತೀರ್ಮಾನ ಕೊಡುತ್ತಿದ್ದರು. ಗಂಡು ಹೆಣ್ಣುಗಳು ಪ್ರೇಮಿಸಿದ್ದಲ್ಲಿ ಅಥವಾ ಕುಟುಂಬದಲ್ಲಿ ವೈಮನಸ್ಸುಗಳು ಸೃಷ್ಟಿಯಾದಲ್ಲಿ ಕುಟುಂಬದ ಹಿರಿಯರನ್ನು ಕರೆಸಿ ಬುದ್ಧಿ ಹೇಳಿ ನ್ಯಾಯ ದೊರಕಿಸಿ ಕೊಡುವುದು ಗುರಿಕಾರನ ಕರ್ತವ್ಯವಾಗಿತ್ತು. ಗುರಿಕಾರರ ವ್ಯಾಪ್ತಿಗೊಳಪಟ್ಟ ಮನೆಗಳು ಅಥವಾ ಕುಟುಂಬಗಳು ಮೊಗವೀರ ಸಮಾಜದ ಕಟ್ಟುಪಾಡುಗಳಿಗೆ ಹೊಂದಿಕೊಂಡು ನಡೆಯಬೇಕಿತ್ತು. ಒಂದು ವೇಳೆ ಮೊಗವೀರ ಸಮಾಜಕ್ಕೆ ಅಥವಾ ಜಾತಿಗೆ ಕಳಂಕ ತರುವಂತಹ ಕೆಲಸಗಳನ್ನು ಯಾರಾದರೂ ಮಾಡಿದರೆ ಅಂತವರನ್ನು ಜಾತಿಯಿಂದ ಬಹಿಷ್ಕರಿಸುವ ಪದ್ಧತಿಯು ಸಹ ಮೊದಲು ಅಸ್ತಿತ್ವದಲ್ಲಿತ್ತು. ಅಂತವರಿಗೆ

ಜಾತಿಯವರ ಯಾವುದೇ ಕಾರ್ಯಕ್ರಮದ ಹೇಳಿಕೆಯಾಗಲಿ, ಅವರ ಮನೆಗೆ ಹೋಗುವುದಾಗಲಿ ನಿಷೇಧಿಸಲ್ಪಡುತ್ತಿತ್ತು. ಮತ್ತೆ ಅವರು ಪುನಃ ಮೊಗವೀರ ಸಮಾಜಕ್ಕೆ ಸೇರಿಕೊಳ್ಳಬೇಕಿದ್ದರೆ ಸಮಾಜದ ಹಿರಿಯ ನಾಯಕರೆಲ್ಲರನ್ನೂ ಗುರಿಕಾರನಾದವನು ಒಟ್ಟಿಗೆ ಸೇರಿಸಿ, ಚರ್ಚಿಸಿ ಸಮಾಜದ ಕಟ್ಟು ಕಟ್ಟಳೆ ಮೀರಿ ನಡೆದವರಿಗೆ ತಿಳಿಹೇಳಿ ದಂಡದ ರೂಪವಾಗಿ ಕುಲದೇವತೆಗೂ, ಗ್ರಾಮದೇವತೆಗೂ ಪೂಜೆ ಮತ್ತು ತಪ್ಪು ಕಾಣಿಕೆಯನ್ನು ನೀಡುವುದರ ಮೂಲಕ ತೀರ್ಪು ಕೊಡುತ್ತಿದ್ದರು. ಅಲ್ಲದೇ ಮೊಗವೀರರ ಕುಟುಂಬದಲ್ಲಿ ಯಾವುದೇ ಶುಭ ಅಥವಾ ಅಶುಭ ನಡೆದರೂ ಗುರಿಕಾರರು ಮುಂದೆ ನಿಂತು ನಡೆಸಿಕೊಡುತ್ತಿದ್ದರು. "ಮೊಗವೀರ ಸಮುದಾಯದ ಕುಟುಂಬದಲ್ಲಿ ಮದುವೆಯ ಸಂದರ್ಭದಲ್ಲಿ ಗಂಡು ಹೆಣ್ಣಿನ ನಿಶ್ಚಿತಾರ್ಥದಿಂದ ಪ್ರಾರಂಭಗೊಂಡು ಮದುವೆಯ ಸಮ್ಮಾನದ (ಖಜಭಿಜಠಿಣುಂಟ) ವರೆಗೂ ಗುರಿಕಾರನು ಸಕ್ರಿಯವಾಗಿ ಪಾಲ್ಗೊಂಡು, ಸೂಕ್ತ ಮಾರ್ಗದರ್ಶನಗಳನ್ನು ನೀಡುತ್ತಾ ವ್ಯವಸ್ಥಿತವಾಗಿ ನಡೆಸಿಕೊಡುತ್ತಿದ್ದರು. ಇದಕ್ಕೆ ಪೂರ್ವಭಾವಿಯಾಗಿ ಮದುವೆ ನಡೆಯುವ ಮನೆಯ ಕಡೆಯವರು ಗುರಿಕಾರರ ಮನೆಗೆ ಬಂದು ಒಂದು ವೀಳ್ಯದ (ಎರಡು ತಾಂಬೂಲ ಎಲೆ, ಒಂದು ಸಿಪ್ಪೆ ಇರುವ ಅಡಿಕೆ ಹೊಂದಿದ) ಪಟ್ಟಿಯನ್ನು ಗೌರವ ಪೂರ್ವಕವಾಗಿ ನೀಡಿ ಮದುವೆಯ ಎಲ್ಲಾ ಕಾರ್ಯಕ್ರಮವನ್ನು ನಿರ್ವಿಘ್ನವಾಗಿ ನಡೆಸಿಕೊಡುವಂತೆ ವಿನಂತಿಸಿ ಆಹ್ವಾನಿಸುವ ಪದ್ಧತಿಯು ರೂಢಿಯಲ್ಲಿತ್ತು. ಮೊಗವೀರ ಸಮಾಜದಲ್ಲಿ ಈ ವೀಳ್ಯ ಎನ್ನುವುದು ಒಂದು ಗೌರವದ ಸಂಕೇತವಾಗಿತ್ತು ಇದು ಮೇಲ್ನೋಟಕ್ಕೆ ಎರಡು ಎಲೆ ಮತ್ತು ಒಂದು ಸಿಪ್ಪೆ ಹೊಂದಿದ ಅಡಿಕೆಯಾಗಿ ಕಾಣಿಸಿದರೂ ಮೊಗವೀರ ಸಮಾಜಬಾಂಧವರು ಇದಕ್ಕೆ ನೀಡುತ್ತಿದ್ದ ಗೌರವ ಅಗಾಧವಾದದ್ದು. ವೀಳ್ಯವನ್ನು ಅನೇಕ ರೂಪದಲ್ಲಿ ಉಪಯೋಗಿಸುವುದನ್ನು ಕಾಣಬಹುದು. ಶುಭಕಾರ್ಯಕ್ಕೆ ಬರಮಾಡಿಕೊಳ್ಳುವ ಸ್ವಾಗತ ವೀಳ್ಯ, ಭಕ್ತಿ ಪೂರ್ವಕವಾಗಿ ತೆಗೆದಿಡುವ ದೇವರ ವೀಳ್ಯ, ಚತಿಗಾರಿಕೆ ವೀಳ್ಯ, ತಂದೆ ತಾಯಿ ವಿಳ್ಯ, ಒತ್ತಿನೂರಿನ ವೀಳ್ಯ, ಗುರಿಕಾರರ ವಿಳ್ಯ, ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ನೀಡುವ ತಪ್ಪಿನ ವೀಳ್ಯ, ಹೋಬಳಿ ವಿಳ್ಯ ಹೀಗೆ ಹಲವು ವಿಧದ ವೀಳ್ಯಗಳನ್ನು ಕಾಣಬಹುದಾಗಿದೆ. ಮದುವೆ ಕಾರ್ಯಕ್ರಮದಲ್ಲಂತೂ ವೀಳ್ಯ ಮತ್ತು ಗುರಿಕಾರರದ್ದೇ ದರ್ಬಾರು. ವೀಳ್ಯದ ಮೂಲಕ ಗುರಿಕಾರರನ್ನು ಕರೆಯುವುದು ಮಗುವೀರ ಸಂಸ್ಕೃತಿಯಲ್ಲಿ ಒಂದು ಸಂಪ್ರದಾಯ. ಮಾತ್ರವಲ್ಲದೆ ಮೊಗವೀರರು ಅನುಸರಿಸುತ್ತಿದ್ದ ಅಲಿಖಿತ ಕರ್ತವ್ಯವೂ ಸಹ ಆಗಿತ್ತು."[6]

ಕುಟುಂಬದಲ್ಲಿ ಸಾವು ಸಂಭವಿಸಿದಾಗ ಮೊದಲು ಊರಿನ ಗುರಿಕಾರರಿಗೆ ವಿಷಯವನ್ನು ಮುಟ್ಟಿಸುತ್ತಿದ್ದರು. ಸುದ್ದಿ ತಿಳಿದ ಗುರಿಕಾರರು ಘಟನೆ ನಡೆದ ಮನೆಗೆ ತೆರಳಿ ಮನೆ ಮಂದಿಗೆಲ್ಲ ಸಮಾಧಾನ ಹೇಳಿ, ಅವರ ಬಂಧು ಬಾಂಧವರಿಗೆಲ್ಲ ಸುದ್ದಿ ಮುಟ್ಟಿಸಿ, ಕೂಡು ಕಟ್ಟಿಗೆ ಸಂಬಂಧಿಸಿದ ಪ್ರತಿ ಮನೆಗೆ ಹೇಳಿ ಕಳುಹಿಸಿ ಅಥವಾ ತಾನೇ ಸ್ವತಃ ಹೋಗಿ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸುವಂತೆ ತಾಕೀತು ಮಾಡುತ್ತಿದ್ದರು. ಒಂದು ಮನೆಯಿಂದ ಒಬ್ಬರಾದರೂ ಬರಲೇಬೇಕಿತ್ತು. ಒಂದು ವೇಳೆ ಇಂತಹ ಅಶುಭದ ಅರ್ಥಾತ್ ಕಷ್ಟದ ಸಮಯದಲ್ಲಿ ಬಾರದಿದ್ದರೆ ದೊಡ್ಡ ಅಪರಾಧವೆಂದು ಪರಿಗಣಿಸುವುದು ಮಾತ್ರವಲ್ಲ, ತಕ್ಕ ದಂಡ ರೂಪದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಗುರಿಕಾರರು ಅಂತ್ಯಕ್ರಿಯೆಯನ್ನು ಸಾಂಗವಾಗಿ ವಿಧಿ ವಿಧಾನಗಳ ಮೂಲಕ ನೆರವೇರಿಸುತ್ತಿದ್ದರಲ್ಲದೇ, ಸೂತಕ ಕರ್ಮ ಮುಗಿಯುವವರೆಗೆ ಅವರ ದುಃಖದಲ್ಲಿ ಸಹಭಾಗಿಯಾಗುವುದು ಗುರಿಕಾರತ್ವ ಜವಾಬ್ದಾರಿಯೊಂದಿಗೆ ಗುರಿಕಾರರ ಮಾನವೀಯತೆಯ ಸಂಕೇತವೂ ಆಗಿತ್ತು. ಕೂಡುಕಟ್ಟಿನ ಮೊಗವೀರ ಸದಸ್ಯರು ಸಂಬಂಧಪಟ್ಟ ಗುರಿಕಾರರಿಗೆ ತುಂಬಾ ಆದರಪೂರ್ವಕವಾದ ಗೌರವ ಮಾನ್ಯತೆಗಳನ್ನು ನೀಡುತ್ತಿದ್ದರು ಎನ್ನುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸಮಾಜಬಾಂಧವರ ಅಭಿಪ್ರಾಯಗಳಿಂದ ತಿಳಿದು ಬರುತ್ತದೆ.

ಗುರಿಕಾರ ಪದ್ಧತಿಯ ಪ್ರಸ್ತುತ ಸ್ಥಿತಿಗತಿ

ಮೊಗವೀರ ಸಮಾಜದಲ್ಲಿ ನಾಯಕರಾಗಿ, ಪುರೋಹಿತರಾಗಿ ನ್ಯಾಯಾಧೀಶರಾಗಿ, ಮಾರ್ಗದರ್ಶಕರಾಗಿ, ಬುದ್ವಂತರಾಗಿ, ಕಟ್ಟುಕಟ್ಟಳೆಯ ಸಂರಕ್ಷಕರಾಗಿ, ಮೊಗವೀರ ಸಮಾಜದ ಹಿತ ಸಾಧನೆಯ ಎಲ್ಲಾ ಮಗ್ಗಲುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಗುರಿಕಾರರು ಮತ್ತು ಗುರಿಕಾರ ಪದ್ಧತಿಯ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಅವಲೋಕಿಸುವ ಅಗತ್ಯವಿದೆ. ಇದಕ್ಕೆ ಪೂರಕವಾಗಿ ಕೆಲವು ವರ್ಷಗಳ ಹಿಂದೆ ದಿನಾಂಕ 23–11– 2018 ರಂದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೊಗವೀರ ಸಮುದಾಯದ ಮೂರು ಹೋಬಳಿಯ ಗುರಿಕಾರರನ್ನು ಒಂದೇ ಕಡೆ ಸಮ್ಮಿಲನಗೊಳಿಸಿ ಸಮುದಾಯದ ಕುರಿತು ಚರ್ಚೆ, ವಿಚಾರ, ವಿಮರ್ಶೆಗೆ ವೇದಿಕೆ ಸಜ್ಜುಗೊಳಿಸಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಈ ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ಅವಿದ್ಯಾವಂತರಾಗಿದ್ದ ಮೊಗವೀರ ಸಮಾಜಬಾಂಧವರು ರಕ್ತ ಸಂಬಂಧ ಎನ್ನುವ ಪವಿತ್ರ ಬಾಂಧವ್ಯದ ಏಕಮಾತ್ರ ಮಾನವೀಯ ಅಸ್ತ್ರದೊಂದಿಗೆ ಸುಮಾರು ಇಪ್ಪತ್ತೈದರಿಂದ ಎಪ್ಪತ್ತೈದಕ್ಕಿಂತ ಹೆಚ್ಚಿನ ಸದಸ್ಯರು ಒಂದೇ ಕುಟುಂಬದಲ್ಲಿ ಪರಸ್ಪರ ಅನ್ಯೋನ್ಯತೆಯಿಂದ ಬದುಕುವ ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿತ್ತು. ಈ ವ್ಯವಸ್ಥೆಯಲ್ಲಿ ವಿಶಾಲ ಆಲದ ಮರದಂತೆ ಕೂಡುಕಟ್ಟಳಿಗಳಿಗೆ ಜವಾಬ್ದಾರಿಯಾಗಿ, ಗುರಿಕಾರರು ಮೊಗವೀರ

ಸಮಾಜವನ್ನು ಘನತೆ ಗೌರವಗಳಿಂದ ಮುನ್ನಡೆಸುತ್ತಿದ್ದರು. ಮಾತ್ರವಲ್ಲ ಪ್ರತಿಯೊಬ್ಬ ಮೊಗವೀರನೂ ಗುರಿಕಾರರಿಗೆ ಅದಕ್ಕೆ ತಕ್ಕಂತೆ ಮಾನ್ಯತೆ ಗೌರವವನ್ನು ನೀಡುತ್ತಿದ್ದರು. ಆದರೆ ಇಂದು ಕಾಲ ಬದಲಾಗಿದೆ. ಸಾಕ್ಷರತೆಗೆ ಸರ್ಕಾರವೇ ಮುಂದಾಗಿದ್ದು, ಸಂಘ ಸಂಸ್ಥೆಗಳಿಂದ ಕೊಡುಗೈ ದಾನಿಗಳಿಂದ ವಿದ್ಯಾಭ್ಯಾಸಕ್ಕೆ ಹೇರಳವಾದ ಪ್ರೋತ್ಸಾಹ ದೊರೆಯುತ್ತಿದೆ. ಪರಿಣಾಮವಾಗಿ ಬೇರೆ ಬೇರೆ ಸಮುದಾಯಗಳಂತೆ ಮೊಗವೀರ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ವಿದ್ಯಾವಂತ ಯುವ ಜನಾಂಗ ಪೇಟೆ ಅಥವಾ ನಗರಗಳ ಕಡೆ ಮುಖ ಮಾಡಿ ಅಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡು ಆಧುನಿಕ ಜೀವನ ಶೈಲಿಗೆ ತಮ್ಮನ್ನು ಅರ್ಪಿಸಿಕೊಂಡಿರುವುದರಿಂದ ಸಮುದಾಯದ ನೀತಿ, ನಿಯಮ, ಕಟ್ಟಳೆ ,ಸಂಪ್ರದಾಯ, ಆಚರಣೆಗಳಿಂದ ದೂರ ಸರಿಯುತ್ತಿದ್ದಾರೆ. ಇದರಿಂದಾಗಿ ಗುರಿಕಾರ ಪದ್ಧತಿಯು ತನ್ನ ನಿಜವಾದ ಶಕ್ತಿಯನ್ನು ಕಳೆದುಕೊಳ್ಳುತ್ತಿದೆ.

ನಮ್ಮ ಇತಿಹಾಸವನ್ನು ಗಮನಿಸಿದಾಗ ಸಮಾಜದಲ್ಲಿ ಶಕ್ತಿಯುತ ಅಥವಾ ಮೇಲ್ವರ್ಗದ ಸಮುದಾಯಗಳು ದುರ್ಬಲ ವರ್ಗದ ಬದುಕಿನ ಮೇಲೆ ತಮ್ಮ ದಬ್ಬಾಳಿಕೆ, ದೌರ್ಜನ್ಯ ನಡೆಸಿರುವುದನ್ನು ಕಾಣಬಹುದು. ಇದರಿಂದಾಗಿ ದುರ್ಬಲ ವರ್ಗಕ್ಕೆ ಅನಿವಾರ್ಯವಾಗಿ ಒಬ್ಬ ನಾಯಕನ ನೇತೃತ್ವ ಬೇಕಿತ್ತು. ಆ ನಾಯಕನ ನೇತೃತ್ವದಲ್ಲಿ ಸಂಘಟಿತರಾಗಿದ್ದಲ್ಲಿ ಇಂತಹ ದಬ್ಬಾಳಿಕೆ, ದೌರ್ಜನ್ಯವನ್ನು ಯಶಸ್ವಿಯಾಗಿ ಎದುರಿಸಬಹುದು ಎನ್ನುವ ಕಾರಣಕ್ಕಾಗಿ ಮೊಗವೀರ ಸಮುದಾಯದಲ್ಲಿ ಗುರಿಕಾರರಿಗೆ ಅತ್ಯುನ್ನತವಾದ ಸ್ಥಾನಮಾನ ಲಭಿಸಿತ್ತು. ಆದರೆ ಈಗ ಗ್ರಾಮೀಣ ಪ್ರದೇಶದಲ್ಲಿಯೂ ನಾನ ಕಾರಣಗಳಿಂದಾಗಿ ಸಮಾಜದ ಪ್ರಬಲ ವರ್ಗದವರು ದುರ್ಬಲ ವರ್ಗದವರ ಮೇಲೆ ಮಾಡುತ್ತಿರುವ ದಬ್ಬಾಳಿಕೆ, ದೌರ್ಜನ್ಯಗಳು ಕಡಿಮೆಯಾಗಿರುವುದರಿಂದ ಸಮುದಾಯದ ನಾಯಕನಾದ ಗುರಿಕಾರರ ಪ್ರಾಧಾನ್ಯತೆಯು ಸಹಜವಾಗಿಯೇ ಕಡಿಮೆಯಾಗಿದೆ. ಇಂದಿನ ಹಳ್ಳಿ ಹಳ್ಳಿಗಳು ಸಹ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಅಲ್ಲಿನ ಜೀವನ ಶೈಲಿಗಳು ಬದಲಾಗಿವೆ. ಹಿಂದೆ ಮೊಗವೀರ ಸಮುದಾಯದಲ್ಲಿ ಭಂಡಾರಿ, ಮಡಿವಾಳರ ಜೊತೆ ಗುರಿಕಾರರು ಶುಭ–ಅಶುಭ ಕಾರ್ಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರು ಆದರೆ ಇಂದು ಈ ಮೂವರ ಪ್ರಾಮುಖ್ಯತೆಯು ಕಡಿಮೆಯಾಗಿದೆ. ಅಲ್ಲದೆ ಈ ಹಿಂದೆ ಗುರಿಕಾರ ಹೇಳಿದಂತೆ ಶುಭ ಅಶುಭದ ವಿಧಿ–ವಿಧಾನಗಳು ಇಂದು ನಡೆಯುತ್ತಿಲ್ಲ. ಬದಲಾಗಿ ಪುರೋಹಿತಶಾಹಿಯ ಪ್ರಭಾವದಿಂದ ಪುರೋಹಿತರು ಹೇಳುವ ವಿಧಿ ವಿಧಾನಗಳನ್ನು ಅನುಸರಿಸುತ್ತಿರುವುದನ್ನು ಕಾಣಬಹುದು. ಇದು ಸಹ ಪ್ರಸ್ತುತ ಗುರಿಕಾರರ ಪ್ರಾಮುಖ್ಯತೆ ಕಡಿಮೆಯಾಗಲು ಕಾರಣವಾಗಿದೆ. ಇಂದಿಗೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ಕಡೆ ಆರ್ಥಿಕ ಸ್ಥಿರತೆ ಇಲ್ಲದ ಅನಕ್ಷರಸ್ತ

ಗುರಿಕಾರರು ಸಮುದಾಯವನ್ನು ಮುನ್ನಡೆಸುವ ಚುಕ್ಕಾಣಿಯನ್ನು ಹಿಡಿದಿರುವುದು ಕಾಣಸಿಗುತ್ತದೆ. ಇಂತಹ ಅನಕ್ಷರಸ್ಥ ಗುರಿಕಾರರು ದುಷ್ಟ ವ್ಯಸನಗಳಿಗೆ ಒಳಗಾಗಿ ತಮ್ಮ ಸ್ಥಾನಮಾನವನ್ನು ಕಳೆದುಕೊಳ್ಳುತ್ತಿರುವುದು ಸಹ ಸಮಾಜ ಬಾಂಧವರು ಅವರನ್ನು ನಿರ್ಲಕ್ಷ್ಯಿಸುತ್ತಿರುವುದಕ್ಕೆ ಕಾರಣವಾಗಿದೆ. ಇದು ಪರೋಕ್ಷವಾಗಿ ಇಡೀ ಗುರಿಕಾರ ಪದ್ಧತಿಗೆ ಮಾರಕವಾಗಿ ಪರಿಣಮಿಸುತ್ತಿದೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಸಮಾಜದೊಳಗಿನ ವ್ಯಾಜ್ಯಗಳ ತೀರ್ಮಾನ ಮಾಡುವಾಗ ಕೆಲವು ಗುರಿಕಾರರು ತಾರತಮ್ಯದ ನೀತಿ ಅನುಸರಿಸುತ್ತಿರುವುದರಿಂದ ಅವರ ಮೇಲಿನ ನಂಬಿಕೆ ವಿಶ್ವಾಸಗಳು ಶಿಥಿಲಗೊಳ್ಳುತ್ತಿವೆ.

ಹಿಂದೆ ವ್ಯಕ್ತಿಗಿಂತ ಮುಖ್ಯವಾಗಿ ಗುರಿಕಾರತ್ವಕ್ಕೆ ಅಥವಾ ಅವನ ಸ್ಥಾನಮಾನಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿದ್ದರು. ಆದರೆ ಪ್ರಸ್ತುತ ಮನುಷ್ಯನ ಮನೋ ಧೋರಣೆಗಳು ಬದಲಾಗುತ್ತಿರುವುದರಿಂದ ಗುರಿಕಾರತ್ವಕ್ಕಿಂತಲೂ ಮುಖ್ಯವಾಗಿ ಗುರಿಕಾರತ್ವ ನಡೆಸುವ ವ್ಯಕ್ತಿಯ ವೈಯಕ್ತಿಕ ಸ್ಥಾನಮಾನಗಳು ಸಮುದಾಯದ ಜನತೆಗೆ ಮುಖ್ಯವಾಗುತ್ತಿದೆ. ಇದು ಕೂಡ ಗುರಿಕಾರ ಪದ್ಧತಿಗೆ ಬೀಳುತ್ತಿರುವ ಇನ್ನೊಂದು ಕೊಡಲಿ ಏಟು ಎನ್ನಬಹುದು. "ಕೆಲವೊಂದು ಕಡೆ ಗುರಿಕಾರರಿಗೆ ವಯಸ್ಸಾಗಿ ನಡೆಯಲಾರದ ಸ್ಥಿತಿಯಲ್ಲಿ ಇರುವುದರಿಂದಲೋ, ಆ ಕುಟುಂಬದಲ್ಲಿ ಗಂಡು ಸಂತತಿ ಕೊರತೆಯಿಂದಲೋ, ಇರುವ ಗಂಡಸು ಸಂಸಾರ ನಿರ್ವಹಣೆಯ ಭಾರ ಹೊತ್ತು ಪರ ಊರಿಗೆ ದುಡಿಮೆಗೆ ಹೋಗಿರುವುದರಿಂದಲೋ, ಪಾರಂಪರಿಯವಾಗಿ ಬಂದ ಗುರಿಕಾರತ್ವದ ಜವಾಬ್ದಾರಿಯನ್ನು ಮುಂದುವರಿಸಿಕೊಂಡು ಹೋಗಲು ಇಂದಿನ ಯುವಜನತೆ ಹಿಂಜರಿಯುವುದರಿಂದಲೋ, ಉರಿಕಾರತ್ವ ನಿರ್ವಹಣೆಗೆ ಯಾವುದೇ ಹಣ ಅಥವಾ ನಿಗದಿತ ಪ್ರತಿಫಲ ಇಲ್ಲದಿರುವುದರಿಂದಲೋ, ಇಂದಿನ ಯುವ ಸಮುದಾಯ ಕೊಡುವ ಮಾನ್ಯತೆ ಗೌರವದ ಕೊರತೆಯಿಂದಾದ ಜಿಗುಪ್ಸೆಯಿಂದಲೋ, ವಂಶ ಪಾರಂಪರ್ಯವಾಗಿ ಬಂದ ಗುರಿಕಾರತ್ವ ಮುಂದುವರಿಸಿಕೊಂಡು ಹೋಗಲು ಗುರಿಕಾರರ ಕುಟುಂಬ ವಿಫಲವಾಗಿರುವುದರಿಂದಲೋ ಪ್ರಸ್ತುತ ಗುರಿಕಾರ ಪದ್ಧತಿ ಅವನತಿಯ ಹಾದಿ ತುಳಿಯಲು ಮುಖ್ಯ ಕಾರಣಗಳಾಗಿವೆ. ಅಲ್ಲದೇ ಮೊಗವೀರ ಸಮಾಜದಲ್ಲಿ ಸಾಮಾನ್ಯವಾಗಿ ಅಳಿಯ ಸಂತಾನ ಕಟ್ಟು ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದು, ಇದರಂತೆ ಮಾವನಿಂದ ಅಳಿಯನಿಗೆ ಗುರಿಕಾರಕ ಜವಾಬ್ದಾರಿ ವಂಶಪಾರಂಪರ್ಯವಾಗಿ ಈ ಹಿಂದೆ ಯಾವುದೇ ಅಡೆತಡೆ ಇಲ್ಲದೆ ಒಬ್ಬರಿಂದ ಇನ್ನೊಬ್ಬರಿಗೆ ಬರುತ್ತಿತ್ತು. ಆದರೆ ಇತ್ತೀಚಿನ ಚಿಕ್ಕ ಸಂಸಾರದ ವ್ಯವಸ್ಥೆಯಲ್ಲಿ ಅಳಿಯ ಕಟ್ಟು ಮತ್ತು ಮಕ್ಕಳ ಕಟ್ಟು ಅನುಸರಿಸುವ ದ್ವಂದ್ವದಲ್ಲಿ ಕುಟುಂಬಗಳು ಇರುವುದರಿಂದ, ಕೆಲವೊಂದು ಕೂಡುಕಟ್ಟಿನಲ್ಲಿ ಗುರಿಕಾರಕ ಜವಾಬ್ದಾರಿ ಯಾರಿಗೆ ಎಂಬುದೇ ಯಕ್ಷಪ್ರಶ್ನೆಯಾಗಿರುವುದು ಕೂಡ ಗುರಿಕಾರ ಪದ್ಧತಿಯ ಹಿನ್ನಡೆಗೆ

ಮುಖ್ಯ ಕಾರಣವಾಗಿದೆ ಎನ್ನಬಹುದು."5 ಹೀಗೆ ಪ್ರಸ್ತುತ ಮೊಗವೀರ ಸಮುದಾಯದ ಗುರಿಕಾರ ಪದ್ಧತಿಯ ಮುಂದುವರಿಕೆಗೆ ಎದುರಾಗಿರುವ ಅನೇಕ ಸವಾಲುಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ವಿಶ್ಲೇಷಿಸಿ ಚರ್ಚಿಸಬಹುದಾಗಿದೆ.

ಮೊಗವೀರ ಸಮಾಜವನ್ನು ಈ ಹಿಂದಿನಂತೆ ಇಂದೂ ಕೂಡ ತಳಮಟ್ಟದಲ್ಲಿ ಕಟ್ಟುವ, ಗೌರವ ತಂದು ಕೊಡುವ ಗುರಿಕಾರರ ಅಗತ್ಯವಿದೆ. ಆ ಮೂಲಕ ಗುರಿಕಾರ ಪದ್ಧತಿಗೆ ಇಂದಿನ ಬದಲಾದ ಕಾಲಮಾನಕ್ಕೆ ತಕ್ಕಂತೆ ತನ್ನ ಮೂಲ ಅಸ್ತಿತ್ವವನ್ನು ಕಳೆದುಕೊಳ್ಳದ ಹಾಗೆ ಹೊಸ ಚೈತನ್ಯವನ್ನು ತುಂಬಿ ಅದನ್ನು ಎತ್ತಿ ಹಿಡಿಯಬೇಕಾದ ಅಗತ್ಯವಿದೆ. ಹಿರಿಯ–ಕಿರಿಯ ಎನ್ನುವ ಯಾವುದೇ ಭೇದವಿಲ್ಲದೆ ಗೌರವದ ಮಾನ್ಯತೆಯನ್ನು ನೀಡುತ್ತಾ, ಪ್ರೋತ್ಸಾಹದ ಉತ್ತೇಜವನ್ನು ತುಂಬುತ್ತಾ, ಸಮಾಜ ಸೇವೆಯ ಸ್ಫೂರ್ತಿಯ ಕಿಡಿಗಳನ್ನು ಹಚ್ಚಿ ಮೊಗವೀರ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾಗಿದೆ. ಇದು ಎಲ್ಲಾ ಮೊಗವೀರ ಸಮಾಜದ ಸದಸ್ಯರ ಜವಾಬ್ದಾರಿಯೂ ಹೌದು. ಹಾಗೂ ಗುರಿಕಾರರ ಜವಾಬ್ದಾರಿಯೂ ಹೌದು. ಮುಖ್ಯವಾಗಿ ಇಂದಿನ ಆಧುನಿಕತೆಯ ಜೀವನ ಪದ್ಧತಿಯನ್ನು ಗಮನದಲ್ಲಿಟ್ಟುಕೊಂಡು ಮೊಗವೀರರು ತಮ್ಮತನದ ಮೂಲ ಸಂಸ್ಕೃತಿಗೆ ಧಕ್ಕೆಯಾಗದಂತೆ ಸ್ವಲ್ಪ ಹೊಂದಾಣಿಕೆಯೊಂದಿಗೆ ಗುರಿಕಾರ ಪದ್ಧತಿಯನ್ನು ರೂಪಿಸಿಕೊಂಡು, ರೂಢಿಸಿಕೊಂಡು ಅನುಸರಿಸುವ ಅಗತ್ಯವಿದೆ. ಹಾಗಾಗಿ ಕೇವಲ ಗುರಿಕಾರರು ಮಾತ್ರವಲ್ಲ ಇಂದಿನ ಯುವ ಜನಾಂಗ, ಸಮುದಾಯದ ಗುರಿಕಾರ ಪದ್ಧತಿಯ ಸಾಂಸ್ಕೃತಿಕ ಮಹತ್ವ, ಅದರ ವೈಭವ ಹಾಗೂ ಮುಂದಿನ ದಿನಗಳಲ್ಲಿ ಅದರ ಅಗತ್ಯತೆಯನ್ನು ಅರಿಯಬೇಕಾಗಿದೆ. ಅಲ್ಲದೆ ಪ್ರಸ್ತುತ ಗುರಿಕಾರ ಪದ್ಧತಿಯ ಅವಲೋಕನದಲ್ಲಿ ತೊಡಗಿ ಅದರಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಪ್ರಸ್ತುತ ದಿನಗಳಲ್ಲಿ ಗುರಿಕಾರರಿಗೆ ಕೂಡು ಕಟ್ಟಿನ ಆಚಾರ ವಿಚಾರಗಳ, ನಡವಳಿಯ ಬಗ್ಗೆ ಮಾಹಿತಿ, ಮಾರ್ಗದರ್ಶನ, ಸಲಹೆ ಸೂಚನೆಗಳನ್ನು ಆಗಿಂದಾಗ ಹೋಬಳಿ ಅಥವಾ ಸಂಘದ ಮಟ್ಟದಲ್ಲಿ ನೀಡುವ ಮೂಲಕ ಅವರ ಕರ್ತವ್ಯ ಮತ್ತು ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ದಿನಗಳಲ್ಲಿ ಗುರಿಕಾರ ಪದ್ಧತಿಯನ್ನು ಸುಧಾರಿಸಬಹುದಾದ ಕೆಲವು ಸಲಹೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಗುರಿಕಾರರ ವ್ಯಕ್ತಿತ್ವ ಸದಾ ಸಮುದಾಯಕ್ಕೆ ಮಾದರಿಯಾಗಿರಬೇಕು. ಸಭೆ ಸಮಾರಂಭಗಳಲ್ಲಿ ಎಲ್ಲ ರೀತಿಯ ಶಿಸ್ತನ್ನು ಕಾಪಾಡಿಕೊಂಡು ರೂಡಿಸಿಕೊಳ್ಳಬೇಕು. ಅಂದರೆ ತಾನು ಶಿಸ್ತಿನಿಂದ ಇದ್ದು ಇತರರಿಗೆ ಶಿಸ್ತನ್ನು ಹೇಳುವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು.
2. ಗುರಿಕಾರರು ಸಮುದಾಯದ ಸಂಪ್ರದಾಯ, ಆಚರಣೆ ಕಟ್ಟುಕಟಳೆಗಳನ್ನು ಜಾರಿಗೆ ತರುವಾಗ ಈಗಿನ ಆಧುನಿಕ ಜೀವನ ಶೈಲಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮುಖ್ಯವಾಗಿ

ಯುವ ಜನಾಂಗದ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ, ಅವರೊಂದಿಗೆ ಹೊಂದಾಣಿಕೆ ಮನೋಭಾವವನ್ನು ಬಳಸಿಕೊಂಡು ಸಮುದಾಯದ ಸಂಸ್ಕೃತಿಯನ್ನು ಮುಂದುವರಿಸಬೇಕು.

3. ಯಾವನೇ ಒಬ್ಬ ಗುರಿಕಾರ ತನ್ನ ಗುರಿಕಾರತ್ವವನ್ನು ಮುಂದುವರಿಸಿಕೊಂಡು ಹೋಗಲು ಕಾರಣಾಂತರದಿಂದ ಕಷ್ಟ ಸಾಧ್ಯವೆಂದು ಕಂಡುಬಂದರೆ ತಕ್ಷಣ ಸಂಬಂಧಪಟ್ಟ ಹೋಬಳಿ ಅಥವಾ ಸಂಘಕ್ಕೆ ಮಾಹಿತಿಯನ್ನು ನೀಡಿ ಪರ್ಯಾಯ ವ್ಯವಸ್ಥೆಗೆ ಅನುವು ಮಾಡಿಕೊಡಬೇಕು.

4. ಮೊಗವೀರ ಸಮುದಾಯದಲ್ಲಿ ಆಚರಣೆಯಲ್ಲಿರುವ ಕೆಲವು ಮೌಢ್ಯಾಧಾರಿತ ಸಂಪ್ರದಾಯಗಳನ್ನು, ಗಂಡ ಸತ್ತ ವೈಧವ್ಯದ ಕಟ್ಟುಪಾಡುಗಳನ್ನು ಸಡಿಲಗೊಳಿಸಿ, ಮಾನವೀಯತೆಗೆ ಒತ್ತು ನೀಡಬೇಕು. ಆ ಮೂಲಕ ಜೀವ ಪರ ನಿಲುವುಗಳನ್ನು ಹೆಚ್ಚು ಹೆಚ್ಚು ಸಮುದಾಯದಲ್ಲಿ ಅಳವಡಿಸಿಕೊಳ್ಳಬೇಕು.

5. ವರ್ಷಕ್ಕೆ ಕನಿಷ್ಠ ಎರಡು ಮೂರು ಬಾರಿಯಾದರೂ ಕೂಡುಕಟ್ಟಿನ ಸಭೆ ಕರೆದು ವಿಚಾರ ವಿನಿಮಯ ಮಾಡಿಕೊಳ್ಳುವುದರ ಮೂಲಕ ತನ್ನ ವ್ಯಾಪ್ತಿಗೆ ಬರುವ ಸಮಾಜದ ಸದಸ್ಯರೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು ಕ್ರಿಯಾಶೀಲತೆಯನ್ನು ಕಾಪಾಡಿಕೊಳ್ಳಬೇಕು.

6. ಸಮಾಜದೊಳಗಿನ ವ್ಯಾಜ್ಯ ತೀರ್ಮಾನಗಳಲ್ಲಿ ತಾರತಮ್ಯ, ಭೇದಭಾವ ನೀತಿಗೆ ಅನುವು ಮಾಡಿಕೊಡಬಾರದು. ಯಾವುದೇ ಪ್ರಭಾವಕ್ಕೆ ಒಳಗಾಗದೆ ನಾವೆಲ್ಲರೂ ಸಮುದಾಯದ ಸದಸ್ಯರು ಎಂಬ ಸಮಾನತೆಯ ತತ್ವವನ್ನು ಅರಿತು ಸಮಾಜದ ಇತರ ಬಾಂಧವರಲ್ಲಿಯೂ ಈ ಭಾವವನ್ನು ಮೂಡಿಸಬೇಕು. ಹಾಗೆಯೇ ಎಲ್ಲರಿಗೂ ತನ್ನ ಮೇಲೆ ನಂಬಿಕೆ, ವಿಶ್ವಾಸ ಇರುವಂತೆ ನೋಡಿಕೊಳ್ಳಬೇಕು.

7. ಗುರಿಕಾರತ್ವಕ್ಕೆ ಒಂದು ಗೌರವ ಇದೆ. ಅದು ತಲೆತಲಾಂತರದಿಂದ ಅನುಸರಿಸಿಕೊಂಡು ಬಂದ ನಿಸ್ವಾರ್ಥ ಸಮಾಜಸೇವೆಯ ಸಂಕೇತ. ಇಂತಹ ಅವಕಾಶ ಸಿಕ್ಕಿರುವುದೇ ತನ್ನ ಅಥವಾ ತನ್ನ ಕುಟುಂಬದ ಗೌರವ. ಇದಕ್ಕೆ ಯಾವುದೇ ಚ್ಯುತಿ ಬಾರದ ಹಾಗೆ ಮುಂದುವರಿಸಿಕೊಂಡು ಹೋಗುತ್ತೇನೆಂಬ ವಿಶಾಲ ಹೃದಯ ಗುರಿಕಾರರಿಗೆ ಇರಬೇಕು.

8. ವ್ಯಕ್ತಿಗಿಂತಲೂ ಗುರಿಕಾರತ್ವಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಡುವ ನಮ್ಮ ಹಿಂದಿನ ಗುರಿಕಾರರು ಹಾಕಿಕೊಟ್ಟ ಮಾರ್ಗವನ್ನೇ ಈಗಿನ ಸಮಾಜ ಬಾಂಧವರು ಅನುಸರಿಸಿಕೊಂಡು ಹೋಗಬೇಕು. ವ್ಯಕ್ತಿಯ ಸಾಮಾಜಿಕ ಸ್ಥಾನಮಾನ, ಬಡವ– ಶ್ರೀಮಂತ, ವಿದ್ಯಾವಂತ– ಅವಿದ್ಯಾವಂತ ಇತ್ಯಾದಿ ತಾರತಮ್ಯ ತೋರದೆ ಕೇವಲ ಅವನ ಗುರಿಕಾರತ್ವಕ್ಕೆ ಗೌರವ

ಹಾಗೂ ಮಾನ್ಯತೆಯನ್ನು ನೀಡಬೇಕು.

9. ಅಳಿಯ ಸಂತಾನ ಕಟ್ಟು, ಮಕ್ಕಳ ಸಂತಾನ ಕಟ್ಟು ಎಂಬ ನೆಪವೊಡ್ಡಿ ವಂಶಪಾರಂಪರ್ಯವಾಗಿ ಬಂದ ಕುಟುಂಬದ ಹಕ್ಕು, ಕರ್ತವ್ಯದಿಂದ ವಿಮುಖರಾಗಲು ಮನಸ್ಸು ತೊರದೆ ಹೋಬಳಿ, ಸಂಘದ ಮಾರ್ಗದರ್ಶನ ಸಲಹೆ ಸೂಚನೆಯನ್ನು ಪಡೆದು ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಬೇಕು.

10. ಯಾವುದೇ ಒಬ್ಬ ವ್ಯಕ್ತಿ ವಿದ್ಯಾವಂತ ಎಂದಾಕ್ಷಣ ಸಂಸ್ಕೃತಿಯಿಂದ ಹೊರತಾಗಬೇಕೆಂದಿಲ್ಲ. ಸಮಾಜದೊಳಗಿನ ಒಳಿತು ಕೆಡಕುಗಳನ್ನು ವಿಮರ್ಶಿಸಿ, ಮೂಲ ಸಂಸ್ಕೃತಿಯ ತತ್ವವನ್ನು ಅರಿತು, ನಾಗರಿಕ ಸಮಾಜವನ್ನು ಕಟ್ಟುವ ಸೂತ್ರವನ್ನು ರೂಪಿಸಿಕೊಂಡು ಹೊಂದಾಣಿಕೆಯೊಂದಿಗೆ ಸಾಗಬೇಕಾಗುತ್ತದೆ. ಆದ್ದರಿಂದ ಈ ಜವಾಬ್ದಾರಿಯನ್ನು ಸಮುದಾಯದ ಪ್ರತಿಯೊಬ್ಬ ವಿದ್ಯಾವಂತನೂ ಅರಿತುಕೊಂಡು ಗುರಿಕಾರ ಪದ್ಧತಿಗೆ ಚ್ಯುತಿ ಬಾರದಂತೆ ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿಯನ್ನು ನಿರ್ವಹಿಸಬೇಕು.

11. ಗ್ರಾಮಗಳ ವಾರ್ಷಿಕ ಮಹಾಸಭೆಯನ್ನು ಕಟ್ಟುನಿಟ್ಟಾಗಿ ನಡೆಸುವುದು, ಈ ಬಗ್ಗೆ ಮಹಾಜನ ಸಂಘದ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವುದು ಹಾಗೂ ಗುರಿಕಾರರಿಗೆ ಆಡಳಿತದಲ್ಲಿ ಕೆಲವು ಸ್ಥಾನಮಾನ ಮೀಸಲಿಡುವುದರ ಬಗ್ಗೆ ಚಿಂತಿಸಬೇಕು.

12. ಗುರಿಕಾರರು ಸಮಾಜದ ಕಟ್ಟುಕಟ್ಟಳೆ ಹಾಗೂ ಹುಟ್ಟಿನಿಂದ ಸಾವಿನವರೆಗಿನ ಶುಭ ಅಶುಭಗಳ, ವಿಧಿ ವಿಧಾನಗಳ ಬಗ್ಗೆ ಸ್ವಯಂ ಅರಿತುಕೊಳ್ಳುವಂತಾಗಬೇಕು. ಎಲ್ಲಾ ತರದ ಜನರನ್ನು ಒಗ್ಗೂಡಿಸಿಕೊಂಡು ಹೋಗಬೇಕು ಮಾತ್ರವಲ್ಲದೆ ಮಹಾಸಭೆ ಹಾಗೂ ಸಮುದಾಯದ ಇತರೆ ಸಾಮಾನ್ಯ ಸಭೆಗಳಲ್ಲಿ ಸಮಾಜ ಬಾಂಧವರೆಲ್ಲರೂ ಹಾಜರಾಗುವಂತೆ, ಗುರಿಕಾರರು ಪ್ರೇರೇಪಿಸಬೇಕು.

13. ಗುರಿಕಾರರ ನಡೆ–ನುಡಿಗಳು ನಯ ವಿನಯದಿಂದ ಕೂಡಿ ಆದರ್ಶವಾಗಿದ್ದು, ಇತರರಿಗೆ ಮಾದರಿಯಾಗಿರಬೇಕು. ಅಲ್ಲದೆ ಸಮಾಜ ಬಾಂಧವರು ಗುರಿಕಾರರನ್ನು ಅವಮಾನಿಸುವ, ನಿರ್ಲಕ್ಷಿಸುವ ಮಟ್ಟಕ್ಕೆ ಹೋಗಬಾರದು.

14. ಸಮಾಜದ ಹಿರಿಯರು ಸಮಾಜಕ್ಕಾಗಿ, ಸಮಾಜದ ಏಳಿಗೆಗಾಗಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಸಮಾಜ ಬಂಧುಗಳಿಗೆ ತಲುಪಿಸಲು ಹಾಗೂ ಸಮಾಜಬಾಂಧವರಿಂದ ಬಂದ ಅಹವಾಲು, ಕೋರಿಕೆ ಮುಂತಾದವುಗಳನ್ನು ಸಂಘದ ಧುರೀಣರಿಗೆ ತಿಳಿಸಲು ಗುರಿಕಾರರು ಪ್ರಮುಖ ಪಾತ್ರ ನಿರ್ವಹಿಸಬೇಕು.

ಒಟ್ಟಿನಲ್ಲಿ ವಿಶ್ವವೇ ದೇಶವಾಗಿ, ದೇಶವೇ ಗ್ರಾಮವಾಗಿ, ಗ್ರಾಮವೇ ಕುಟುಂಬದಂತೆ

ಭಾಸವಾಗಿ ಕುಟುಂಬ ಮಟ್ಟದಲ್ಲಿ ವಿಶ್ವ ಸಂಸ್ಕೃತಿಯನ್ನು ಕಾಣಬಹುದಾದ ಇಂದಿನ ಬದಲಾದ ಕಾಲಘಟ್ಟದಲ್ಲಿ ನೂರಾರು ವರ್ಷಗಳಿಂದ ಮೊಗವೀರ ಸಂಸ್ಕೃತಿಯ ಸಂರಕ್ಷಕರಾಗಿದ್ದ ಗುರಿಕಾರರು ಸಮುದಾಯದ ಸಂಪ್ರದಾಯ– ಆಚರಣೆ– ಕುಡುಕಟ್ಟು– ಕಟ್ಟುಕಟ್ಟಲೆಗಳನ್ನು, ವಿಧಿ ವಿಧಾನಗಳ ಮೂಲಕ ನಡೆಸಿಕೊಡುವುದರೊಂದಿಗೆ ವ್ಯಕ್ತಿ ವ್ಯಕ್ತಿಗಳ ಮಧ್ಯೆ ಕುಟುಂಬ ಕುಟುಂಬಗಳ ನಡುವೆ ಸಂಘ ಸಂಸ್ಥೆಗಳೊಂದಿಗೆ, ಸಮುದಾಯಗಳೊಂದಿಗೆ ಸಂಪರ್ಕದ ಕೊಂಡಿಯಾಗಿ ಮಾನವೀಯತೆಯ ಸೆಲೆಯಾಗಿ ನಮ್ಮ ಹಿರಿಯ ಗುರಿಕಾರರು ನಿರ್ವಹಿಸಿದ ಪಾತ್ರ, ತಂದುಕೊಟ್ಟ ಕೀರ್ತಿ ಅವಿಸ್ಮರಣೀಯವಾದದು. ಇಂತಹ ಗುರಿಕಾರರನ್ನು ಹಾಗೂ ಗುರಿಕಾರ ಪದ್ಧತಿಯನ್ನು ಉಳಿಸಿ, ಬೆಳೆಸಿ, ಪ್ರೋತ್ಸಾಹಿಸಿ ಗೌರವಗಳೊಂದಿಗೆ ಇದಕ್ಕೆ ಮಾನ್ಯತೆ ನೀಡುವುದು ಇಂದಿನ ಅಗತ್ಯವಾಗಿದೆ.

ಅಡಿಟಿಪ್ಪಣಿ :

1. ಎಡ್ಗರ್ ಥರ್ಸ್ಟನ್ : ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟು ಜನಾಂಗ cast and tribes of South India ಪು. ಸಂ 132
2. ಫ್ರಾನ್ಸಿಸ್ ಬುಚನನ್ : journey from Madras through the countries of Mysore from Canara and Malabar ಅಧ್ಯಾಯ ಮೂರು ಪು ಸಂ 22
3. ಮೊಗವೀರ ಸಿಂಚನ: ಪ್ರಕಾಶಕರು– ಮೊಗವೀರ ಯುವ ಸಂಘಟನೆ (ರಿ) ಉಡುಪಿ ಜಿಲ್ಲೆ, ಪು. ಸಂ – 16
4. ಅದೇ ಕೃತಿ ಪು. ಸಂ– 15
5. ವೆಂಕಟರಮಣ ಪುಣಿಂಚತ್ತಾಯ: ಮೊಗವೀರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು.ಸಂ– 37

ಪರಾಮರ್ಶನ ಗ್ರಂಥಗಳು :

1.ಮೊಗವೀರ ಸಿಂಚನ: ಪ್ರಕಾಶಕರು– ಮೊಗವೀರ ಯುವ ಸಂಘಟನೆ (ರಿ) ಉಡುಪಿ ಜಿಲ್ಲೆ

2.ಸದಾನಂದ ಕೆ. ಉಚ್ಚಿಲ, ಮೊಗವೀರ ಸಮಾಜ – ಒಂದು ಅಧ್ಯಯನ, ದ.ಕನ್ನಡ ಮೊಮ ಸಂಘ, ಉಚ್ಚಿಲ, ಮೊಮ, ಸೇವಾ ಸಂಘ (ಬಾಗ್ವಾಡಿ ಹೋಬಳಿ)– 2014.

3.ವೆಂಕಟರಮಣ ಪುಣಿಂಚತ್ತಾಯ, ಮೊಗವೀರರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು. 1993

4. ಡಾ. ಶ್ರೀಧರ್ ಉಪ್ಪಿನಗಣಪತಿ, ಕಡಲಿಗರ ಸಂಸ್ಕೃತಿ, ಅದಿತಿ ಪ್ರಕಾಶನ ಕುಮಟಾ.
5. ಡಾ. ಕುಸುಮ ಎಸ್ ಕುಂದರ್, ಮುಂಬೈಯಲ್ಲಿ ಮೊಗವೀರ ಸಮುದಾಯ ಒಂದು ಸಾಂಸ್ಕೃತಿಕ ಅಧ್ಯಯನ, ಮುಂಬೈ ವಿ.ವಿ
6. ಎಡ್ಗರ್ ಥರ್ಸ್ಟನ್ : ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟು ಜನಾಂಗ cast and tribes of South India
7. ಫ್ರಾನ್ಸಿಸ್ ಬುಚನನ್ : journey from Madras through the countries of Mysore from Canara and Malabar

***

ಡಿ.ವಿ.ಜಿ ಹಾಗೂ ಮಂಕುತಿಮನ ಕಗ್ಗ : ಒಂದು ವಿವೇಚನೆ

1 ಡಾ. ಪ್ರಸನ್ನಕುಮಾರ್ ಕೆ.

ಸಹಾಯಕ ಪ್ರಾಧ್ಯಾಪಕ

ಡಾ. ಎನ್‌ಎಸ್‌ಎಎಂ ಪ್ರಥಮ ದರ್ಜೆ ಕಾಲೇಜು

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ, ಬೆಂಗಳೂರು–89

ಆಧುನಿಕ ಕನ್ನಡ ಸಾಹಿತ್ಯ ದಿಗ್ಗಜರಲ್ಲಿ ಡಿವಿಜಿಯವರು ಒಬ್ಬರು. ಇವರು 17 ಮಾರ್ಚ್ 1887 ರಲ್ಲಿ ಮುಳಬಾಗಿಲಿನ ದೇವನಹಳ್ಳಿ ಎಂಬ ಕುಗ್ರಾಮದಲ್ಲಿ ಜನಿಸಿದರು. ಒಂದು ಸಾಧಾರಣ ಮನೆತನದಿಂದ ಬಂದಂತಹವರು. ಮೂಲತಃ ಇವರ ಪೂರ್ವಜರು ತಮಿಳು ಪ್ರಾಂತ್ಯದ ತಿರುಚಿನಾಪಳ್ಳಿಯ ಪ್ರಾಂತ್ಯದವರು. ಇವರು ಬೃಹಚ್ಚರಣ ಪಂಗಡದವರು (ವೈದಿಕ ಧರ್ಮದ ಆಚರಣೆ ಆ ಪಂಗಡದಲ್ಲಿ ಪ್ರಧಾನವಾಗಿತ್ತಂತೆ – ಬೃಹತ್ ಆಚರಣೆ. ಆದ್ದರಿಂದ ಬೃಹದಾಚಾರಣರು ಎಂದು ಪ್ರತೀತಿ ಇದೆ) ಬಹಳ ವರ್ಷಗಳ ಹಿಂದೆ ತಮಿಳುನಾಡಿನ ‘ಮಂಜಾಪುತ್ತೂರಿ’ನಿಂದ ಇವರ ಪೂರ್ವಿಕರು ಕೋಲಾರದ ದೇವನಹಳ್ಳಿಗೆ ಬಂದು ನೆಲೆಸುತ್ತಾರೆ. ಮುಂದೆ ಕರ್ನಾಟಕದ ಆಚಾರ ವಿಚಾರಗಳನ್ನು ಪಾಲಿಸುತ್ತಾ, ಕರ್ನಾಟಕದವರಾದರು.

ಡಿವಿಜಿಯವರ ಅಜ್ಜ; ಮುತ್ತಾತ ದೇವನಹಳ್ಳಿ ತಾಲೂಕಿನ ಸೋಮತ್ತನಹಳ್ಳಿಯಲ್ಲಿ ಗುಂಡಪ್ಪನವರು ಹುಟ್ಟಿದರು. ಇವರು ಆ ಪ್ರದೇಶದ ಶೇಕದಾರ (ಕಂದಾಯ ವಸೂಲಿ ಮಾಡುವ)ರಾಗಿದ್ದರು. ಇವರಿಗೆ ಮೂವರು ಮಕ್ಕಳು; ಮೊದಲನೆಯವರು ಶೇಷಗಿರಿಯಪ್ಪ ಎರಡನೆಯವರು ರಾಮಣ್ಣ ಹಾಗೂ ಮೂರನೆಯವರು ಶೀನಪ್ಪ. ಮೊದಲ ಮಗನಾದ ಶೇಷಗಿರಿಯಪ್ಪನ ಮಗ ವೆಂಕಟರಮಣಯ್ಯ. ಈ ವೆಂಕಟರಮಣಯ್ಯನವರ ಮಗನೇ ಡಿವಿಜಿಯವರು (ಮುತ್ತಜ್ಜನ ಹೆಸರೇ ಡಿವಿಜಿಯವರಿಗೆ ಬಂದಿರ್ತಕ್ಕಂತದ್ದು). ಡಿವಿಜಿಯವರೆಗೆ

ಡಿ ವಿ ಶೇಷಗಿರಿರಾವ್ ಮತ್ತು ಡಿ ವಿ ರಾಮರಾವ್ ಎಂಬ ಸಹೋದರರು ಇದ್ದರು.

ಡಿವಿಜಿ ಅವರ ಬಾಲ್ಯಜೀವನ ಮುಳಬಾಗಿಲಿನಲ್ಲಿ ನಡೆಯಿತು. ಅಣ್ಣತಮ್ಮ ಅಕ್ಕ ತಂಗಿ ಅಜ್ಜ ಅಜ್ಜಿ ಅಕ್ಕ ಬಾವಂದಿರು ಸೊಸೆ ಮೊಮ್ಮಕ್ಕಳು ಹೀಗೆ ಸುಮಾರು 20ರಿಂದ 25 ಜನರನ್ನು ಹೊಂದಿರುವ ಕೂಡು ಕುಟುಂಬ. ಇಂತಹ ಸಂದರ್ಭದಲ್ಲಿ ಸಂಸಾರ ನಡೆಯುವುದು ಕಷ್ಟದ ಪರಿಸ್ಥಿತಿಯಾಗಿತ್ತು. ಆದರೆ ಡಿವಿಜಿಯವರ ಪುಣ್ಯವೆಂಬಂತೆ ಜಮೀನು ನೀರಾವರಿ ಇದ್ದಿದ್ದರಿಂದ ವರ್ಷಕ್ಕಾಗುವಷ್ಟು ದವಸ ಧಾನ್ಯಗಳಿಗೇನು ಕಡಿಮೆ ಆಗುತ್ತಿರಲಿಲ್ಲ. ಅಂದರೆ ಕಾಯಿ ಪಲ್ಲೆ ಇಂತಹವುಗಳಿಗೆ ಯಾವುದೇ ರೀತಿಯ ತೊಡಕಾಗುತ್ತಿರಲಿಲ್ಲ. ಈ ಮನೆತನದವರು ರಸ್ತೆ ಪಕ್ಕ ಇರುವ ಸಾಲು ಮರಗಳನ್ನು ಗುತ್ತಿಗೆ ಪಡೆಯುತ್ತಿದ್ದರು. ಆ ಮರಗಳಿಂದ ಬರುವ ಹಣ್ಣು ಕಾಯಿಗಳನ್ನು ತೆಗೆಸುವಾಗ ಡಿವಿಜಿ ಅವರು ಸಹ ಆಳುಗಳೊಂದಿಗೆ ಕಾವಲು ಕಾಯುತ್ತಿದ್ದರಂತೆ ಹೀಗೆ ಡಿವಿಜಿಯವರು ಚಿಕ್ಕಂದಿನಿಂದಲೂ ಬಹಳಷ್ಟು ಕ್ರಿಯಾಶೀಲರಾಗಿದ್ದು, ಜವಾಬ್ದಾರಿಗಳ ಮೂಟೆಯನ್ನು ಹೊತ್ತು ಬೆಳೆದ ಬಹಳ ಮಹಾನ್ ಕವಿ.

ಡಿವಿಜಿಯವರಿಗೆ ಪ್ರೇರಣೆ ಮತ್ತು ಪ್ರಭಾವ:

ಡಿವಿಜಿಯವರು 1898 ರಿಂದ 1899ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಹಾಗೂ 1900ರಲ್ಲಿ ಇಂಗ್ಲಿಷ್ ಲೋಯರ್ ಸೆಕೆಂಡರಿ ವಿದ್ಯಾಭ್ಯಾಸವನ್ನು ಕುಲಗುರು ವೇದಮೂರ್ತಿ ವೆಂಕಟರಮಣ ಭಟ್ಟರಿಂದ ಪಾಠ ಮುಗಿಸಿದರು. ಚಂದ್ರಶೇಖರಶಾಸ್ತ್ರೀ ಎಂಬ ಶಾಲಾ ಮಾಸ್ತರರಿಂದ ಕನ್ನಡ ಅಧ್ಯಯನ ಮಾಡಿ, ರಾಮಸ್ವಾಮಿ ಅಯ್ಯರ್ ಎಂಬುವವರಿಂದ ಇಂಗ್ಲೀಷನ್ನು ಕಲಿತರು. ಇದರಿಂದ ಅಂದಿನ ಸರ್ ಮಿರ್ಜಾ ಅಂತಹ ಅಧಿಕಾರಿಗಳೇ ಡಿವಿಜಿಯವರಿಂದ ಇಂಗ್ಲೀಷ್ ಲೇಖನ ಭಾಷಣಗಳನ್ನು ಪರಿಷ್ಕರಿಸಿಕೊಳ್ಳುತ್ತಿದರಂತೆ. ಆ ಮಟ್ಟಕ್ಕೆ ಡಿವಿಜಿಯವರು ಪ್ರಬುದ್ಧರಾಗಿ ಬೆಳೆದರೆನ್ನಬಹುದು. ಇಷ್ಟು ಬೆಳವಣಿಗೆಗಳಿಗೆಲ್ಲ ರಾಮಸ್ವಾಮಿ ಅಯ್ಯರ್ ಅವರೇ (ಇಂಗ್ಲೀಷ್ ಮಾಸ್ತರರು) ಕಾರಣ. ಹಾಗಾಗಿಯೇ ರಾಮಸ್ವಾಮಿ ಅಯ್ಯರ್ ಅವರ ಬಗ್ಗೆ ‘ಅವರು ಮುಳಬಾಗಿಲಿಗೆ ಕೆಲಸಕ್ಕೆ ಬಂದದ್ದು ತಮ್ಮ ಪುಣ್ಯ’ ಎಂದು ಹೊಗಳಿಕೊಂಡಿದ್ದಾರೆ.

ಪ್ರತಿಯೊಬ್ಬರ ಜೀವನದಲ್ಲಿ ಗುರುಗಳ ಪಾತ್ರ ಅನನ್ಯವಾದದ್ದು ಎಂಬುದಕ್ಕೆ ಇಲ್ಲಿನ ಡಿವಿಜಿಯವರ ವಿದ್ಯಾ ಗುರುಗಳು ಸಹ ಉದಾಹರಣೆಗಳಾಗಿ ನಿಲುಕುತ್ತಾರೆ. ಡಿವಿಜಿಯವರು ಪ್ರೌಢಶಾಲಾ ಶಿಕ್ಷಣಕ್ಕಾಗಿ ಮೈಸೂರು ಮಹಾರಾಜ ಕಾಲೇಜಿನ ಹೈಸ್ಕೂಲಿಗೆ ಸೇರಿಕೊಂಡರು. ಇದೇ ಸಂದರ್ಭದಲ್ಲಿ ತಮ್ಮ ಉಪಾಧ್ಯಾಯರಾದ ಬಾಪೂ ಸುಬ್ಬರಾಯರೆಂಬುವರು ‘ವಿದ್ಯಾದಾಯಿನಿ’ ಎಂಬ ಪತ್ರಿಕೆ ನಡೆಸುತ್ತಿದ್ದರು. ಇದರಿಂದ ಡಿವಿಜಿಯವರಿಗೆ ಪತ್ರಿಕೆ ಓದುವ ಅಭ್ಯಾಸ, ಷೇಕ್ಸ್ಪಿಯರ್‌ನ ಅಧ್ಯಯನ, ಗಿಬ್ಬನ್ ಎಂಬ ಇತಿಹಾಸಕಾರನ ಅಧ್ಯಯನ, ಅಲ್ಲದೆ

ಓದಿದ್ದನ್ನು ಮತ್ತೆ ಮತ್ತೆ ತಿದ್ದುವ ಎಲ್ಲಾ ಚಟುವಟಿಕೆಗಳು ಮೈಗೂಡಿದವು. ಜೊತೆಗೆ ತಾತನಾದ ಮೈಸೂರು ವೆಂಕಟಕೃಷ್ಣಯ್ಯ ಅವರ ಭೇಟಿಯಾಗುತ್ತದೆ. ಇದಲ್ಲದೆ ಬೆಳವಾಡಿ ದಾಸಪ್ಪ ಎಂಬ ಉಪಾಧ್ಯಾಯರಿಂದ ಭಾಷಾ ಸಾಹಿತ್ಯಕ್ಕೆ ಇನ್ನಷ್ಟು ಮೆರುಗು ಕಂಡುಬಂದಿತು. ಕೋಲಾರದಲ್ಲಿ ಪ್ರೌಢಶಾಲೆಯನ್ನು ಓದುತ್ತಿರಬೇಕಾದರೆ ಕನ್ನಡ ಉಪಾಧ್ಯಾಯರಾದ ಹನುಮಂತರಾಯ, ಇಂಗ್ಲಿಷ್ ಉಪಾಧ್ಯಾಯರಾದ ಆರ್ ವಿ ಕೃಷ್ಣಸ್ವಾಮಿ ಅಯ್ಯರ್ (ಪ್ರಸಿದ್ಧ ಇಂಗ್ಲಿಷ್ ಲೇಖಕರಾದ ಆರ್ ಕೆ ನಾರಾಯಣ್ ಅವರ ತಂದೆ) ಅವರ ಪ್ರಭಾವದಿಂದಾಗಿ ಸಾಹಿತ್ಯದ ಗಮಲು ಹೆಚ್ಚಾಯಿತೆನ್ನಬಹುದು.

ಡಿವಿಜಿಯವರು ಮೇರು ಕವಿಯಾಗಿ ಹೊರಹೊಮ್ಮಲು ಅವರ ಜೀವಮಾನದಲ್ಲಿ ಇಬ್ಬರು ವ್ಯಕ್ತಿಗಳು ಹೆಚ್ಚು ಪ್ರಭಾವ ಬೀರಿದ್ದಾರೆ. ಒಂದು ಅವರ ಅಜ್ಜಿ ಸಾಕಮ್ಮ. ಮತ್ತೊಬ್ಬರು ಸೋದರ ಮಾವ ತಿಮ್ಮಯ್ಯ. ಡಿವಿಜಿಯವರ ಹೇಳುವ ಹಾಗೆ "ನನ್ನ ಜೀವಮಾನದಲ್ಲಿ ನಾನು ಕಂಡಿರುವ ಮನುಷ್ಯ ವ್ಯಕ್ತಿಗಳಲ್ಲಿ ಮಹರ್ಷಿ ಪ್ರಾಯಳಾದವಳು ನನ್ನ ತಾಯಿಯ ತಾಯಿ ಸಾಕಮ್ಮನವರು. ಆಕೆಗೆ ರಾಮಾಯಣ ಭಾರತಾದಿ ಸಮಸ್ತ ಪುರಾಣಗಳು ಹೃದಯಸ್ಥವಾಗಿದ್ದವು. ಆಕೆ ಹೇಳುತ್ತಿದ್ದ ದೇವರ ನಾಮಗಳು ನೂರಿನ್ನೂರು ಇರಬಹುದು. ಆಕೆ ಸಹಿಸಿದ ಕಷ್ಟಗಳನ್ನಂತೂ ಕಣ್ಣು ಒದ್ದೆಯಾಗದೆ ವರ್ಣಿಸಲಾಗದು. ಎಲ್ಲಾ ಕಷ್ಟಗಳನ್ನು ಸಹಿಸಿ ಭಗವದ್ಗೀತೆ ಎಲ್ಲಕ್ಕಿಂತ ಮೇಲಿನದೆಂದು ನಂಬಿ ಪರೋಪಕಾರ ಸಾಧು ಸಜ್ಜನ ಸೇವಾ ನಿರತರಾಗಿ ಆಯುಷ್ಯವನ್ನು ಮುಗಿಸಿಕೊಂಡಾಕೆ ನನ್ನ ಅಜ್ಜಿ"[1] ಎಂದು ಕೊಂಡಾಡಿದ್ದಾರೆ. ಬಹುಶಃ ಅಜ್ಜಿಯ ಉತ್ತಮ ನಡೆ–ನುಡಿ ಎಲ್ಲವೂ ಡಿವಿಜಿ ಅವರಿಗೆ ಪ್ರೇರಣೆಯಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬೆಳೆದರು.

ಹಾಗೆಯೇ ಡಿವಿಜಿ ಅವರ ಬಾಲ್ಯದಲ್ಲಿ ಬಹಳಷ್ಟು ಪ್ರಭಾವ ಬೀರಿದ ಮತ್ತೊಬ್ಬ ವ್ಯಕ್ತಿಯೆಂದರೆ ಅವರ ಸೋದರ ಮಾವ ತಿಮ್ಮಪ್ಪನವರು. ಆಡಿಸುವುದು, ಉಣಿಸುವುದು ಬುದ್ದಿವಾದ ಹೇಳುವುದು ಎಲ್ಲವೂ ತಿಮ್ಮಪ್ಪನವರೇ ಆಗಿದ್ದರೆಂಬುದು ಒಂದು ವಿಶೇಷ. ಡಿವಿಜಿ ಅವರ ತಂದೆ ಕೋಪಿಷ್ಟರು ಇಂತಹ ಸಂದರ್ಭದಲ್ಲಿ ಹುಡುಗನಾದ ಡಿವಿಜಿಯವರನ್ನು ಹೊಡೆಯಲು ಹೋದಾಗ ತಿಮ್ಮಪ್ಪನವರು ಪಾರು ಮಾಡುತ್ತಿದ್ದರು. ತಿಮ್ಮಪ್ಪನವರು ಸ್ವತಃ ಮಾಸ್ತರರಾಗಿ ಡಿವಿಜಿಯವರಿಗೆ ಅಕ್ಷರಭ್ಯಾಸ ಮಾಡಿಸುತ್ತಿದ್ದರು, ಧೈರ್ಯವನ್ನು ತುಂಬುತ್ತಿದ್ದರು. ಅದರಲ್ಲಿಯೂ ಡಿವಿಜಿಯವರಿಗೆ ಗಣಿತವೆಂದರೆ ಅಷ್ಟಕ್ಕಷ್ಟೇ. ಇಂತಹ ಸಂದರ್ಭದಲ್ಲಿ ತಿಮ್ಮಯ್ಯನವರು ಧೈರ್ಯ ತುಂಬಿ ತಿದ್ದಿ ತೀಡುತ್ತಿದ್ದರು. ಇದರ ಪರಿಣಾಮವಾಗಿ ಡಿವಿಜಿಯವರು ಉತ್ತಮ ಕವಿಯಾಗಿ ಬೆಳೆದರೆನ್ನಬಹುದು.

ಡಿವಿಜಿಯವರ ಮನಸ್ಸಿಗೆ ಬೇರೂರಿದ ದೈವ ಎಂದರೆ; ಮುಳಬಾಗಿಲಿನ

ವೀರಾಂಜನೇಯ. ಹಾಗಾಗಿ ಶ್ರೀಮದ್ ಆಂಜನೇಯನಿಗೆ ಇಷ್ಟವಾದ ಕೆತಕಿ (ತಾಳೆ, ತೆಲುಗಿನಲ್ಲಿ ಮೊಗಲಿರೇಕುಲು) ಹೂವಿನ ಹೆಸರಿನಲ್ಲಿ ತನ್ನ ಆರಾಧ್ಯ ದೈವವಾದ ಆಂಜನೇಯನ ನೆನಪಿಗೆ 'ಕೇತಕೀವನ' ಎಂಬ ಕವನ ಸಂಕಲನವನ್ನು ರಚಿಸಿದರು..

ಡಿವಿಜಿ ಅವರಿಗೆ ಸುಮಾರು 16 ವರ್ಷ ವಯಸ್ಸಿದ್ದಾಗ, ಆಗಿನ ಕಾಲದ ಪದ್ಧತಿಯಂತೆ ಹಿರಿಯರೇ ನಿಶ್ಚಯ ಮಾಡಿದ ಭಾಗಿರಥಮ್ಮ ಅವರೊಂದಿಗೆ ವಿವಾಹವಾಯಿತು. ವಿದ್ಯಾರ್ಥಿಯಾಗಿದ್ದಾಗಲೇ ಡಿವಿಜಿಯವರಿಗೆ ಸಂಸಾರದ ನೊಗ ಎಳೆಯುವ ಸ್ಥಿತಿ ಎದುರಾಯಿತು. ತಂದೆಗೆ 'ತನ್ನ ಮಗ ತಾಪೇಧಾರಿ (ವಕೀಲ) ಆಗಬೇಕೆಂಬ ಹಂಬಲ'[2]. ಆದರೆ ಡಿವಿಜಿ ಅವರಿಗೆ ಇದು ಇಷ್ಟವಿರಲಿಲ್ಲ. ಹಾಗಾಗಿ ತಾನು ಸದೃಢವಾಗಿ ನೆಲೆ ನಿಲ್ಲುವ ತನಕ ಹಲವು ಕಷ್ಟಗಳನ್ನು ಪಟ್ಟರು.

ಬಣ್ಣದ ಕಾರ್ಖಾನೆಯೊಂದನ್ನು ಆರಂಭ ಮಾಡುತ್ತಾರೆ. ಆದರೆ ಕೈ ಕೊಟ್ಟಿದ್ದು, ಆನಂತರ ಪೌರೋಹಿತ್ಯಕ್ಕೆ ಕೈ ಹಾಕುತ್ತಾರೆ. ಚಿಕ್ಕ ತಾತನಾದ ರಾಮಣ್ಣನವರಂತೆ ಚಾಪಾ ಕಾಗದ ಅರ್ಜಿ, ಪತ್ರ ಬರೆಯುವ ಕೆಲಸಕ್ಕೆ ತೊಡಗುತ್ತಾರೆ. ತದನಂತರ 1905 ರಲ್ಲಿ ಕೆಜಿಎಫ್‌ನ ಒಂದು ಸೋಡಾ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಇದ್ಯಾವುವು ಕೈಗೂಡಲಿಲ್ಲ. ಕೊನೆಗೆ ಬೆಂಗಳೂರಿಗೆ ಬರುತ್ತಾರೆ. ಪ್ರತಿಯೊಂದು ಕಚೇರಿಗಳಲ್ಲೂ ಕೆಲಸಕ್ಕಾಗಿ ಕೈ ಚಾಚುತ್ತಾರೆ. ಅದೊಂದು ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿ ಮಾಡಿದ ಭಾಷಣದ ಸಂದರ್ಭವದು. ಇದೇ ಸಂದರ್ಭಕ್ಕೆ ಬೆಂಗಳೂರು ಕೋಲಾರ ಜಿಲ್ಲೆಗಳನ್ನು ಮದರಾಸ್ ಪ್ರೆಸಿಡೆನ್ಸಿಗೆ ಕೊಟ್ಟು ಅನಂತಪುರ ಇತ್ಯಾದಿ ಜಿಲ್ಲೆಗಳನ್ನು ದಿವಾನರು ಪಡೆಯುವ ಸುದ್ದಿ 'ಸೂರ್ಯೋದಯ ಪ್ರಕಾಶಿಕ' ಎಂಬ ಪತ್ರಿಕೆಯಲ್ಲಿ ಬಂದಿತ್ತು. ಇದಕ್ಕೆ ಪ್ರತ್ಯುತ್ತರವಾಗಿ ಒಂದು ಹೇಳಿಕೆಯನ್ನು ಬರೆದು ಕೊಡಲು ಡಿವಿಜಿಯವರಗೆ ಒಕ್ಕಣಿಕೆ ಬಂತು. ಇದರ ಸಲುವಾಗಿ ಅವರಿಗೆ ಲೇಖನಿ ಕೈ ಹಿಡಿಯುವ ಆ ಮೂಲಕ ಸಾಹಿತ್ಯ ರಚಿಸುವ ಕೆಲಸ ಪ್ರಾಪ್ತಿಯಾಯಿತು.

ಮಂಕುತಿಮ್ಮನ ಕಗ್ಗದಲ್ಲಿ ಇವರು ಬರೆದ ಸಾಲುಗಳಲ್ಲಿ ಮನುಷ್ಯ ಜೀವನದ ಮಹತ್ವ ಹಾಗೂ ಪ್ರತಿಯೊಂದರ ಶ್ರಮ ಅರ್ಥಗರ್ಭಿತವಾಗಿ ಮೂಡಿಬಂದಿದೆ.

ವನಸುಮದೊಲೆನ್ನ ಜೀವನವು ವಿಕಸಿಸುವಂತೆ

ಮನವನನುಗೊಳಿಸು ಗುರುವೇ, ಹೇ ದೇವ॥

ಜನಕೆ ಸಂತಸ ವೀವ ಘನನು ನಾನೆಂದೆಂಬ

ಎಣಿಕೆ ತೋರದೆ ಜಗದ ಬೊಗಳಿಕೆಗೆ ಬಾಯ್ ಬಿಡದೆ"[3]॥

ಎನ್ನುವಲ್ಲಿ ಯಾವುದೇ ಅಡಂಬರಗಳಿಲ್ಲದ ನೈಜವಾದ ಭಕ್ತಿ ಹಾಗೂ ಬದುಕನ್ನು ಪಡೆಯಬೇಕೆಂಬ ಡಿವಿಜಿಯವರ ಹಂಬಲ ನಿಜವಾಗಲೂ ಕೂಡ ಸ್ವಾಗತಾರ್ಹವಾದುದು.

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ
ಕುದುರೆ, ನೀನ್ ಅವನು ಪೇಳ್ದಂತೆ ಪಯಣಿಗರು
ಮದುವೆಗೂ ಮಸಣಕೋ ಹೋಗೆಂದ ಕಡೆಗೋಡು
ಪದಕುಯೆ ನೆಲವಿಹುದು – ಮಂಕುತಿಮ್ಮ॥

ಹುಲ್ಲಾಗು ಬೆಟ್ಟದಡಿ,
ಮನೆಗೆ ಮಲ್ಲಿಗೆಯಾಗು,
ಕಲ್ಲಾಗು ಕಷ್ಟಗಳ
ಮಳೆಯ ವಿಧಿ ಸುರಿಯೆ.
ಬೆಲ್ಲ–ಸಕ್ಕರೆಯಾಗು
ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ॥

ಮೇಲಿನ ಸಾಲುಗಳಲ್ಲಿ ಬದುಕೆಂಬುದು ಜಟಕಾಬಂಡಿಯಂತೆ ಕಷ್ಟ ದುಃಖಗಳ ಹೋರಾಟ. ಈ ದಿಸೆಯಲ್ಲಿ ಕಷ್ಟ ಬಂದರೆ ಕಷ್ಟವನ್ನು ಸ್ವೀಕರಿಸಬೇಕು. ಸುಖ ಬಂದರೆ ಸುಖವನ್ನು ಅನುಭವಿಸಬೇಕು. ಈ ಜನ್ಮ ಸಾರ್ಥಕ್ಯ ಪಡೆಯಬೇಕಾದರೆ, ನಾವು ಮಾನವೀಯತೆಯನ್ನು ಹೊಮ್ಮಿಸಬೇಕು. ದರ್ಪ, ಅಹಂಕಾರದಿಂದ ಏನೂ ಪ್ರಯೋಜನವಾಗದು. ಕೆಲವೊಮ್ಮೆ ನಾವು ಅಂದುಕೊಂಡಂತೆ ಆಗುವುದಿಲ್ಲ ಅದಕ್ಕೆ ಬೇಸರಗೊಳ್ಳಬಾರದೆಂಬ ಕವಿ ಮಾತನ್ನು ಹೇಳುತ್ತಾ, ವಿಧಿಯ ನಿಯಮವನ್ನು ಯಾರೂ ತಿದ್ದಲಾಗದು ಎಂಬ ಎಚ್ಚರಿಕೆಯ ಘಂಟೆಯನ್ನು ಬಾರಿಸುತ್ತಾರೆ.

ಅಕ್ಕಿಯೊಳಗನ್ನವನು
ಮೊದಲಾರು ಕಂಡವನು? ।
ಅಕ್ಕರದ ಬರಹಕ್ಕೆ ಮೊದಲಿಗನಾರು??
ಲೆಕ್ಕವಿರಿಸಿಲ್ಲ ಜಗತನ್ನಾದಿ ಬಂಧುಗಳ
ದಕ್ಕುವುದೆ ಜಸ ನಿನಗೆ॥

ಇಂದು ನಾವು ಅದೆಷ್ಟೋ ಸಂಖ್ಯೆಯಲ್ಲಿ ವಿಜ್ಞಾನಿಗಳನ್ನು ಯಾವ ಯಾವುದೋ ತರಹದ ತಂತ್ರಜ್ಞಾನಗಳನ್ನು ಕಂಡಿದ್ದೇವೆ. ಆದರೂ ಕೆಲವು ಮೂಲಭೂತ ಪ್ರಶ್ನೆಗಳಿಗೆ ನಮಗೆ ಉತ್ತರವೇ ಸಿಕ್ಕಿಲ್ಲ. ಅಕ್ಕಿಯಿಂದ ಅನ್ನವನ್ನು, ಮರಳಿನಿಂದ ಬರಹವನ್ನು, ಲೋಹಗಳಿಂದ

ವಿವಿಧ ವಸ್ತುಗಳನ್ನು ತಯಾರು ಮಾಡಿದ ಕಾರಣ ಕರ್ತೃಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬದಲಾಗಿ ಪ್ರಸ್ತುತ ಎನು ಬೆಳವಣಿಗೆಗಳು ಆಗಿವೆಯೋ ಅದರ ಬಗ್ಗೆ ಹೇಳುತ್ತೇವೆ. ಆದರೆ ಇಲ್ಲಿ ಡಿವಿಜಿಯವರು ಪ್ರತಿಯೊಂದು ಬದಲಾವಣೆಗೆ, ಆವಿಷ್ಕಾರಕ್ಕೆ ದೈವವೇ ಸಾಕ್ಷಿ ಎಂಬುದನ್ನು ಅಕ್ಷರಗಳಲ್ಲಿ ಅಚ್ಚೊತ್ತಿದ್ದಾರೆ. ಆ ಮೂಲಕ ಬದುಕಿನ ಮರ್ಮವನ್ನು ಸೂಕ್ಷ್ಮವಾಗಿ ತಿಳಿಹೇಳಲೆತ್ನಿಸಿದ್ದಾರೆ.

ಈ ಪುಸ್ತಕವು ಡಿ.ವಿ.ಜಿಯವರು ಬರೆದಿರುವ ಶ್ರೇಷ್ಟ ಮಂಕುತಿಮ್ಮನ ಕಗ್ಗ ಕೃತಿಯ ಗದ್ಯಾನುವಾದವನ್ನು ಒಳಗೊಂಡಿದೆ. 'ಕನ್ನಡ ಭಗವದ್ಗೀತೆ' ಎಂದು ಹೆಸರಾಗಿರುವ ಕಗ್ಗವನ್ನು ಇಲ್ಲಿ ಬಹಳ ಸೊಗಸಾಗಿ, ರಸವತ್ತಾಗಿ ಅರ್ಥೈಸಲಾಗಿದೆ.

ಇದು ಮೈಸೂರಿನ ರಾಮಕೃಷ್ಣ ನಗರದ ತನುಮನ ಪ್ರಕಾಶನದಿಂದ 2003ರಲ್ಲಿ ಪ್ರಕಟವಾಗಿದೆ. ಈ ಪುಸ್ತಕವು ಚಿಕ್ಕದಾಗಿದ್ದರೂ ಚೊಕ್ಕದಾಗಿದೆ. ಗಾತ್ರದಲ್ಲಿ ಚಿಕ್ಕದಿದ್ದು, ನಮಗೆ ಇಷ್ಟೊಂದು ಚಿಕ್ಕ ಪುಸ್ತಕವೇ! ಅನಿಸಿದರೂ, ವಿಷಯದಲ್ಲಿ ಅಗಾಧವಾದ ವ್ಯಾಪ್ತಿಯನ್ನು ಹೊಂದಿದೆ. ಈ ಪುಸ್ತಕವನ್ನು ಹೊರತರಲು ಎಲೆ ಮರೆಯಕಾಯಿಯಂತೆ ಇದ್ದಂತವರು ಹಾಗೂ ಶ್ರಮಿಸಿದಂತಹವರು ಶ್ರೀ ಕವಿತಾಕೃಷ್ಣರವರು.

ಈ ಪುಸ್ತಕ ಪ್ರಕಟಿಸಿದ ಪ್ರಕಾಶಕರು ಮಾನಸ ಎಂಬುವವರು. ಮಾನಸ ಅವರು ಹೇಳುವ ಹಾಗೆ "ಸಮಾಜಕ್ಕೆ ಅಪಾರವಾದ ಸತ್ಪರಿಣಾಮವನ್ನುಂಟು ಮಾಡಿರುವ ಈ ಕೃತಿಯನ್ನು ಸರಳೀಕರಿಸಿ ಕನ್ನಡಿಗರ ಕೈಗಿಡಬೇಕೆಂದು ನನ್ನ ಬಹು ದಿನಗಳ ಕನಸಾಗಿತ್ತು. ಆ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಟೊಂಕಕಟ್ಟಿ ನಿಂತವರು ಹೆಸರಾಂತ ಕವಿಗಳಾದ ಶ್ರೀ ಕವಿತಾಕೃಷ್ಣ ಅವರು. ಕಬ್ಬಿಣದ ಕಡಲೆಯಂತಹ 'ಮಂಕುತಿಮ್ಮನ ಕಗ್ಗ'ವನ್ನು ಸುಲಿದ ಬಾಳೆ ಹಣ್ಣಿನ ತೆರದಿ ಸುಲಲಿತವಾಗಿ ತಾತ್ಪರ್ಯ ಸಹಿತ ಸಿದ್ದಗೊಳಿಸಿಕೊಟ್ಟ ಅವರ ವಿದ್ವತ್ ಪ್ರಭೆಗೆ ನಾನು ಸದಾ ಚಿರಋಣಿ"[4] ಎಂದಿದ್ದಾರೆ. ನಿಜಕ್ಕೂ ಈ ಮಾತು ನೂರಕ್ಕೆ ನೂರರಷ್ಟು ಸತ್ಯ. ಯಾಕೆಂದರೆ ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗ ಮೂಲ ಕೃತಿಯ ಒಟ್ಟಾರೆ ತಿರುಳನ್ನು ತಿಳಿಯಲು, ಓದಿ ಅರ್ಥೈಸಿಕೊಳ್ಳಲು ಬಹಳಷ್ಟು ದಿನಗಳ ಅವಶ್ಯಕತೆ ಇದೆ. ಆದರೆ ಶ್ರೀ ಕವಿತಾಕೃಷ್ಣರವರ ತಾತ್ಪರ್ಯ ಸಹಿತವಾದ ಈ 'ಮಂಕುತಿಮ್ಮನ ಕಗ್ಗ' ಪುಸ್ತಕವು ತುಂಬಾ ಸರಳವಾದ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದಾದ ಕ್ರಮ, ವಿಧಾನವನ್ನು ಹೊಂದಿದೆ. ಈ ನಿಟ್ಟಿನಲ್ಲಿ ವಿದ್ಯಾವಾಚಸ್ಪತಿಯಾದ ಶ್ರೀ ಕವಿತಾಕೃಷ್ಣ ಅವರಿಗೆ ಅನಂತವಾದ ಕೃತಜ್ಞತೆಗಳನ್ನು ಸಲ್ಲಿಸಬಹುದು.

ಈ ಪುಸ್ತಕದಲ್ಲಿನ ರಚನಾಕ್ರಮವು ಎಂತಹ ಓದುಗರನ್ನಾದರೂ ಸಹ ಆಕರ್ಷಿಸಿ, ಓದಿಸುತ್ತದೆ. ಸುಲಭವಾಗಿ ಅರ್ಥವಾಗುವ ಒಂದು ಸರಳ ಪದ್ಯ ಮತ್ತು ಆ ಪದ್ಯದ

ಕೆಳಗಡೆ ಅರ್ಥ ವಿವರಣೆ ಇರುವುದರಿಂದ ಓದಲು ಪ್ರಿಯವಾಗುತ್ತದೆ. ಈ ಪುಸ್ತಕವು ಒಟ್ಟು 336 ಪುಟಗಳನ್ನು ಹೊಂದಿದ್ದು, ಇದರಲ್ಲಿ 319 ಪುಟಗಳಷ್ಟು ಪ್ರಧಾನವಾದ ವಸ್ತುವನ್ನು ಒಳಗೊಂಡಿದೆ. ಇನ್ನುಳಿದ 17 ಪುಟಗಳಲ್ಲಿ ಆರಂಭದ ಪದಗಳನ್ನು ಹೊಂದಿದೆ. ಅಂದರೆ ಪದ್ಯಗಳ ಆರಂಭದ ಪದಗಳನ್ನು ಅಕರಾದಿಯ ಪಟ್ಟಿರೂಪದಲ್ಲಿ ಕೊಡಲಾಗಿದೆ. ಹಾಗೆಯೇ 5ನೇ ಪುಟದಿಂದ ಹಿಡಿದು 319ನೇ ಪುಟಗಳವರೆಗೆ ಪದ್ಯ ಮತ್ತು ಬಾವಾರ್ಥಗಳನ್ನು ಒಳಗೊಂಡಿದೆ. ಆದರೆ ಪುಸ್ತಕದಲ್ಲಿ ತುಂಬಾ ಮುಖ್ಯವಾದ ಒಂದು ವಿಶೇಷತೆಯನ್ನು ಕಾಣಬಹುದು; ಕಡ್ಡಾಯವಾಗಿ ಪ್ರತಿಯೊಂದು ಪುಟಕ್ಕೂ ಮೂರು ಮೂರು ಪದ್ಯಗಳು ಬರುವಂತೆ ಅಚ್ಚಾಕಿಸಿರುವುದೊಂದು ವಿಶೇಷ.

ಪುಸ್ತಕದಿ ದೊರೆತರಿವು
ಮಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು
ತರು ತಳೆದ ಪುಷ್ಪ
ವಸ್ತು ಸಾಕ್ಷಾತ್ಕಾರ
ವಂತರೀಕ್ಷಣೆಯಿಂದ
ಶಾಸ್ತ್ರೀ ತನದಿಂದಲ್ಲ – ಮಂಕುತಿಮ್ಮ॥

ಒರ್ವನೇ ನಿಲುವೆ ನೀನುತ್ಕಟ ಕ್ಷಣಗಳಲಿ।
ಧರ್ಮ ಸಂಕಟಗಳಲಿ, ಜೀವ ಸಮರದಲಿ॥
ನಿರ್ವಾಣ ದೀಕ್ಷೆಯಲಿ, ನಿರ್ಯಾಣ ಘಟ್ಟದಲಿ?
ನಿರ್ಮಿತ್ರನಿರಲು ಕಲಿ – ಮಂಕುತಿಮ್ಮ?

ಅಜ್ಞಾತವಾದುದನಭಾವವೆನೆ ನಾಸ್ತಿಕನು।
ಅಜ್ಞೇಯವೆಂದದಕೆ ಕೈಮುಗಿಯೆ ಭಕ್ತ॥
ಜಿಜ್ಞಾಸ್ಯವೆಂದು ಪರಿಕಿಸಿತೊಡಗೆ ವಿಜ್ಞಾನಿ।
ಸ್ವಜ್ಞಪ್ತಿಶೋಧಿ ಮುನಿ ಮಂಕುತಿಮ್ಮ॥

ಹೀಗೆ ಒಂದು ಪುಟಕ್ಕೆ ಮೂರು ಪದ್ಯಗಳು ಮೂಡುವ ಹಾಗೆ ಒಟ್ಟು 945 ಪದ್ಯಗಳನ್ನು ಈ ಪುಸ್ತಕದಲ್ಲಿ ನೋಡಬಹುದು.

ಈ ಮೇಲೆ ತಿಳಿಸಿದ ಹಾಗೆ ಪುಸ್ತಕದ ಗಾತ್ರ ಚಿಕ್ಕದಿದ್ದರೂ, ಇದರಲ್ಲಿನ ವಿಷಯ

ಮಾತ್ರ ಅರ್ಥಗರ್ಭಿತವಾದುದಾಗಿದೆ. ನಿಜಕ್ಕೂ ಪ್ರಕಾಶಕರು ಈ ಪುಸ್ತಕದ ಹೊರಗಿನ ಭಾಗವನ್ನು ಡಿ.ವಿ.ಜಿ ಅವರ ಭಾವಚಿತ್ರದೊಂದಿಗೆ ಮುಖಪುಟವನ್ನು ಅಂದ ಚೆಂದವಾಗಿ ಮುದ್ರಿಸಿದ್ದಾರೆ. ಅಲ್ಲದೆ ಅರ್ಥಪೂರ್ಣವಾದ ರೀತಿಯಲ್ಲಿ ಮುನ್ನುಡಿಯನ್ನು ಬರೆದಿದ್ದಾರೆ. 'ಗಣ್ಯರ ಕಣ್ಣಲ್ಲಿ ಶ್ರೀ ಕವಿತಾಕೃಷ್ಣ' ಎನ್ನುವ ಶೀರ್ಷಿಕೆಯೊಂದಿಗೆ ಹಿಂಪುಟ ಮುದ್ರಿತವಾಗಿದೆ. ಹಿಂಬದಿ ಪುಟವು ಶ್ರೀ ಕವಿತಾಕೃಷ್ಣ ಅವರ ಬಗೆಗಿನ ಮಹತ್ವನ್ನು ಕನ್ನಡದ ಪ್ರಸಿದ್ಧ ಲೇಖಕರು ತಮ್ಮ ಅಭಿಪ್ರಾಯಗಳನ್ನು ದಾಖಲಿಸಿ, ವಿಮರ್ಶೆಗಳ ಮೂಲಕ ಕೊಂಡಾಡಿದ್ದಾರೆ. ಹಾಗೆಯೇ ಕಿರಿದರಲ್ಲಿ ಹಿರಿದನ್ನು ಹೇಳುವ ಹಾಗೆ ವಸ್ತುಸ್ಥಿತಿ ಎಂಬುದು ವಿಸ್ತಾರವಾದ ರೀತಿಯಲ್ಲಿ ಹೆಣೆದುಕೊಂಡಿದೆ.

ಮೂಲ ಮಂಕುತಿಮ್ಮನ ಕಗ್ಗ ಕೃತಿಗೂ ಹಾಗೂ ತಾತ್ಪರ್ಯ ಸಹಿತ ಈ ಮಂಕುತಿಮ್ಮನ ಕಗ್ಗ ಕೃತಿಗೂ ವಸ್ತುಸ್ಥಿತಿಯಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಎರಡು ಕೃತಿಗಳಲ್ಲೂ ಒಂದೇ ತರಹದ ವಿಷಯವನ್ನು ಕಾಣಬಹುದಾಗಿದೆ. ಈ ಪುಸ್ತಕದಲ್ಲಿ ಜೀವನದ ಮಹತ್ವ, ದೈವದ ಮಹತ್ವ, ಪರಿಸರದ ಮಹತ್ವ, ವೈಚಾರಿಕತೆ, ಭ್ರಮಾತ್ಮಕ ಕಲ್ಪನೆ, ಬದುಕಿನಲ್ಲಿ ಚೇತರಿಸಿಕೊಳ್ಳುವ ಗುಣ, ನೋವು–ನಲಿವಿನ ಚಿತ್ರಣ, ಮಾನವೀಯ ಅಂಶಗಳು, ಪ್ರೀತಿ–ಪ್ರೇಮದ ವಿಚಾರಗಳು, ಜಾತಿ ವೈಷಮ್ಯ, ಸಂಸಾರ, ಬಂಧು–ಬಳಗದ ಮಹತ್ವ, ಭಾಷೆ, ನಡೆ ನುಡಿ, ಬದುಕಿನ ಬವಣೆ, ತಾರ್ಕಿಕವಾದ ಆಲೋಚನೆ, ಕೃಷಿ, ಜನಪದ, ಸಾವು–ನೋವು, ಮಾನವ ಜನ್ಮದ ಮಹತ್ವ, ಮನುಷ್ಯನ ವಿವಿಧ ಸ್ವಭಾವಗಳ ಬಗ್ಗೆ, ಆಲೋಚನಾ ಕ್ರಮ, ಮನುಷ್ಯನ ಸ್ವಾರ್ಥ, ಅಹಂಕಾರ, ಮೋಸ, ವಂಚನೆ, ಕುಟಿಲತೆ, ಅಸೂಯೆ ಹಾಗೂ ಪ್ರಾಣಿಗಳ ಬಗೆಗಿನ ಪ್ರೀತಿ ಮುಂತಾದ ಅಂಶಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

ಮನುಷ್ಯನ ಮನಸ್ಸು ಸೋತಾಗ ಎಚ್ಚರಿಸುವ ಭಾವನೆ, ದೇಶ ಪ್ರೇಮ, ನಾಡಿನ ಪ್ರೇಮ, ಬದುಕಿನ ಜಂಜಾಟ, ಬಡತನ, ದಾರಿದ್ರ್ಯ ಹೀಗೆ ಎಲ್ಲವೂ ಅಡಕವಾಗಿವೆ. ಪುಸ್ತಕದ ಶೀರ್ಷಿಕೆಯಂತೆ ತಾತ್ಪರ್ಯವೂ, ಪರಮಾರ್ಥವೂ ಇದರಲ್ಲಡಗಿದೆ.

ಒಟ್ಟಿನಲ್ಲಿ ಮಾನವ ತನ್ನ ದೈನಂದಿನ ಬದುಕಿನಲ್ಲಿ ಅಗತ್ಯವಾಗಿ ಏನೇನು ಕಷ್ಟ ಸುಖ, ದುಃಖ–ದುಗುಡಗಳನ್ನು ಅನುಭವಿಸುತ್ತಾನೋ? ಬದುಕಿಗೆ ಏನೇನು ಬೇಕಾಗುತ್ತದೆಯೋ, ಅದಕ್ಕೆಲ್ಲಾ ಪರಿಹಾರಗಳನ್ನು ನೀಡುವ ಪದಗಳ ಸ್ವಾರಸ್ಯವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಅಂದರೆ ಮನುಷ್ಯನು ತನ್ನ ಬಾಯಿ ಮೂಲಕ ಯಾವ್ಯಾವ ಪದಗಳನ್ನು ಉಸುರುತ್ತಾನೋ! ಆ ಎಲ್ಲಾ ಪದಗಳಿಗೂ ಒಂದೊಂದು ಪದ್ಯವನ್ನು ರಚಿಸಿ ಅದರ ಪರಮಾರ್ಥವನ್ನು ಲೋಕಕ್ಕೆ ಸಾರುವ ಹಾಗೆ ಚಿತ್ರಿಸಲಾಗಿದೆ.

ಡಿ.ವಿ.ಜಿ ಅವರ 'ಮಂಕುತಿಮ್ಮನ ಕಗ್ಗ' ಕೃತಿಯ ಮೂಲಕ ಮಾನವ ಜೀವನದ

ಹಲವು ಮಗ್ಗಲುಗಳನ್ನು ಬಹಳ ಅರ್ಥವತ್ತಾಗಿ ಪ್ರಸ್ತಾಪ ಮಾಡಲಾಗಿದೆ. ಇದನ್ನು ಅಚ್ಚುಕಟ್ಟಾಗಿ ರೂಪಿಸಿ, ವಿವರಣೆ ನೀಡಿ, ಬಾವಾರ್ಥ ಬರೆದುಕನ್ನಡ ಸಾರಸ್ವತ ಲೋಕಕ್ಕೆ ನೀಡಿ, ಸಾಹಿತ್ಯಾಸಕ್ತರ ಮನಗೆಲ್ಲುವಲ್ಲಿ ಶ್ರೀ ಕವಿತಾಕೃಷ್ಣರವರು ಯಶಸ್ವಿಯಾಗಿದ್ದಾರೆಂದರೆ ತಪ್ಪಾಗಲಾರದು.

ಕೊನೆ ಟಿಪ್ಪಣಿಗಳು:

1. ಡಾ. ಕಸ್ತೂರಿ ನಿಲತಹಳ್ಳಿ, ಡಿ ವಿ ಗುಂಡಪ್ಪ ಜೀವನ ಮತ್ತು ಸಾಧನೆ, ಪುಟ 6 ಮತ್ತು 7
2. ಅದೇ. ಪುಸ್ತಕ ಪುಟ 9
3. ಅದೇ. ಪುಸ್ತಕ ಪುಟ ಪ್ರವೇಶ ಆರಂಭದ ಭಾಗ
4. ಶ್ರೀ ಕವಿತಾಕೃಷ್ಣ – ಮಂಕುತಿಮ್ಮನ ಕಗ್ಗ (ತಾತ್ಪರ್ಯ ಸಹಿತ), ಪುಟ ಮುನ್ನುಡಿ ಭಾಗ, ತನುಮನ ಪ್ರಕಾಶನ, ರಾಮಕೃಷ್ಣ ನಗರ, ಮೈಸೂರು. 2003

***

ಶಿವರಾತ್ರಿಯೂ – ಸಿದ್ಧಗಂಗೆಯ ಜಾತ್ರೆಯೂ

1 ಡಾ. ಗೋವಿಂದರಾಯ ಎಂ.
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಮಧುಗಿರಿ.

ಹಬ್ಬಗಳು ನಮ್ಮ ಸಂಸ್ಕೃತಿ– ಸಂಪನ್ನತೆಯ ದ್ಯೋತಕಗಳು. ನಂಬಿಕೆಯ ಕ್ರಿಯಾತ್ಮಕ ರೂಪವೇ ಆಚರಣೆಯಾಗಿದ್ದು ಪ್ರತಿಯೊಂದು ಹಬ್ಬಗಳೂ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿವೆ. ಪ್ರತಿಯೊಂದು ಹಬ್ಬವು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದು, ಹಬ್ಬಗಳ ಹಿಂದೆ ಸಂಸ್ಕೃತಿಯ ಅಂಶ ಇದ್ದೇ ಇರುತ್ತದೆ. ನಮ್ಮ ಜನಜೀವನದ ಎಲ್ಲಾ ಮಗ್ಗಲುಗಳನ್ನು ಸಂಸ್ಕೃತಿಯೇ ಅಡಗಿಸಿಟ್ಟುಕೊಂಡಿರುವದರಿಂದ ಹಬ್ಬಗಳು ನಮ್ಮ ಬದುಕಿನ ಭಾಗವಾಗಿ ಆಚರಣೆಗೊಳ್ಳುತ್ತಿವೆ. ಹಿಂದೂಗಳು ಆಚರಿಸುವ ಹಬ್ಬಗಳಲ್ಲಿ ಮಹಾಶಿವರಾತ್ರಿಗೆ ವಿಶಿಷ್ಟ ಸ್ಥಾನ. ಶಿಶಿರ ಋತುವಿನ ಸಂದರ್ಭದಲ್ಲಿ ಚತುರ್ದಶಿ ದಿವಸ ಸಾಮಾನ್ಯವಾಗಿ ಮಹಾಶಿವರಾತ್ರಿಯನ್ನು ಆಚರಿಸುತ್ತಾರೆ.

ಮಹಾಶಿವರಾತ್ರಿ ಹಿಂದೂ ಧರ್ಮದ ಪ್ರಮುಖ ಹಬ್ಬವಾಗಿದ್ದು, ಫಾಲ್ಗುಣ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ಆಚರಿಸಲಾಗುತ್ತದೆ. ಇದು ಶಿವ ಮತ್ತು ಪಾರ್ವತಿಯ ವಿವಾಹ, ಶಿವನು ಲಿಂಗರೂಪದಲ್ಲಿ ಪ್ರಕಟವಾದ ದಿನ ಮತ್ತು ತಾಂಡವ ನೃತ್ಯ ಮಾಡಿದ ರಾತ್ರಿ ಎಂದು ನಂಬಲಾಗಿದೆ. ಜಾಗರಣೆ, ಉಪವಾಸ ಮತ್ತು ಶಿವಲಿಂಗ ಪೂಜೆಯ ಮೂಲಕ ಅಜ್ಞಾನವನ್ನು ನೀಗಿ ಜ್ಞಾನೋದಯ, ಆತ್ಮಾವಲೋಕನ ಮತ್ತು ಆಧ್ಯಾತ್ಮಿಕ ಜಾಗೃತಿ ಪಡೆಯುವುದು ಈ ಹಬ್ಬದ ಮುಖ್ಯ ಮಹತ್ವವಾಗಿದೆ.ಈ

ದಿನದಂದು ಭಕ್ತರು ರಾತ್ರಿಯಿಡೀ ಜಾಗರಣೆ ಮಾಡುತ್ತಾ, ಶಿವಲಿಂಗಕ್ಕೆ ಅಭಿಷೇಕ ಮಾಡಿ, ಪೂಜೆ ಮಾಡುವುದರಿಂದ ಆತ್ಮಶುದ್ಧಿ ಮತ್ತು ಮುಕ್ತಿ ಸಿಗುತ್ತದೆ ಎಂದು ನಂಬಲಾಗಿದೆ.

ಮಹಾಶಿವರಾತ್ರಿಯು ಶಿವ ಮತ್ತು ಪಾರ್ವತಿಯರು ವಿವಾಹವಾದ ಶುಭ ದಿನವೆಂದು ಪರಿಗಣಿಸಲಾಗಿದ್ದು, ಇದು ಪುರುಷ ಮತ್ತು ಸ್ತ್ರೀ ಶಕ್ತಿಗಳ ಸಾಮರಸ್ಯವನ್ನು ಸಂಕೇತಿಸುತ್ತದೆ. ಶಿವನು ಮೊದಲ ಬಾರಿಗೆ ಲಿಂಗ ರೂಪದಲ್ಲಿ ಪ್ರಕಟವಾದ ದಿನ ಇದಾಗಿದ್ದು, ಸೃಷ್ಟಿ, ಸ್ಥಿತಿ, ಲಯಗಳ ಸಂಕೇತವಾಗಿ ಶಿವನನ್ನು ಆರಾಧಿಸಲಾಗುತ್ತದೆ. ಸಮುದ್ರ ಮಂಥನದ ಸಮಯದಲ್ಲಿ ಉದ್ಭವಿಸಿದ ಹಾಲಾಹಲ ವಿಷವನ್ನು ಶಿವನು ಲೋಕ ಕಲ್ಯಾಣಕ್ಕಾಗಿ ಕುಡಿದು, ಅದನ್ನು ತನ್ನ ಕಂಠದಲ್ಲಿ ಹಿಡಿದಿಟ್ಟುಕೊಂಡ ದಿನ ಇದೆಂದು ಹೇಳಲಾಗುತ್ತದೆ.ರಾತ್ರಿಯಿಡೀ ಜಾಗರಣೆ ಮಾಡುವುದರಿಂದ ಮೆದುಳು ಕ್ರಿಯಾಶೀಲವಾಗುತ್ತದೆ ಮತ್ತು ಉಪವಾಸವು ಶರೀರವನ್ನು ನಿರ್ವಿಷಗೊಳಿಸುತ್ತದೆ ಎಂದು ನಂಬುತ್ತಾರೆ. ಈ ಸಮಯದಲ್ಲಿ ಗ್ರಹಗಳ ಸ್ಥಿತಿಯು ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸಲು ಸಹಕಾರಿಯಾಗಿದೆ ಎಂದು ಹೇಳುತ್ತಾರೆ. ಶಿವನನ್ನು ಪೂಜಿಸುತ್ತಾ ಭಕ್ತರು ಬಿಲ್ವಪತ್ರೆ, ಹಾಲು, ಜೇನುತುಪ್ಪ, ಗಂಗಾಜಲದಿಂದ ಶಿವಲಿಂಗವನ್ನು ಅಭಿಷೇಕ ಮಾಡುತ್ತಾರೆ. 'ಓಂ ನಮಃ ಶಿವಾಯ' ಮಂತ್ರ ಪಠಣದೊಂದಿಗೆ ಧ್ಯಾನದಲ್ಲಿ ತೊಡಗುತ್ತಾರೆ. ಈ ಹಬ್ಬವು ಕತ್ತಲೆ ಅಂದರೆ ಅಜ್ಞಾನವನ್ನು ಹೋಗಲಾಡಿಸಿ ಬೆಳಕು (ಜ್ಞಾನ) ತರುವ ಸಂಕೇತವಾಗಿದೆ.

ಲೋಕ ಕಲ್ಯಾಣಾರ್ಥವಾಗಿ ಶಿವನು ವಿಷ ಸೇವಿಸಿದ ದಿನವನ್ನಾಗಿ ಈ ಹಬ್ಬವನ್ನು ಆಚರಿಸುತ್ತಿದ್ದು, "ವ್ರತಗಳಲ್ಲೆಲ್ಲಾ ಶಿವರಾತ್ರಿ ವ್ರತ ಶ್ರೇಷ್ಠ" ಎಂದು ಶೈವ ಭಕ್ತರು ತಿಳಿದಿದ್ದಾರೆ. ಈ ಹಬ್ಬದಲ್ಲಿ ಊರಿನ ಜನರ ಉಪವಾಸ, ಜಾಗರಣೆ, ಶಿವ – ಶಿವೆಯರ ಆರಾಧನೆ ಬಹು ಪ್ರಾಮುಖ್ಯತೆಯನ್ನು ಪಡೆದಿದೆ. ಶಿವನ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆದು, ಬಹುತೇಕರು ದೇವರ ದರ್ಶನ ಮಾಡಿಕೊಂಡು ಬರುವ ಪರಂಪರೆ ಇದೆ. ಕೆಲವು ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ಜಾತ್ರೆ ನಡೆಯುತ್ತದೆ. ತುಮಕೂರಿನ ಪುಣ್ಯಕ್ಷೇತ್ರ ಕ್ಷೇತ್ರ ಸಿದ್ಧಗಂಗೆಯಲ್ಲಿ, ಪಾವಗಡ ತಾಲೂಕಿನ ಚನ್ನಕೇಶವಪುರ ಪಂಚಾಯಿತಿ ವ್ಯಾಪ್ತಿಯ ಮಲ್ಲಪ್ಪನ ಮಠದ ಬಳಿ ಶ್ರೀ ಸಿದ್ಧೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ, ಅಗ್ನಿಕುಂಡ, ಅಲ್ಲದೆ ಆಂಧ್ರಪ್ರದೇಶದ ಮಡಕಶಿರ ತಾಲೂಕಿನ ಹೇಮಾವತಿ ಹೆಂಜೇರು ಸಿದ್ಧೇಶ್ವರ ಸ್ವಾಮಿಯ ಸನ್ನಿಧಾನದಲ್ಲಿ ನಡೆಯುವ ಅಗ್ನಿಕುಂಡ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಮಲ್ಲಪ್ಪನ ಮಠ ಮತ್ತು ಹೆಂಜೇರು ಸಿದ್ಧೇಶ್ವರ ಸ್ವಾಮಿಯ ಜಾತ್ರೆಯ ಅಗ್ನಿಕುಂಡಕ್ಕೆ ಧೂಪ ಹಾಕಿ ನಮಸ್ಕರಿಸಿ ಬಂದ ನಂತರವೇ ಒಂದೊತ್ತು ಅಥವಾ ಉಪವಾಸ ಬಿಡುವ ಪದ್ಧತಿ ಇದೆ. ಆ ದಿನ ಕೆಲವು ಸಮುದಾಯದವರು ಜಾಗರಣೆ ಮಾಡಿ, ತಂಬಿಟ್ಟು ಮಾಡಿದರೆ ಮತ್ತೆ ಕೆಲವರು

ಉಪವಾಸ ಇದ್ದು ಸಂಜೆ ಉಪವಾಸ ಬಿಡುವುದನ್ನು ಕಾಣುತ್ತೇವೆ.

ಕರ್ನಾಟಕದ ಜಾತ್ರೆಗಳಲ್ಲೆಲ್ಲಿಲಾ ಬಹಳ ವಿಶೇಷವಾದದ್ದು ಶ್ರೀ ಸಿದ್ಧಗಂಗಾ ಮಠದ ಜಾತ್ರೆ. ಶ್ರೀಮಠದಲ್ಲಿ ಅಡವೀ ಸ್ವಾಮಿಗಳ ಕಾಲದಲ್ಲಿ ಅಶ್ವಿಜ ಮಾಸದಲ್ಲಿ ನಡೆಯುತ್ತಿದ್ದ ಜಾತ್ರೆ, ಉದ್ದಾನ ಸ್ವಾಮಿಗಳ ಕಾಲದಲ್ಲಿ ಶಿವರಾತ್ರಿಯ ಸಂದರ್ಭದಲ್ಲಿ ನಡೆಯಲು ಪ್ರಾರಂಭವಾಗಿದೆ. ಸಂಕ್ರಾಂತಿಯ ನಂತರ ರೈತರಿಗೆ ಬಿಡುವು ಇರುವುದರಿಂದ ರೈತರ ಮೇಲಿನ ಕಾಳಜಿಯಿಂದ ಶ್ರೀ ಸಿದ್ಧಗಂಗಾ ಮಠದ ಜಾತ್ರೆಯನ್ನು ಮಾಘ ಮಾಸದಲ್ಲಿ ಪ್ರಾರಂಭಿಸಲಾಗಿದೆ. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಬಿಕ್ಷಾಟನೆಯ ಮೂಲಕ ಭಕ್ತಾದಿಗಳಿಂದ ಪಡೆದ ದವಸ ಧಾನ್ಯದಿಂದ ಜಾತ್ರೆಯನ್ನು ಯಶಸ್ವಿಯಾಗಿ ನಡೆಸಿರುವುದು, ಆ ಪರಂಪರೆಯನ್ನು ಇಂದಿನ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿಯವರು ಯಶಸ್ವಿಯಾಗಿ ಮುಂದುವರೆಸಿಕೊಂಡು ಬರುತ್ತಿರುವುದನ್ನು ಕಾಣುತ್ತೇವೆ. ಒಂದು ವಾರಗಳ ಕಾಲ ನಡೆಯುವ ಈ ಜಾತ್ರೆಯು ಅನೇಕ ಕಾರಣಗಳಿಗಾಗಿ ಹೆಸರಾಗಿ ಮನ್ನಣೆ ಪಡೆದಿದೆ. ಶ್ರೀ ಸಿದ್ಧಗಂಗಾ ಮಠದ ಜಾತ್ರೆಯಲ್ಲಿ ಶ್ರೀ ಸಿದ್ಧಲಿಂಗೇಶ್ವರರ ಉತ್ಸವ ಮೂರ್ತಿಗೆ ಶೂನ್ಯ ಸಿಂಹಾಸನಾರೋಹಣೋತ್ಸವ, ವೃಷಭವಾಹನ, ನಂದಿವಾಹನ, ಗಜವಾಹನ, ಹುಲಿವಾಹನ, ಸಿಂಹ ವಾಹನ, ಹುತ್ತವಾಹನ, ಶೇಷವಾಹನ, ಅಶ್ವವಾಹನ, ನವಿಲುವಾಹನ, ರಾವಣ ವಾಹನ, ಬಿಲ್ವವೃಕ್ಷ ವಾಹನ, ನವರಂಗ ಪಾಲಕಿ ಉತ್ಸವ, ಮುತ್ತಿನ ಪಲ್ಲಕ್ಕಿ ಉತ್ಸವ, ರಥೋತ್ಸವ ಬೆಳ್ಳಿ ರಥೋತ್ಸವ, ರುದ್ರಾಕ್ಷಿ ಮಂಟಪೋತ್ಸವ, ಬೆಳ್ಳಿ ಪಾಲಕಿ ಉತ್ಸವ, ತೆಪ್ಪೋತ್ಸವ, ಪಂಚ ಬ್ರಹ್ಮೋತ್ಸವ ಉತ್ಸವಗಳು ಅತ್ಯಂತ ಅರ್ಥಪೂರ್ಣವಾಗಿ ಪರಮ ಪೂಜ್ಯರು ನಡೆಸಿಕೊಂಡು ಬಂದಿದ್ದಾರೆ.

ದೂರದ ಊರುಗಳಿಂದ, ಬೇರೆ ಬೇರೆ ಜಿಲ್ಲೆ– ರಾಜ್ಯಗಳಿಂದ ಜಾತ್ರೆಗೆ ಆಗಮಿಸುತ್ತಾರೆ. ಇಲ್ಲಿ ನಡೆಯುವ ದನಗಳ ಜಾತ್ರೆ, ವಸ್ತು ಪ್ರದರ್ಶನ ತನ್ನದೇ ಆದ ಮಹತ್ವ ಪಡೆದಿದೆ. ಶ್ರೀ ಸಿದ್ಧಗಂಗಾ ಮಠವು ದಾಸೋಹಕ್ಕೆ ಹೆಸರುವಾಸಿಯಾಗಿದ್ದು, ಭಕ್ತರು ಪಾಯಸ, ಮಾಲ್ದಿ, ಬೂಂದಿ ಅನ್ನ, ಸಾರು, ಉಪ್ಪಿಟ್ಟನ್ನು ಸೇವಿಸುವ ಮೂಲಕ ಪ್ರಸಾದಕ್ಕೆ ತೊಂದರೆ ಇಲ್ಲದಂತೆ ಸಂಭ್ರಮಿಸಿದ್ದಾರೆ. ‘ಸಿದ್ದಗಂಗೆ ಊಟ ಚೆಂದ– ಶಿವಗಂಗೆ ನೋಟ ಚೆಂದ’ ಎಂಬ ನಾಣ್ನುಡಿ ಹೆಚ್ಚು ಪ್ರಚಲಿತವಾಗಿದೆ. ಎತ್ತುಗಳ ಪರಿಸೆ, ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು, ಕಲಾತಂಡಗಳ ಪ್ರದರ್ಶನ, ಧಾರ್ಮಿಕ ಗೋಷ್ಠಿ, ಬೆಳ್ಳಿ ಪಲ್ಲಕ್ಕಿ ಉತ್ಸವ ಮುಂತಾದ ವಿಶೇಷ ಕಾರ್ಯಕ್ರಮಗಳು ಸಿದ್ಧಗಂಗೆಯ ಪ್ರಸಿದ್ಧಿಗೆ ಉದಾಹರಣೆಗಳಾಗಿವೆ.

ಸಿದ್ದಗಂಗೆಯ ಜಾತ್ರೆಯನ್ನು ಕಣ್ಣಾರೆ ಕಂಡ ಮತಕೂರು ನಂಜುಂಡ ಶಿವಯೋಗಿಗಳು ಆನಂದಭರಿತ ಉತ್ಸಾಹದ ಸಂದರ್ಭದಲ್ಲಿ ಅವರೊಂದು ಕವಿತೆಯನ್ನು ರಚಿಸಿದ್ದಾರೆ.

ಭಲಾರೆ ಜಾತ್ರೆಯಿದು ಎಲೆ ಸತಿ ಭಲಾರೆ ಜಾತ್ರೆಯಿದು
ಭಲಾರೆ ಜಾತ್ರೆಯಿದಡವಿ ಸ್ವಾಮಿಯ
ಕಾಳ ವಿಳಾಸದೆ ಝಳಾಯಿಸುತಲಿದೆ ॥ ಭಲಾರೆ ಜಾತ್ರೆಯಿದು

ಅಪಾರವಾದ್ಯಗಳಪಾರ ಜ್ಯೋತಿಗ
ಳಪಾರ ಸಂಭ್ರಮ ಮುಷ ಮಿಸಲದಳ॥ ಭಲಾರೆ ಜಾತ್ರೆಯಿದು
ಚಂಡಾಳ ಕಾಂತಿಯ ಕಿಡಿ ಸೂಸುತಿಹ
ಗಡಾಬಾಜುಗಳ ಬೆಡಂಗ ನಿಟ್ಟಿಸು॥ ಭಲಾರೆ ಜಾತ್ರೆಯಿದು

ಬಗೆ ಬಗೆ ಬಾಳಗಳಗೋ ಹಾರುತಿದೆ
ಪಗಲ್ ಬತ್ತಿಗಳ ಝಗಾಯಿಸುತ್ತಿವೆ॥ ಭಲಾರೆ ಜಾತ್ರೆಯಿದು
ಸತ್ತಿಗೆ ಚಾಮರವೆತ್ತಿದ ಧ್ವಜಪಟ
ವೆತ್ತಲು ಪರಮಾನಂದವೆನಿಸುತ್ತಿದೆ॥ ಭಲಾರೆ ಜಾತ್ರೆಯಿದು

ಎಂದು ಕೊಂಡಾಡಿದ್ದಾರೆ. ಮಹಾಶಿವರಾತ್ರಿಯಿಂದ ಆರಂಭವಾಗಿ ಸುಮಾರು 9 ದಿನಗಳ ಕಾಲ ನಡೆಯುವ ಸಿದ್ಧಗಂಗಾ ಮಠದ ಜಾತ್ರೆಯು ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯುತ್ತಿರುವುದಕ್ಕೆ ಕಾರಣ ಭವನದ ಭಾಗ್ಯ, ಶರಣ ಸಂತ, ತ್ರಿವಿಧ ದಾಸೋಹಿ, ಮಹಾ ಮಹಿಮ, ವಿಭೂತಿ ಪುರುಷ ಪರಮ ಪೂಜ್ಯರಾದ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳ ಶ್ರಮ ಮತ್ತು ಈಗಿನ ಅಧ್ಯಕ್ಷರಾದ ಸಿದ್ಧಲಿಂಗ ಮಹಾಸ್ವಾಮೀಜಿಯವರ ಶ್ರದ್ಧೆ ಮತ್ತು ಕಾಳಜಿ ಎದ್ದು ಕಾಣುತ್ತಿದೆ. ಬನ್ನಿ... ಸಾವಿರಾರು ಜನಕ್ಕೆ ಅನ್ನ ಅಕ್ಷರ ವಸತಿ ಕಲ್ಪಿಸಿದ ನಡೆದಾಡಿದ ದೇವರ ಗದ್ದುಗೆಗೆ ನಮಿಸಿ ಬರೋಣ, ಮಹಾಶಿವರಾತ್ರಿಯ ಜಾತ್ರೆಯ ಈ ಸಂದರ್ಭದಲ್ಲಿ ಭಾಗವಹಿಸಿ ನಾವೂ ಧನ್ಯತೆಯ ಕುಸುಮಗಳನ್ನು ಅರ್ಪಿಸೋಣ.

***

ಶಬ್ದಮಣಿದರ್ಪಣದ ಪ್ರಯೋಗ ವಾಕ್ಯಗಳು

1 ಸುಂದ್ರೇಶ್ ಕೆ. ಎಸ್.

ಸಂಶೋಧನಾರ್ಥಿ

ಮೈಸೂರು ವಿಶ್ವವಿದ್ಯಾಲಯ

ಎಸ್.ಜೆ.ಬಿ.ಸಿ.ಎಂ.ಎಸ್ ಕನ್ನಡ ಸಂಶೋಧನಾ ಕೇಂದ್ರ, ಕೇಂಗೇರಿ

ಬೆಂಗಳೂರು

ಕೇಶಿರಾಜ ಶಬ್ದಮಣಿದರ್ಪಣವೆಂಬ ವ್ಯಾಕರಣ ಗ್ರಂಥದಲ್ಲಿ ಸೂತ್ರ ಮತ್ತು ವೃತ್ತಿಯಲ್ಲಿ ಕನ್ನಡ ವ್ಯಾಕರಣವನ್ನು ನಿರೂಪಿಸುವಾಗ ವಿಷಯ ಸ್ಪಷ್ಟತೆಗಾಗಿ ತನಗಿಂತ ಮೊದಲಿದ್ದ ಅಥವಾ ತನ್ನ ಸಮಾಕಾಲೀನ ಕವಿಗಳ ಕೃತಿಗಳಿಂದ ಸಾಲುಗಳನ್ನು ಮತ್ತು ಪದ್ಯಗಳನ್ನು ತೆಗೆದುಕೊಂಡು ಬಳಸಿಕೊಂಡಿದ್ದಾನೆ.

ಪ್ರಮುಖ ಪದಗಳು : ಕೇಶಿರಾಜ, ಶಬ್ದಮಣಿದರ್ಪಣ, ಪೂರ್ವಕವಿಗಳ ಪ್ರಯೋಗ, ವ್ಯಾಕರಣ ವಿಶೇಷತೆ, ಕನ್ನಡ ವ್ಯಾಕರಣ

ವ್ಯಾಕರಣಕಾರರಿಗೆ ತಾವು ನಿರೂಪಿಸುವ ವಿಷಯಗಳ ಬಗ್ಗೆ ಸ್ಪಷ್ಟತೆಯಿದ್ದರೂ ಆ ಕಾಲದಲ್ಲಿ ಅಥವಾ ತಮಗಿಂತ ಪೂರ್ವದಲ್ಲಿ ಆಡುನುಡಿ ಅಥವಾ ಗ್ರಂಥಸ್ಥ ಭಾಷೆಯಲ್ಲಿ ಬಳಕೆಗೊಂಡಿರುವ ಪದ ಅಥವಾ ವಾಕ್ಯ ಅಥವಾ ಸಾಲುಗಳನ್ನು ಉದಾಹರಣೆಯಾಗಿ ನೀಡಿ ತಾವು ಹೇಳಿದ ವಿಷಯವನ್ನು ದೃಢೀಕರಿಸುವುದು ರೂಢಿ. ಅದರಂತೆ ಕೇಶಿರಾಜನು ಶಬ್ದಮಣಿದರ್ಪಣ ಕೃತಿಯಲ್ಲಿ ಪೂರ್ವ ಕವಿಗಳ ಸಾಲುಗಳನ್ನು ಬಳಸಿಕೊಂಡಿದ್ದಾನೆ.ಅದನ್ನು ಆತನೇ ಪೀಠಿಕಾ ಪ್ರಕಣದಲ್ಲಿ ಹೀಗೆ ಹೇಳಿದ್ದಾನೆ.

ಗಜಗನ ಗುಣನಂದಿಯ ಮನ

ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ

ವಿಜಯರಪೊನ್ನನ ಪಂಪನ

ಸುಜನೋತ್ತಂಸನ ಸುಮಾರ್ಗಮಿದರೊಳೆ ಲಕ್ಷ್ಯಂ

ಈ ಪದ್ಯದಲ್ಲಿ ಉಲ್ಲೇಖಗೊಂಡಿರುವ ಕವಿಗಳ ಸಂಖ್ಯೆ ಹನ್ನೊಂದು ಆದರೆ ಈ ಪದ್ಯದಲ್ಲಿ ಉಲ್ಲೇಖಗೊಂಡಿರದ ಕವಿಗಳ ಸಾಲಗಳನ್ನು ಕೇಶಿರಾಜ ಬಳಸಿಕೊಂಡಿದ್ದಾನೆ. ಬಳಸಿರುವ ಕೆಲವು ಸಾಲುಗಳು ಯಾವ ಕವಿಯವು ಅಥವಾ ಕಾವ್ಯದವು ಎಂಬುದನ್ನು ಗುರುತಿಸಲು ಸಾಧ್ಯವಾಗಿಲ್ಲ. ಕಾವೇರಿಯ ಕಾಲನಾ ತಿಗುಳನೇಂ ಕಡಗೊಂಡನೊ ಬಡ್ಡಿಗೊಂಡನೋ ಎಂಬ ಸಾಲು ಐತಿಹಾಸಿಕವಾಗಿ ಮಹತ್ತರವಾದುದಾದರೂ ಯಾವ ಕವಿಯದು ಕೃತಿಯದು ಎಂಬುದು ಈವರೆಗೂ ತಿಳಿದಿಲ್ಲ ಅಥವಾ ಕೇಶಿರಾಜನ ಸ್ವತಃ ರಚನೆಯಿರಬಹುದ?. ಪ್ರಯೋಗ ವ್ಯಾಕ್ಯಗಳನ್ನು ಬಳಸಿಕೊಳ್ಳುವಾಗ ಎರಡನೇ ನಾಗವರ್ಮನ ಕಾವ್ಯಾವಲೋಕನದ ಭಾಗವಾದ ಶಬ್ದಸ್ಮೃತಿಯನ್ನು ಹೆಚ್ಚಾಗಿ ಅನುಸರಿಸಿರುವುದನ್ನು ಗುರುತಿಸಬಹುದು.ಈ ಹಿನ್ನಲೆಯಲ್ಲಿ ಆಯ್ದ ಕೆಲವು ವಾಕ್ಯ ಅಥವಾ ಸಾಲುಗಳನ್ನು ವಿಶ್ಲೇಶಣೆಗೆ ಒಳಪಡಿಸಿದಾಗ ಹೊಸಹೊಸ ವಿಚಾರಗಳು ತಿಳಿಸುತ್ತವೆ.

ಓಲಗದೊಳೊರ್ಮೆ ನತನರ

ಪಾಲಕ ಚೂಡಾಮಣಿದ್ಯುತಿ ಪ್ಲುತ ಚರಣಂ

ಸಂಧಿ ಪ್ರಕರಣದ 15ನೇ ಸೂತ್ರದಲ್ಲಿ ಕುಳ ಮತ್ತು ಕ್ಷಳದ ವಿಚಾರವನ್ನು ಹೀಗೆ ತಿಳಿಸುತ್ತಾನೆ. "ಕುಳ ಪ್ರಾಸದಲ್ಲಿ ಕ್ಷಳಕ್ಕೆ ಲ ಕಾರ ವಿಕಲ್ಪವಾಗಿಯೂ ಬರಬಾರದು. ಸಂಸ್ಕೃತ ಭಾಷೆಯಲ್ಲಿ ಲ ಕಾರಕ್ಕೆ ವಿಕಲ್ಪವಾಗಿ ಕ್ಷಳವಿದೆ, ಆದುದರಿಂದ ಕ್ಷಳವನ್ನು ಹೇಳಿದ್ದೇನೆ"

ಈ ವಿಚಾರಕ್ಕೆ ಪೂರಕವಾಗಿ ಉದಾಹರಣೆಯನ್ನು ನೀಡುವಾಗ ಓಲಗದೊಳೊರ್ಮೆ ನತನರ ಪಾಲಕ ಚೂಡಾಮಣಿದ್ಯುತಿ ಪ್ಲುತ ಚರಣಂ ಸಾಲನ್ನು ಹೇಳಿದ್ದಾನೆ. [ಲ ಕಾರಕ್ಕೆ ಕ್ಷಳನನ್ ಇರಿಸಲ್ ಬಾರದುದಕ್ಕೆ ಪ್ರಯೋಗಂ]. ಮೊದಲ ಸಾಲಿನ ಓಲಗ ಕನ್ನಡ ಪದ. ಇಲ್ಲಿ ಬಳಕೆ ಆಗಿರುವುದು ಕನ್ನಡ ಲ ಕಾರ. ಎರಡನೇ ಸಾಲಿನ ಪಾಲಕ ಸಂಸ್ಕೃತ ಪದ. ಇದರಲ್ಲಿ ಲ ಕಾರದ ಬದಲು ಳ (ಕ್ಷಳ) ಬಳಸಬಾರದು ಎಂಬುದು ಕೇಶಿರಾಜನ ಅಭಿಮತ.

ಕೇಶಿರಾಜನ ಕಾಲದ ಹೊತ್ತಿಗೆ ಈ ಅಕ್ಷರಗಳನ್ನು (ಕುಳ – ಕ್ಷಳ) ಪ್ರಾಸ ಸ್ಥಾನದಲ್ಲಿ ಭೇದ ವಿವೇಕ್ಷೆಯಿಲ್ಲದೆ ಪ್ರಯೋಗಿಸುವ ರೂಢಿ ಬೇರೂರಿಬಿಟ್ಟಿತ್ತು ಎಂದು ಕಾಣುತ್ತದೆ.

ಕಿಱುಗೂಸಾಗಿಯುಪಾಯಮಂಮರೆದನೇ .

ಸಮಾಸ ಪ್ರಕರಣದ 173 ಮತ್ತು 174 ನೇ ಸೂತ್ರದಲ್ಲಿ ಸಮಾಸ ಎಂದರೇನು? ಸ್ವರೂಪ ಮತ್ತು ಕಾರ್ಯವನ್ನು ಕುರಿತು ತಿಳಿಸುತ್ತಾನೆ. ಆನಂತರ 175ನೇ ಸೂತ್ರದಲ್ಲಿ

ತತ್ಪುರುಷ, ಕರ್ಮಧಾರಯ ಮತ್ತು ದ್ವಿಗು ಸಮಾಸಗಳ ಬಗ್ಗೆ ಹೀಗೆ ವಿವರಿಸುತ್ತಾನೆ. ಉತ್ತರಪದದ ಅರ್ಥವು ಮುಖ್ಯವಾಗಿದ್ದರೆ ತತ್ಪುರುಷವೆನಿಸುವುದು. ಆ ತತ್ಪುರುಷದಲ್ಲಿ ಪೂರ್ವೋತ್ತರ ಪದಗಳು (ಪೂರ್ವಪದ ಮತ್ತು ಉತ್ತರಪದ) ಪರಸ್ಪರ ಆಶ್ರಯಭಾವವನ್ನು ಹೊಂದಿದ್ದರೆ ಕರ್ಮಧಾರಯವೆನಿಸುವುದು. ಪೂರ್ವಪದದಲ್ಲಿ ಸಂಖ್ಯೆಯು ಬಂದರೆ ದ್ವಿಗುವೆನಿಸುವುದು.

ಪೂರ್ವಪದ ಮತ್ತು ಉತ್ತರ ಪದ ಏಕಾಶ್ರಯವನ್ನು ಹೊಂದಿ ವಿಶೇಷಣ ಮತ್ತು ವಿಶೇಷ್ಯ ಸಂಬಂಧ ಹೊಂದಿದ್ದರೆ ಕರ್ಮಧಾರಯ ಸಮಾಸ. ಇದಕ್ಕೆ ಕೇಶಿರಾಜ ತೆಳ್ಗದಂಪು, ಒಳ್ಗನ್ನಡಂ, ಮೆಲ್ನುಡಿ, ಬಲ್ಮುಗುಳ್, ಕಿಱುಗೂಸು ಎಂಬವುಗಳನ್ನು ಉದಾಹರಣೆ ನೀಡಿ, ಕಿಱುಗೂಸು ಎಂಬುದು ಬಳಕೆಗೊಂಡಿರುವುದಕ್ಕೆ ಒಂದು ಸಾಲನ್ನುಉಲ್ಲೇಖಿಸುತ್ತಾನೆ.

ಈ ಸಾಲಿನಲ್ಲಿ ಕಿಱುಗೂಸು ಎಂಬುದು ಕರ್ಮಧಾರಯ ಸಮಾಸಪದ. ಇದನ್ನು ಕಿಱಿದು+ಕೂಸು ಎಂದು ವಿಗ್ರಹಿಸಿಕೊಂಡರೆ (ವಿಗ್ರಹವಾಕ್ಯ) ಆಶ್ರಯ ಭಾವವಿರುವುದನ್ನು ಗುರುತಿಸಬಹುದು. "ಆಶ್ರಯಭಾವವೆಂದರೆ ಪೂರ್ವಪದ ಮತ್ತು ಉತ್ತರಪದ ಒಂದೇ ವಿಭಕ್ತಿಯನ್ನು ಹೊಂದಿರುವುದು, ಪೂರ್ವಪದ ಮತ್ತು ಉತ್ತರಪದ ವೀಶೇಷಣ ಮತ್ತು ವಿಶೇಷ್ಯ ಸಂಬಂಧವನ್ನು ಹೊಂದಿರುವುದು"[1]. ಉತ್ತರಪದ ಕೂಸು ಎಂಬುದು ನಪುಂಸಕಲಿಂಗದ ಪದವಾಗಿರುವುದರಿಂದ ಅದಕ್ಕನುಗುಣವಾಗಿ ಕಿಱಿದು ಎಂಬ ವಿಶೇಷಣವು ನಪುಂಸಕಲಿಂಗದಲ್ಲಿದೆ.

ಕೇಶಿರಾಜನೂ ಸೇರಿದಂತೆ ಕನ್ನಡ ವೈಯಾಕರಣರು ಏಕಾಶ್ರಯ, ಅನ್ಯೋನ್ಯಾಶ್ರಯ ಎಂಬ ಪಾರಿಭಾಷಿಕ ಪದದ ಅರ್ಥವನ್ನು ವಿವರಿಸಿಲ್ಲ.ಆದ್ದರಿಂದ ಆಧುನಿಕ ಕನ್ನಡ ವಿದ್ವಾಂಸರಲ್ಲಿ ಹಲವು ಬಗೆಯ ಚರ್ಚೆ ಇದೆ. ಕಿಱುಗೂಸು ಎಂಬ ಹಳಗನ್ನಡ ಪದದಲ್ಲಿ ಇದ್ದ ಶಕಟರೇಫೆಯು(ಱ) ಬದಲು ಹೊಸಗನ್ನಡದಲ್ಲಿ ರೇಫೆ(ರ) ಬಳಕೆಯಾಗುತ್ತಿದೆ.(ಕಿಱುಗೂಸು>ಕಿರುಗೂಸು).

ಮನುವಿನ ಮಾರ್ಗ ಸುರಗುರು

ಸಂಧಿಪ್ರಕರಣ 62ನೇ ಸೂತ್ರದಲ್ಲಿ ಲೋಪಸಂಧಿಯನ್ನು, 63ನೇ ಸೂತ್ರದಲ್ಲಿ ಯ ಕಾರಾಗಮ ಸಂಧಿಯನ್ನು, 64ನೇ ಸೂತ್ರದಲ್ಲಿ ವ ಕಾರಾಗಮ ಸಂಧಿಯನ್ನು ಕುರಿತು ತಿಳಿಸಿ ಅದಕ್ಕೆ ಉದಾಹರಣೆಗಳನ್ನು (ಪ್ರಯೋಗಂ) ನೀಡಿ, ಅದಕ್ಕೆ ಪೂರಕವಾಗಿ ಪೂರ್ವಕವಿಗಳ ಪ್ರಯೋಗಗಳನ್ನು ಉಲ್ಲೇಖಿಸುತ್ತಾನೆ.

ಅವತರಿಸಿರ್ಕುಮುವರ್ಣದ

ಋವರ್ಣದೋತ್ವೌತ್ವದಗ್ರದೊಳ್ ಸ್ವರಮಿರೆ ವ

ತ್ವವಿಧಾನಂ ಬಹುಳತೆ ಯ

ತ್ವವತ್ವದೊಳ್ ಸಂಸ್ಕೃತಕ್ಕೆ ತಾನಿಲ್ಲೆಂದುಂ

ಪೂರ್ವಪದದ ಕೊನೆಯಲ್ಲಿ ಉ,ಊ,ಋ,ಋ,ಓ,ಔ ಕಾರಗಳಿದ್ದು ಉತ್ತರ ಪದದ ಆದಿಯಲ್ಲಿ ಯಾವುದೇ ಸ್ವರವಿದ್ದರೆ ವಕಾರ ಆಗಮವಾಗುತ್ತದೆ. ಯ ಕಾರ ಆಗಮಕ್ಕೆ ಮತ್ತು ವ ಕಾರ ಆಗಮಕ್ಕೆ ಸಂಸ್ಕೃತದಲ್ಲಿ (ಸಂಸ್ಕೃತ ಪದ) ವಿಕಲ್ಪವಿಲ್ಲ ಎಂದು 65ನೇ ಸೂತ್ರದಲ್ಲಿ ತಿಳಿಸುತ್ತಾನೆ. (ಕನ್ನಡದಲ್ಲಿ ಯ ಕಾರ ಆಗಮಕ್ಕೆ ಮತ್ತು ವ ಕಾರ ಆಗಮಕ್ಕೆ ವಿಕಲ್ಪ ಉಂಟು ಎಂದು ಭಾವಿಸಬೇಕು) ಮತ್ತು ಪ್ರತಿಯೊಂದಕ್ಕೂ ಉದಾಹರಣೆಯಾಗಿ ಪೂರ್ವಕವಿಗಳ ಸಾಲನ್ನು ನೀಡುತ್ತಾನೆ.

ಪೂರ್ವಪದದಲ್ಲಿ ಉ ಕಾರವಿದ್ದು ಉತ್ತರ ಪದದ ಆದಿಯಲ್ಲಿ ಯಾವುದೇ ಸ್ವರವಿದ್ದರೆ ವಕಾರ ಆಗಮವಾಗುತ್ತದೆ ಎಂಬ ವಿಷಯಕ್ಕೆ ಮನುವಿನ ಮಾರ್ಗಂ ಸುರಗುರು. ಸಾಲನ್ನು ಉದಾಹರಣೆಯಾಗಿ ನೀಡಿದ್ದಾನೆ.

ಮನುವಿನ ಮಾರ್ಗಂ ಸುರಗುರು ಎಂಬ ಸಾಲಿನಲ್ಲಿ ಮನುವಿನ ಎಂಬುದು ಸಂಧಿಪದ. ಮನು+ಇನ=ಮನುವಿನ ಎಂಬ ಸಂಧಿಪದದಲ್ಲಿ ಪೂರ್ವಪದದ ಕೊನೆಯಲ್ಲಿ ಉ ಕಾರವಿದ್ದು ಉತ್ತರಪದದ ಆದಿಯಲ್ಲಿ ಇ ಎಂಬ ಸ್ವರ ಬಂದಿರುವುದರಿಂದ ವಕಾರ ಆಗಮವಾಗಿದೆ. ಇದನ್ನು ವ ಕಾರ ಆಗಮ ಸಂಧಿ ಎಂದು ಕರೆಯುತ್ತಾರೆ.

ಎರಡನೇ ನಾಗವರ್ಮ ಕಾವ್ಯಾವಲೋಕನದ ಮೊದಲನೇ ಅಧ್ಯಾಯವಾದ ಶಬ್ದಸ್ಮೃತಿ ಪ್ರಕರಣದ ಉಪ ಅಧ್ಯಾಯ ನಾಮಪ್ರಕರಣದ ಸೂತ್ರ 28 ರಲ್ಲಿ ಇನ್ ಆಗಮವನ್ನು ವಿವರಿಸಿ ಉದಾಹರಣೆಯಾಗಿ ಈ ಪದ್ಯವನ್ನು ಕೊಟ್ಟಿದ್ದಾನೆ. ಕೇಶಿರಾಜನು ಕಾವ್ಯಾವಲೋಕನದಿಂದ ಈ ಪದ್ಯದ ಸಾಲನ್ನು ತೆಗೆದುಕೊಂಡಿದ್ದಾನೆ. ಸಂಧಿ ಪ್ರಕರಣದಲ್ಲಿ ಪದ್ಯದ ಸಾಲನ್ನು ಬಳಸಿಕೊಂಡ ಕೇಶಿರಾಜ ನಾಮಪ್ರಕರಣದಲ್ಲಿ ಪೂರ್ಣಪದ್ಯವನ್ನು ಉದಾಹರಣೆಗೆ ಬಳಸಿದ್ದಾನೆ

"ಕಾವೇರಿಯ ಕಾಲನಾ ತಿಗುಳನೇಂ ಕಡಗೊಂಡನೊ ಬಡ್ಡಿಗೊಂಡನೋ"

ಕೇಶಿರಾಜ ತನ್ನ ಶಬ್ದಮಣಿದರ್ಪಣದ 173 ಮತ್ತು 174 ನೇ ಸೂತ್ರದಲ್ಲಿ ಸಮಾಸ ಎಂದರೇನು ಮತ್ತು ಸಮಾಸದ ಕಾರ್ಯವನ್ನು ಕುರಿತು ವಿವರಿಸುತ್ತಾನೆ. 178ನೇ ಸೂತ್ರದಲ್ಲಿ ಕ್ರಿಯಾ ಸಮಾಸವನ್ನು ಕುರಿತು ಕೇಶಿರಾಜ ಈ ರೀತಿ ತಿಳಿಸುತ್ತಾನೆ.

ವಿದಿತಂ ಕ್ರಿಯಾಸಮಾಸಂ

ಮೊದಲೊಳ್ ಕಾರಕಮುಮಗ್ರದೊಳ್ ಕ್ರಿಯೆಯುಂ ಸ

ನ್ನಿದಮಾಗೆ ಬಿಂದು ಸಕ್ಕದ

ದದಂತದೊಳ್ ಕನ್ನಡಕ್ಕೆ ಮೇಣುತ್ವದೊಳಂ

ಪೂರ್ವ ಪದವು ನಾಮ ಪದವಾಗಿದ್ದು (ಕಾರಕ) ಉತ್ತರ ಪದವು ಕ್ರಿಯಾ ಪದವಾಗಿದ್ದು ಅರ್ಥಕೆಡದಿದ್ದರೆ ಕ್ರಿಯಾ ಸಮಾಸ ಎನಿಸುತ್ತದೆ. ಪೂರ್ವ ಪದವು ಸಂಸ್ಕೃತ ಪದವಾಗಿದ್ದು ಅ ಕಾರದಿಂದ ಅಂತ್ಯವಾಗುತ್ತಿದ್ದರೆ ಬಿಂದು ಕಡ್ಡಾಯವಾಗಿ ಬರುತ್ತದೆ. ಪೂರ್ವಪದ ಕನ್ನಡ ಪದವಾಗಿದ್ದು ಅ ಕಾರ ಅಥವಾ ಉ ಕಾರದಿಂದ ಅಂತ್ಯವಾಗುತ್ತಿದ್ದಾಗ ಬಿಂದು ಕೆಲವು ವೇಳೆ ಬರುತ್ತದೆ. ಕೆಲವು ವೇಳೆ ಬರುವುದಿಲ್ಲ (ವಿಕಲ್ಪ).

ಕೇಶಿರಾಜ ಕನ್ನಡದಲ್ಲಿ ಬಿಂದು ವಿಕಲ್ಪಕ್ಕೆ ಉದಾಹರಣೆಯನ್ನು ನೀಡಬೇಕಾದರೆ ಕಾವೇರಿಯ ಕಾಲನಾ ತಿಗುಳನೇಂ ಕಡಗೊಂಡನೊ ಬಡ್ಡಿಗೊಂಡನೋ ಎಂಬ ಸಾಲನ್ನು ಬಳಸಿದ್ದಾನೆ.

ಈ ಸಾಲಿನಲ್ಲಿ ಬಳಕೆಯಾಗಿರುವ ಕಡಗೊಂಡನೊ ಎಂಬುದು ಕ್ರಿಯಾ ಸಮಾಸ ಪದ. ಈ ಪದದಲ್ಲಿ 'ಕಡ' ಎಂಬುದು ಕನ್ನಡ ಪದವಾಗಿದ್ದು ಅ ಕಾರದಿಂದ ಅಂತ್ಯವಾಗುತ್ತಿದೆ ಆದ್ದರಿಂದ ಬಿಂದು ವಿಕಲ್ಪ. ಅಂದರೆ ಕಡಗೊಂಡನೋ ಅಥವಾ ಕಡಂಗೊಂಡನೋ ಎಂದು ಬಳಸಬಹುದು. ಅರ್ಥದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಈ ಸಾಲು ಕೇಶಿರಾಜನ ಸ್ವತಃ ರಚನೆಯೋ ಅಥವಾ ಬೇರೆ ಕವಿಗಯದ್ದೋ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಿಲ್ಲ. ಆದರೆ ಪ್ರಸ್ತುತ ಸಂದರ್ಭದಲ್ಲಿ ಕಂಡು ಬರುವ ಕಾವೇರಿ ನದಿ ನೀರಿನ ವಿವಾದ 13ನೇ ಶತಮಾನದಲ್ಲೂ ಇತ್ತು ಎಂಬುದನ್ನು ಈ ಸಾಲು ತಿಳಿಸುತ್ತದೆ. ಕಾವೇರಿಯ ನೀರನ್ನು ತಮಿಳಿಗ ಸಾಲಕ್ಕೆ (ಕಡ) ಪಡೆದಿದ್ದನೋ ಅಥವಾ ಬಡ್ಡಿಗೆ ಪಡೆದಿದ್ದನೋ ಎಂಬುದು ಈ ಸಾಲಿನ ಅರ್ಥ

ಅಮರಾಂಗನೆಯರ್ ಜೋಯೆಂದು ಪಾಡಿದರ್ ಜೋಗುಳಮಂ

ಸಂಧಿ ಪ್ರಕರಣದ 63ನೇ ಸೂತ್ರದಲ್ಲಿ ಹೀಗೆ ತಿಳಿಸುತ್ತಾನೆ. "ಆ,ಇ,ಈ,ಓ,ಐ,ಎ,ಏ ಅಕ್ಷರಗಳು ಪೂರ್ವ ಪದದ ಕೊನೆಯಲ್ಲಿದ್ದು, ಉತ್ತರಪದದ ಆದಿಯಲ್ಲಿ ಯಾವುದೇ ಸ್ವರ ಬಂದರೆ ಯ ಕಾರ ಆಗಮವಾಗಿ ಬರುತ್ತದೆ. ಕೇಶಿರಾಜ ತಾನು ಹೇಳಿದ ವಿಚಾರಕ್ಕೆ ಸಂಬಂಧಿಸಿದಂತೆ ಉದಾಹರಣೆಯನ್ನು [ಪ್ರಯೋಗಂ] ನೀಡುವಾಗ ಅಮರಾಂಗನೆಯರ್ ಜೋಯೆಂದು ಪಾಡಿದರ್ ಜೋಗುಳಮಂ ಎಂಬ ಸಾಲನ್ನು ಉಲ್ಲೇಖಿಸಿದ್ದಾನೆ.

ಪೂರ್ವ ಪದದ ಕೊನೆಯಲ್ಲಿ ಓ ಕಾರವಿದ್ದು ಉತ್ತರ ಪದದ ಆದಿಯಲ್ಲಿ ಯಾವುದೇ ಸ್ವರ ಪರವಾದರೆ ಯ ಕಾರ ಆಗಮವಾಗುತ್ತದೆ ಎಂಬುದಕ್ಕೆ ಈ ಸಾಲಿನಲ್ಲಿ ಬಳಕೆಯಾಗಿರುವ ಜೋಯೆಂದು ಎಂಬ ಪದ ಉದಾಹರಣೆ.

ಜೋ + ಎಂದು = ಜೋಯೆಂದು

ಓ + ಎ = ಯ

ಪೂರ್ವ ಪದದ ಕೊನೆಯಲ್ಲಿ ಓ ಕಾರವಿದೆ. ಉತ್ತರಪದದ ಆದಿಯಲ್ಲಿ ಎ ಸ್ವರ ಬಂದಿದೆ. ಸಂಧಿ ಕಾರ್ಯವಾಗುವಾಗ ಯ ಕಾರ ಆಗಮವಾಗಿದೆ.

ಕೇಶಿರಾಜ ಶಬ್ದಮಣಿದರ್ಪಣದಲ್ಲಿ ಸುಮಾರು 681 ಪದ್ಯಭಾಗಗಳನ್ನು ಉದಾಹರಣೆಯಾಗಿ ನೀಡಿದ್ದಾನೆ.ಇವುಗಳಲ್ಲಿ ಬಹುತೇಕ ಪದ್ಯಭಾಗಗಳು ಎರಡನೇ ನಾಗವರ್ಮನ ಕಾವ್ಯಾವಲೋಕನ(ಶಬ್ದಸ್ಮೃತಿ)ದಿಂದ ಆಯ್ದುಕೊಂಡಿದ್ದಾನೆ.ಕೆಲವು ಪದ್ಯಗಳ ಮೂಲ ಯಾವುದೆಂದು ಇದುವರೆಗೂ ತಿಳಿದಿಲ್ಲವಾದರೂ. ಪದ್ಯದ ಆಯ್ಕೆಯಲ್ಲಿ ಕೇಶಿರಾಜನ ಕವಿತಾ ಸಾಮರ್ಥ್ಯವನ್ನು ಸ್ಪಷ್ಟವಾಗಿ ನಾವು ಗುರುತಿಸಬಹುದು.ಇವುಗಳಲ್ಲಿ ಕೆಲವು ಗಾದೆಯ ರೂಪವನ್ನು,ಕೆಲವು ನೀತಿವಾಕ್ಯದ ರೂಪಗಳನ್ನು ಆಂತರ್ಯದಲ್ಲಿ ಅಡಗಿಸಿಕೊಂಡಿವೆ.

ಕೊನೆ ಟಿಪ್ಪಣಿ.

1) ದರ್ಪಣ ವಿವರಣ–ಟಿ.ವಿ ವೆಂಕಟಾಚಲ ಶಾಸ್ತ್ರೀ,ಸಪ್ನ ಬುಕ್ ಹೌಸ್, ಬೆಂಗಳೂರು

ಆಧಾರ ಗ್ರಂಥ

1) ಕೇಶಿರಾಜ ವಿರಚಿತ ಶಬ್ದಮಣಿದರ್ಪಣ – ಸಂ.ಡಿ.ಎಲ್ ನರಸಿಂಹಾಚಾರ್

ಮಾರ್ಗದರ್ಶಕರು : **ಡಾ. ಬಸವರಾಜು ಕೆ. ಬಿ.**

ಪ್ರಾಧ್ಯಾಪಕರು

ಎಸ್.ಜೆ.ಬಿ.ಸಿ.ಎಂ.ಎಸ್ ಕನ್ನಡ ಸಂಶೋಧನಾ ಕೇಂದ್ರ ಕೆಂಗೇರಿ

ಬೆಂಗಳೂರು

ಮಹಾತ್ಮರ ಬರಹ ಮತ್ತು ಬದುಕು ಅನುಸರಣೆಗೋ, ಆಚರಣೆಗೋ ?

1 ಡಾ. ಭೀಮರಾಜು

ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಸ್ಎಲ್ಎಸ್,ಎಂ

ಜೆ ಎಸ್ ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು.

bheemarajueregowda@gmail.com

ಜಗತ್ತು ಕಾಲದಿಂದ ಕಾಲಕ್ಕೆ ಬದಲಾವಣೆಯತ್ತಾ ಮುಖಮಾಡಿ ಹೊರಳುತ್ತಾ ಸಾಗುತ್ತಿರುವುದು ಸರ್ವರಿಗೂ ತಿಳಿದಿರುವ ವಿಚಾರ. ಇಂತಹ ಸಂದರ್ಭಗಳಲ್ಲಿ ಕೆಲವೊಂದು ಕ್ಷುಲ್ಲಕ ಮನಸ್ಥಿತಿಯ ವ್ಯಕ್ತಿಗಳಿಂದ, ಜಾತಿಯೇ ಶ್ರೇಷ್ಠ, ಎಂಬ ಭ್ರಮಾಲೋಕದಲ್ಲಿ ಮುಳುಗಿ ಹೋಗಿರುವ ಜನಗಳಿಂದ ಸರಿದಾರಿಯಲ್ಲಿ ಸಾಗುತ್ತಿದ್ದ ಸಮಾಜವು ಕೆಟ್ಟುಹೋಗುತ್ತಿದೆ. ಇದಕ್ಕೆ ಇತಿಹಾಸದಲ್ಲಿ ನೂರಾರು ನಿದರ್ಶನಗಳಿವೆ. ಇಂತಹ ಮನಸುಗಳಿಂದ ಸಮ ಸಮಾಜದ ನಿರ್ಮಾಣ ಇಂದಿಗೂ ಸಾಧ್ಯವಾಗಿಲ್ಲ. ಪ್ರಸ್ತುತ ಮನುಷ್ಯ ವಿಜ್ಞಾನ ಲೋಕದಲ್ಲಿ ಆಕಾಶದೆತ್ತರಕ್ಕೆ ಬೆಳೆದು ನಿಂತರು ಪಕ್ಕದಲ್ಲಿರುವ ಸಹ ಮಾನವ ಅವನಿಗೆ ಅಗೋಚರ. ಅಷ್ಟೆ ಏಕೆ ತಾಂತ್ರಿಕತೆಯಲ್ಲಿ ವ್ಯವಹರಿಸುವ ಒಂದು ಯಂತ್ರ ಎನ್ನುವಂತಾಗಿದೆ. ವಿಚಾರ ಹೀಗಿರುವಾಗ ದಿಕ್ಕುದೆಸೆ ಕಾಣದೆ ಓಟದ ಸ್ಪರ್ಧೆಗೆ ನಿಂತವರಂತೆ ಒಂದೇ ಸಮನೆ ಓಡುತ್ತಿರುವ ಈ ಸಮಾಜಕ್ಕೆ ಸರಿಯಾದ ಮಾರ್ಗ ಹಾಗೂ ಗುರಿ ತೋರುವವರು ಯಾರು? ರಾಜಕಾರಣಿಗಳಿರಬಹುದೆ? ಇಲ್ಲ ಅವರು ಅಧಿಕಾರದಾಹ, ಧನಸಂಪಾದನೆಯಲ್ಲಿ ಮುಳುಗಿಹೋಗಿದ್ದಾರೆ, ಧರ್ಮ ಗುರುಗಳೆ? ಇಲ್ಲ ಇವರುಗಳು ಸಹ ತಮ್ಮದೆ ಧರ್ಮದ ಮಠಮಾನ್ಯ, ಮಂದಿರ ಮಸೀದಿ, ಚರ್ಚ್‌ಗಳ ನಿರ್ಮಾಣ ಎಂದು ಚಿಂತೆಗೀಡಾಗಿದ್ದಾರೆ. ಹಾಗಾದರೆ ಜನಸಾಮಾನ್ಯ ಯಾರ ಕಡೆ ವಾಲಬೇಕು? ಯಾವುದನ್ನು ಅನುಸರಿಸಬೇಕು? ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು? ಎಂದಾಗ ನಮ್ಮ ಮನಸ್ಸಿಗೆ ಹೊಳೆವ ವಿಚಾರವೊಂದೆ.

ನಾಡಿನುದ್ದಗಲಕ್ಕು ಸಂಚರಿಸಿ ಆಯಾ ಕಾಲಕ್ಕೆ ಅನುಗುಣವಾಗಿ ಮುರಿದ ಮನಸ್ಸುಗಳನ್ನು, ಹಾಳಾಗುತ್ತಿದ್ದ ಸಮಜವನ್ನು ಸರಿದಾರಿಗೆ ತಂದ ಮಹನೀಯರ ಬದುಕು, ಬರಹಗಳೆ ಇದಕ್ಕಿರುವ ದಿವ್ಯ ಔಷಧಿ. ಪಂಪನಿಂದ ಮೊದಲುಗೊಂಡು, ವಚನಕಾರರು, ದಾಸಶ್ರೇಷ್ಠರು, ಸಂತರು, ಕನ್ನಡ ನಾಡಿನ ಕೀರ್ತಿಪತಾಕೆಯನ್ನು ಮುಗಿಲೆತ್ತೆರ, ಜಗದೆತ್ತರಕ್ಕೆ ಹಾರಿಸಿದ ಕವಿಮಹಾಶಯರ ಮಾತು, ಮಾರ್ಗಗಳೇ ನಮಗೆ ಉತ್ತಮ ಮದ್ದಾಗಬಲ್ಲವು. ವಿಪರ್ಯಾಸ ಎಂದರೆ ಈ ಸಮಾಜಕ್ಕೆ ಅವುಗಳು ಕೇವಲ ಅವರ ಜನ್ಮದಿನದ ಆಚರಣೆ, ಜಾತಿ ರಾಜಕಾರಣ, ಮೊಬೈಲ್ ಸ್ಟೇಟಸ್ ಗೆ ಸೀಮಾತವಾಗಿಬಿಟ್ಟಿವೆ. ದಿನಬೆಳಗಾದರೆ ಸಾಕು ಒಬ್ಬರಮೇಲೆ ಒಬ್ಬರ ಕೆಸರೆರಚಾಟ ಮಾಡುವುದನ್ನು ಬಿಟ್ಟರೆ ಮತ್ತೇನು ಪ್ರಯೋಜನವಿಲ್ಲದ ಸ್ಥಿತಿ ಉಂಟಾಗಿದೆ. ಇಂತಹ ಸಂದಿಗ್ದ ಪರಿಸ್ಥಿಯಲ್ಲಿ ಜನಸಾಮಾನನ್ಯ ಬದುಕು ಮೂರಾಬಟ್ಟೆಯಾಗಿ ಹೋಗಿದೆ. ಜನ ವಿದ್ಯೆ ಕಲಿತಂತೆ ಸಮಾಜದ ಅಂಕುಡೊಂಕು ಸರಿಯಾಗಬೇಕಿತ್ತು. ಆದರೆ ಇಲ್ಲಿ ಆಗುತ್ತಿರುವುದೇ ಬೇರೆ. ಜನಗಳಿಂದ ಆಯ್ಕೆಗೊಂಡ ಜನಪ್ರತಿನಿಧಿಯಾದವ ಎಷ್ಟು ಸಾಧ್ಯವೋ ಅಷ್ಟು ಈ ಜಾತಿ ಧರ್ಮದ ವಿಚಾರಗಳನ್ನು ಇಟ್ಟುಕೊಂಡೇ ಹೊಸ, ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತಿರುವನೇ ವಿನಃ ಸಮಾಜದ ನಡುವೆ ಇರುವ ಮಾನಸಿಕ ಕಂದಕವನ್ನು ಮುಚ್ಚುವ ಪ್ರಯತ್ನ ಮಾಡಲೇ ಇಲ್ಲ. ಯಾರಿಗೂ ಇದು ಬೇಡವಾದ ವಿಚಾರವಾಗಿದೆ. ಆದ್ದರಿಂದ ಕಲಿತವರು, ಸಮಾಜದ ಒಳಿತನ್ನು ಬಯಸುವ, ಉತ್ತಮ ಸಮಾಜಕ್ಕೆ ಅಗತ್ಯವಿರುವ ಮಹನೀಯರ ಬದುಕು ಬರಹಗಳನ್ನು ಮತ್ತೆ ಮತ್ತೆ ಸಾಮಾಜಿಕರ ಮುಂದೆ ಪಸರಿಸಿ, ನವಯುಗದ ಮನಸ್ಸುಗಳನ್ನು ಸರಿದಾರಿಗೆ ತರುವ ಪ್ರಯತ್ನ ಜರೂರಿನಿಂದ ಆಗಬೇಕಾಗಿದೆ. ಈ ಎಲ್ಲಾ ಹಿನ್ನೆಲೆಯಿಂದ ನಾಡಿಗೆ ಒಳಿತನ್ನು ಮಾಡಿರುವ ಮಹನೀಯರ ಮತುಗಳನ್ನು ಇಂದಿನ ಪೀಳಿಗೆಗೆ ತಲುಪಿಸುವ ಅಗತ್ಯವಂತು ಇದೆ. ಇಲ್ಲವಾದಲ್ಲಿ ಅಳಿದುಳಿದ ಒಳ್ಳೆಯ ಮನಸುಗಳು ತಕ್ಕು ಹಿಡಿದ ಮನಸ್ಥಿತಿಗಳಾಗಿ ಮುಂದೆ ಸರಿಮಾಡಲಾಗದ ಸ್ಥಿತಿಗೆ ತಲುಪುವ ಸಂಭವವಿದೆ.

ಇಂತಹ ಸಮಸ್ಯೆಗಳು ಇಂದು, ನೆನ್ನೆಯದಲ್ಲ, ಪಂಪನ ಕಾಲಕ್ಕಾಗಲೇ ಜಾತಿಯ ವಿಷಮ ಬೀಜ ಎಲ್ಲೆಡೆ ಹರಡಿಕೊಂಡಿತ್ತು. ಇದನ್ನು ಮನಗಂಡ ಪಂಪ ಕರ್ಣನ ಸಾಮರ್ಥ್ಯದ ವಿಚಾರವನ್ನು ಮುಂದಿಟ್ಟುಕೊಂಡು ಉತ್ತಮ ಪ್ರಶ್ನೆ ಎತ್ತಿರುವುದು ನಿಜಕ್ಕೂ ಯೋಚಿಸಬೇಕಾದ ವಿಷಯವಾಗಿದೆ. ನಾವು ಸಾಮರ್ಥ್ಯವನ್ನು ಗಮನಿಸಿ ಆತನಿಗೆ ತಕ್ಕ ಸ್ಥಾನಮಾನ ನೀಡಬೇಕೆ ವಿನಃ, ಆತನ ಜಾತಿ ನೋಡಿ ಅಲ್ಲ ಎನ್ನುವ ಆ ಮಾತು ಇಂದಿಗೂ ಪ್ರಸ್ತುತ.

ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ ।
ರ್ಮಲೆವನನಟ್ಟಿ ತಿಂಬುವೆಬಕುಲಂ ಕುಲಮಲ್ತು ಚಲಂ ಕುಲಂ ಗುಣಂ॥

ಕುಲಭಿಮಾನವೊಂದೆ ಕುಲ [ಮಣ್ಮು ಕುಲಂ] ಬಗೆವಾಗಳೀ [ಗಳೀ]

ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುದುಂ" [1]

ಎಂಬ ಮಾತುಗಳು ಅನೇಕ ಜಿಜ್ಞಾಸೆಗಳನ್ನು ಹುಟ್ಟುಹಾಕುತ್ತದೆ. ಯುದ್ಧಭೂಮಿಯಲ್ಲಿ ಜಾತಿ ಧರ್ಮ ಬರುವುದಿಲ್ಲ. ಬರುವುದೊಂದೆ ಸೌರ್ಯ, ಸಹಾಸ, ತಂತ್ರಗಾರಿಕೆ, ಎದೆಗಾರಿಕೆ, ಎದುರಾಳಿಯ ಸಂಚನ್ನು ಅರಿತು ಮುನ್ನುಗುವ ಆತ್ಮಬಲ. ಅಂದಹಾಗೆ ಇಲ್ಲಿ ವಿಚಾರ ಸ್ಪಷ್ಟವಾಗಿದೆ. ನಮಗೆ ಬೇಕಿರುವುದು ಕೌಶಲ್ಯವೇ ವಿನಃ ಕುಲಜಾತಿಗಳ ವಿಚಾರವಲ್ಲ. ಆದ್ದರಿಂದ ಪಂಪ ಅಂದಿನ ಕಾಲಕ್ಕೆ ಉಚ್ಚರಿಸಿದ ಈ ಮಾತುಗಳು ಇಂದಿಗೂ ಪ್ರಸ್ತುತವೆ ಆಗಿದೆ. ಆದರೇನು ಮಾಡುವುದು ಈ ವಿಷಯಗಳು ಬೋಧನೆಗೆ ವಿನಃ ಬದುಕಿಗಲ್ಲ ಎಂದು ಬದುಕುತ್ತಿರುವ ಈ ಜನಗಳಿಗೆ ತಿಳಿಸಿ ಹೇಳುವವರು ಯಾರು? ಎಂಬ ಪ್ರಶ್ನೆ ನಮಗೆದುರಾಗಿದೆ.

ಜಾತಿಯ ವಿಷಮಜಾಲ ಬಸವಣ್ಣನನ್ನು ಬಿಡಲಿಲ್ಲ. ಜಾತಿಮುಕ್ತ ಸಮಾಜ ನಿರ್ಮಾಣ ಮಾಡಬೇಕೆಂದು ಜಾತಿಯ ಸಂಕೋಲೆಗಳನ್ನು ಬಿಡಿಸಿಕೊಂಡು **ಜಾತಿಯ ಜನಿವಾರವನ್ನು ಕಿತ್ತೆಸೆದು ಬಂದ ಬಸವಣ್ಣನನ್ನೇ ಇಂದು ಜಾತಿಯಲ್ಲಿ ಬಂಧಿಸಿದ್ದೇವೆ.** ಯಾವ ಮಹಾನುಭಾವನನ್ನು 12ನೇ ಶತಮಾನದ ಮಹಾನ್ ಜ್ಞಾನಿ, ವಿಚಾರವಂತ, ಸಮಸಮಾಜದ ನಿರ್ಮಾತೃ ಎಂದೆಲ್ಲಾ ಕರೆದೆವೋ ಅಂತಹ ಬಸವಣ್ಣನ ವಿಚಾರಗಳು ಪ್ರಸ್ತುತ ಏನಾಗಿವೆ ಎಂದು ಎಲ್ಲರಿಗೂ ಗೊತ್ತು. ಆದರೆ ಆತ ಅಂದಿನ ಮತಮೋಹ, ಜಾತಿ ಜಾಡ್ಯ, ಮೇಲುಕೀಲುಗಳ ವಿರುದ್ಧ ಸೆಟೆದುನಿಂತು ಹೋರಾಡಿದಾತ. ತನಗಿದ್ದ ಎಲ್ಲಾ ಸೌಕರ್ಯಗಳನ್ನು ಕಡೆಗಣಿಸಿ ಸಾಮಾನ್ಯರಲ್ಲಿ ಸಾಮನ್ಯನಾಗಿ ಬದುಕಿದವ. ತನ್ನ ಬದುಕಿಗೂ ಬರಹಕ್ಕೂ ಏಕಮುಖವಾಗಿ ನಿಂತವರು ಬಸವಣ್ಣ. ಆತನ ಒಂದೊಂದು ವಚನಗಳು ಅರಿತು ನಡೆಯುವವರಿಗೆ ದಾರಿದೀಪಗಳು. ಇಷ್ಟಾದರೂ ಆತ ಮೊದಲು ಬೆರೆಯವರನ್ನು ಬೆಟ್ಟುಮಾಡಿ ತೋರದೆ ತನ್ನನ್ನು ತಾನು ಶುದ್ದೀಕರಿಸಿಕೊಂಡ, ತದನಂತರ ಸಮಾಜವನ್ನು ತಿದ್ದಿದ.

ಮರ ಮರ ಮಂಥನದಿಂದ ಅಗ್ನಿ ಹುಟ್ಟಿ
ಆ ಮರನೆಲ್ಲವ ಸುಡುದಿರ್ಪುದೆ?
ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ
ಎನ್ನ ತನುಗುಣವನೆಲ್ಲವ ಸುಡದಿರ್ಪುದೇ?
ಇದು ಕಾರಣ ಮಹಾನುಭಾವರ ತೋರಿಸು
ಕೂಡಲಸಂಗಮದೇವ । [2]

ಎಂದು ಪ್ರಾರ್ಥಿಸುವಲ್ಲಿ ಮಹಾನುಭಾವರ ಸಂಗದ ಮಹತ್ವ ಏನೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಇಲ್ಲಿನ ವಿಚಾರಗಳಿಂದಲೇ ತಿಳಿಯುತ್ತದೆ ಅವರ

ಮನೋಧರ್ಮ ಹೇಗಿತ್ತು ಎಂದು. ಈ ವಿಚಾರವನ್ನು ಇಂದಿನ ಸಮಾಜಕ್ಕೆ ಹೋಲಿಸಿ ನೋಡಿದಾಗ ಯಾರೊಬ್ಬರು ಮತ್ತೊಬ್ಬರ ಮಾತನ್ನು ಕೇಳುವುದಿರಲಿ, ಕಿವಿಗೂ ಹಾಕಿಕೊಳ್ಳುವುದಿಲ್ಲ. ವಿಷಯ ಹೀಗಿರುವಾಗ ಸ್ವಯಂ ಅರಿವು ಎಲ್ಲಿಂದ ಬರಬೇಕು? ಸಮಾಜವೇಗೆ ಸುಧಾರಿಸಬೇಕು ಯೋಚಿಸಿನೋಡಿ. ಇದನ್ನೇ ಎಲ್ಲಾ ಮಹಾನು ಪುಣ್ಯಪುರುಷರು ಹೇಳಿದ್ದು ತನ್ನ ತಾ ಅರಿಯದವ ಸಮಾಜವನ್ನು ಅರಿಯಲಾರ ಎಂದು. ಇದೇ ವಿಚಾರವಾಗಿ ಬಸವಣ್ಣ ಮತ್ತೊಂದು ಹೆಜ್ಜೆ ಮುಂದಿಟ್ಟು ಮನುಷ್ಯನಾದವ ಈ ಸಮಾಜದಲ್ಲಿ ಹೇಗೆ ಬದುಕಬೇಕು? ಎಂಬುವುದನ್ನು ಮನವರಿಕೆ ಮಾಡಿದ.

ಮಾಡುವ ಭಕ್ತನಕಾಯ, ಬಾಳೆಯ ಕಂಭದಂತಿರಬೇಕು.
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ ಒಳಗೆ ಕಿಚ್ಚಿಲ್ಲದಂತಿರಬೇಕು.
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು
ಎನಗಿನ್ನಾವ ಭಯವಿಲ್ಲ ಕಾಣಾ ಕೂಡಲಸಂಗಮದೇವಾ [3]

ಎನ್ನವ ಬಸವಣ್ಣನ ಮಾತಿನಲ್ಲಿ ಎಂತಹ ಅದ್ಭುತ ಚಮತ್ಕಾರ ಅಡಗಿದೆ ನೀವೆ ನೋಡಿ. ವ್ಯಕ್ತಿ ಯಾರೇ ಆಗಿರಲಿ ಅಹಂಕಾರದ ಕಿಚ್ಚು ಅಲ್ಲಿರಬಾರದು ಎಂಬ ಅರ್ಥಕೊಡುವ ಈ ಮಾತುಗಳನ್ನು ಮೊದಲು ನಮ್ಮನ್ನು ಆಳುವ ಜನರಿಗೆ ತಿಳಿಸಿ ಹೇಳಬೇಕು. ಅರೆ ಬರೆ ಜ್ಞಾನ ತುಂಬಿಕೊಂಡು ನಾ ಹೇಳುವುದೇ ಸರಿ, ನನ್ನ ಮತೇ ವೇದವಾಕ್ಯ ಎಂದು ಬಡಾಯಿ ಕೊಚ್ಚಿಕೊಳ್ಳುವ ಬಾಯಿಮಾತಿನ ಶೂರರಿಗೆ ಇದು ನಿಜಕ್ಕೂ ಜ್ಞಾನದ ಔಷಧಿಯಾಗಬಲ್ಲದು.

ಇದೆ ಕಾಲಕ್ಕೆ ಬಸವಣ್ಣನ ಅಂದಿನ ವಿಚಾರಕ್ರಾಂತಿ ಸ್ತ್ರೀ ಕುಲದ ಮೇಲೆ ವಿಶೇಷವಾದ ಪ್ರಭಾವ ಬೀರಿದ ಕಾರಣಕ್ಕಾಗಿಯೇ ಮನೆಯಲ್ಲಿದ್ದ ಹೆಣ್ಣು ಸಮಾಜವು ಮುನ್ನಲೆಗೆ ಬರುವಂತಾಯಿತು. ಅದುವರೆವಿಗೂ ಹೆಣ್ಣು ಎಂದರೆ ಸಂಸಾರಕ್ಕೆ, ಸಂಸ್ಕಾರಕ್ಕೆ ವಿನಃ ಉಳಿದೆಡೆ ಸಲ್ಲದವಳು ಎಂಬ ಆಲೋಚನೆ ಇದ್ದ ಕಾಲವದು. ಇಂತಹ ಕಾಲದಲ್ಲೆ ಸ್ತ್ರೀಕುಲಕ್ಕೆ ಕ್ರಾಂತಿಯ ಕಿಡಿಯಾದವಳು ಅಕ್ಕಮಹಾದೇವಿ. ಬಸವಣ್ಣ ಕಲ್ಯಾಣದ ಕ್ರಾಂತಿಗೆ ಅಡಿಗಲ್ಲಾಗಿ ನಿಂತಾಗ ಕಲ್ಯಾಣದ ಜನರ ಕಲ್ಯಾಣಕ್ಕೆ ಬದ್ಧಳಾಗಿ ನಿಂತು ಮೌಢ್ಯದ ಬದುಕನ್ನು ಪ್ರಶ್ನೆ ಮಾಡಿದ ಸ್ತ್ರೀಯರಲ್ಲಿ ಅಕ್ಕ ಮೊದಲಿಗಳು. ಪ್ರತಿರೋಧಕ್ಕೆ ಶಕ್ತಿ ಇರಲಿ, ಧ್ವನಿಯೇ ಇಲ್ಲದಿರುವಾಗ ಮಹಿಳೆಯ ಕಷ್ಟಸುಖದ ಬಗ್ಗೆ ಧ್ವನಿ ಎತ್ತಿದವಳು, ತಾನು ನಂಬಿದ ನಂಬಿಕೆಗೆ ಗಟ್ಟಿ ಧನಿಯಾಗಿ ಕೊನೆವರೆಗು ಹೋರಾಟ ಮಾಡಿದಾಕೆ. ಹಾಗಾಗಿ ಆಕೆಯ ಬಲವಾದ ನಂಬಿಕೆ, ಸ್ವಾಮಿನಿಷ್ಠೆ ನಿಜಕ್ಕೂ ಅನುಕರಣನೀಯ. ಆಕೆಯೇ ಹೇಳಿರುವಂತೆ

ಚಂದನವ ಕಡಿದು ಕೊರೆದು ತೇದೊಡೆ ನೊಂದೆ
ನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣವ ಕಡಿದೊರೆ

ದೊಡೆ ಬೆಂದು ಕಳಂಕ ಹಿಡಿದಿತ್ತೆ? ಸಂದು ಸಂದು ಕಡಿದು

ಕಬ್ಬನು ಗಾಣದಲಿಕ್ಕಿ ಬೆಂದು ಪಾಕಾಗುಳ್ಳ ಸಕ್ಕರೆಯಾಗಿ

ನೊಂದನೆಂದು ಸವಿಯ ಬಿಟ್ಟಿತ್ತೆ? ನಾ ಹಿಂದೆ ಮಾಡಿದ

ಹೀನಂಗಳೆಲ್ಲವ ತಂದು ಮುಂದಿಳುಹಲು ಎನಗೆ ಹಾನಿಯೆ?

ಎನ್ನ ತಂದೆ ಚನ್ನ ಮಲ್ಲಿಕಾರ್ಜುನ ದೇವಯ್ಯ ಕೊಂದಡೆ

ಶರಣೆಂಬುದಮಾಣೆ [4]

ಎಂಬ ಈ ಮಾತುಗಳಲ್ಲಿ ಅಡಗಿರುವ ಗಟ್ಟಿತನ ನಮ್ಮ ಸಮಾಜಕ್ಕೆ ಬೇಡವೆ? ಸಣ್ಣದೊಂದು ಸಮಸ್ಯೆ ಜೀವನದಲ್ಲಿ ಬಂದರೆ ಸಾಕು, ಬೆಟ್ಟವೇ ತಲೆಯ ಮೇಲೆ ಬಿದ್ದಂತೆ ಆಡುವ ಜನರಿಗೆ ಈಕೆ ಕೊಟ್ಟ ಸಂದೇಶ ನಿಜಕ್ಕೂ ಅರ್ಥಪೂರ್ಣ.

ಕಲ್ಯಾಣದ ಕ್ರಾಂತಿ ಮಸುಕಾದ ನಂತರ ಜಾತಿ, ಕಂದಾಚಾರಗಳ ಸಮಸ್ಯೆಗಳು ಸಮಾಜವನ್ನು ಆವರಿಸಿಕೊಂಡಾಗ ಮುನ್ನಾಲೆಗೆ ಬಂದವ ಕನಕ. ಇಂತಹ ಸನ್ನಿವೇಶದಲ್ಲಿ ಕನಕದಾಸರ ವಿಚಾರಗಳನ್ನು ನಾವು ಸ್ಮರಿಸಲೇಬೇಕಾದ ಅನಿವಾರ್ಯತೆ ಇದೆ. ಪಾಳೆಯಗಾರನ ಮನೆಯಲ್ಲಿ ಹುಟ್ಟಿ ಬಯಲು ದಾಸನಾಗುವುದೆಂದರೆ ಸಾಮಾನ್ಯವೇ? ಇಂತಹ ಸಂಗತಿಗಳನ್ನು ಮಾತನಾಡುವಾಗ ಪ್ರಖ್ಯಾತ ಆಂಗ್ಲ ಲೇಖಕನಾದ ಜಾನ್ ಡ್ರೀಂಕ್ ವಾಟರನ್ ಅವರ ಮಾತು ನೆನಪಿಗೆ ಬರುತ್ತದೆ.ಆತನೇ ಹೇಳಿರುವಂತೆ "ಕವಿಯಾಗಿ ಜನಿಸುವುದು ವಿರಳ ದಾರ್ಶನಿಕನಾಗಿ ಜನಿಸುವುದು ಇನ್ನೂ ವಿರಳ ಆದರೆ ಒಬ್ಬನೇ ವ್ಯಕ್ತಿ ಕವಿಯೂ ಆಗಿ, ದಾರ್ಶನಿಕನೂ ಆಗಿ ಜನಿಸುವುದು ಅತ್ಯಂತ ವಿರಳ ಮತ್ತು ಅಪರೂಪ"[5] ಎಂಬ ಮಾತುಗಳು ಕನಕನ ವಿಚಾರದಲ್ಲಿ ತುಂಬಾ ಅರ್ಥಪೂರ್ಣ ಮಾತುಗಳಾಗಿ ಮೂಡಿಬಂದಿವೆ. ಮುಂದುವರಿದು ಆತ ಸಮಾಜದ ಮೌಢ್ಯಶುದ್ಧೀಕರಿಸಿದ ದಾರಿಗಳನ್ನು ಮರೆಯುವಂತಿಲ್ಲ, ಮನಶಾಸ್ತ್ರಜ್ಞರು ಹೇಳುವಂತೆ ನಮ್ಮ ಬುದ್ಧಿಯ ಮೇಲೆ ಹಾಗಾಗ ಅಜ್ಞಾನದ ದೂಳು ಕೂರುತ್ತದೆ. ಅದನ್ನು ನಾವುಗಳು ಜ್ಞಾನಿಗಳ ಜ್ಞಾನದ ನುಡಿಗಳೆಂಬ ಪೊರಕೆಯಿಂದ ಗುಡಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಅಂತೆಯೇ ನಮ್ಮ ಕನಕನ ಮಾತುಗಳು. ಬೇವನ್ನು ಬಿತ್ತಿ ಮಾವನ್ನು ಬೆಳೆಯುವುದು ಸಾಧ್ಯವಾಗದ ವಿಚಾರ ಎಂಬುವುದನ್ನು ಮಾರ್ಮಿಕವಾಗಿ ತಿಳಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿದ ಕೀರ್ತಿ ಇವರಿಗೇ ಸಲ್ಲಬೇಕು.

ಚಿಗುರಿನ ಬೇವಿನ ಸೊಪ್ಪುಗಳ ನಾರಸೀರೆ

ಬಗೆ ಬಗೆಯಿಂದ ಶೃಂಗಾರ ಮಾಡಿ

ನೆಗೆ ನಗೆದಾಡುತ ಕುಣಿಯುತಿರೆ ನಿನಗಿನ್ನು

ಮಿಗಿಲಾದ ಮುಕ್ತಿಯುಂಟೇ ಹುಚ್ಚು ಮನವೆ

ದಾನಧರ್ಮ ಪರೋಪಕಾರವ ಮಾಡು

ದೀನನಾಗಿ ನೀ ಕೆಡಬೇಡವೊ

ಜ್ಞಾನವಿಲ್ಲದೆ ಹೀನ ದೈವವ ಭಜಿಸಿದರೆ

ಏನುಂಟು ನಿನಗಿನ್ನು ಎಲೆ ಹುಚ್ಚು ಮನವೆ [6]

ಎಂದು ಹೇಳಿ ದಾರಿ ತಪ್ಪಿದವವರಿಗೆ ಉತ್ತಮ ಜ್ಞಾನಮಾರ್ಗ ತೋರಿದ್ದಾರೆ. ಇಂತಹ ವಿಚಾರಗಳು ಇಂದಿಗೂ ನಮಗೆ ಪ್ರಸ್ತುತ. ಇಂತಹ ಸೂಕ್ಷ್ಮ ವಿಚಾರಗಳು ಅನೇಕರಿಗೆ ಅಪಥ್ಯ. ನಮ್ಮಲ್ಲಿ ಕೆಲವು ಉದ್ಯಮಿಗಳು, ರಾಜಕಾರಣಿಗಳು ದೇವರಿಗೆ ಚಿನ್ನದ ಕಿರೀಟ ನೀಡಿದರೂ ತಾವು ಮಾಡಿದ ಮಣ್ಣುತಿನ್ನುವ ಕೆಲಸದಿಂದ, ಕಳ್ಳದಾರಿ ಹಿಡಿದು ಜನರ ಬೆವರಿನ ಶ್ರಮದ ಹಣವನ್ನು ನುಂಗಿ ನೀರುಕುಡಿದ ಕಾರಣ ಜೈಲು ಸೇರಿದ ಹತ್ತಾರು ಉದಾಹರಣೆಗಳು ನಮ್ಮ ಮುಂದೆಯೇ ಇವೆ. ಉತ್ತಮರ ಮತು ಕೇವಲ ಬರಹಕ್ಕಾಗಿ ಎಂದು ಆಲೋಚನೆ ಮಾಡಿದ ಪರಿಣಾಮ ಇಂತಹ ಕೆಟ್ಟ ಪರಿಸ್ಥಿತಿ ಬಂದೊದಗಿದೆ. ಕುಲ ಜಾತಿಯ ವಿಚಾರವಾಗಿ ಕನಕನ ಮಾತು ಎಲ್ಲಾ ಕಾಲಕ್ಕೂ ಸರಿಹೊಂದುವ ವಿಚಾರವಾಗಿದೆ. ಆದರು ಸಹ ಕುಲ ಜಾತಿಯ ಬೇರುಗಳು ಆಳವಾಗಿಯೇ ಹರಡಿಕೊಂಡಿವೆ. ವೇದಿಕೆಯ ಮೇಲೆ ವಿಶ್ವಮಾನವನಂತೆ ನಟಿಸುವ ಮಾನವ ವ್ಯವಹಾರಿಕವಾಗಿ ಅಲ್ಪಮಾನವನಾಗಿಯೇ ಇದ್ದಾನೆ. ಆತನಿಗೆ ಪ್ರಚಾರದ ಗೀಳು, ಹಣಕಾಸಿನ ಹಂಬಲ, ಅಧಿಕಾರದ ಅಮೂಲು ನತ್ತಿಗೇರಿರುವಾಗ ಮಹನೀಯರು ಹಾಡಿರುವ ಈ ಮಾತುಗಳು ಕೇವಲ ಬರವಣಿಗೆಯ ಅಕ್ಷರಗಳಾಗಿ ಮಾತ್ರ ಕಾಣುತ್ತವೆ ವಿನಃ ಅನುಸರಣೆಯ ಮಾರ್ಗವಾಗಿ ಕಾಣುವುದೇ ಇಲ್ಲ. ಇದು ನಾಗರೀಕ ಸಮಾಜಕ್ಕೆ ಮಾರಕವೇ ಒರತೆ ಒಳಿತಿನ ವಿಚಾರವಲ್ಲ.

ಮುಂದುವರೆದು 20ನೇ ಶತಮಾನದ ವೈಚಾರಿಕ ಮನೋಧರ್ಮದ ಕವಿಗಳಲ್ಲಿ ಪ್ರಮುಖರಾದ ಕುವೆಂಪು ಅವರ ವಿಚಾರಧಾರೆಗಳು ಯಾರಿಗೆ ಬೇಡ ನೀವೇ ಹೇಳಿ. ಸಮಾಜದ ಕಟ್ಟಕಡೆಯ ವ್ಯಕ್ತಿಯು ಸಹ ಮಾನ್ಯ ಎಂದು ತಮ್ಮ ಬದುಕು ಬರಹದಲ್ಲಿ ತೋರಿದವರು. ಯಾವುದೇ ಆಶಾಡಭೂತಿಗಳಿಗೆ ಬಗ್ಗದೆ ತಮ್ಮ ನಿಲುವುಗಳನ್ನು ಎದೆಯುಬ್ಬಿಸಿ ತಿಳಿಸಿದ ಅಪುರೂಪದ ಕವಿ ಪುಟ್ಟಪ್ಪನವರು. ಇಂದಿನ ಯುವ ಪೀಳಿಗೆ ದಿಕ್ಕುದೆಸೆಕಾಣದೆ ಓಡುತ್ತಿರುವುದನ್ನು ಗಮನಿಸಿ ಅವರಿಗೆ ವೈಜ್ಞಾನಿಕತೆಯ ಜೊತೆಗೆ ವಿಚಾರವಂತರಾಗಿ ಎಂದು ತಿಳಿಸಿಕೊಟ್ಟವರು. ಬಸವಣ್ಣನಂತೆ ಕಾಯಕವೇ ಪೂಜ್ಯ ಎಂದು ಸಾರಿದ ಇವರು ತಮ್ಮ ಬರಹಗಳಲ್ಲಿ ನಮ್ಮನ್ನು ವಿವೇಚನೆಗೆ ಒಳಗುಮಾಡಿರುವುದು ಹೆಮ್ಮೆಯ ಸಂಗತಿ.

ವ್ಯಕ್ತಿಯನ್ನು ಗೌರವದಿಂದ ಕಾಣಬೇಕಿರುವುದು ಆತನ ಕೆಲಸಕಾರ್ಯಗಳಿಂದ, ಆತನ ವ್ಯಕ್ತಿತ್ವದಿಂದಲೇ ಹೊರತು ಆತನ ಜಾತಿಯಿಂದಲ್ಲ. ಇಂತಹ ಅನೇಕಾನೇಕ ಪ್ರಶ್ನೆಗಳನ್ನು ಎತ್ತುವುದರ ಮೂಲಕ ಎಲ್ಲಾ ಬಗೆಯ ಕಾಯಕಗಳೂ ಪೂಜ್ಯ ಎಂದು ಸಾರಿದರು. ಇಷ್ಟಾದರು ಈ ಸಮಾಜದಲ್ಲಿ ತೊಗಲಿನ ಬಣ್ಣಕ್ಕೆ, ಮೈಮೇಲಿನ ಉಡುಪಿಗೆ, ಜೇಬಲ್ಲಿರುವ ಹಣಕ್ಕೆ, ಕೈಯಲ್ಲಿರುವ ಅಧಿಕಾರಕ್ಕೆ ಮಾತ್ರ ಮನ್ನಣೆ ನೀಡುವವರ ಸಂಖ್ಯೆಗೇನು ಕಡಿಮೆಯಿಲ್ಲ. ಇದನ್ನು ಮನಗಂಡ ಕುವೆಂಪು ತಮ್ಮ ಜಲಗಾರ ನಾಟಕದ ಮೂಲಕ ಸಮಾಜದ ಮೇಲು ಕೀಳುಗಳನ್ನು ಪ್ರಶ್ನೆ ಮಾಡಿದರು. ಕೊನೆಗೆ ಕಾಯಕವೇ ಕೈಲಾಸ ಎಂಬ ಮಾತಿಗೆ ಅನುಗುಣವಾಗಿ ಬಡವನೆದೆಯ ಬೆಳಕಾಗಿ ನಿಂತು ದುಡಿಯುವ ವರ್ಗಕ್ಕೆ ಸಲ್ಲಬೇಕಾದ ಆತ್ಮಗೌರವವನ್ನು ತಂದುಕೊಟ್ಟರು.

" ಬೀದಿಗುಡಿಸುವ ಬಡವನೆದೆಯಲ್ಲಿ ನಾನಿರುವೆ !

ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ !.........

ಊರ ತೋಟಿಯು ನೀನು ಜಗದ ತೋಟಿಯು ನಾನು!" [7]

ಎಂದು ಹೇಳುವುದರ ಮೂಲಕ ಮನುಕುಲದ ಸಮಾನತೆಯ ಸಂದೇಶವನ್ನು ಮತ್ತೊಮ್ಮೆ ಸಾರಿದರು. ಇಷ್ಟೆಲ್ಲಾ ವಿಚಾರಗಳು ನಮ್ಮ ನಡುವೆ ಇದ್ದರು ಸಹ ಕಣ್ಣಿದ್ದರು ಕಾಣದಂತೆ, ಕಿವಿಯಿದ್ದರು ಕೇಳದಂತೆ ಸಾಗುತ್ತಿರುವ ಸಮಾಜವನ್ನು ನೋಡಿದಾಗ ನಮಗೆ ಮೂಡವ ಪ್ರಶ್ನೆ ಇಷ್ಟೆ "ಮಹಾತ್ಮರ ಬರಹ ಮತ್ತು ಬದುಕು ಅನುಸರಣೆಗೋ, ಆಚರಣೆಗೋ"? ಎಂದು ಪ್ರಶ್ನೆಮಾಡಿಕೊಳ್ಳುವಂತಾಗಿದೆ. ವಿಪರ್ಯಾಸ ಎಂದರೆ ಕುಲಧರ್ಮಗಳ ಸಂಕೋಲೆಗಳ ಸಹವಾಸವೇ ಬೇಡವೆಂದು ಹೊರಬಂದು, ತರತಮ ಭಾವನೆಗಳಿಂದ ತುಂಬಿಹೋಗಿದ್ದ ಸಮಾಜವನ್ನು ತಿದ್ದಲು ಪ್ರಯತ್ನಿಸಿದ ಮಹಾನ್ ಚೇತನಗಳನ್ನು ಈ ಸಮಾಜ ಮತ್ತೆ ಕುಲ ಜಾತಿಗಳಿಗೆ ಸೀಮಿತಗೊಳಿಸುತ್ತಿದೆ. ಇದು ಭವಿಷ್ಯಕ್ಕೆ ಅಂಟಿಕೊಂಡ ರೋಗವಲ್ಲದೆ ಮತ್ತೇನು? ಇದನ್ನು ಈಗಲಾದರೂ ಅರಿತು ನಡೆದರೆ ಸ್ವಲ್ಪ ಸಮಾಧಾನ ಪಟ್ಟುಕೊಂಡು ಮುಂದೆ ಸರಿಪಡಿಸಿಕೊಳ್ಳಲು ಈಗಲೂ ಅವಕಾಶಗಳು ನಿಚ್ಚಳವಾಗಿವೆ. ಇಲ್ಲವಾದಲ್ಲಿ ಜಾತಿ, ಮತ, ಮೌಢ್ಯ, ಮೇಲುಕೀಳುಗಳ ಮನೋರೋಗ ನಮ್ಮನಂತು ಸುಮ್ಮನೆ ಬಿಡುವುದಿಲ್ಲ. ನಮ್ಮ ನೆಮ್ಮದಿಯ ಬದುಕಿಗೊದಗಿದ ಅಂಟು ಜಾಡ್ಯವಾಗಿದೆ. ಹಾಗಾಗಿ ನಮ್ಮ ನಡುವೆ ಮೂಡಿಬಂದ ಮಹಾನೀಯರ ಬದುಕು, ಬರಹ ನಮಗೆ ಆಚರಣೆಗಳಿಗೆ ಸೀಮಿತವಾಗಿರದೆ ಬದುಕಿನ ಅನುಸರಣೆಗೆ ಬರಲೆಂಬುದೇ ನಮ್ಮ ಆಶಯ.

ಆಕರ ಗ್ರಂಥಗಳು :

1) ಪಂಪ ಭಾರತಂ ಎಂಬ ವಿಕ್ರಮಾರ್ಜನ ವಿಜಯಂ, ಡಾ.ಕೆ.ವಿ. ಪುಟ್ಟಪ್ಪ, ಪ್ರ.ವ, 1990, ಪು,ಸಂ 252

2) ವೀರಶೈವ ಸಾಹಿತ್ಯ ಸಮೀಕ್ಷೆ, ಪ್ರೊ, ಸದಾನಂದ ಕನವಳ್ಳಿ, ಪ್ರೊ.ಸಿ.ವಿ. ಕರಿಮನಿ, ಪ್ರ.ವ 2010, ಪು.ಸಂ 79

3) ವೀರಶೈವ ಸಾಹಿತ್ಯ ಸಮೀಕ್ಷೆ, ಪ್ರೊ, ಸದಾನಂದ ಕನವಳ್ಳಿ, ಪ್ರೊ.ಸಿ.ವಿ. ಕರಿಮನಿ, ಪ್ರ.ವ 2010, ಪು.ಸಂ 79

4) ಅಕ್ಕನ ಉಪದೇಶ, ಶ್ರೀ ಹರ್ಡೆಕರ್ ಮಂಜಪ್ಪ, ಪ್ರ.ವ , 1937, ಪು.ಸಂ 27.

5) ಕನಕ ಓದು, ಕಾ ತ ಚಿಕ್ಕಣ್ಣ, ಪ್ರ.ವ 2015, ಪು.ಸಂ, 97

6) ಕನಕ ಓದು, ಕಾ ತ ಚಿಕ್ಕಣ್ಣ, 2015, ಪು.ಸಂ, 64

7) ಕುವೆಂಪು ಸಂಚಯ, ಪ್ರ.ಸಂ, ಪ್ರಧಾನ್ ಗುರುದತ್, ಪ್ರ.ವ 2009, ಪು.ಸಂ 227.

***

ಮನವಿರಕ್ತಿ: ಶಂಕರಾನಂದರ ತತ್ವಶೋಧ

1 ಡಾ. ರವಿಶಂಕರ್ ಎ.ಕೆ

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ

ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಬೆಂಗಳೂರು.

ravishankar@kristujayanti.com

ಸಾರಲೇಖ :

ಪ್ರಸ್ತುತ ಸಂಶೋಧನಾತ್ಮಕ ಲೇಖನವು ತತ್ವಪದಕಾರ ಶಂಕರಾನಂದರ ಮೂರು ಆಯ್ದ ತತ್ವಪದಗಳು ಮನಸ್ಸಿನ ಅಂತರಾಳವನ್ನು ಶೋಧಿಸುತ್ತವೆ. 'ವಾಣಿ' (ನುಡಿ), 'ಪಾಣಿ' (ಕೈ/ಕ್ರಿಯೆ) ಮತ್ತು 'ಮಾಣಿ' (ಜನನೇಂದ್ರಿಯ/ಬ್ರಹ್ಮಚರ್ಯ) ಎಂಬ ಮೂರು ಮೂಲಭೂತ ಶಕ್ತಿಗಳ ನಿಗ್ರಹ ಮತ್ತು ಸದಾಚಾರದ ಪ್ರಾಮುಖ್ಯತೆಯನ್ನು ಯೋಗಿಕ–ನೈತಿಕ ಚೌಕಟ್ಟಿನಲ್ಲಿ ವಿವರಿಸುತ್ತದೆ. ಬಾಹ್ಯ ಭೋಗದ ತ್ಯಾಗಕ್ಕಿಂತ ಅಂತರಂಗದ 'ಮನ ವಿರಕ್ತಿ'ಯೇ ಮುಕ್ತಿಗೆ ಏಕೈಕ ರಾಜಮಾರ್ಗವೆಂಬ ಮನೋವೈಜ್ಞಾನಿಕ ಮತ್ತು ವೇದಾಂತಿಕ ಸತ್ಯವನ್ನು ಪ್ರತಿಪಾದಿಸುತ್ತದೆ. ಮಾನವ ಕುಲವನ್ನು ಅಂಧಕಾರಕ್ಕೆ ದೂಡುವ 'ಕಾಮ'ನ ಭೀಕರತೆ, ಆತನ ಸಾರ್ವತ್ರಿಕ ಪ್ರಭಾವ ಮತ್ತು ಅದರಿಂದ ಮುಕ್ತಿ ಪಡೆಯಲು ಗುರುಭಕ್ತಿಯ ಅನಿವಾರ್ಯತೆಯನ್ನು ರೂಪಕಾತ್ಮಕ ಶೈಲಿಯಲ್ಲಿ ವಿಡಂಬಿಸಲಾಗಿದೆ. ಈ ಒಟ್ಟು ಅಧ್ಯಯನದಲ್ಲಿ ಶಂಕರಾನಂದರ ಪ್ರಾಯೋಗಿಕ ಅಧ್ಯಾತ್ಮ ಲೋಕವನ್ನು ಹಾಗೂ ಸಮಾಜೋ–ಧಾರ್ಮಿಕ ಸುಧಾರಣಾ ಚಿಂತನೆಗಳನ್ನು ವ್ಯವಸ್ಥಿತವಾಗಿ ವಿಶ್ಲೇಷಿಸಲಾಗಿದೆ.

ಪ್ರಮುಖ ಪದಗಳು

ಮನ ವಿರಕ್ತಿ, ಭವ ಬಂಧನ, ಕಾಮ ವಿಡಂಬನೆ, ತ್ರಿನಯನ, ಘನತೂರ್ಯ, ಗುರುರಂಗ.

ಕನ್ನಡ ಸಾಹಿತ್ಯ ಲೋಕದಲ್ಲಿ ತತ್ವಪದಗಳು ಜನಸಾಮಾನ್ಯರ ಉಪನಿಷತ್ತುಗಳಾಗಿ ಕಾರ್ಯನಿರ್ವಹಿಸಿವೆ. ಶಂಕರಾನಂದರ ಕಾವ್ಯವು ಕೇವಲ ಪರಲೋಕದ ಸುಖವನ್ನು

ಭೋದಿಸದೆ, ಇಹಲೋಕದ ಬದುಕನ್ನು ಹೇಗೆ ಪಾವನಗೊಳಿಸಿಕೊಳ್ಳಬೇಕು ಎಂಬುದನ್ನು ಕಣ್ಣಿಗೆ ಕಟ್ಟುವಂತೆ ತೋರಿಸುತ್ತದೆ. ಇವರ ದೃಷ್ಟಿಯಲ್ಲಿ ಭಗವಂತನು ಕಾಡಿನಲ್ಲೋ, ಗುಡಿಯಲ್ಲೋ ಇಲ್ಲ; ಮನುಷ್ಯನು ತನ್ನ ಇಂದ್ರಿಯಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು, ಮನಸ್ಸನ್ನು ಶುದ್ಧವಾಗಿಟ್ಟುಕೊಂಡರೆ ದೇಹವೇ ದೇವಸ್ಥಾನವಾಗುತ್ತದೆ.

ಪ್ರಸ್ತುತ ವಿಶ್ಲೇಷಣೆಗೆ ಆಯ್ದುಕೊಂಡಿರುವ ಮೂರು ತತ್ವಪದಗಳು ಸಾಧಕನೊಬ್ಬನ ನೈತಿಕ ಮತ್ತು ಆಧ್ಯಾತ್ಮಿಕ ಭದ್ರ ಬುನಾದಿಗೆ ಅತ್ಯಗತ್ಯವಾದ ಸೂತ್ರಗಳನ್ನು ನೀಡುತ್ತವೆ. ಇಂದ್ರಿಯಗಳ ನಿಯಂತ್ರಣದಿಂದ ಆರಂಭವಾಗಿ, ಮನಸ್ಸಿನ ನಿಜವಾದ ಸ್ವರೂಪದ ಅರಿವನ್ನು ಮೂಡಿಸಿ, ಅಂತಿಮವಾಗಿ ಇಡೀ ಬದುಕನ್ನು ಧ್ವಂಸಗೊಳಿಸಬಲ್ಲ ಕಾಮದ ಬಲೆಯನ್ನು ಗುರುರಂಗನ ಪಾದಭಕ್ತಿಯಿಂದ ಹೇಗೆ ಸೀಳಬಹುದು ಎಂಬುದನ್ನು ಈ ತತ್ವಪದಗಳು ತಾರ್ಕಿಕವಾಗಿ ನಿರೂಪಿಸುತ್ತವೆ.

ವಾಣಿ ಪಾಣಿ ಮಾಣಿ ಮೂರು
ಕಟ್ಟಿದವನು । ಶ್ರೇಷ್ಟನಪ್ಪನು ॥ಪ॥
ವಾಣಿ ಪಾಣಿ ಮಾಣಿ ಮೂರು
ಬಿಚ್ಚಿದವನು । ಭ್ರಷ್ಟನಪ್ಪನು ॥ಅ.ಪ॥
ಸುಳ್ಳು ಠಕ್ಕು ಚಾಡಿ ಕುಹಕವಾಡಬೇಡ ।
ವಾಕ್ಕಿನಿಂದ । ಒಳ್ಳೆ ನುಡಿಯು ।
ಮಂತ್ರಧ್ಯಾನ ಬಿಡಲು ಬ್ಯಾಡಾ ।
ಮನಸಿನಿಂದ ॥ ವಾಣಿ ॥1॥
ಕಳುವು ಹಿಂಸೆ ಕೊಲೆಗಳನ್ನು ।
ಮಾಡಬ್ಯಾಡಾ ಹಸ್ತದಿಂದ ।
ಸಲಿಗೆಯಿಂದ ಬೇಡಿದರೆ ।
ಕೊಡುವ ಶಂಭು ದೃಢದಿ ನಂಬು ॥ ವಾಣಿ ॥2॥
ಮೋಹ ಬಿಡು ಕಾಮಿನಿಯರ ।
ಕೂಟದಲ್ಲಿ । ನೋಟದಲ್ಲಿ ।
ಮೋಹವಿಡು ಗುರು ರಂಗನಡಿಯಲ್ಲಿ ।
ಮನಸಿನಲ್ಲಿ ॥ ವಾಣಿ ॥3॥

ಈ ತತ್ವಪದವು ಮಾನವನ ನಡವಳಿಕೆಯನ್ನು ನಿಯಂತ್ರಿಸುವ ಮೂರು ಪ್ರಮುಖ ಅಂಗಗಳನ್ನು ಗುರುತಿಸಿ, ಅವುಗಳ ಸದುಪಯೋಗ ಮತ್ತು ದುರುಪಯೋಗದ

ಪರಿಣಾಮಗಳನ್ನು ಅತ್ಯಂತ ಸರಳ ಹಾಗೂ ಪರಿಣಾಮಕಾರಿ ಪ್ರಾಸಬದ್ಧ ಪದಗಳಾದ 'ವಾಣಿ–ಪಾಣಿ–ಮಾಣಿ' ಮೂಲಕ ವಿವರಿಸುತ್ತದೆ. ಶಂಕರಾನಂದರು ಪದದ ಆರಂಭದಲ್ಲೇ ಸ್ಪಷ್ಟವಾದ ತೀರ್ಪನ್ನು ನೀಡುತ್ತಾರೆ. ಇಂದ್ರಿಯಗಳನ್ನು ಹತೋಟಿಯಲ್ಲಿಡುವವನು ಸಮಾಜದಲ್ಲೂ ಆಧ್ಯಾತ್ಮದಲ್ಲೂ ಶ್ರೇಷ್ಠನಾಗುತ್ತಾನೆ. ಅದೇ ಇಂದ್ರಿಯಗಳಿಗೆ ಬೇಕಾಬಿಟ್ಟಿ ಸ್ವಾತಂತ್ರ್ಯ ಕೊಟ್ಟು ಸ್ವಚ್ಛಂದವಾಗಿ ಬಿಟ್ಟವನು ಭ್ರಷ್ಟನಾಗುತ್ತಾನೆ. ಇದು ಯೋಗಶಾಸ್ತ್ರದ 'ಯಮ–ನಿಯಮ'ಗಳ ಪ್ರಾಯೋಗಿಕ ರೂಪವಿದು. ಮೊದಲ ಚರಣದಲ್ಲಿ ಶಂಕರಾನಂದರು ವಾಕ್ಕಿನ ದೋಷಗಳನ್ನು ಪಟ್ಟಿ ಮಾಡುತ್ತಾರೆ. ಸುಳ್ಳು, ವಂಚನೆ, ಚಾಡಿ ಮತ್ತು ಕುಹಕದ ಮಾತುಗಳು ವಾಣಿಯನ್ನು ಮಲಿನಗೊಳಿಸುತ್ತವೆ. ಇದಕ್ಕೆ ಪರ್ಯಾಯವಾಗಿ ಸಾಧಕನು ತನ್ನ ವಾಕ್ಕಿನಿಂದ 'ಒಳ್ಳೆ ನುಡಿ'ಯನ್ನು ಆಡಬೇಕು ಮತ್ತು ಅಂತರಂಗದಲ್ಲಿ ಭಗವಂತನ ಮಂತ್ರಧ್ಯಾನವನ್ನು ನಿರಂತರವಾಗಿ ಜಪಿಸಬೇಕು. ನುಡಿದರೆ ಜ್ಯೋತಿರ್ಲಿಂಗದಂತಿರಬೇಕು ಎಂಬ ಶರಣರ ಆಶಯವೇ ಇಲ್ಲಿದೆ.

ಇಲ್ಲಿ ಎರಡನೆಯ ಚರಣವು ಕೈಗಳಿಂದ ಮಾಡುವ ಪಾಪಕೃತ್ಯಗಳನ್ನು ನಿಷೇಧಿಸುತ್ತದೆ. ಕಳ್ಳತನ, ಜೀವರಾಶಿಗಳಿಗೆ ಮಾಡುವ ಹಿಂಸೆ ಮತ್ತು ಕೊಲೆಗಳು ಹಸ್ತದಿಂದ ನಡೆಯುವ ಮಹಾಪಾಪಗಳು. ಇದಕ್ಕೆ ಬದಲಾಗಿ, ನಮ್ಮ ಅವಶ್ಯಕತೆಗಳನ್ನು ಭಗವಂತನಾದ ಶಂಭುವಿನಲ್ಲಿ 'ಸಲಿಗೆಯಿಂದ' ಬೇಡಿದರೆ ಆತ ಖಂಡಿತ ಕೊಡುತ್ತಾನೆ. ಅದಕ್ಕಾಗಿ ಅಡ್ಡಮಾರ್ಗ ಹಿಡಿಯಬೇಡ ಎಂಬ ನಂಬಿಕೆಯನ್ನು ಶಂಕರಾನಂದರು ಬಿತ್ತುತ್ತಾರೆ. 'ಮಾಣಿ' (ಇಲ್ಲಿ ಬ್ರಹ್ಮಚರ್ಯ ಅಥವಾ ಕಾಮಪ್ರವೃತ್ತಿಯ ನಿಯಂತ್ರಣ) ಎಂಬ ಆಯಾಮವನ್ನು ಚರ್ಚಿಸಲಾಗಿದೆ. ಲೌಕಿಕ ಸ್ತ್ರೀ ವ್ಯಾಮೋಹದ ಕೂಟ ಮತ್ತು ನೋಟದಿಂದ ದೂರ ಸರಿದು, ಆ ಇಡೀ ಪ್ರೇಮ ಮತ್ತು ಮೋಹದ ಶಕ್ತಿಯನ್ನು 'ಗುರು ರಂಗ'ನ ಪಾದ ಕಮಲಗಳಲ್ಲಿ ಸಮರ್ಪಿಸಬೇಕು. ಲೌಕಿಕ ಕಾಮವನ್ನು ದೈವಿಕ ಪ್ರೇಮವನ್ನಾಗಿ ಪರಿವರ್ತಿಸುವ ಅದ್ಭುತ ಸೂತ್ರವಾಗಿ ಕಂಡುಬರುತ್ತದೆ.

ಮನ ವಿರಕ್ತಿಗೆ ಮುಕ್ತಿಯಲ್ಲದೆ ।
ತನು ವಿರಕ್ತಿಗೆ ಯಿಲ್ಲವು ॥ಪ॥
ಮನವೆ ಬಂಧವು ಮೋಕ್ಷ ಪದವಿಗೆ ।
ಮನವೆ ಕಾರಣವೆನಿಪುದು ॥ಅ.ಪ॥
ಮನದಿ ಮೋಹವು ಆಶೆಯಳಿದವ ।
ಮನೆಯೊಳಿದ್ದರು ಮುಕ್ತನು
ಮನದಿ । ಮೋಹವು ಆಶೆಯುಳ್ಳವ ।
ವನದೊಳಿದ್ದರು ಬದ್ಧನು । ಮನ ॥1॥

ತನುವು ಧನದಭಿಮಾನವಳಿದವ ।

ಮನೆಯೊಳಿದ್ದರು ಮುಕ್ತನು ।

ತನುವು ಧನದಭಿಮಾನವುಳ್ಳವ ।

ಮನದೊಳಿದ್ದರು ಬದ್ಧನು ॥ ಮನ ॥ ॥2॥

ಆಶೆಯಿಂದಲಿ ಮನಕೆ ಬಂಧವು ।

ಆಶೆಯಳಿಯಲು ಮುಕ್ತಿಯು ।

ಆಶೆ ಗುರು ಮಹಲಿಂಗನಲ್ಲಿಡೆ ।

ಈಶನಾಗುವೆ ಸಂತತಂ ॥ ಮನ ॥ ॥3॥

"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" (ಮನಸ್ಸೇ ಮನುಷ್ಯನ ಬಂಧನ ಮತ್ತು ಮುಕ್ತಿಗೆ ಕಾರಣ) ಎಂಬ ಸಂಸ್ಕೃತ ಉಕ್ತಿಯು ಭಾರತೀಯ ದರ್ಶನ ಶಾಸ್ತ್ರದಲ್ಲಿ ಪ್ರಸಿದ್ಧವಾದದು. ಈ ವಿಚಾರವನ್ನು ಶಂಕರಾನಂದರು ಜನಸಾಮಾನ್ಯರ ನುಡಿಯಲ್ಲಿ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ಕೇವಲ ಕಾವಿ ಬಟ್ಟೆ ಧರಿಸುವುದರಿಂದ, ತಲೆಯನ್ನು ಬೋಳಿಸಿಕೊಳ್ಳುವುದರಿಂದ ಅಥವಾ ಉಪವಾಸ ಮಾಡುವುದರಿಂದ ದೇಹಕ್ಕೆ ವಿರಕ್ತಿ ಬರಬಹುದೇ ಹೊರತು ಆತ್ಮಕ್ಕೆ ಮುಕ್ತಿ ಸಿಗಲಾರದು. ನಿಜವಾದ ವೈರಾಗ್ಯ ಬರಬೇಕಾಗಿರುವುದು ಮನಸ್ಸಿಗೆ. ಹೊರಗಿನ ವೇಷಭೂಷಣಗಳಿಗಿಂತ ಅಂತರಂಗದ ಶುದ್ಧಿ ಮುಖ್ಯ. "ಮನೆಯೊಳಿದ್ದರು ಮುಕ್ತನು... ವನದೊಳಿದ್ದರು ಬದ್ಧನು". ಕವಿ ಇಲ್ಲಿ ಭೌತಿಕ ಜಾಗದ ಮಹತ್ವವನ್ನು ನಿರಾಕರಿಸುತ್ತಾರೆ. ಒಬ್ಬ ಮನುಷ್ಯ ಸಂಸಾರದಲ್ಲಿದ್ದುಕೊಂಡು, ಮನೆಯಲ್ಲೇ ಸಂಸಾರ ಹೂಡಿದ್ದರೂ ಆತನ ಮನಸ್ಸಿನಲ್ಲಿ ಮೋಹ ಮತ್ತು ಆಸೆಗಳಿಲ್ಲದಿದ್ದರೆ ಆತ ಅಲ್ಲೇ ಜೀವನ್ಮುಕ್ತನಾಗಿದ್ದಾನೆ. ಇದಕ್ಕೆ ತದ್ವಿರುದ್ಧವಾಗಿ, ಎಲ್ಲವನ್ನೂ ತೊರೆದು ಕಾಡಿಗೆ ಹೋದರೂ, ಅಲ್ಲಿ ಕುಳಿತು ಮನೆಯ ಆಸ್ತಿ, ಹೆಂಡತಿ–ಮಕ್ಕಳನ್ನು ನೆನೆಯುತ್ತಿದ್ದರೆ ಆತ ಕಾಡಿನಲ್ಲಿದ್ದರೂ ಸಂಸಾರದ ಬಂಧನದಲ್ಲೇ ಇದ್ದಾನೆ ಎಂದರ್ಥ.

ಮನುಷ್ಯನನ್ನು ಹೆಚ್ಚಾಗಿ ಕಾಡುವುದು ತನ್ನ ದೇಹದ ಮೇಲಿನ ಮಮಕಾರ (ರೂಪ, ತಾರುಣ್ಯದ ಅಹಂಕಾರ) ಮತ್ತು ಸಂಪತ್ತಿನ ಮೇಲಿನ ವ್ಯಾಮೋಹ. ಈ ಅಹಂಕಾರ ಮತ್ತು ಅಭಿಮಾನಗಳು ಕರಗಿದಾಗ ಮನೆ ಬ್ರಹ್ಮಾಂಡವಾಗುತ್ತದೆ. ಇಲ್ಲದಿದ್ದರೆ ಮನಸ್ಸೇ ಒಂದು ದೊಡ್ಡ ಸೆರೆಮನೆಯಾಗುತ್ತದೆ. ಬುದ್ಧನು ತಿಳಿಸುವ 'ಆಸೆಯೇ ದುಃಖಕ್ಕೆ ಮೂಲ ಕಾರಣ' ಹಾಗೂ ಬಂಧನಕ್ಕೆ ದಾರಿ. ಆದರೆ ಆಸೆಯನ್ನು ಸಂಪೂರ್ಣವಾಗಿ ಶೂನ್ಯಗೊಳಿಸುವುದು ಸಾಮಾನ್ಯರಿಗೆ ಕಷ್ಟ. ಅದಕ್ಕೆ ಶಂಕರಾನಂದರು ಒಂದು ಸುಲಭ ಉಪಾಯ ನೀಡುತ್ತಾರೆ. ಆ ಆಸೆಯ ಮುಖವನ್ನು ಲೌಕಿಕ ವಸ್ತುವಿನಿಂದ ತಿರುಗಿಸಿ 'ಗುರು ಮಹಲಿಂಗ'ನ ಕಡೆಗೆ

ಇಡು. ಭಗವಂತನನ್ನು ಪಡೆಯಬೇಕೆಂಬ ಆಸೆ ತೀವ್ರವಾದಾಗ ಲೌಕಿಕ ಆಸೆಗಳು ತಾವಾಗಿಯೇ ಇಲ್ಲವಾಗುತ್ತವೆ. ಆಗ ಸಾಧಕನು ತಾನೇ 'ಈಶ'ನಾಗುತ್ತಾನೆ/ದೈವತ್ವಕ್ಕೇರುತ್ತಾನೆ.

ಅಬ್ಬಬ್ಬಿನ್ನೆಂಥಾವನೋ । ಈ ಕಾಮನು ।
ಅಬ್ಬಬ್ಬಿನ್ನೆಂಥಾವನೋ । ॥ಪ॥
ಮಬ್ಬು ಕಣ್ಣಿಗೆ ಮುಚ್ಚಿ ಮೋಹ ಬಲೆಯ ಬೀಸಿ
ಒಬ್ಬೊಬ್ಬರನು ಗೋಣ ಮುರಿಯುವ ಪಿಡಿದು । ಅಬ್ಬಬ್ಬ ॥ಅ.ಪ॥
ಘನತಪಗೇಡಿಯೆಂದು ಕಿಡಿಗಣ್ಣಿನ
ಘನತಾಪ ಜ್ವಾಲೆಯಿಂದ ತ್ರಿನಯನನು
ಸುಟ್ಟು ಬೊಟ್ಟಿಟ್ಟರು ಸಾಯದೆ ।
ಮನಸಿಜನೆನಿಸಿ ಮೂಲೋಕವ ಸುಡುವನು ॥1॥
ಸತ್ತ ನಾಯರಿಯನು । ಪ್ರತ್ಯಕ್ಷ ತಾ
ಹೆತ್ತಾ ಮಗಳನರಿಯನು ।
ಅತ್ತೆ ಅತ್ತಿಗೆ ತಾಯಿ ತಂಗಿಯೆಂದೆಣಿಸದೆ ।
ನಿತ್ಯ ಭೋಗಿಸಿ ನೀತಿಗೆಟ್ಟು ಸಂಚರಿಸುವ ॥2॥
ಪತಿವ್ರತೆಯರ ಕೆಡಿಸಿ । ಯೋಗವು ಧ್ಯಾನ
ವ್ರತ ನೇಮಂಗಳ ಮರೆಸಿ ।
ಸ್ಥಿತಿಗತಿ ಕೆಡಿಸುತ್ತ ಸೂಳೆರ ಬಾಗಿಲೆ ।
ಗತಿಯೆಂದು ತಿರಿದುಂಬ ಪರಿಮಾಡ್ವನಹಹ ॥3॥
ನೆರೆ ಪಂಚ ಬಾಣದಿಂದ। ಮೋಹಾದಿಗಳ ।
ಪರಮ ಸಹಾಯದಿಂದ ।
ವರಜ್ಞಾನ ರತ್ನಾ ಹಾರಿಯನ್ನಿಸುತಲಿ ।
ಧರೆಯೊಳು ಪ್ರಖ್ಯಾತಿಯಾಗಿಹ ಪುರುಷನು ॥4॥
ಧೀರ ಶ್ರೀ ಗುರುರಂಗನ ಪಾದದಿ ಭಕ್ತಿ
ತೋರದಿರುವ ಮೂಢನ ।
ನಾರಿ ಮೋಹವದೆಂಬ ಬಲೆಯೊಳು ತಾ ಕಟ್ಟಿ ।
ಚೂರಿಯಿಲ್ಲದೆ ಕೊರಳನು ಕೊಯ್ವ ಮೆಟ್ಟಿ ॥5॥

ಇದು ಕಾಮ ಪ್ರವೃತ್ತಿಯ ಮನೋವೈಜ್ಞಾನಿಕ ದಾಳಿಯನ್ನು ಹಾಗೂ ಅದರ ವಿನಾಶಕಾರಿ ಸ್ವರೂಪವನ್ನು ಅತ್ಯಂತ ಕಟುವಾಗಿ, ಆಕ್ರೋಶ ಮತ್ತು ವಿಡಂಬನೆಯ ಮಿಶ್ರಣದಲ್ಲಿ

ಚಿತ್ರಿಸುವ ವಿಶಿಷ್ಠ ತತ್ವಪದವಾಗಿದೆ. ಕಾಮನು ಮನುಷ್ಯನ ವಿವೇಕವನ್ನು ಹೇಗೆ ಅಪಹರಿಸುತ್ತಾನೆ ಎಂಬುದರ ಚಿತ್ರಣ ಇಲ್ಲಿದೆ. ಕಾಮನು ಮನುಷ್ಯನ ಕಣ್ಣಿಗೆ ಅಜ್ಞಾನದ 'ಮಬ್ಬನ್ನು' ಕವಿಯುತ್ತಾನೆ. ಒಮ್ಮೆ ಆ ಮಬ್ಬು ಆವರಿಸಿತೆಂದರೆ ಸರಿ–ತಪ್ಪುಗಳ ವಿವೇಚನೆ ಇಲ್ಲದಂತಾಗಿ, ಆತ ಬೀಸುವ ಮೋಹದ ಬಲೆಯಲ್ಲಿ ಸಿಲುಕಿ ಪ್ರತಿಯೊಬ್ಬನೂ ತನ್ನ ತಲೆಯನ್ನು ಮುರಿದುಕೊಂಡು ಅಧಃಪತನ ಹೊಂದುತ್ತಾನೆ.

ಮನ್ಮಥ ದಹನದ ಪೌರಾಣಿಕ ರೂಪಕವು ವಿಶೇಷವಾದುದು. "ತ್ರಿನಯನನು ಸುಟ್ಟು ಬೊಟ್ಟಿಟ್ಟರು ಸಾಯದೆ". ಈ ಸಾಲು ಶಿವನು ಮನ್ಮಥನನ್ನು ತನ್ನ ಮೂರನೇ ಕಣ್ಣಿನ ಜ್ವಾಲೆಯಿಂದ ಸುಟ್ಟು ಬೂದಿ ಮಾಡಿದ ಪೌರಾಣಿಕ ಕಥೆಯನ್ನು ನೆನಪಿಸುತ್ತದೆ. ಆದರೆ ಶಂಕರಾನಂದರು ಇಲ್ಲಿ ಹೇಳುವ ಅಂತರಾರ್ಥವೇನೆಂದರೆ ಶಿವನು ಬಾಹ್ಯವಾಗಿ ಕಾಮನನ್ನು ಸುಟ್ಟು ಬೂದಿ ಮಾಡಿ ಹಣೆಗೆ ಬೊಟ್ಟು ಇಟ್ಟುಕೊಂಡರೂ, ಆ ಕಾಮ ಸಾಯದೆ ಪ್ರತಿಯೊಬ್ಬರ ಮನಸ್ಸಿನಲ್ಲೇ ಹುಟ್ಟಿ 'ಮನಸಿಜ'ನಾಗಿ ಇಡೀ ಮೂರೂ ಲೋಕಗಳನ್ನು ಕಾಮದ ಜ್ವಾಲೆಯಿಂದ ಸುಡುತ್ತಿದ್ದಾನೆ. ಅಂದರೆ ಕಾಮ ಭೌತಿಕ ಶರೀರವಿಲ್ಲದಿದ್ದರೂ ಮಾನಸಿಕವಾಗಿ ಅತ್ಯಂತ ಶಕ್ತಿಶಾಲಿ. ಕಾಮೋತ್ಕಟ ಸ್ಥಿತಿಯಲ್ಲಿ ಮನುಷ್ಯನು ಎಷ್ಟು ಮೃಗೀಯನಾಗುತ್ತಾನೆ ಎಂಬುದನ್ನು ಕಟುವಾಗಿ ವಿವರಿಸಿದ್ದಾರೆ. ಕಾಮಪ್ರಚೋದಿತನಾದವನಿಗೆ ಸಂಬಂಧಗಳ ಪಾವಿತ್ರ್ಯತೆ ಮರೆತುಹೋಗುತ್ತದೆ. ಅತ್ತೆ, ಅತ್ತಿಗೆ, ತಾಯಿ, ತಂಗಿ ಎಂಬ ಪವಿತ್ರ ಸಂಬಂಧಗಳ ಬೇಲಿಗಳನ್ನೇ ಮುರಿದು ನೀತಿಗೆಟ್ಟು ವರ್ತಿಸುವಂತೆ ಈ ಕಾಮ ಪ್ರೇರೇಪಿಸುತ್ತಾನೆ. ಕಾಮನು ಪತಿವ್ರತೆಯರ ಶೀಲವನ್ನು ಕೆಡಿಸುವುದಷ್ಟೇ ಅಲ್ಲ, ಮಹಾನ್ ಯೋಗಿಗಳ ಯೋಗ, ಧ್ಯಾನ, ವ್ರತ ಮತ್ತು ನೇಮಗಳನ್ನೆಲ್ಲಾ ಒಂದೇ ಕ್ಷಣದಲ್ಲಿ ಮರೆಸಿ, ಅವರ ಆಧ್ಯಾತ್ಮಿಕ ಸ್ಥಿತಿಗತಿಯನ್ನೇ ಕೆಡಿಸಿ, ಕೊನೆಗೆ ವೇಶ್ಯೆಯರ ಬಾಗಿಲಲ್ಲಿ ಭಿಕ್ಷೆ ಬೇಡುವಂತೆ ತೇಜೋಹೀನನನ್ನಾಗಿ ಮಾಡುತ್ತಾನೆ. ಮುನಿ ಪರಾಶರ, ವಿಶ್ವಾಮಿತ್ರರಂತಹವರ ತಪಸ್ಸೇ ಕಾಮನಿಂದ ಭಂಗವಾದ ಇತಿಹಾಸವನ್ನು ಇದು ಧ್ವನಿಸುತ್ತದೆ. ಕಾಮನ ಬಳಿ ಇರುವುದು ಕೇವಲ ಐದು ಹೂವಿನ ಬಾಣಗಳು (ಪಂಚ ಬಾಣ). ಜೊತೆಗೆ ಮೋಹ, ಮದಗಳ ಸಹಾಯವಿದೆ. ಇವುಗಳ ಮೂಲಕ ಆತ ಮನುಷ್ಯನ ಅಮೂಲ್ಯವಾದ 'ಜ್ಞಾನ'ವೆಂಬ ರತ್ನದ ಹಾರವನ್ನು ಕದಿಯುವ ಕಳ್ಳನಾಗಿದ್ದಾನೆ (ರತ್ನಾಹಾರಿ).

ಶಂಕರಾನಂದರು ಈ ಕಾಮನ ಬಲೆಯಿಂದ ಪಾರಾಗಲು ಇರುವ ಏಕೈಕ ದಾರಿಯನ್ನು ಹೀಗೆ ತೋರಿಸುತ್ತಾರೆ. ಯಾರು ಧೀರನಾದ 'ಶ್ರೀ ಗುರುರಂಗ'ನ ಪಾದಗಳಲ್ಲಿ ಭಕ್ತಿಯನ್ನು ಇಡುವುದಿಲ್ಲವೋ, ಅಂತಹ ಮೂಢರನ್ನು ಕಾಮನು 'ನಾರಿ ಮೋಹ' ಎಂಬ

ಬಲೆಯಲ್ಲಿ ಸಿಲುಕಿಸಿ, ಯಾವುದೇ ಚೂರಿ ಅಥವಾ ಆಯುಧವಿಲ್ಲದೆಯೇ ಅವರ ಕೊರಳನ್ನು ಅತ್ಯಂತ ಕ್ರೂರವಾಗಿ ಕೊಯ್ದು ಮುಗಿಸುತ್ತಾನೆ. ಅಂದರೆ ಗುರು ಕೃಪೆಯೊಂದೇ ಕಾಮವನ್ನು ಗೆಲ್ಲಲು ಇರುವ ಮಹಾಸ್ತ್ರವಾಗಿದೆ.

ಸಂಶೋಧನಾತ್ಮಕ ಫಲಿತಗಳು

1. ಶಂಕರಾನಂದರು ಪ್ರತಿಪಾದಿಸುವ 'ವಾಣಿ–ಪಾಣಿ–ಮಾಣಿ' ಸೂತ್ರವು ಕೇವಲ ತತ್ವವಲ್ಲ; ಅದು ಸಮಾಜದ ನೈತಿಕ ಸ್ಥಿರತೆಗೆ ಬೇಕಾದ ಪ್ರಾಯೋಗಿಕ ಸಾಮಾಜಿಕ ನಿಯಮಾವಳಿಯಾಗಿದೆ. ವಾಕ್ ಶುದ್ಧಿ ಮತ್ತು ಕಾಯಕ ಶುದ್ಧಿ ಇಲ್ಲದೆ ಅಧ್ಯಾತ್ಮ ಅಸಾಧ್ಯ ಎಂಬುದನ್ನು ಇದು ಸಾಬೀತುಪಡಿಸುತ್ತದೆ.
2. ಪರಿಸರ ಬದಲಾವಣೆಯಿಂದ ವೈರಾಗ್ಯ ಬರುವುದಿಲ್ಲ. ಬದಲಿಗೆ ಆಂತರಿಕ ಆಶೆಗಳ ನಿವಾರಣೆಯಿಂದ ಮಾತ್ರ ಮುಕ್ತಿ ಸಾಧ್ಯ ಎಂಬ ಇವರ ನಿಲುವು ಆಧುನಿಕ ಮನೋವಿಜ್ಞಾನದ 'ಆಂತರಿಕ ಶಾಂತಿ' ಸಿದ್ಧಾಂತಕ್ಕೆ ಪೂರಕವಾಗಿದೆ.
3. ಪೌರಾಣಿಕ ಮನ್ಮಥ ದಹನವನ್ನು ಕವಿ ಮನೋವೈಜ್ಞಾನಿಕ ನೆಲೆಗೆ ತರುತ್ತಾರೆ. ಶರೀರವಿಲ್ಲದ ಕಾಮನು ಮನಸ್ಸಿನಲ್ಲೇ ಇದ್ದುಕೊಂಡು ಜ್ಞಾನವನ್ನು ಹೇಗೆ ಹರಣ ಮಾಡುತ್ತಾನೆ ಎಂಬುದನ್ನು ವಿಶ್ಲೇಷಿಸುವ ಮೂಲಕ, ಕಾಮ ಕ್ರೋಧಾದಿ ಷಡ್ರಿಪುಗಳ ಭೇದನೆಗೆ ಗುರುಭಕ್ತಿಯೇ ತಾರಕ ಮಂತ್ರ ಎಂದು ಸಂಶೋಧನೆ ಸ್ಪಷ್ಟಪಡಿಸುತ್ತದೆ.

ಶ್ರೀ ಶಂಕರಾನಂದರ ಈ ಮೂರು ತತ್ವಪದಗಳು ಮಾನವನ ಅಂತರಂಗ ಶುದ್ಧೀಕರಣದ ದಿವ್ಯ ಸೂತ್ರಗಳಾಗಿವೆ. ನಾಲಿಗೆ, ಕೈ ಮತ್ತು ಕಾಮಪ್ರವೃತ್ತಿಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು, ಕೇವಲ ಬಾಹ್ಯ ವೇಷಕ್ಕೆ ಮಾರುಹೋಗದೆ ಮನಸ್ಸಿನ ಆಸೆಗಳನ್ನು ಸದ್ಗುರುವಿನ ಚರಣಗಳಲ್ಲಿ ಅರ್ಪಿಸಿದಾಗ ಮಾತ್ರ ಮನುಷ್ಯನು ನಿಜವಾದ ಮುಕ್ತನಾಗಬಲ್ಲ. ಕಾಮದ ಭೀಕರ ಮೋಹದ ಬಲೆಯನ್ನು ಸೀಳಿ, ಚೂರಿಯಿಲ್ಲದೆ ಕೊರಳು ಕೊಯ್ಯುವ ಲೌಕಿಕ ಜಗತ್ತಿನಿಂದ ಪಾರಾಗಲು 'ಗುರುರಂಗ'ನ ಪಾದಭಕ್ತಿಯೇ ಅಂತಿಮ ಕಾರ್ಯ ಎಂಬುದನ್ನು ಶಂಕರಂದರು ಅತ್ಯಂತ ಮಾರ್ಮಿಕವಾಗಿ ಎಚ್ಚರಿಸಿದ್ದಾರೆ.

ಅಧ್ಯಯನ ಕೃತಿಗಳು :

1. ತತ್ವಪದ ಸಾಹಿತ್ಯ, ಸುರೇಶ ಹನಗಂಡಿ., ಕರ್ನಾಟಕ ಸಾಹಿತ್ಯ ಅಕಾಡೆಮಿ., ಬೆಂಗಳೂರು, 2022
2. ತತ್ವಪದ ಸಾಹಿತ್ಯದ ಭಾಷೆ: ಒಂದು ಅಧ್ಯಯನ., ವಿಪ್ಲವಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011
3. ಶಂಕರಾನಂದ ಪದ್ಧತಿ., ಶಂಕರದಾಸರು., ಎಂ. ಗೋಪಾಲಶೆಟ್ಟಿ ಅಂಡ್ ಸನ್ಸ್, ಮೈಸೂರು, 1978
4. ಚಿಕ್ಕಣ್ಣ ಕಾ.ತ.., ನಟರಾಜ ಬೂದಾಳು (ಪ್ರ.ಸಂ)., ಕರ್ನಾಟಕ ಸಮಗ್ರ ತತ್ವಪದ ಸಾಹಿತ್ಯದ ಜನಪ್ರಿಯ ಸಂಪುಟ ಮಾಲೆ., ಸಂಪುಟ 1ರಿಂದ 33., ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ., ಕನ್ನಡ ಭವನ, ಕರ್ನಾಟಕ ಸರ್ಕಾರ., ಬೆಂಗಳೂರು., 2017

***

Stone Sovereignty: The Political and Artistic Legacy of Bahamani Tomb Architecture

1 Yogesh Rathod

Faculty, Department of History,

Khaja Bandanawaz University,

Kalaburagi, Karnataka

Abstract

The Bahamani Sultanate (1347-1527 CE) represents a pivotal period in the architectural history of the Indian Deccan, marking the emergence of a distinctive Indo-Islamic architectural style that synthesized Persian, Turkish, Central Asian, and indigenous Indian traditions. This paper examines the tomb architecture developed under the Bahamani rulers, focusing on the royal necropolises at Gulbarga (Haft Gumbaz complex) and Bidar (Ashtur complex). Through analysis of extant monuments, historical chronicles, epigraphic evidence, and archaeological reports, this study demonstrates how Bahamani funerary architecture evolved from early Tughlaq-inspired forms to a sophisticated synthesis characterized by bulbous domes, extensive use of encaustic tiles, Persian calligraphy, and innovative structural techniques. The research reveals how these tombs served not merely as burial monuments but as expressions of political legitimacy, religious syncretism, and cultural cosmopolitanism.

The architectural legacy of Bahamani tomb construction profoundly influenced subsequent Deccan sultanates and contributed significantly to the broader development of Indo-Islamic architecture in South India.

Keywords: Bahamani Sultanate, Tomb Architecture, Indo-Islamic Architecture, Deccan, Gulbarga, Bidar.

1. Introduction

The Bahamani Kingdom, established in 1347 CE by Ala-ud-Din Hasan Gangu Bahman. It was the first independent Muslim kingdom in the Deccan plateau. Spanning nearly two centuries until its fragmentation in 1527 CE into five successor states (Bijapur, Golconda, Ahmadnagar, Bidar, and Berar), the Bahamani kingdom left an indelible architectural legacy that fundamentally transformed the cultural landscape of deccan India. Among the most significant architectural contributions of this period are the elaborate royal tombs, which stand as testimony to the dynasty's power, wealth, and cultural sophistication.

The tomb architecture of the Bahamani Kingdom represents a critical juncture in the development of Indo-Islamic architecture, where Persian aesthetic principles, Turkish architectural forms, and indigenous Indian construction techniques converged to create a unique regional style. the Bahamani period witnessed the gradual evolution from the austere Tughlaq style of early monuments to increasingly elaborate structures characterized by Persian decorative elements. This architectural evolution mirrors the dynasty's shifting cultural orientation and the increasing influence of Persian immigrants, particularly during the reign of Ahmad Shah I (1422-1436 CE) and the administrative reforms of Mahmud Gawan (1466-1481 CE).

This paper examines the tomb architecture of the Bahamani Kingdom through three analytical frameworks: architectural typology and structural evolution, decorative programs and aesthetic influences, and socio-political functions. The study focuses primarily on the two major royal necropolises the Haft Gumbaz complex at Gulbarga (representing the early period) and the Ashtur tombs at Bidar (representing the mature architectural phase)

Foundation and Political History of Bahamani Dynasty

The foundation of the Bahamani Sultanate in 1347 CE marked a watershed moment in Deccan history, establishing the region's first independent Islamic polity. The founder, Ala-ud-Din Hasan Bahman Shah (r. 1347-1358), selected Gulbarga (present-day Kalaburagi, Karnataka) as his capital. The earliest Bahamani rulers maintained strong connections to the architectural traditions of the Delhi Sultanate, particularly the Tughlaq dynasty, from which many early settlers had migrated. Over the time span of 180 years Bahamani kingdom was ruled by 18 rulers.

The pivotal shift of the capital from Gulbarga to Bidar in 1432 CE under Ahmad Shah I fundamentally altered the architectural trajectory of the kingdom. This relocation, motivated by Bidar's superior climate, strategic defensibility, and symbolic distance from the older power structures, coincided with intensified Persian cultural influence.

Evolution of Funerary Architecture

Early Phase: Gulbarga

The earliest phase of Bahamani tomb architecture, exemplified by the structures at the Haft Gumbaz (Seven Domes) complex in Gulbarga. It

contains the 5 tombs of Bahamani rulers. And it demonstrates clear continuity with the architectural traditions of the Delhi Sultanate, particularly the Tughlaq style. These early tombs, constructed between the mid-14th and early 15th centuries, are characterized by massive walls, minimal ornamentation, battered (sloping) wall profiles, and austere facades.

The structural system of these early tombs relied on thick masonry walls constructed using local basalt or trap stone set in lime mortar, supporting hemispherical domes. The transition from the square plan to the circular dome base was achieved through the use of squinches (corbelled corner arches) rather than the more sophisticated pendentive system that would appear in later monuments.

The Haft Gumbaz complex also reveals the first tentative integration of indigenous Indian architectural elements. The tomb of Sultan Feroz Shah exhibits Hindu influences in the carved prayer niches, doorways polished with black stone, and decorative brackets supporting horizontal projections features derived from contemporary Hindu temple architecture. This early synthesis demonstrates the Bahamani rulers' pragmatic willingness to employ local architectural vocabulary alongside imported Islamic forms.

Mature Phase: The Bidar Monuments

The architectural maturity of Bahamani tomb construction is most fully realized in the royal necropolis at Ashtur, located approximately 3 kilometers east of Bidar Fort. Constructed between 1436 and 1535 CE, these monuments represent the culmination of nearly a century of architectural experimentation and refinement. The complex houses the tombs of eight sultans and numerous members of the royal family, ranging

from the monumental tomb of Ahmad Shah I to the modest structures of the later Bahamani sultans.

The tomb of Ahmad Shah I (completed 1436 CE) established the architectural paradigm for the entire complex and represents the earliest and largest monument at Ashtur. This structure exemplifies the monumental scale characteristic of mature Bahamani architecture. The tomb's exterior is organized in three distinct stories of arched niches an innovation that departed from the two-story arrangement of earlier monuments. Seven pointed arches crown the upper level, while four arches articulate each of the lower two stories, creating a rhythmic vertical emphasis.

The structural system of Ahmad Shah's tomb demonstrates sophisticated Persian architectural influence. The bulbous dome, rising from an octagonal drum, is supported by a complex system of squinches that transition from the square base through octagonal to circular geometry. This dome profile distinctly Persian in character marks a departure from the more hemispherical forms of earlier monuments and establishes a precedent followed in subsequent Bidar tombs. The exterior walls, constructed of battered black basalt masonry, convey structural strength while the arch spandrels display exceptional stucco decoration the only significant exterior ornament, suggesting a deliberate restraint that focuses attention on the dome and overall massing.

Access to the tomb chamber is provided through arched doorways on the north, south, and east facades, a tripartite arrangement that became standard in Bidar tomb architecture. The grave chamber, elevated on a high platform accessed by flights of steps on all sides, houses multiple cenotaphs in the central space, while the actual graves occupy a crypt below, accessible via stairs.

The tomb of Ala-ud-Din Shah II completed in 1458, represents a further evolution in decorative elaboration while maintaining the essential structural typology established by his father Ahmad Shah's tomb. This square plan structure, topped by a bulbous dome and housing a single central grave, advances toward greater ornamental complexity through its facade treatment. The tomb showcases the first appearance of true four centered pointed arches in Bidar architecture an Iranian architectural feature that became increasingly prevalent in later monuments.

Most significantly, Ala-ud-Din's tomb exhibits extensive use of colored encaustic tiles, though most have been lost to weathering and vandalism. The surviving traces reveal an original decorative program of Persian blue, green, and yellow tiles arranged in calligraphic designs and floral motifs, outlined by black stone bands. These tiles, imported from Persia or produced by Persian craftsmen working in the Deccan, represent one of the most distinctive features of mature Bahamani architecture.

The tomb of Humayun Shah (1458-1461), though severely damaged by a lightning strike in the late 19th century, reveals important evidence of indigenous architectural influence within the predominantly Persian aesthetic framework. The distinctive features of this tomb include the unique profile of its arches characterized by wide spans and low imposts and the trabeate (post-and-lintel) style of niches, both derived from Hindu temple architecture of the Deccan.

The later tombs in the Ashtur complex those of Nizam Shah (1461-1463), Mahmud Shah (1463-1482), and the final of other Bahamani sultans demonstrate a progressive diminution in scale and decorative elaboration that corresponds to the political and economic decline of the Bahamani Sultanate. The tombs of the last rulers, Wali-ullah (1522-1525) and Kalim-ullah (1525-1527), are modest square structures with conical domes, lacking the monumental presence and decorative sophistication of earlier monuments.

Decorative Programs and Aesthetic Synthesis

1. Interior Decoration and Calligraphy

The interior decoration of Bahamani tombs represents perhaps the most sophisticated artistic achievement of the dynasty, demonstrating the full integration of Persian aesthetic principles with local execution.

The most remarkable feature of Ahmad Shah's tomb interior is the comprehensive paint. The walls and dome are covered in vibrant schemes of gold, vermilion, turquoise, and black, depicting floral motifs, geometric patterns, and paradisiacal imagery. This polychrome decoration, executed in the Persian miniature painting tradition, creates a visual parallel to contemporary manuscript illumination and establishes connections to the artistic culture of Timurid Central Asia and Safavid Iran.

Calligraphic inscriptions constitute a crucial component of the decorative program, serving both aesthetic and doctrinal functions. The panels above the entrance arches contain Quranic. More innovatively, the tomb incorporates extensive verses by Shah Nimatullah Wali. This inclusion of Sufi poetry alongside Quranic text reflects Ahmad Shah's deep engagement with Sufi spirituality. The dome interior features particularly significant calligraphic decoration: the names of Allah, Muhammad, Ali, and his descendants are inscribed around the rim.

2. Tile Work and Exterior Ornamentation

The use of glazed encaustic tiles represents one of the most distinctive features of Bahamani tomb architecture and marks a direct transfer of Persian decorative technology to the Deccan. These tiles, arranged in complex geometric and floral patterns and often incorporating calligraphic elements, covered significant portions of tomb exteriors, transforming the dark basalt masonry into surfaces of brilliant color.

The tile work on the tomb of Ala-ud-Din Shah II, though largely lost to weathering, originally presented a comprehensive decorative scheme dominated by Persian blue, turquoise, green, and yellow glazes. These colors, characteristic of Persian architectural ceramics, were produced using cobalt, copper, and antimony-based pigments in techniques transferred from Iranian workshops. The patterns included arabesque vine scrolls, geometric interlace, and calligraphic bands all standard elements of the Persian decorative vocabulary adapted to the specific architectural context of Deccan tomb monuments.

Beyond tile work, the exterior ornamentation of Bahamani tombs employed several other decorative strategies. Stucco work, particularly evident in the arch spandrels of Ahmad Shah’s tomb, allowed for the creation of intricate relief patterns without the technical complexities of tile production. The use of carved stone was generally restrained, limited primarily to doorways and window surrounds, where Hindu craftsmen contributed decorative elements drawn from temple architecture lotus motifs, scrollwork, and geometric patterns that complemented rather than contradicted the Islamic decorative program.

3. Material Culture and Construction Techniques

The material choices in Bahamani tomb construction reflect both practical considerations and aesthetic preferences. The predominant use of black basalt (trap stone) for exterior masonry, though dictated by local geological availability, created a distinctive visual character that differentiated Deccan monuments from the sandstone and marble structures of North India. The dark stone provided exceptional durability and structural strength while creating dramatic contrast with the lighter-colored tiles and stucco decoration.

Interior surfaces were typically finished with lime plaster, creating smooth surfaces suitable for painted decoration. The plaster itself was often mixed with local materials including, according to tradition, crushed seashells, egg whites, and vegetable gums to improve adhesion and durability. These traditional plastering techniques, shared between Islamic and Hindu construction practices, facilitated the collaboration between Persian designers and Indian craftsmen.

The construction of the massive domes employed sophisticated structural techniques adapted from Persian architectural practice. The domes were typically built using a double-shell construction method, where an inner dome, visible from the interior, supports a larger outer dome. Between the shells, a lightweight brick construction reduced the overall weight while maintaining the impressive external profile.

Political Legitimation and Dynastic Memory

The royal tombs of the Bahamani dynasty functioned as powerful instruments of political legitimation, establishing the continuity and legitimacy of sultanic authority through architectural means. The creation of dedicated royal necropolises first at Gulbarga and subsequently at Bidar paralleled similar practices in other Islamic dynasties.

The inscriptions on the tombs played a crucial role in this legitimation process. Tomb inscriptions typically include the sultan’s full titles, the dates of accession and death, and genealogical connections to earlier rulers. These epigraphic programs, executed in Arabic and Persian, served to document and validate the political claims of the dynasty.

Architectural Legacy and Influence

The tomb architecture developed under the Bahamani dynasty exerted profound influence on subsequent architectural developments in the

Deccan. When the Bahamani Sultanate fragmented in 1527 into five successor states (Bijapur, Golconda, Ahmadnagar, Bidar, and Berar), each carried forward and elaborated upon Bahamani architectural traditions. The Adil Shahis of Bijapur, Qutb Shahis of Golconda, and Nizam Shahis of Ahmadnagar all constructed monumental tombs that directly descended from Bahamani prototypes, most famously the Gol Gumbaz at Bijapur the world's largest dome unsupported by pillars.

The specific architectural features pioneered in Bahamani tomb construction including the bulbous dome profile, extensive use of encaustic tiles, integration of Persian calligraphy with indigenous decorative elements, and the garden-tomb complex became standard elements of Deccan sultanate architecture. The synthesis of Persian architectural ideals with local materials, climate adaptation, and indigenous construction techniques established a regional architectural language that distinguished Deccan monuments from both their Mughal contemporaries to the north and their Persian models to the west.

Conclusion

The tomb architecture of the Bahamani Kingdom represents a remarkable achievement in architectural synthesis, successfully integrating Persian aesthetic ideals, Turkish structural forms, and indigenous Indian construction traditions into a distinctive regional style. The evolution from the Tughlaq-influenced monuments at Gulbarga to the elaborate, tile-encrusted structures at Bidar charts both the increasing sophistication of Bahamani architectural patronage and the growing influence of Persian cultural models within the Deccan.

References

1. Eaton, R. M. (2005). A Social History of the Deccan, 1300-1761: Eight Indian Lives. Cambridge: Cambridge University Press.
2. Merklinger, E. S. (2005). Sultanate Architecture of Pre-Mughal India. New Delhi: Munshiram Manoharlal Publishers.
3. Michell, G., & Philon, H. (2018). Islamic Architecture of Deccan India. London: I.B. Tauris & Co.
4. Sherwani, H. K. (1973). The Bahmanis of the Deccan. Hyderabad: Krishnavas International Printers.
5. Yazdani, G. (1947). Bidar: Its History and Monuments. Oxford: Oxford University Press. (Reprinted by Motilal Banarsidass, New Delhi, 1995).
6. Helen Philon (2015). Gulbarga, Bidar, Bijapur. Deccan Heritage Foundation

***

ಕವಿತೆ

1
ಒಂದಿಷ್ಟು ಭೂಮಿ ಕೊಡಿ

ಅಂಗಲಾಚಿ ಬೇಡುವೆ,
ಒಂದಿಷ್ಟು ಭೂಮಿ ಕೊಡಿ
ಬದುಕು ಕಟ್ಟಿಕೊಳ್ಳಲು ಅಲ್ಲ
ಸತ್ತ ನನ್ನ ಹೆಣದ ಗೂಡು ಕಟ್ಟಲು.
ಬೀಳುವ ನನ್ನ ಜನಗಳ
ಹೆಣಗಳ ಹೂಳಲು.

ಈ ಹಿಂದೆ ಸತ್ತ
ನನ್ನ ಜನಗಳ ಹೆಣಗಳು
ರಸ್ತೆ ಬದಿಯ ಮೋರಿಯಲಿ ಮಣ್ಣಾಗಿವೆ.
ಮಳೆ ಹೊಯ್ದು, ಕಾಲುವೆಯು ಬಂದು
ಒಂದಿಷ್ಟೂ ಕುರುಹಿಲ್ಲದೆ ನೆಲಸಮವಾಗಿವೆ.
ಹುಡುಕಿದರೂ ಸಿಗುತ್ತಿಲ್ಲ
ನನ್ನಜ್ಜನ ಹೆಣದ ದಿಬ್ಬ.
ಪ್ರತಿ ವರ್ಷದ ಕ್ರಿಯಾ ಕರ್ಮವಿಲ್ಲದೆ
ಅನಾಥವಾಗಿದ್ದಾನೆ.

ಕೈ ಮುಗಿದು ಬೇಡುವೆ
ಮುಂದೆ ಬೀಳಲಿರುವ
ಹೆಣಗಳ ದಿಬ್ಬವನ್ನಾದರೂ ಕಾಣುತ್ತೇವೆ.
ನಮಗೊಂದಿಷ್ಟು ಭೂಮಿ ಕೊಡಿ
ನಮ್ಮವರ ಹೆಣದ ದಿಬ್ಬಗಳನ್ನು ಗುರುತಿಟ್ಟುಕೊಳ್ಳಲು.

ಕೋರ್ಟು ಕಛೇರಿ ತಿಳಿದವರಲ್ಲ ನನ್ನ ಜನ
ಹಿಡಿ ಭೂಮಿಗಾಗಿ ಚಪ್ಪಲಿಗಳನ್ನು ಸವೆಸಿದ್ದಾರೆ
ಸಿಕ್ಕ ಸಿಕ್ಕವರಿಗೆ ಸಲಾಮು ಹೊಡೆದಿದ್ದಾರೆ.

ರೊಕ್ಕ ಕೇಳಿದವರಿಗೆ ರೊಕ್ಕ
ಬಿರಿಯಾನಿ ಎಂದವರಿಗೆ ಬಿರಿಯಾನಿ
ಇಷ್ಟಾದರೂ ಒಂದಿಂಚು ಭೂಮಿ ಸಿಗಲಿಲ್ಲ.
ಜೇಬು ಖಾಲಿ, ಮನಸ್ಸು ಖಾಲಿ.
ಪ್ರತಿರೋಧಿಸುತ್ತಿಲ್ಲ, ಪರಿತಪಿಸುತ್ತಿದ್ದಾರೆ

ಈ ಮುಗ್ಧ ಮನಗಳ ತಣಿಯಲು
ಒಂದಿಷ್ಟು ಭೂಮಿ ಕೊಡಿ
ಸುಖ ಸುಪ್ಪತ್ತಿಗೆಯಿಂದ ಮೆರೆಯಲು ಅಲ್ಲ
ಸತ್ತಾಗಲಾದರೂ ನೆಮ್ಮದಿಯಿಂದ ಮಲಗಲು.

ಊರೂರು ಅಲೆದು
ಹತ್ತಿಯನು ಪಿಂಜಿ
ಹಾಸಿಗೆಯನು ಹೊಲೆದು
ಇನ್ನೊಬ್ಬರ ಸುಖ ನಿದ್ರೆಗೆ ಕಾರಣರಾದ
ಪಿಂಜಾರರು ನಾವು.
ನಮ್ಮಗಳ ಚಿರನಿದ್ರೆಗೆ
ಗೂಡೊಂದು ಇಲ್ಲ,
ನಾವು ನಿದ್ರಿಸಬೇಕಿದೆ ಎಲ್ಲರಂತೆ ನೆಮ್ಮದಿಯಲಿ
ಹಾಸಿಗೆಯ ಮೇಲಲ್ಲ, ಘೋರಿಯ ಒಳಗಲ್ಲಿ.

ನಮ್ಮದಾದೊಂದು ಭೂಮಿಯಿಲ್ಲ
ನಮ್ಮವರ ಹೆಣಗಳ ಹೂಳಲು
ಜಾಣರಾದ ನೀವು ಜಾಗವೊಂದು ಕೊಡಿಸಿರಿ
ನಮ್ಮವರ ಹೆಣಗಳಿಗೆ ಮುಕ್ತಿಯನು ನೀಡಿರಿ.

ಡಾ. ರುಜುವಾನ್ ಕೆ.
ಅತಿಥಿ ಉಪನ್ಯಾಸಕರು
ಶ್ರೀ ಬಸವೇಶ್ವರ ಸ. ಪ್ರ. ದ ಕಾಲೇಜು
ಮಾಯಕೊಂಡ
rujusuchi@gmail.com

nn